Digitization by eGangotri and Sarayu Trust. Funding by MoE-IKS

ಸಿದ್ಧಾಂತ ಶಿಖಾಮಣಿ ವಿಚಾರ ದೀಪ್ತಿ

ಸಂಪಾದಕರು

ಡಾ॥ ಎಂ. ಶಿವಕುಮಾರ ಸ್ವಾಮಿ

ವೀರಶೈವ ಅನುಸಂಧಾನ ಸಂಸ್ಥಾನ
'ನಾವೀನ್ಯ' ೩೬೫/ಬಿ, ೫ನೇ 'ಎ' ಮುಖ್ಯರಸ್ತೆ,
ವಿಜಯನಗರ, ಬೆಂಗಳೂರು-೪೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ವೀರಶೈವ ಅನುಸಂಧಾನ ಸಂಸ್ಥಾನ ಕಿರಣ-೨

ಸಿದ್ಧಾಂತ ಶಿಖಾಮಣಿ ವಿಚಾರ ದೀಪ್ತಿ

ಸಂಪಾದಕ

ಡಾ|| ಎಂ. ಶಿವಕುಮಾರ ಸ್ವಾಮಿ

ಪ್ರಕಾಶಕರು

ವೀರಶೈವ ಅನುಸಂಧಾನ ಸಂಸ್ಥಾನ

'ನಾವೀನ್ಯ' ೩೬೫/ಸಿ, ೫ನೇ 'ಎ' ಮುಖ್ಯರಸ್ತೆ,

ವಿಜಯನಗರ ೨ನೇ ಹಂತ, ಬೆಂಗಳೂರು-೪೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಕಾಶಕರು:
ವೀರಶೈವ ಅನುಸಂಧಾನ ಸಂಸ್ಥಾನ
'ಸಾವಿನ್ನ' ೬೬೫/ಸಿ, ೫ನೇ 'ಎ' ಮುಖ್ಯರಸ್ತೆ
ರಂಕೋ ಬಡಾವಣೆ, ವಿಜಯನಗರ ೨ನೇ ಹಂತ
ಬೆಂಗಳೂರು-೪೦

© ವೀರಶೈವ ಅನುಸಂಧಾನ ಸಂಸ್ಥಾನ, ಬೆಂಗಳೂರು

ಪ್ರಥಮ ಮುದ್ರಣ : ೧೯೯೮

ದ್ವಿತೀಯ ಮುದ್ರಣ : ೨೦೦೧

ಪುಟಗಳು : XIV+೧೮೦

ಬೆಲೆ : ರೂ. ೬೦/-

ಛಾಯಾಕ್ಷರ ಜೋಡಣೆ:
ವರ್ಷಿಣಿ ಗ್ರಾಫಿಕ್ಸ್, ಬೆಂಗಳೂರು-೪೦ ☎ : 3402575

ಮುದ್ರಕರು:
ಸ್ನೇಹಾ ಪ್ರಿಂಟರ್ಸ್
೨೨, ೨ನೇ ಮುಖ್ಯರಸ್ತೆ, ಅತ್ತಿಗುಪ್ಪೆ
ವಿಜಯನಗರ, ಬೆಂಗಳೂರು-೪೦ ☎ : 3302417

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಜಗದ್ಗುರು ಜನಕಲ್ಯಾಣ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷರು

ಶ್ರೀ ಕಾಶಿ ವಿಶ್ವಾರಾಧ್ಯ ಜ್ಞಾನಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು
ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು

ಆಶೀರ್ವಚನ

ವೀರಶೈವ ಧರ್ಮವು ಭಾರತೀಯ ಸನಾತನ ಧರ್ಮಗಳಲ್ಲೊಂದಾಗಿದೆ. ಆಗಮಸಾಹಿತ್ಯವು ಈ ಧರ್ಮದ ಮೂಲ ಸ್ತೋತ್ರವು. ಈ ಆಗಮ ಸಾಹಿತ್ಯವನ್ನೇ ಪ್ರಧಾನವಾಗಿ ಇಟ್ಟುಕೊಂಡ 'ಸಿದ್ಧಾಂತ ಶಿಖಾಮಣಿ'ಯು ವೀರಶೈವ ಧರ್ಮಗ್ರಂಥಗಳಲ್ಲಿ ಪ್ರಮುಖವಾಗಿದೆ.

"ಸಿದ್ಧಾಂತಶಬ್ದಃ ಪಂಕಜಾದಿ ಶಬ್ದವತ್ ಯೋಗರೂಢ್ಯಾಶಿವಪ್ರಣೀತೇಷು ಕಾಮಿಕಾದಿಷು ದಶಾಷ್ಟಾದಶ ತಂತ್ರೇಷು ಪ್ರಸಿದ್ಧಃ" ಎನ್ನುವ ಅಘೋರ ಶಿವಾಚಾರ್ಯರ ಉಕ್ತಿಯಂತೆ, ಪರಮಾತ್ಮನಿಂದ ಉಪದೇಶಿಸಲ್ಪಟ್ಟ ಕಾಮಿಕಾದಿ ವಾತುಲಾಂತಗಳಾದ ಇಪ್ಪತ್ತೆಂಟು ಶಿವಾಗಮಗಳನ್ನು "ಸಿದ್ಧಾಂತ"ವೆಂಬುದಾಗಿ ಕರೆಯುತ್ತಾರೆ. ಈ ಆಗಮಗಳ ಕೊನೆಯ ಭಾಗದಲ್ಲಿ ಹೇಳಲ್ಪಟ್ಟ ವೀರಶೈವ ಸಿದ್ಧಾಂತವು ಇದರಲ್ಲಿ ಪ್ರತಿಪಾದಿಸುವುದರಿಂದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಗ್ರಂಥವನ್ನು "ಸಿದ್ಧಾಂತ ಶಿಖಾಮಣಿ" ಎಂಬ ಅನ್ವರ್ಥಕ ನಾಮದಿಂದ ವ್ಯವಹರಿಸಿದ್ದಾರೆ. ಇದೇ ಅಭಿಪ್ರಾಯವನ್ನೇ ಶ್ರೀ ಶಿವಯೋಗಿಶಿವಾಚಾರ್ಯರು-

ಸರ್ವೇಷಾಂ ಶೈವತಂತ್ರಾಣಾಮುತ್ತರತ್ವಾನ್ನಿರುತ್ತರಮ್।
ನಾಮ್ನಾ ಪ್ರಥೀಯತೇ ಲೋಕೇ ಯತ್ಸಿದ್ಧಾಂತಶಿಖಾಮಣಿಃ॥

ಎಂಬುದಾಗಿ ಸಮರ್ಥಿಸಿದ್ದಾರೆ.

ಇದಲ್ಲದೇ "ಏತಾನಿ ಮಾನಭೂತಾನಿ ನ ಹಂತವ್ಯಾನಿ ಯುಕ್ತಿಭಿಃ" ಎಲ್ಲ ದರ್ಶನಗಳೂ ವೇದಾಗಮಗಳನ್ನೇ ಮೂಲವನ್ನಾಗಿ ಸ್ವೀಕರಿಸಿ ಪ್ರತಿಪಾದಿತಗಳಾದ್ದರಿಂದ, ಯಾವ ದರ್ಶನವನ್ನೂ ಖಂಡಿಸಬಾರದೆಂಬ ಉದಾತ್ತ ಮನೋಭಾವನೆಯನ್ನು ಇಟ್ಟುಕೊಂಡು, ದ್ವೈತ ಅದ್ವೈತಾದಿ ಮತಗಳ ಸಮನ್ವಯಾತ್ಮಕವಾದ ಸಿದ್ಧಾಂತವು ಈ ಗ್ರಂಥದಲ್ಲಿ ಉಪದೇಶಿಸಲ್ಪಟ್ಟಿರುವುದರಿಂದ ಸರ್ವಗ್ರಾಹ್ಯವಾದ ಈ ಸಿದ್ಧಾಂತವು 'ಸರ್ವಸಿದ್ಧಾಂತಗಳ ಶಿಖಾಮಣಿ' ಎಂದರೆ ಅತಿಶಯೋಕ್ತಿಯಾಗಲಾರದು

ಆಲೋಕ್ಯ ಶೈವತಂತ್ರಾಣಿ ಕಾಮಿಕಾದ್ಯಾನಿ ಸಾದರಮ್।
ವಾತುಲಾಂತಾನಿ ಶೈವಾನಿ ಪುರಾಣಾನ್ಯಖಿಲಾನಿ ತು॥

ಎನ್ನುವ ಶಿವಯೋಗಿ ಶಿವಾಚಾರ್ಯರ ಪ್ರತಿಜ್ಞೆಯನ್ನವಲೋಕಿಸಿದಾಗ ಶ್ರೀ ಸಿದ್ಧಾಂತ ಶಿಖಾಮಣಿಯು ಕೇವಲ ಆಗಮಗಳ ಸಾರವಾಗಿರದೇ, ನಿಗಮ, ಆಗಮ ಮತ್ತು ಪುರಾಣಾದಿಗಳ ಸಾರ ಸರ್ವಸ್ವವೆಂಬುಮ ತಿಳಿದುಬರುತ್ತದೆ.

ವೀರಶೈವ ಸಿದ್ಧಾಂತ ಗ್ರಂಥ 'ಸಿದ್ಧಾಂತ ಶಿಖಾಮಣಿ'ಯ ವಿಚಾರ ಸಂಕಿರಣದ ವಿದ್ವತ್ ಪ್ರಬಂಧಗಳು ಈ ಗ್ರಂಥದಲ್ಲಿ ಸಂಕಲಿತವಾಗಿವೆ. ಈ ಕೃತಿಯನ್ನು ಸಂಪಾದಿಸಿ ಕೊಟ್ಟ ವಿದ್ವಾಂಸರಾದ ಡಾ॥ ಎಂ. ಶಿವಕುಮಾರ ಸ್ವಾಮಿಗಳಿಗೂ, ಇದರ ಪ್ರಕಾಶನಕ್ಕೆ ನೆರವಾದ ಲಿಂ. ಗೌಡರ ವೀ. ರುದ್ರಪ್ಪನವರ ಮಕ್ಕಳಿಗೂ ಶ್ರೀ ಜಗದ್ಗುರು ವಿಶ್ವಾರಾಧ್ಯರು ಹಾಗೂ ಕಾಶೀ ಕ್ಷೇತ್ರದ ವಿಶ್ವನಾಥ ಅನ್ನಪೂರ್ಣಾದೇವಿಯರು ಸನ್ಮಂಗಳ ಪರಂಪರೆಯನ್ನು ಅನುಗ್ರಹಿಸಲಿ ಎಂದು ಹಾರೈಸುತ್ತೇವೆ. ಮತ್ತು ಧರ್ಮಾಭಿಮಾನಿಗಳು ಈ ಗ್ರಂಥದ ಪ್ರಯೋಜನವನ್ನು ಪಡೆಯಲಿ ಎಂದು ಆಶಿಸುತ್ತೇವೆ.

ಇತ್ಯಾಶಿಷಃ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದಾನಿಗಳು

ಶ್ರೀ ಗೌಡರ ವೀ. ರುದ್ರಪ್ಪನವರು

"ಪರೋಪಕಾರಾರ್ಥಂ ಇದಂ ಶರೀರಂ" ಎಂಬುದನ್ನು ತಲೆತಲಾಂತರಗಳಿಂದ ಅಕ್ಷರಶಃ ಆಚರಿಸಿಕೊಂಡು ಬರುತ್ತಿರುವ ಮನೆತನ ಬೆಂಗಳೂರು ನಗರದ ಗೌಡರ ವೀರಭದ್ರಪ್ಪನವರ ಮನೆತನ.

ತ್ಯಾಗ, ಪರೋಪಕಾರ, ಪರಹಿತ ಚಿಂತನೆಗಳೇ ಪ್ರತಿಕ್ಷಣದ ಉಸಿರಾಗಿಸಿಕೊಂಡಿದ್ದ ಈ ಕುಟುಂಬದ ಹಿರಿಯ ಕುಡಿಯೇ ಗೌಡರ ವೀ.ರುದ್ರಪ್ಪನವರು (ಜನನ ೨೫-೦೨-೧೯೦೮). ಸಂಯಮದ ಸಾಕಾರವಾಗಿದ್ದ ಕರಿಬಸಮ್ಮ ಮತ್ತು ಸಜ್ಜನಿಕೆಯ ಸ್ಥೂಲರೂಪವಾಗಿದ್ದ ಗೌಡರ ವೀರಭದ್ರಪ್ಪನವರ ಹಿರಿಯ ಮಗನಾಗಿ ಭರಣಿ ನಕ್ಷತ್ರದಲ್ಲಿ ಜನಿಸಿದ ರುದ್ರಪ್ಪನವರು "ಭರಣಿ ನಕ್ಷತ್ರದಲ್ಲಿ ಹುಟ್ಟಿದವನು ಧರಣಿ ಆಳಿಯಾನು" ಎಂಬುದನ್ನು ಸತ್ಯವಾಗಿಸಿ ಬದುಕಿ ಬಾಳಿದವರು.

ರುದ್ರಪ್ಪನವರು ಹುಟ್ಟಿನಿಂದಲೇ ದೀಕ್ಷಾಪುರುಷರು. "ದೀಕ್ಷೆ" ಎಂಬ ಸಾಂಪ್ರದಾಯಿಕ ಕಟ್ಟಳೆಯನ್ನು ಅವರಿಗೆ ೧೨ನೇವಯಸ್ಸಿನಲ್ಲಿ ನೆರವೇರಿಸಲಾಯಿತು. ಅದು ಅವರಿಗೆ ಕೇವಲ ಸಾಂಕೇತಿಕ ವಿಧಿ ವಿಧಾನವಾಗಿತ್ತು. ಚಿಕ್ಕಂದಿನಿಂದಲೇ ತಂದೆಯನ್ನು ಕಳೆದುಕೊಂಡ ರುದ್ರಪ್ಪನವರು ತಾಯಿಯ ಕಟ್ಟುನಿಟ್ಟಿನ ನಿಯಮಗಳಿಗೆ ಬದ್ಧರಾಗಿ ನಡೆದುಕೊಂಡರು. ವಿದ್ಯಾಭ್ಯಾಸದ ಅವಧಿಯಲ್ಲಿ ಶಾಲೆ ಕಾಲೇಜಿಗೆ ಕುದುರೆಗಾಡಿಯಲ್ಲಿ ಹೋಗಿ ಬರುತ್ತಿದ್ದ ಗೌಡರು ಒಮ್ಮೆಯೂ ಮನೆಯಾಚೆಗಿನ ತಿಂಡಿ ತಿನಿಸುಗಳನ್ನೆಂದೂ ತಿಂದವರಲ್ಲ.

Charity begins at home ಎನ್ನುವುದಕ್ಕೆ ಮೂರ್ತರೂಪವಾಗಿ ಗೌಡರ ರುದ್ರಪ್ಪನವರು ಸಾಮಾಜಿಕ ಸೇವೆಯನ್ನು ತಮ್ಮ ಮನೆಯಿಂದಲೇ ಮೊದಲು ಮಾಡಿದರು. ನಗರದ ಹೃದಯಭಾಗದಂತಿರುವ ಚಿಕ್ಕಪೇಟೆಯ ತಮ್ಮ ವಿಶಾಲ ಬಂಗಲೆಯಲ್ಲಿ ೧೯೧೧ರಲ್ಲಿ ತಮ್ಮ ಮಾತಾ ಪಿತೃಗಳಿಂದ ಆರಂಭಿಸಲ್ಪಟ್ಟಿದ್ದ ಗೌಡರ ವೀರಭದ್ರಪ್ಪನವರ ಸಂಸ್ಕೃತ ಮತ್ತು ವೇದ ಪಾಠಶಾಲೆ ಮತ್ತು ಉಚಿತ ವಿದ್ಯಾರ್ಥಿನಿಲಯವನ್ನು ತಮ್ಮ ತಮ್ಮನವರಾದ ಗೌಡರ ಚೆನ್ನಬಸಪ್ಪನವರೊಂದಿಗೆ ಮುಂದುವರಿಸಿಕೊಂಡು ಬಂದರಲ್ಲದೆ ಅದನ್ನು ಅತ್ಯಂತ ಉಚ್ಛ್ರಾಯ ಸ್ಥಿತಿಗೆ ತಂದರು. ಅದಕ್ಕಾಗಿ ಅವರೆಂದೂ ಯಾರಿಂದಲೂ ಒಂದು ಚಿಕ್ಕಾಸನ್ನೂ ಕಾಣಿಕೆ ರೂಪದಲ್ಲಾಗಲೀ ವಂತಿಗೆ ರೂಪದಲ್ಲಾಗಲೀ ಪಡೆಯಲಿಲ್ಲ. ಅವರದು ಕೇವಲ ಕೊಡುಗೈ ವಿನಃ ಬೇಡಿದ ಕೈಯಾಗಿರಲಿಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವರ. ಈ ನಿಸ್ವಾರ್ಥ ನಿಷ್ಕಳಂಕ ಸೇವೆಯ ಸತ್ವಕ್ಕೆ ಮಾರುಹೋದ ಸಾರ್ವಜನಿಕ ಕ್ಷೇತ್ರ ತಾನಾಗಿಯೇ ಅವರಲ್ಲಿಗೆ ಹೋಗಿ ಅವರನ್ನು ತನ್ನವರನ್ನಾಗಿಸಿಕೊಂಡಿತು. ಪರಿಣಾಮವಾಗಿ "ಕರ್ನಾಟಕ ರಾಜ್ಯ ಕೈಗಾರಿಕೆ ಮತ್ತು ವಾಣಿಜ್ಯ ಸಂಸ್ಥೆಗಳ ಮಹಾ ಒಕ್ಕೂಟ"ವು ಶ್ರೀ ರುದ್ರಪ್ಪನವರನ್ನು ೧೯೫೫ರಲ್ಲಿ ತನ್ನ ಅಧ್ಯಕ್ಷರನ್ನಾಗಿಸಿಕೊಂಡಿತು. ಅವರು ಮೈಸೂರು ಬ್ಯಾಂಕಿನ ನಿರ್ದೇಶಕರಾಗಿ ಅದರ ಕಾರ್ಯವ್ಯಾಪ್ತಿ ವಿಸ್ತರಣೆಯಲ್ಲಿ ಮಹತ್ತರ ಪಾತ್ರವಹಿಸಿದರಲ್ಲದೆ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರಾಗಿ ಅದರ 'ಹವಾ ನಿಯಂತ್ರಣ ನಗರ'ವೆಂಬ ಖ್ಯಾತಿಗೆ ತಕ್ಕಂತೆ ಕಾರ್ಯನಿರ್ವಹಿಸಿದರು. ಸಾರ್ವಜನಿಕ ರಂಗದುದ್ದಕ್ಕೂ ಗೌಡರು ಸಚ್ಚಾರಿತ್ರ್ಯವನ್ನೂ, ಸದಾಚಾರವನ್ನೂ ಕಾಪಾಡಿಕೊಂಡು ಬಂದವರು.

ಗೌಡರದು ಅತ್ಯಂತ ಶಿಸ್ತುಬದ್ಧ ಜೀವನ ಕ್ರಮ. ನಡೆ-ನುಡಿ, ನಯ-ವಿನಯ, ಪೂಜೆ-ಪದ್ಧತಿ, ವಿಧಿ-ವಿಧಾನ, ಉಡುಗೆ-ತೊಡುಗೆ, ಮಾತು-ಕೃತಿ ಪ್ರತಿಯೊಂದರಲ್ಲೂ ಗೌಡರು ಎದ್ದು ಕಾಣುವ ಅಚ್ಚುಕಟ್ಟುತನ. ಬೆಳದಿಂಗಳ ಮೈಕಾಂತಿಯ, ದುಂಡು ಮೊಗದ, ನೀಳ ನಾಸಿಕದ ರುದ್ರಪ್ಪನವರನ್ನು ನೋಡುವವರಿಗೆ ಎರಡು ಕಣ್ಣುಗಳು ಸಾಲವು. ಎತ್ತಲೋ ನೋಡುತ್ತಿದ್ದ ಕಣ್ಣುಗಳನ್ನು ತಟ್ಟನೆ ತನ್ನೆಡೆಗೆ ಸೆಳೆಯುವ ಚುಂಬಕ ಶಕ್ತಿ ರುದ್ರಪ್ಪನವರಿಗೆ ನಿಸರ್ಗ ನೀಡಿದ ಅನುಪಮ ಕಾಣಿಕೆ.

ಸಾರ್ವಜನಿಕವಾಗಿ ಗೌಡರನ್ನು ಕಂಡರೆ ಎಲ್ಲರಿಗೂ ಗೌರವವೇ. ಅವರು ವಿದ್ಯಾರ್ಥಿಗಳಿಗಾಗಿ ತಮ್ಮ ಸೇವಾ ಬಾಹುಳ್ಯವನ್ನು ತಮ್ಮ ಮನೆಯಾಚೆಗೂ ವಿಸ್ತರಿಸಿದರು. ನಗರದ ಸರ್ವಭೂಷಣ ಶಿವಯೋಗಿಗಳ ಮಠ, ಶ್ರೀ ಜಯದೇವ ವಿದ್ಯಾರ್ಥಿನಿಲಯ, ಶ್ರೀಮತಿ ಗೌರಮ್ಮನವರ ವಿದ್ಯಾರ್ಥಿನಿಲಯ, ಚಿನ್ನಶೆಟ್ಟರ ವಿದ್ಯಾರ್ಥಿನಿಲಯಗಳಿಗೂ ಧರ್ಮದರ್ಶಿಗಳಾಗಿ, ಅನೇಕ ಬಡ ವಿದ್ಯಾರ್ಥಿಗಳ ಪಾಲಿಗೆ ಆಪದ್ಬಾಂಧವರಾಗಿ ಅವರ ಬಾಳಲ್ಲಿ ಬೆಳಕನ್ನು ತಂದವರು.

ಇಷ್ಟೆಲ್ಲ ಜನಹಿತ ಕಾರ್ಯ ಮಾಡಿದರೂ ಅವರೆಂದೂ ಅದನ್ನು ಮಾಡಿದೆನೆಂದು ಒಮ್ಮೆಯೂ ಮನದಲ್ಲಿ ಅಂದುಕೊಳ್ಳಲಿಲ್ಲ. ಪ್ರಚಾರ ಬಯಸಲಿಲ್ಲ. ಆದರೆ ಖ್ಯಾತಿ, ಪ್ರಶಸ್ತಿಗಳೇ ಅವರನ್ನು ಅರಸಿ ಬಂದವು.

ತಮ್ಮ ಜನ್ಮದಿನದಂದು ಕಿದ್ವಾಯಿ ಸ್ಮಾರಕ ಗ್ರಂಥಿ ಆಸ್ಪತ್ರೆಯ ರೋಗಿಗಳಿಗೆ ಅನಾಥಾಲಯದ ಮಕ್ಕಳಿಗೆ, ಅಂಧಾಶ್ರಮದ ಅಂಧರಿಗೆ, ವೃದ್ಧಾಶ್ರಮದ ಹಿರಿಯರಿಗೆ ಸಿಹಿ ಊಟದ ಅನ್ನಸಂತರ್ಪಣೆ ಮಾಡುವ ಮೂಲಕ ಉದಾರತೆ ಮತ್ತು ಸರಳ ಸಜ್ಜನಿಕೆ ಮೆರೆಸುತ್ತಿದ್ದ ಅತ್ಯಪರೂಪದ ಅನಂತಮೂರ್ತಿ ರುದ್ರಪ್ಪನವರು.

ಪ್ರತಿಯೊಬ್ಬ ಯಶಸ್ವಿ ಪುರುಷನ ಹಿಂದೆ ಒಬ್ಬ ಮಹಿಳೆ ಪಾತ್ರ ಇರುವುದು ಎಂಬುದಕ್ಕೆ ಸ್ಪಷ್ಟ ಸಾಕ್ಷಿ ಗೌಡರ ಧರ್ಮಪತ್ನಿ ಶ್ರೀಮತಿ ದಾಕ್ಷಾಯಿಣಿ ತಾಯಿ. ಅವರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗೌಡರ ಸದ್ಧರ್ಮಿಣಿಯಾಗಿ ಪತಿಯ ಸದಿಚ್ಛೆಯನ್ನು ಅರಿತುಕೊಂಡು ನಡೆದವರು. ಹೃದಯ ವೈಶಾಲ್ಯದಲ್ಲಿ ಅವರು ತಮ್ಮ ಪತಿಯನ್ನು ಮೀರಿದವರು. ಗೌಡರ ಆಚಾರ-ವಿಚಾರಗಳಲ್ಲಿ ನೆಚ್ಚಿನ ಸಲಹೆಗಾರಳಾಗಿದ್ದ ಆ ತಾಯಿ ಯಜಮಾನರ ಆಚರಣೆಗೆ ಎಂದಿಗೂ ಕುಂದು ಬಾರದಂತೆ ನಡೆದುಕೊಂಡವರು. 'ಮಹಾಶಿವರಾತ್ರಿ'ಯ ಮಹಾಭಿಷೇಕಕ್ಕೆಂದು ದೇಶಾದ್ಯಂತ ಜಗದ್ಗುರುಗಳು, ಮಠಾಧ್ಯಕ್ಷರು, ದೇವಸ್ಥಾನಗಳಿಗೆ, ಅರ್ಘ್ಯ, ಪಾದ್ಯ, ಆಚಮನ, ಅಷ್ಟ ಗಂಧ, ಧೂಪದ ಕೊಡ, ಕರ್ಪೂರ, ಅಂಗವಸ್ತ್ರಾದಿಯಾಗಿ ಅಭಿಷೇಕದ ಸಲಕರಣೆಗಳನ್ನು ರಿಜಿಸ್ಟರ್ ಅಂಚೆ ಮೂಲಕ ಪ್ರತಿವರ್ಷ ಕಳುಹಿಸುತ್ತಿದ್ದುದು ಆ ಮಾತೆಯ ಕರ್ತೃತ್ವ ಶಕ್ತಿಯ ದ್ಯೋತಕ. ಪಾಠಶಾಲೆಯ ವಿದ್ಯಾರ್ಥಿಗಳಲ್ಲಿ ಯಾರಾದರೊಬ್ಬರು ಒಂದೊತ್ತು ಊಟಕ್ಕೆ ಬಾರದಿದ್ದಲ್ಲಿ ಅವರನ್ನು ಕರೆಕಳುಹಿಸಿ ಅವರು ಬರುವವರೆಗೂ ಕಾದು, ಊಟಕ್ಕೆ ಬಡಿಸಿದ ಅನ್ನಪೂರ್ಣೆ ಅವರು. ಅದೇ ರೀತಿ ಯಜಮಾನರು ಸಭೆ ಸಮಾರಂಭಗಳಿಗೆ ಹೋದಾಗ ಬರಲು ವಿಳಂಬವಾದರೆ ಎಷ್ಟೇ ಹೊತ್ತಾದರೂ ಅವರಿಗಾಗಿ ಕಾದು ಅವರು ಬಂದ ನಂತರ ಹರ್ಷಚಿತ್ತದಿಂದಲೇ ಊಟಕ್ಕೆ ಬಡಿಸಿ ತಾವು ಊಟ ಮಾಡುವರು. ಯಜಮಾನರ ಸೇವೆಯಲ್ಲಿ ಆ ತಾಯಿ ಕಿಂಚಿತ್ತೂ ಗೌಣಗಿದವರಲ್ಲ. ಅವರದು ಅನುರಾಗದ ಆದರ್ಶ ದಾಂಪತ್ಯ. ಗೌಡರು ಈ ದಿಸೆಯಲ್ಲಿ ಅತ್ಯಂತ ಪುಣ್ಯಶಾಲಿಗಳು.

ನಾಲ್ಕುಜನ ಪುತ್ರರು ಮತ್ತು ಒಬ್ಬ ಪುತ್ರಿಯನ್ನು ಪಡೆದು ಗೌಡರು ಎಲ್ಲರಿಂದಲೂ ಸಮಾನ ಪುರಸ್ಕೃತರು. ಒಬ್ಬ ಮಗ ಅಮೇರಿಕಾದಲ್ಲಿ ಮನೆತನದ ಆಚಾರ ವಿಚಾರಗಳನ್ನು ಚಾಚುತಪ್ಪದೇ ಪಾಲಿಸುತ್ತಾ ವೈದ್ಯಪದ್ಧತಿಯಲ್ಲಿ ತೊಡಗಿದ್ದರೆ, ಉಳಿದ ನಾಲ್ವರು ಸಹ ನಗರದಲ್ಲಿ ಅತ್ಯಂತ ಸುಸಂಸ್ಕೃತರಾಗಿ, ತಂದೆತಾಯಿಯವರ ಆದರ್ಶಗಳನ್ನು ಅನುಸರಿಸುತ್ತಾ ಮುನ್ನಡೆದಿರುವರು. ಆದ್ದರಿಂದ ಗೌಡರದು ಸಂತೃಪ್ತ ಕುಟುಂಬ, ಅದೃಷ್ಟಶಾಲಿ ಮನೆತನ.

ಗೌಡರು ತಮ್ಮ ಸಮಕಾಲೀನ ಶರಣರೂ, ಸಂತರೂ ಮತ್ತು ದಾರ್ಶನಿಕರ ದೃಷ್ಟಿಯಲ್ಲಿ ಸದಾಚಾರಿಗಳು, ಸಜ್ಜನರು, ಸುಸಂಸ್ಕೃತರು, ಸಹೃದಯರು, ಸನಾತನರು, ಶಾಂತಚಿತ್ತರು, ಅನುಭಾವಿಗಳು, ಅಂತಃಕರಣಗಳು, ಅಮೃತಹಸ್ತರೂ ಆಗಿದ್ದರಲ್ಲದೆ ನಿರ್ವಿಕಲ್ಪರು, ನಿತ್ಯಶುದ್ಧರು, ನಿತ್ಯನಿರ್ಮಲರು, ನಿತ್ಯ ಮುಕ್ತ ನಿರಂಜನರಾಗಿದ್ದರು. ಆದ್ದರಿಂದಲೇ ಅವರನ್ನು ರೋಗರುಜಿನಗಳು ಬಾಧಿಸಲಿಲ್ಲ. ಅವರ ಆಚರಣೆಗೆ ಕುಂದು ಬರಲಿಲ್ಲ. ಸಾವಿನಲ್ಲಿ ನೋವುಣ್ಣಲಿಲ್ಲ.

೫ ಜನ ಮಕ್ಕಳು, ೧೧ ಜನ ಮೊಮ್ಮಕ್ಕಳು, ೫ ಮರಿಮೊಮ್ಮಕ್ಕಳನ್ನು ಕಂಡು ತುಂಬು ಜೀವನ ನಡೆಸಿದ ರುದ್ರಪ್ಪನವರು ದೈವಾಧೀನರಾದಾಗ ೯೦ ವರ್ಷಕ್ಕೆ ಕಾಲಿಟ್ಟಿದ್ದರು.

"ಶರಣರ ಮಹಿಮೆ ಮರಣದಲ್ಲಿ ನೋಡು" ಎಂಬಂತೆ ಅವರು ತಮ್ಮ ಅಂತ್ಯವನ್ನು ಪೂರ್ವನಿಯೋಜಿಸಿದ್ದರೆಂಬುದಕ್ಕೆ ಕೆಳಗಿನ ಘಟನೆಗಳೇ ಸಾಕ್ಷಿಯಾಗಿ ನಿಂತಿವೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದಿನಾಂಕ ೯-೩-೧೯೯೮ರ ಸೋಮವಾರ ಪ್ರಾತ:ಕಾಲ ೪-೩೦ ಗಂಟೆಗೆ ಶಿವೈಕ್ಯರಾದ ಶ್ರೀ ರುದ್ರಪ್ಪನವರು, ಶಿವೈಕ್ಯರಾಗುವ ಕೆಲವು ದಿನಗಳ ಮುಂಚೆಯೇ ಮನೆಯಲ್ಲಿ ಶ್ರೀ ಸ್ವಾಮಿಗಳ ಪಾದಪೂಜೆ, ರುದ್ರಾಭಿಷೇಕ ಮತ್ತು ಅನ್ನಸಂತರ್ಪಣೆ ಏರ್ಪಡಿಸಿದರು. ಆನಂತರ ದಾನದ ಕೈಂಕರ್ಯವನ್ನು ಮಾಡಿ ಋಣ ತೀರಿತೆಂಬಂತೆ ಸಂತೃಪ್ತರಾಗಿಬಿಟ್ಟರು. ತನ್ನ ಭಕ್ತನ ಸೇವೆಗೆ ಸಂತೃಪ್ತನಾದೆ, ಅವನನ್ನು ತನ್ನಲ್ಲಿ ಲೀನಗೊಳಿಸುವ ಕಾಲ ಸನ್ನಿಹಿತವಾಗಿದೆ ಎಂಬಂತೆ ಭಾನುವಾರ ಬೆಳಿಗ್ಗೆ ದಿನಾಂಕ ೮-೩-೯೮ರಂದು ಜಂಗಮ ರೂಪದ ಆಗಂತುಕ ಗೌಡರ ಮನೆಗೆ ಬಂದು ಶ್ರೀ ಗೌಡರ ದಂಪತಿಗಳನ್ನು ಹರಸಿ ಹೋದುದು ಅತ್ಯಂತ ವಿಸ್ಮಯ ಸತ್ಯ.

ಪೂಜ್ಯ ಸ್ವಾಮಿಗಳಾದಿಯಾಗಿ, ಶರಣ ಸಮೂಹ, ಬಂಧು ಸಮೂಹ, ಅಭಿಮಾನಿ ಮತ್ತು ವಿದ್ಯಾರ್ಥಿ ಸಮೂಹ ಸೇರಿ ಅಗಲಿದ ಮಹಾನ್ ಚೇತನಕ್ಕೆ ಸಕಲ ಕ್ರಿಯಾವಿಧಿ-ವಿಧಾನಗಳನ್ನನುಸರಿಸಿ ತನ್ನ ನಮನ ಸಲ್ಲಿಸಿತು.

ಶ್ರೀ ಗೌಡರು ಬಾಳಿದ ಬದುಕಿನಿಂದಾಗಿ, ಇಂತಹ ಮಹಾನ್ ವ್ಯಕ್ತಿಯೊಬ್ಬ ನಿಜಕ್ಕೂ ಭೂಮಿಯ ಮೇಲೆ ಬದುಕಿದ್ದರೆ! ಎಂದು ನಂಬುವುದೇ ಕಷ್ಟ. ಆದರೆ ಆ ಉದಾತ್ತ ಚೇತನವನ್ನು ಕಣ್ಣಾರೆ ಕಂಡವರೆಲ್ಲರೂ ಭಾಗ್ಯಶಾಲಿಗಳು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುನ್ನುಡಿ

ಈ ಪುಸ್ತಕದಲ್ಲಿ ಸಂಗ್ರಹೀತವಾಗಿರುವ ಪ್ರಬಂಧಗಳು ೧೯೮೭ ರ ಡಿಸೆಂಬರ್ ೧೧, ೧೨ ಮತ್ತು ೧೩ರಂದು, ಬೆಂಗಳೂರಿನ ಕೃಷ್ಣರಾಜೇಂದ್ರ ರಸ್ತೆ, ಗಾಯನ ಸಮಾಜದಲ್ಲಿ, ಶ್ರೀ ಶಿವಯೋಗಿ ಶಿವಾಚಾರ್ಯರ ದ್ವಾದಶ ಶತಮಾನೋತ್ಸವದ ಅಂಗವಾಗಿ ನಡೆದ ಶ್ರೀ ಸಿದ್ಧಾಂತಶಿಖಾಮಣಿಯ ವಿಚಾರ ಸಂಕಿರಣದಲ್ಲಿ ಪ್ರಸ್ತುತ ಪಡಿಸಿದವುಗಳು. ಶ್ರೀ ಮಜ್ಜಗದ್ಗುರು ಪಂಚಾಚಾರ್ಯರ ಅನುಗ್ರಹ, ಲಿಂ।। ಪೂಜ್ಯ ಡಾ।। ಶ್ರೀ.ಜ.ಚ.ನಿ. ಅವರ ದಿವ್ಯ ಸಂಕಲ್ಪದಿಂದ ನಡೆದ ಆ ಉತ್ಸವದಲ್ಲಿ ಜ್ಞಾನದ ದಾಸೋಹವನ್ನು ಒದಗಿಸಿದ ವಿಚಾರ ಸಂಕಿರಣವದು. ಅದು ನಡೆದು ಈಗ್ಗೆ ೧೦ವರ್ಷಗಳು ಗತಿಸಿದರೂ ಈ ಪ್ರಬಂಧಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸುವ ಉದ್ದೇಶ ಹಾಗೆಯೇ ಉಳಿದಿತ್ತು. ಈಗ ಶ್ರೀ ಮತ್ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಡಾ।। ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳ ಅನುಗ್ರಹದಿಂದ, ಶ್ರೀ ಮತ್ಕಾಶೀ ಕ್ಷೇತ್ರದ ಜಂಗಮವಾಡಿ ಮಠವೇ ಕೇಂದ್ರವಾಗಿರುವ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನದ ಬೆಂಗಳೂರು ಶಾಖೆಯಾದ ಶ್ರೀ ವೀರಶೈವ ಅನುಸಂಧಾನ ಸಂಸ್ಥಾನದ ಅಂಗವಾಗಿ ಈ ಪ್ರಬಂಧಗಳನ್ನು ಸಿದ್ಧಾಂತ ಶಿಖಾಮಣಿ ವಿಚಾರ ದೀಪ್ತಿ ಎಂಬ ಶೀರ್ಷಿಕೆಯನ್ನು ಹೊತ್ತ ಪುಸ್ತಕದ ರೂಪದಲ್ಲಿ ಪ್ರಕಟಿಸುವ ಸೌಭಾಗ್ಯ ಪ್ರಾಪ್ತವಾದದ್ದು ಅತೀವ ಹರ್ಷದಾಯಕವಾದ ವಿಷಯ. ಅದರ ಸಂಪಾದನೆ ಕಾರ್ಯವನ್ನು ವಹಿಸುವ ಅವಕಾಶವೊದಗಿದ್ದು ನನ್ನ ಸೌಭಾಗ್ಯವೆಂದು ಭಾವಿಸುತ್ತೇನೆ.

ಸಿದ್ಧಾಂತ ಶಿಖಾಮಣಿಯ ಮೂಲಕ ಶ್ರೀ ಶಿವಯೋಗಿ ಶಿವಾಚಾರ್ಯರು ಕ್ರಿ.ಶ. ೮ ನೆಯ ಶತಮಾನದಲ್ಲಿ ವೀರಶೈವ ಸಿದ್ಧಾಂತಕ್ಕೆ ಸಮಗ್ರತೆಯನ್ನು ಸಾಧಿಸಿಕೊಟ್ಟು ಶ್ರೀ ವೀರಶೈವ ಪ್ರವರ್ತಕರೆಂಬ ಬಿರುದನ್ನು ಸಾರ್ಥಕವಾಗಿ ಪಡೆದರು. ಸರಲ ಸುಂದರ ಕಾವ್ಯಶೈಲಿಯಲ್ಲಿ ವೀರಶೈವ ಸಿದ್ಧಾಂತವನ್ನು ರೂಪಿಸಿ ಪ್ರತಿಪಾದಿಸಿದ ಅವರು ಗುರುಕವಿಗಳು. ಅವರ ವಿದ್ವತ್ತು ಮತ್ತು ಪ್ರತಿಭೆಗಳು ಅಗಾಧ, ಅಪ್ರತಿಮ. ವೇದ, ವೇದಾಂತ (ಉಪನಿಷತ್ತುಗಳು), ಶೈವಾಗಮಗಳು, ಶೈವ ಪುರಾಣಗಳು ಅವರಿಗೆ ಕರತಲಾಮಲಕ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವರ ಕ್ರಾಂತದರ್ಶನಕ್ಕೆ ಅವುಗಳ ಅನಂತ ಸಾಗರದಲ್ಲಿ ಅಡಗಿದ್ದ ವೀರಶೈವ ಧರ್ಮ-ದರ್ಶನಗಳ ಹೊಳೆವ ಮುತ್ತುಗಳು ಗೋಚರವಾದವು. ಅವುಗಳನ್ನು ಆಯ್ದು, ಶೋಧಿಸಿ, ವಿಮರ್ಶಿಸಿ, ತಮ್ಮ ನಿಶಿತ ಮತಿಯೆಂಬ ದಾರದಿಂದ ಪೋಣಿಸಿ ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರಗಳ ಮುಪ್ಪುರಿಗೊಂಡ ಸಿದ್ಧಾಂತವಾಗಿ ರೂಪಿಸಿ ಕೊಟ್ಟಿರುವರು. ಶ್ರೀ ಜಗದ್ಗುರು ರೇಣುಕಾಚಾರ್ಯರು ಮತ್ತು ಶೈವಸಮುದ್ರಚಂದ್ರ ಮುನಿ ಅಗಸ್ತ್ಯರ ಸಂವಾದ ರೂಪದಲ್ಲಿರುವ ಶ್ರೀ ಸಿದ್ಧಾಂತ ಶಿಖಾಮಣಿಯು ಶಿವಾಚಾರ್ಯ ಸಂಸ್ಕೃತಿಯ ದಿನಮಣಿ.

ವಿದ್ವಾಂಸರ ಮಂಡಲಿಗಳಲ್ಲಿ ಸಂಸ್ಕೃತದಲ್ಲಿರುವ ಆ ಗ್ರಂಥದ ಪರಿಚಯವಿದ್ದರೂ ಅದರ ಪ್ರಚಾರಕ್ಕೆ ಹೆಚ್ಚಿನ ಪ್ರಯತ್ನ ಆಗಿರಲಿಲ್ಲ. ವೀರಶೈವರ ಎಲ್ಲಾ ಧಾರ್ಮಿಕ ಆಚರಣೆಗಳಿಗೆ, ತತ್ತ್ವವಿಚಾರಗಳಿಗೆ ಸಿದ್ಧಾಂತ ಶಿಖಾಮಣಿಯೇ ಮೂಲ ಆಕರ. ಧಾರ್ಮಿಕ ಆಚರಣೆಗಳಲ್ಲಿ ತೊಡಗಿದ ವೀರಶೈವರಿಗೆ ತಮ್ಮ ಆಚರಣೆಗಳಿಗೆ, ದೀಕ್ಷೆ, ಇಷ್ಟಲಿಂಗಪೂಜೆ, ಗುರು-ಲಿಂಗ-ಜಂಗಮ ದಾಸೋಹ, ಪಾದೋದಕ-ಪ್ರಸಾದ ಸ್ವೀಕಾರ, ಮುಂತಾದವುಗಳಿಗೆ ಯಾವುದು ಮೂಲ ಸ್ಫೂರ್ತಿ ಎಂಬುದು ತಿಳಿಯಲೇಬೇಕು. ಸಿದ್ಧಾಂತ ಶಿಖಾಮಣಿಯು ಬೋಧಿಸುವ ಭಕ್ತಿ-ಜ್ಞಾನ-ಕ್ರಿಯೆಗಳ ತ್ರಿವೇಣಿ ಸಂಗಮವಾದ, ಷಟ್‌ಸ್ಥಲಾಂತರ್ಗತ ಏಕೋತ್ತರಶತಸ್ಥಲ ಸಿದ್ಧಾಂತವು ಎಲ್ಲರಿಗೂ, ಜಾತಿ-ಮತ-ಪಂಥ ಭೇದವಿಲ್ಲದೆ ದಾರಿದೀಪವಾಗಬಲ್ಲದು. ಈ ದಾರಿದೀಪವನ್ನು ಹಿಡಿದೇ ಭಕ್ತಿಭಂಡಾರಿ ಬಸವಣ್ಣ, ಪರಮಜ್ಞಾನಚಕ್ರವರ್ತಿ ಚನ್ನಬಸವಣ್ಣ, ಶಿವಯೋಗಿ ಸಿದ್ಧರಾಮೇಶ್ವರ, ಪರಮ ವೈರಾಗ್ಯಶಾಲಿನಿ ಅಕ್ಕಮಹಾದೇವಿ, ಮುಂತಾದ ಶರಣರು ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ವೀರಶೈವ ಸಂಸ್ಕೃತಿಯನ್ನು ಬೆಳೆಸಿದರು, ವಿಸ್ತರಿಸಿದರು. ಆದ್ದರಿಂದ ಎಲ್ಲಾ ದುರಭಿಮಾನಿಗಳ, ತಪ್ಪು ಕಲ್ಪನೆಯ ಕತ್ತಲಲ್ಲಿ ತೊಳಲಾಡುವವರ, ದುರಾಗ್ರಹದ ಕಪ್ಪು ಬಾವುಟ ಹಿಡಿದವರ ದುರಭಿಮಾನ, ತಪ್ಪು ಕಲ್ಪನೆ, ದುರಾಗ್ರಹಗಳು ದೂರಾಗಿ ನಿಜವಾದ ವೀರಶೈವ ಸಂಸ್ಕೃತಿಯ ಮೂಲ ಸ್ಫೂರ್ತಿಯಾದ ಸಿದ್ಧಾಂತ ಶಿಖಾಮಣಿ ಮತ್ತು ಅದನ್ನು ರಚಿಸಿ ಆಚಂದ್ರಾರ್ಕ ಕೀರ್ತಿಭಾಜನರಾದ ಶಿವಯೋಗಿ ಶಿವಾಚಾರ್ಯರ ಹೆಸರು ವಿಶ್ವವಿಖ್ಯಾತವಾಗಬೇಕು.

ಸಿದ್ಧಾಂತ ಶಿಖಾಮಣಿಯಲ್ಲಿ ಬರುವ ಅನೇಕ ವಿಷಯಗಳನ್ನು ವಿದ್ವಾಂಸರು ತಮ್ಮ ಪ್ರಬಂಧಗಳ ಮೂಲಕ ಪ್ರತಿಪಾದಿಸಿದ್ದಾರೆ. ಶ್ರೀ ಶಿವಯೋಗಿ ಶಿವಾಚಾರ್ಯರ ಪರಂಪರೆ, ವಿದ್ವತ್ತು, ಕಾಲ, ಕಾವ್ಯಪ್ರೌಢಿಮೆ, ವಿಷಯ ನಿರೂಪಣೆಯ ಪ್ರಬುದ್ಧತೆ, ಸಾಧನಮಾರ್ಗದ ವೈಭವ, ದಾರ್ಶನಿಕ ತತ್ತ್ವಗಳ ಸಂಪತ್ತು, ಮುಂತಾದವುಗಳ ಪರಿಚಯ ಈ ಪ್ರಬಂಧಗಳ ಮೂಲಕ ಆಗುತ್ತದೆ ಎಂದು ಹೃತ್ಪೂರ್ವಕ ಭಾವಿಸಿದ್ದೇನೆ. ಇಲ್ಲಿನ ೧೨ ಪ್ರಬಂಧಗಳಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೊದಲನೆಯದಾದ 'ಸಿದ್ಧಾಂತ ಶಿಖಾಮಣಿಃ ಕರ್ತೃ, ಕಾಲ, ಆಕರಗಳು ಮತ್ತು ವಿಷಯ' ಎಂಬ ಪ್ರಬಂಧದಲ್ಲಿ ಅವುಗಳ ಬಗ್ಗೆ ಕೆಲವು ತಪ್ಪು ಕಲ್ಪನೆಗಳನ್ನು ಪರಿಹರಿಸಿ ಸಾಧಾರವಾದ ನಿರ್ಣಯಗಳನ್ನು ಪ್ರಸ್ತುತಪಡಿಸಲಾಗಿದೆ. ವಿದ್ವಾನ್ ಬಿ. ರಾಜಶೇಖರಯ್ಯ ನವರ 'ಸಿದ್ಧಾಂತ ಶಿಖಾಮಣಿಯ ಮೂಲ ಆಕರಗಳು' ಎಂಬ ಪ್ರಬಂಧವು ಆ ಗ್ರಂಥದ ಮೂಲ ಆಧಾರ ಗ್ರಂಥಗಳ ಬಗ್ಗೆ ಸೋಲ್ಲೇಖ ಸಮರ್ಥನೆಯನ್ನು ನೀಡುತ್ತದೆ. 'ಸ್ಥಲ ಪರಿಕಲ್ಪನೆ ಮತ್ತು ಏಕೋತ್ತರಶತಸ್ಥಲ ವ್ಯವಸ್ಥೆ' ಎಂಬ ಪ್ರಬಂಧದಲ್ಲಿ ವಿದ್ವಾನ್ ಪಿ.ಎಸ್. ರಾಜಶೇಖರಯ್ಯ ಅವರು ಮೂಲಸ್ಥಲವಾದ ಪರಶಿವಬ್ರಹ್ಮನು ಅಂಗಸ್ಥಲ-ಲಿಂಗಸ್ಥಲವಾದ ಬಗೆ, ಸ್ಥಲಶಬ್ದದ ಪಾರಿಭಾಷಿಕವಾದ ಅರ್ಥ ಮತ್ತು ಷಟ್ ಸ್ಥಲಗಳಲ್ಲಿ ಅಂತರ್ಗತವಾಗಿ ಬರುವ, ೪೪ ಅಂಗಸ್ಥಲಗಳು ಮತ್ತು ೫೭ ಲಿಂಗಸ್ಥಲಗಳು ಸೇರಿದ ಏಕೋತ್ತರ ಶತಸ್ಥಲಗಳ ವ್ಯವಸ್ಥೆ ಹಾಗೂ ಸಾಧನೆಯಲ್ಲಿ ಅಂಗ ಲಿಂಗ-ಸ್ಥಲಗಳ ಸಮನ್ವಯದ ಮರ್ಮಗಳನ್ನು ಕುರಿತು ಸಾಧಾರವಾಗಿ ಹೇಳಿದ್ದಾರೆ. 'ಸಿದ್ಧಾಂತ ಶಿಖಾಮಣಿಯಲ್ಲಿ ಭಕ್ತಸ್ಥಲ' ಎಂಬ ಪ್ರಬಂಧದಲ್ಲಿ ಡಾ॥ ಕೆ. ಪ್ರತಾಪ್ ಅವರು ಭಕ್ತಸ್ಥಲದ ಮಹತ್ತ್ವವನ್ನೂ, ಅದರಲ್ಲಿ ಬರುವ ಅಂಗ-ಲಿಂಗ-ಸ್ಥಲಗಳ ಸ್ವರೂಪವನ್ನೂ ಸಾಧಾರವಾಗಿ ಚರ್ಚಿಸಿ, ದೀಕ್ಷಾದಿಗಳ ಮಹತ್ತ್ವ ಮತ್ತು ಪದ್ಧತಿಗಳನ್ನೂ, ನವವಿಧ ಭಕ್ತಿ, ಅಷ್ಟಾವರಣ, ಮುಂತಾದವುಗಳ ಕ್ರಮಗಳನ್ನೂ ವಿವರಿಸಿದ್ದಾರೆ. ವಿದ್ವಾನ್ ಎನ್.ಕೆ. ಮೃತ್ಯುಂಜಯ ಸ್ವಾಮಿ ಅವರು 'ಮಾಹೇಶ್ವರ ಮತ್ತು ಪ್ರಸಾದಿ ಸ್ಥಲಗಳಲ್ಲಿ ಸಾಧಕ' ಎಂಬ ಪ್ರಬಂಧದಲ್ಲಿ ಮಾಹೇಶ್ವರನ ನಿಷ್ಠಾಭಕ್ತಿಯ ವಿವಿಧ ಪ್ರಕಾರಗಳಾದ ಅಂಗಸ್ಥಲಗಳ ನಿರೂಪಣೆಯನ್ನು ನೀಡಿ ಪ್ರಸಾದಿಯ ಅವಧಾನ-ಭಕ್ತಿ-ಪೋಷಕವಾದ ಲಿಂಗಸ್ಥಲಗಳ ಸ್ವರೂಪವನ್ನೂ ವಿವರಿಸಿದ್ದಾರೆ. ಪ್ರಾಣಲಿಂಗಿ ಸ್ಥಲದ ಹಂತದಲ್ಲಿ ಶಿವಯೋಗ ಸಾಧನೆಯ ಮಹತ್ತ್ವವಿರುವುದು. ಅಂತೆಯೇ ವಿದ್ವಾನ್ ಜಿ.ವಿ. ಶಿವಸ್ವಾಮಿ, ಎಂ.ಎ., ಅವರು ತಮ್ಮ 'ಪ್ರಾಣಲಿಂಗಿ ಸ್ಥಲ ಮತ್ತು ಶಿವಯೋಗ' ಎಂಬ ಪ್ರಬಂಧದಲ್ಲಿ ಪ್ರಸಾದಿಯ ಅನುಭಾವಭಕ್ತಿಯ ಪ್ರಾಪ್ತಿಯಿಂದ ಶಿವಯೋಗ ಸಾಧನೆಯನ್ನು ಮಾಡಿ ಪ್ರಾಣಲಿಂಗದ ಸ್ವರೂಪವನ್ನು ಸಾಕ್ಷಾತ್ಕರಿಸಿಕೊಂಡು ಪ್ರಾಣಲಿಂಗಿಯಾಗುವ ಬಗೆಯನ್ನು ಹೇಳಿ, ಅದೇ ಶಿವಯೋಗದ ಮೂಲಕ ಪ್ರಾಣಲಿಂಗವನ್ನು ಭಾವವಸ್ತುಗಳಿಂದ ಪೂಜಿಸಿ ಆನಂದವನ್ನು ಪಡೆಯುವ ವಿಶೇಷ ರೀತಿಯನ್ನು ವರ್ಣಿಸಿದ್ದಾರೆ. ಐದು ವಿಧವಾದ ಯೋಗಗಳಲ್ಲಿ ಶಿವಯೋಗದ ವೈಶಿಷ್ಟ್ಯವನ್ನೂ ಮಹತ್ತ್ವವನ್ನೂ ಪ್ರತಿಪಾದಿಸಿದ್ದಾರೆ. ಡಾ॥ ಸಿ. ಶಿವಕುಮಾರ ಸ್ವಾಮಿ ಅವರು "ಸಿದ್ಧಾಂತ ಶಿಖಾಮಣಿಯಲ್ಲಿ ಶರಣ ಮತ್ತು ಐಕ್ಯಸ್ಥಲಗಳು" ಎಂಬ ಪ್ರಬಂಧದಲ್ಲಿ ಶರಣಸ್ಥಲದ ಹಂತದಲ್ಲಿ ಆನಂದಭಕ್ತಿಯನ್ನೂ, ಐಕ್ಯಸ್ಥಲದಲ್ಲಿ ಸಮರಸಭಕ್ತಿಯನ್ನೂ ಪೋಷಿಸುವ ಅಂಗ-ಲಿಂಗಸ್ಥಲಗಳ ವಿವರಣೆಯನ್ನು ನೀಡಿದ್ದಾರೆ. 'ಸಿದ್ಧಾಂತ ಶಿಖಾಮಣಿಯ ದಾರ್ಶನಿಕ ತತ್ತ್ವಗಳು' ಎಂಬ ಪ್ರಬಂಧದಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಡಾ।। ಎಂ.ಆರ್. ವೀರಭದ್ರಸ್ವಾಮಿ ಅವರು ಶಿವ, ಶಕ್ತಿ, ಜೀವ, ಜಗತ್ತು ಎಂಬ ತತ್ತ್ವಗಳ ಸ್ವರೂಪವನ್ನು ಪ್ರತಿಪಾದಿಸಿದ್ದಾರೆ ಲಿಂ।। ಶ್ರೀ.ಡಿ. ರೇಣುಕಾಚಾರ್ಯ ಅವರು 'ಸಿದ್ಧಾಂತ ಶಿಖಾಮಣಿ ಮತ್ತು ಪ್ರಸ್ಥಾನತ್ರಯ' ಎಂಬ ತಮ್ಮ ಪ್ರಬಂಧದಲ್ಲಿ ಸಿದ್ಧಾಂತಶಿಖಾಮಣಿಯಲ್ಲಿ ಬರುವ ದಾರ್ಶನಿಕ ತತ್ತ್ವಗಳಿಗೂ ಮತ್ತು ಉಪನಿಷತ್ತು, ಬ್ರಹ್ಮಸೂತ್ರ, ಭಗವದ್ಗೀತೆಯೆಂಬ ಮೂರು ವೇದಾಂತ ಪ್ರಸ್ಥಾನಗಳಲ್ಲಿ ಬರುವ ದಾರ್ಶನಿಕ ವಿಚಾರಗಳಿಗೂ ಇರುವ ಸಂಬಂಧವನ್ನು ತೋರಿಸಿದ್ದಾರೆ. 'ಸಿದ್ಧಾಂತ ಶಿಖಾಮಣಿ ಮತ್ತು ಷಡ್‌ದರ್ಶನಗಳು' ಎಂಬ ವಿದ್ವತ್‌ಪೂರ್ಣ ಪ್ರಬಂಧದಲ್ಲಿ ಶ್ರೀಮತ್ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಡಾ।। ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿ ಅವರು ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಪೂರ್ವ ಮೀಮಾಂಸಾ ಮತ್ತು ಉತ್ತರ ಮೀಮಾಂಸಾ ಎಂಬ ಆರು ದರ್ಶನಗಳ ಸಿದ್ಧಾಂತಗಳಿಗೂ ಸಿದ್ಧಾಂತ ಶಿಖಾಮಣಿಯಲ್ಲಿ ಪ್ರತಿಪಾದಿಸಲ್ಪಟ್ಟ ವೀರಶೈವ ಸಿದ್ಧಾಂತಕ್ಕೂ ಇರುವ ಸಾಮ್ಯ, ವೈಷಮ್ಯ ಹಾಗೂ ವೈಶಿಷ್ಟ್ಯಗಳನ್ನು ವಿವರಿಸಿದ್ದಾರೆ. ಶ್ರೀ ಷಣ್ಮುಖಯ್ಯ ಅಕ್ಕೂರ ಮಠ, ಎಂ.ಎ., ಅವರು ತಮ್ಮ 'ಸಿದ್ಧಾಂತಶಿಖಾಮಣಿಯಲ್ಲಿ ಸಾಮಾಜಿಕ ಮೌಲ್ಯಗಳು' ಎಂಬ ಪ್ರಬಂಧದಲ್ಲಿ ಸಿದ್ಧಾಂತ ಶಿಖಾಮಣಿಯಲ್ಲಿ ಪ್ರತಿಫಲಿತವಾದ ವರ್ಣಭೇದರಹಿತವಾದ ಸಮಾನತೆ, ಸ್ತ್ರೀಯರಿಗೆ ನೀಡಲಾದ ಧಾರ್ಮಿಕ ಸ್ವಾತಂತ್ರ್ಯ, ಸತಿ-ಪತಿಗಳೊಂದಾದ ವ್ರತಾಚರಣೆಯ ಪದ್ಧತಿ, ಇವೇ ಮುಂತಾದ ಸಾಮಾಜಿಕ ಮೌಲ್ಯಗಳ ಚಿತ್ರವನ್ನು ನಿರೂಪಿಸಿದ್ದಾರೆ. ಇನ್ನು ೧೨ನೆಯದಾದ 'ಸಿದ್ಧಾಂತ ಶಿಖಾಮಣಿಯ ಸಾಹಿತ್ಯಿಕ ಮೌಲ್ಯಗಳು' ಎಂಬ ತಮ್ಮ ಪ್ರಬಂಧದಲ್ಲಿ ಡಾ।। ಮಲ್ಲಿಕಾರ್ಜುನ ಪರಡ್ಡಿ ಅವರು ಸಿದ್ಧಾಂತ ಶಿಖಾಮಣಿಯಲ್ಲಿ ಕಂಡುಬರುವ ಅಲಂಕಾರ ಯೋಜನೆ, ಗುಣ-ರೀತಿ ಪ್ರಯೋಗ, ವರ್ಣನಾ ಚಾತುರ್ಯ, ಕವಿಸಮಯಗಳ ಬಳಕೆ ಮತ್ತು ರಸಾದಿಗಳ ಅಭಿವ್ಯಕ್ತಿಗಳನ್ನು ಸಾಧಾರವಾಗಿ ಪ್ರತಿಪಾದಿಸಿದ್ದಾರೆ.

ಈ ಪ್ರಬಂಧಗಳು ಸಿದ್ಧಾಂತಶಿಖಾಮಣಿಯ ಸಮಗ್ರ ಪರಿಚಯ ಮಾಡಿಕೊಡುವುದಲ್ಲದೆ ಅದರ ಪ್ರತಿಯೊಂದು ವಿಷಯವನ್ನೂ ವಿಶ್ಲೇಷಿಸಿ ವಿಮರ್ಶಿಸಿ ಪ್ರತಿಪಾದಿಸುತ್ತವೆ. ಹೀಗೆ ವೀರಶೈವ ಸಿದ್ಧಾಂತದ ಬಗ್ಗೆ ತಿಳಿದುಕೊಳ್ಳಲು ಈ ಪ್ರಬಂಧ ಸಂಗ್ರಹವು ಅತ್ಯಂತ ಉಪಯುಕ್ತವಾಗಿದ್ದು ಪ್ರತಿಯೊಬ್ಬರಿಗೂ ಸಂಗ್ರಹಯೋಗ್ಯವಾಗಿದೆ. ಇದರ ಪ್ರಕಟನೆಗೆ ಮಾರ್ಗವನ್ನು ಕಲ್ಪಿಸಿಕೊಟ್ಟು ಹರಸಿದ ಪರಮಪೂಜ್ಯ ಶ್ರೀಮತ್ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಡಾ।। ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರ ಚರಣಾರವಿಂದಗಳಿಗೆ ವಂದಿಸಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಇದರಲ್ಲಿ ಪ್ರಕಟವಾದ ಪ್ರಬಂಧಗಳ ಕರ್ತೃಗಳಾದ ವಿದ್ವಾಂಸರಿಗೆಲ್ಲರಿಗೂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಈ ಗ್ರಂಥದ ಪ್ರಕಟನೆಯಲ್ಲಿ ಕರಡು ಪ್ರತಿಯನ್ನು ತಿದ್ದಿ ಸಹಕರಿಸಿದ ನನ್ನ ವಿದ್ಯಾರ್ಥಿ ಡಾ|| ಸಿ. ಶಿವಕುಮಾರ ಸ್ವಾಮಿಗೆ ಮೆಚ್ಚುಗೆಯ ಶುಭಾಶಯಗಳನ್ನು ಹೇಳುತ್ತೇನೆ. ಈ ಗ್ರಂಥವನ್ನು ಅಂದವಾಗಿ ಮುದ್ರಿಸಿಕೊಟ್ಟ "ಸ್ನೇಹ ಪ್ರಿಂಟರ್ಸ್" ಅವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಬೆಂಗಳೂರು
೧೧-೪-೧೯೯೮

ಇತಿ ಸಜ್ಜನ ವಿಧೇಯ
ಡಾ|| ಎಂ. ಶಿವಕುಮಾರ ಸ್ವಾಮಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದ್ವಿತೀಯ ಮುದ್ರಣಕ್ಕೆ
ಸಂಪಾದಕರ ನುಡಿ

'ಸಿದ್ಧಾಂತ ಶಿಖಾಮಣಿ ವಿಚಾರ ದೀಪ್ತಿ' ಎಂಬ ಈ ಗ್ರಂಥವು ಮರುಮುದ್ರಣವನ್ನು ಕಾಣುತ್ತಿರುವುದು ಸಂತೋಷದ ವಿಷಯ. ಇದು ಓದುಗರ ಮೆಚ್ಚುಗೆಯ ಸಂಕೇತ. ಶ್ರೀ ಸಿದ್ಧಾಂತ ಶಿಖಾಮಣಿಯು ವೀರಶೈವ ಧರ್ಮ-ದರ್ಶನಗಳ ಬಗ್ಗೆ ಅತ್ಯಂತ ಪ್ರಮಾಣಭೂತವಾದ ಗ್ರಂಥ. ಅದರ ಅಧ್ಯಯನ ಮಾಡಿದ ಅನೇಕ ವಿದ್ವಾಂಸರು ಅದರ ಒಂದೊಂದು ವಿಷಯವನ್ನು ಕುರಿತು ರಚಿಸಿದ ವಿದ್ವತ್ಪೂರ್ಣ ಪ್ರಬಂಧಗಳು ೧೯೮೭ರಲ್ಲಿ ಬೆಂಗಳೂರಿನಲ್ಲಿ ನಡೆದ ವಿಚಾರಸಂಕಿರಣದಲ್ಲಿ ತುಂಬಾ ಮೆಚ್ಚುಗೆಯನ್ನು ಗಳಿಸಿದ್ದವು. ಶ್ರೀಮತ್ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರ ಅನುಗ್ರಹದಿಂದ ವಾರಾಣಸೀ ಜ್ಞಾನಸಿಂಹಾಸನ ಪೀಠ ಜಂಗಮವಾಡಿ ಮಠದ 'ಶ್ರೀ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ'ದ ಅಂಗಸಂಸ್ಥೆಯಾದ 'ವೀರಶೈವ ಅನುಸಂಧಾನ ಸಂಸ್ಥಾನ', ಬೆಂಗಳೂರು, ಇದರ ಮೂಲಕ ೧೯೯೮ರಲ್ಲಿ ಪ್ರಕಾಶಿತವಾಗಿದ್ದ ಪ್ರಬಂಧ ಸಂಗ್ರಹರೂಪದ ಈ ಗ್ರಂಥವು ಓದುಗರ ಮೆಚ್ಚುಗೆಯನ್ನು ಗಳಿಸಿದೆ.

ಈ ಗ್ರಂಥದ ಮೊದಲ ಮುದ್ರಣಕ್ಕೆ ಹಣವನ್ನು ನೀಡಿ ಸಹಕರಿಸಿದ ಲಿಂಗೈಕ್ಯ ಉದಾತ್ತ ಚೇತನ ಶ್ರೀ ಗೌಡರ ವೀ. ರುದ್ರಪ್ಪನವರ ಮಕ್ಕಳು ಸ್ಮರಣೀಯರು. ಅವರು ನೀಡಿದ ದೇಣಿಗೆ ಸಾರ್ಥಕವಾಗಿದೆ; ಈ ಗ್ರಂಥವನ್ನು ಓದಿ ಸಾವಿರಾರು ಓದುಗರು ತಮ್ಮ ಜ್ಞಾನವನ್ನು ಬೆಳೆಸಿಕೊಂಡಿದ್ದಾರೆ; ಈ ಗ್ರಂಥ ಬೇಕೆಂಬ ಬೇಡಿಕೆಯನ್ನು ಅನೇಕರು ಮುಂದಿಟ್ಟಿದ್ದಾರೆ. ಉತ್ತಮ ಪ್ರಬಂಧಗಳನ್ನು ಕೊಡಮಾಡಿದ ವಿವಿಧ ವಿದ್ವಾಂಸರು ಅಭಿನಂದನೀಯರು. ದೊರೆತಿರುವ ಉತ್ತಮ ಪ್ರತಿಕ್ರಿಯೆ ಅವರ ಉತ್ಸಾಹವನ್ನು, ಸಂಶೋಧನ ಪ್ರವೃತ್ತಿಯನ್ನು ಇಮ್ಮಡಿಗೊಳಿಸುವುದರಲ್ಲಿ ಸಂದೇಹವಿಲ್ಲ. ಗ್ರಂಥದ ಬಗ್ಗೆ ಮೊದಲ ಮುದ್ರಣಕ್ಕೆ ಮತ್ತೆ ಇದರೊಂದಿಗೆ ಮುದ್ರಿತವಾದ ಮುನ್ನುಡಿಯನ್ನು ಪರಿಶೀಲಿಸಲು ಓದುಗರನ್ನು ಪ್ರಾರ್ಥಿಸುತ್ತೇನೆ. ಸಂಪಾದಕನಾಗಿ ಎಲ್ಲಾ ಓದುಗರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನಗೆ ಇಂತಹ ಸದವಕಾಶವನ್ನು ಕಲ್ಪಿಸಿಕೊಟ್ಟ ಶ್ರೀ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನದ ಅಧ್ಯಕ್ಷರಾದ ಪರಮಪೂಜ್ಯ ಜಗದ್ಗುರು ಡಾ|| ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರ ಚರಣಾರವಿಂದಗಳಿಗೆ ವಂದಿಸಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಗ್ರಂಥದ ಬೇಡಿಕೆಯನ್ನು ಅನುಲಕ್ಷಿಸಿ ಇದರ ಮರುಮುದ್ರಣಕ್ಕೆ ತ್ವರಿತ ಕ್ರಮಗಳನ್ನು ಕೈಕೊಂಡ 'ವೀರಶೈವ ಅನುಸಂಧಾನ ಸಂಸ್ಥಾನ'ದ ಕಾರ್ಯದರ್ಶಿಗಳಾದ ಡಾ|| ಶ್ರೀಮತಿ ಸಿ.ಯು. ಉಮಾದೇವಿ ಮತ್ತು ಶ್ರೀ ಪಿ. ಉಮಾಶಂಕರ್ ಅವರಿಗೆ ಧನ್ಯವಾದಗಳು. ಈ ಗ್ರಂಥವನ್ನು ತ್ವರಿತವಾಗಿ ಮುದ್ರಿಸಿಕೊಟ್ಟ ಸ್ನೇಹಾ ಪ್ರಿಂಟರ್ಸ್ ಅವರಿಗೆ ನನ್ನ ಕೃತಜ್ಞತೆಗಳು.

ಇತಿ ಸಜ್ಜನ ವಿಧೇಯ
ಡಾ|| ಎಂ. ಶಿವಕುಮಾರ ಸ್ವಾಮಿ

ಬೆಂಗಳೂರು
ಶಾ.ಶ. ೧೯೨೨ ವಿಕ್ರಮ ಸಂ||
ಮಾಘ ಶುದ್ಧ ಪ್ರತಿಪದ
೨೫.೧.೨೦೦೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಷಯಾನುಕ್ರಮಣಿಕೆ

		ಪು. ಸಂಖ್ಯೆ
೧.	ಸಿದ್ಧಾಂತ ಶಿಖಾಮಣಿ ; ಕರ್ತೃ, ಕಾಲ, ಆಕರಗಳು ಮತ್ತು ವಿಷಯ -ಡಾ|| ಎಂ. ಶಿವಕುಮಾರ ಸ್ವಾಮಿ	೧
೨.	ಸಿದ್ಧಾಂತ ಶಿಖಾಮಣಿಯ ಮೂಲ ಆಕರಗಳು -ವಿದ್ವಾನ್ ಬಿ. ರಾಜಶೇಖರಯ್ಯ	೨೪
೩.	ಸ್ಥಲಪರಿಕಲ್ಪನೆ ಮತ್ತು ಏಕೋತ್ತರಶತಸ್ಥಲ ವ್ಯವಸ್ಥೆ -ವಿದ್ವಾನ್ ಜಿ.ಎಸ್. ರಾಜಶೇಖರಯ್ಯ	೩೫
೪.	ಸಿದ್ಧಾಂತ ಶಿಖಾಮಣಿಯಲ್ಲಿ ಭಕ್ತಸ್ಥಲ -ಇಂಗ್ಲಿಷ್ ಮೂಲ : ಡಾ|| ಕೆ. ಪ್ರತಾಪ್ -ಅನುವಾದ: ಡಾ|| ಸಿ. ಶಿವಕುಮಾರ ಸ್ವಾಮಿ	೪೪
೫.	ಮಾಹೇಶ್ವರ ಮತ್ತು ಪ್ರಸಾದಿಸ್ಥಲಗಳಲ್ಲಿ ಸಾಧಕ -ವಿದ್ವಾನ್ ಎಸ್.ಕೆ. ಮೃತ್ಯುಂಜಯಸ್ವಾಮಿ	೫೪
೬.	ಪ್ರಾಣಲಿಂಗಿಸ್ಥಲ ಮತ್ತು ಶಿವಯೋಗ -ವಿದ್ವಾನ್ ಜಿ.ವಿ. ಶಿವಸ್ವಾಮಿ	೬೪
೭.	ಸಿದ್ಧಾಂತ ಶಿಖಾಮಣಿಯಲ್ಲಿ ಶರಣ ಮತ್ತು ಐಕ್ಯಸ್ಥಲಗಳು -ಡಾ|| ಸಿ. ಶಿವಕುಮಾರ ಸ್ವಾಮಿ	೭೨
೮.	ಸಿದ್ಧಾಂತ ಶಿಖಾಮಣಿಯ ದಾರ್ಶನಿಕ ತತ್ತ್ವಗಳು - ಎಂ.ಆರ್. ವೀರಭದ್ರಸ್ವಾಮಿ	೮೬
೯.	ಸಿದ್ಧಾಂತ ಶಿ. ಣಿ ಮತ್ತು ಪ್ರಸ್ಥಾನತ್ರಯ -ಲಿಂ|| ಶ್ರೀ ಡಿ. ರೇಣುಕಾಚಾರ್ಯ	೯೨
೧೦.	ಸಿದ್ಧಾಂತ ಶಿಖಾಮಣಿ ಹಾಗೂ ಷಡ್‌ದರ್ಶನಗಳು -ಪರಮಪೂಜ್ಯ ಕಾಶೀ ಜಗದ್ಗುರು ಡಾ|| ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು	೧೦೪
೧೧.	ಸಿದ್ಧಾಂತ ಶಿಖಾಮಣಿಯಲ್ಲಿ ಸಾಮಾಜಿಕ ಮೌಲ್ಯಗಳು -ವಿದ್ವಾನ್ ಶ್ರೀ ಷಣ್ಮುಖಯ್ಯ ಅಕ್ಕೂರ ಮಠ	೧೪೮
೧೨.	ಸಿದ್ಧಾಂತ ಶಿಖಾಮಣಿಯ ಸಾಹಿತ್ಯಕ ಮೌಲ್ಯಗಳು -ಡಾ|| ಮಲ್ಲಿಕಾರ್ಜುನ ಪರಡ್ಡಿ	೧೬೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧. ಸಿದ್ಧಾಂತ ಶಿಖಾಮಣಿ: ಕರ್ತೃ, ಕಾಲ, ಆಕರಗಳು ಮತ್ತು ವಿಷಯ

ಡಾ|| ಎಂ. ಶಿವಕುಮಾರಸ್ವಾಮಿ

ಸಿದ್ಧಾಂತ ಶಿಖಾಮಣಿಯು ವೀರಶೈವ ಧರ್ಮ ಮತ್ತು ದರ್ಶನಗಳಿಗೆ ಪ್ರಧಾನವಾದ ಪ್ರಮಾಣಗ್ರಂಥ. ಭಗವದ್ಗೀತೆಯಂತೆ ಅದು ಸಂವಾದರೂಪದಲ್ಲಿದೆ. ಅದರಲ್ಲಿ ರೇಣುಕ ಭಗವತ್ಪಾದರು ಅಗಸ್ತ್ಯ ಮುನಿಗೆ ವೀರಶೈವ ಧರ್ಮ-ದರ್ಶನಗಳನ್ನು ಉಪದೇಶ ಮಾಡಿದ್ದಾರೆ. ಕೃಷ್ಣಾರ್ಜುನ ಸಂವಾದರೂಪದಲ್ಲಿರುವ ಭಗವದ್ಗೀತೆಯ ಉಪದೇಶವನ್ನು ವ್ಯಾಸರು ಸಂಗ್ರಹಿಸಿದಂತೆ ರೇಣುಕಾಗಸ್ತ್ಯಸಂವಾದರೂಪದಲ್ಲಿರುವ ಸಿದ್ಧಾಂತ ಶಿಖಾಮಣಿಯ ಉಪದೇಶವನ್ನು ಶಿವಯೋಗಿ ಶಿವಾಚಾರ್ಯರು ಸಂಗ್ರಹಿಸಿದ್ದಾರೆ. ವೀರಶೈವಪರವಾದ ಶ್ರೀಕರಭಾಷ್ಯ, ಕ್ರಿಯಾಸಾರ, ವೀರಶೈವಾನಂದಚಂದ್ರಿಕಾ ಮುಂತಾದ ಗ್ರಂಥಗಳಲ್ಲಿ ಅದರ ಶ್ಲೋಕಗಳ ಉಲ್ಲೇಖ ಮತ್ತು ಭಾವಾನುವಾದಗಳಿವೆ. ಇದಲ್ಲದೆ ಶೈವಸಿದ್ಧಾಂತಪರವಾದ ಶ್ರೀಕಂಠಭಾಷ್ಯ ಮತ್ತು ಅದೇ ಪರಂಪರೆಯ ಪ್ರಕರಣ ಗ್ರಂಥಗಳಲ್ಲಿ ಸಿದ್ಧಾಂತ ಶಿಖಾಮಣಿಯ ವಾಕ್ಯಗಳು ಉದಾಹೃತವಾಗಿವೆ. ಇದರಿಂದ ಈ ಗ್ರಂಥದ ಪ್ರಭಾವವು ವ್ಯಕ್ತವಾಗುತ್ತದೆ. ಆದರೆ ಈ ಗ್ರಂಥದ ಕರ್ತೃ, ಕಾಲ, ದೇಶ ಮುಂತಾದವುಗಳ ವಿಷಯದಲ್ಲಿ ಕೆಲವು ಸಂಶಯಗಳೂ ವ್ಯಕ್ತವಾಗಿವೆ. ಆದ್ದರಿಂದ ಅದರ ಆಂತರಿಕ ಹಾಗೂ ಬಾಹ್ಯ ಆಧಾರಗಳನ್ನು ಪರಿಶೀಲಿಸಿ ಪ್ರಾಮಾಣಿಕವಾದ ನಿಲುವನ್ನು ತಾಳಬೇಕಾಗಿದೆ. ಹಾಗೆ ಪ್ರಾಮಾಣಿಕವಾದ ನಿಲುವನ್ನು ತಾಳಲು ಕಾಲವು ಪಕ್ವವಾಗಿದೆ.

ಕರ್ತೃದೇಶಾದಿ ವಿಚಾರ:

ಸಿದ್ಧಾಂತ ಶಿಖಾಮಣಿಯ ಕರ್ತೃ ಶಿವಯೋಗಿ ಶಿವಾಚಾರ್ಯರೆಂಬುದು ಪ್ರಸಿದ್ಧ. ಅವರ ದೇಶ ಮತ್ತು ಕಾಲದ ಬಗ್ಗೆ ಗ್ರಂಥದಲ್ಲಿ ಸ್ಪಷ್ಟ ಆಧಾರಗಳಿಲ್ಲ. ಆದರೆ ಗ್ರಂಥದ ಮೊದಲ ಪರಿಚ್ಛೇದದಲ್ಲಿ[1] ತಮ್ಮ ಪರಂಪರೆಯನ್ನು ಗ್ರಂಥಕಾರರು ಹೇಳಿಕೊಂಡಿದ್ದಾರೆ. ಈ ಆಂತರಿಕ ಆಧಾರದಿಂದ ತಿಳಿದುಬರುವ ವಿಷಯ ಇಷ್ಟು ಮಾತ್ರ. ಅವರ ಪರಂಪರೆಯ ಮೂಲ ಆಚಾರ್ಯರು ಶಿವಯೋಗಿ ಎಂಬುವರು. ಅವರು ಶಿವಜ್ಞಾನ ಮಹೋದಧಿಯಾಗಿದ್ದರು. ಅವರ ಅನಂತರ ಮುದ್ದದೇವ ಶಿವಾಚಾರ್ಯರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಯೋಗಿಗಳಲ್ಲಿ ಮೂರ್ಧನ್ಯಪ್ರಾಯರಾಗಿದ್ದರು. ಸಿದ್ಧನಾಥ ಶಿವಾಚಾರ್ಯರು ಆ ಪರಂಪರೆಯ ಮುಂದಿನ ಆಚಾರ್ಯರು. ಶಿವಸಿದ್ಧಾಂತನಿರ್ಣೇತೃಗಳೆಂದು ಖ್ಯಾತಿವೆತ್ತವರು. ಅವರ ಅನಂತರ ಬಂದವರು ಈ ಗ್ರಂಥದ ಕರ್ತೃಗಳಾದ ಶಿವಯೋಗಿ ಶಿವಾಚಾರ್ಯರು. ಇದು ವಂಶಪರಂಪರೆಯಲ್ಲ, ಗುರುಪರಂಪರೆಯೆಂದು ಒಂದು ವಾದವಿದೆ. ಆ ವಾದವನ್ನು ಒಪ್ಪಿಕೊಂಡರೆ ಒಂದು ಶ್ಲೋಕದಲ್ಲಿ ಬರುವ 'ತಸ್ಯವಂಶೇ' ಎಂಬುದಕ್ಕೆ 'ಅವರ ಪರಂಪರೆಯಲ್ಲಿ' ಎಂಬ ಅರ್ಥವನ್ನು ತೆಗೆದುಕೊಳ್ಳಬೇಕಾಗುತ್ತದೆ. ಹಾಗೆ ಮಾಡುವುದೇ ಸೂಕ್ತವೆಂದು ತೋರುತ್ತದೆ. ಏಕೆಂದರೆ ವಂಶದ ಅನುಕ್ರಮವನ್ನು ಹೇಳುವ ಉದ್ದೇಶವಿದ್ದರೆ ಶಿವಯೋಗಿ ಶಿವಾಚಾರ್ಯರು ಕನಿಷ್ಠಪಕ್ಷ ತಮ್ಮ ತಾಯಿಯ ಹೆಸರನ್ನಾದರೂ ತಿಳಿಸಬೇಕಾಗಿತ್ತು. ಶ್ಲೋಕಗಳಲ್ಲಿ ಬರುವ 'ನಂದನಃ' ಮುಂತಾದ ಶಬ್ದಗಳಿಗೆ 'ಕರಸಂಜಾತಃ' ಎಂದು ಅರ್ಥಮಾಡಿಕೊಂಡು, ಇದನ್ನು ಗುರುಪರಂಪರೆಯೆಂದು ತಿಳಿಯಲು ಬಾಧಕವೇನೂ ಇಲ್ಲ.

ಶಿವಯೋಗಿ ಶಿವಾಚಾರ್ಯರು ಯಾರು?

ಶಿವಯೋಗಿ ಶಿವಾಚಾರ್ಯರು ಯಾರು, ಎಂಬ ವಿಷಯದಲ್ಲಿ ನಿರ್ಧಾರವಾಗಿ ಹೇಳಲು ಸಾಧ್ಯವಿಲ್ಲ. ಈ ವಿಷಯದಲ್ಲಿ ಅವಸರದ ನಿರ್ಣಯವೂ ಸರಿಯಲ್ಲ. ಈ ಸಂದರ್ಭದಲ್ಲಿ ಗಮನಿಸಬೇಕಾದ, ಎಚ್ಚರಿಕೆಯಿಂದ ಪರೀಕ್ಷಿಸಬೇಕಾದ ಒಂದು ವಿಷಯವಿದೆ. ಅದು ಈ ಗ್ರಂಥಕ್ಕೆ ಕ್ರಿ.ಶ.೧೭ನೇ ಶತಮಾನದಲ್ಲಿ ಸಂಸ್ಕೃತ ವ್ಯಾಖ್ಯಾನವನ್ನು ರಚಿಸಿದ ಶ್ರೀ ಮರಿತೋಂಟದಾರ್ಯರ ಮಾತುಗಳಿಂದ ಉದ್ಭೂತವಾಗಿದೆ. ಅವರ ವ್ಯಾಖ್ಯಾನದಂತೆ ಶಿವಯೋಗಿ ಶಿವಾಚಾರ್ಯರು ಸಿದ್ಧರಾಮೇಶ್ವರರ ಸಂಪ್ರದಾಯಕ್ಕೆ ಸೇರಿದವರು ಎಂದು ತಿಳಿಯಬೇಕಾಗುತ್ತದೆ. ಶಿವಯೋಗಿ ಶಿವಾಚಾರ್ಯರ ಬಗ್ಗೆ ಗ್ರಂಥದ ಆಂತರಿಕ ಆಧಾರಗಳು ಸ್ಪಷ್ಟವಾಗಿಲ್ಲವಾದ್ದರಿಂದ ದೊರೆತದ್ದೇ ದೊಡ್ಡ ಆಧಾರವೆಂದು ಭಾವಿಸಿ ಅವರ ಅಭಿಪ್ರಾಯವನ್ನು ಒಪ್ಪಿಕೊಳ್ಳಬಹುದಿತ್ತು. ಆದರೆ ಆ ಅಭಿಪ್ರಾಯವನ್ನು ಅಂಗೀಕರಿಸಲು ಸಂಶೋಧಕರಿಗೆ ಕೆಲವು ತೊಡಕುಗಳಿವೆ. ಮೊದಲನೆಯದಾಗಿ ಮರಿತೋಂಟದಾರ್ಯರು ಶಿವಯೋಗಿ ಶಿವಾಚಾರ್ಯ ಎಂಬ ಹೆಸರಿನ ಇಬ್ಬರು ಆಚಾರ್ಯರಲ್ಲಿ ಒಬ್ಬರನ್ನು ಸಿದ್ಧರಾಮೇಶ್ವರರೆಂದು ಗುರುತಿಸಿದ್ದಾರೆ. ಮೇಲೆ ತಿಳಿಸಿದ ಹಾಗೆ ಪರಂಪರೆಯಿರುವುದು 'ಶಿವಯೋಗಿ, ಮುದ್ದದೇವ, ಸಿದ್ಧನಾಥ, ಶಿವಯೋಗಿ' ಎಂದು. ಇವರಲ್ಲಿ ಮೊದಲಿನವರಾದ ಶಿವಯೋಗಿ ಎಂಬ ಆಚಾರ್ಯರ ಬಗ್ಗೆ 'ಶಿವಯೋಗೀತಿ ವಿಖ್ಯಾತಃ ಶಿವಜ್ಞಾನಮಹೋದಧಿಃ' ಎಂದು ಹೇಳಿದ್ದಾರೆ ಗ್ರಂಥಕಾರರು. ಇದಕ್ಕೆ ವ್ಯಾಖ್ಯಾನವನ್ನು ಬರೆಯುತ್ತಾ ಮರಿತೋಂಟದಾರ್ಯರು ಹೀಗೆ ಹೇಳಿದ್ದಾರೆ- ಕಶ್ಚಿತ್ ರೇವಣಸಿದ್ಧೇಶ್ವರದೃಷ್ಟಿಗರ್ಭಸಂಭೂತಸಿದ್ಧರಾಮೇಶಃ ಶಿವಯೋಗೀತಿ ವಿಖ್ಯಾತಃ ಆಸೀದಿತ್ಯರ್ಥಃ'. ಮತ್ತೆ ಪರಂಪರೆಯಲ್ಲಿ ಮೂರನೆಯವರಾದ ಸಿದ್ಧನಾಥರನ್ನೇ ಕುರಿತು ಗ್ರಂಥಕಾರರು, 'ತಸ್ಯಾಸೀನ್ನಂದನಃ ಶಾಂತಃ ಸಿದ್ಧನಾಥಾಭಿದಃ ಶುಚಿಃ' ಎಂದು ಹೇಳಿದ್ದಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದರ ಮೇಲಿನ ವ್ಯಾಖ್ಯಾನವು ಹೀಗಿದೆ- 'ತಸ್ಯ ಮುದ್ದದೇವಸ್ಯ, ಶುಚಿಃ ಪವಿತ್ರಃ, ಶಾಂತಃ ರಾಗದ್ವೇಷರಹಿತಃ.... ಸಿದ್ಧನಾಥಾಭಿಧಃ ಸಿದ್ಧರಾಮೇಶ್ವರಾಭಿಧಸಂಯುಕ್ತಃ ಸಿದ್ಧನಾಥಾಚಾರ್ಯಾಖ್ಯಃ, ನಂದನಃ ಕುಮಾರಃ, ಆಸೀತ್ ಅಭವತ್ ಇತ್ಯರ್ಥಃ'[೩]. ಅಂದರೆ ಇವರು ಸಿದ್ಧರಾಮೇಶ್ವರರ ಹೆಸರನ್ನು ಹೊತ್ತ ಸಿದ್ಧನಾಥ ಎಂಬವರು, ಗ್ರಂಥಕಾರರಾದ ಶಿವಯೋಗಿ ಶಿವಾಚಾರ್ಯರ ಗುರುಗಳು. ಶ್ಲೋಕದಲ್ಲಿ ಬರುವ 'ಸಿದ್ಧನಾಥಾಭಿಧಃ' ಎಂಬ ಶಬ್ದಕ್ಕೆ 'ಸಿದ್ಧನಾಥರೆಂಬ ಹೆಸರಿನವರು' ಎಂಬ ಅರ್ಥವೇ ಸಹಜವಾದದು. ಹಿಂದೆ ಶಿವಯೋಗಿ ಎಂಬ ಹೆಸರಿಗೆ ಸಿದ್ಧರಾಮೇಶ್ವರರೆಂಬ ಅರ್ಥವನ್ನು ನೀಡಿದ ವ್ಯಾಖ್ಯಾನಕಾರರು ಗ್ರಂಥಕಾರರಿಂದ ವಿವಕ್ಷಿತವಲ್ಲದ ಅರ್ಥವನ್ನು ಜೋಡಿಸಲು ಪ್ರಯತ್ನಿಸಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಗ್ರಂಥಕಾರರು ನಿಜವಾಗಿ ಸಿದ್ಧರಾಮೇಶ್ವರರ ಪರಂಪರೆಗೆ ಸೇರಿದವರೆ ಆಗಿದ್ದಿದ್ದರೆ ಅವರು ಸ್ಪಷ್ಟವಾಗಿ ತಮ್ಮ ಶ್ಲೋಕದಲ್ಲಿ 'ಸಿದ್ಧರಾಮ ಇತಿ ಖ್ಯಾತಃ ಶಿವಜ್ಞಾನಮಹೋದಧಿಃ' ಎಂದು ಹೇಳುವುದಕ್ಕೆ ಛಂದಸ್ಸಿನ ತೊಂದರೆಯಾಗಲಿ, ಭಾಷೆಯ ತೊಂದರೆಯಾಗಲಿ ಇರಲಿಲ್ಲ. ರೂಪದಲ್ಲಿ ಕನ್ನಡ ಶಬ್ದದಂತೆ ಕಾಣುವ 'ಮುದ್ದದೇವಃ' ಎಂಬುದಕ್ಕೆ 'ಮುದಂ ದದಾತಿ ಇತಿ ಮುದ್ದಃ' ಎಂದು ಸಂಸ್ಕೃತೀಕರಣ ಪ್ರಯತ್ನದ ನಿಷ್ಪತ್ತಿಯನ್ನು ಕೊಟ್ಟು ಅದೇ ಅಂಕಿತ ನಾಮವನ್ನು ಶ್ಲೋಕವೊಂದರಲ್ಲಿ ಉಳಿಸಿಕೊಂಡ ಗ್ರಂಥಕಾರರು 'ಸಿದ್ಧರಾಮ' ಎಂಬ ಸಂಸ್ಕೃತದಲ್ಲಿನ ಅಂಕಿತ ನಾಮವನ್ನು ಉಳಿಸಿಕೊಳ್ಳಲು ಯಾವ ತೊಂದರೆಯಿತ್ತು? ಹೀಗೆ ಸಂದೇಹಕ್ಕೆ ಎಡೆಯಾದ ಅಭಿಪ್ರಾಯವನ್ನು ಒಪ್ಪುವಂತಿಲ್ಲ. 'ಮುದ್ದದೇವ' ಎಂಬುದು ಕನ್ನಡ ಹೆಸರೆಂಬುದು ಸ್ಪಷ್ಟವಾದ್ದರಿಂದ ಶಿವಯೋಗಿ ಶಿವಾಚಾರ್ಯರು ಕನ್ನಡನಾಡಿನವರೆಂದು ಭಾವಿಸಲು ಅವಕಾಶವಿದೆ. ಡಾ॥ಜ.ಚ.ನಿ.ಯವರು ಶ್ರೀ ಶಿವಯೋಗಿ ಶಿವಾಚಾರ್ಯರು ಕರ್ನಾಟಕದ ಬಿಜಾಪುರ ಜಿಲ್ಲೆಯಲ್ಲಿರುವ "ಸಾಲೋಟಗಿ" ಎಂಬ ಗ್ರಾಮದ ಪ್ರಾಚೀನ ಸಂಸ್ಕೃತ ವಿದ್ಯಾಪೀಠದ ಪ್ರಾಚಾರ್ಯರಾಗಿದ್ದರು. ಆ ಗ್ರಾಮದಲ್ಲಿಯೇ ಅವರ ಸಮಾಧಿಯು ಇವತ್ತಿಗೂ ಇದೆ, ಎಂದು ಹೇಳಿದ್ದಾರೆ.[೪] ಆ ಸಾಲೋಟಗಿ ಗ್ರಾಮದಲ್ಲಿ ಪ್ರಾಚೀನವಾದ ಸಂಸ್ಕೃತ ವಿದ್ಯಾಪೀಠವೊಂದಿತ್ತೇ? ಆ ಗ್ರಾಮದಲ್ಲಿ ಶಿವಯೋಗೀಶ್ವರರ ಸಮಾಧಿಯು ಇರುವುದೆಂದ ಮೇಲೆ ಅದು ಶಿವಯೋಗಿ ಶಿವಾಚಾರ್ಯರದೇ ಎಂದು ಹೇಳಲು ಸಾಧ್ಯವೇ? ಈ ಪ್ರಶ್ನೆಗಳಿಗೆ ನಿರ್ವಿವಾದವಾದ ಉತ್ತರವನ್ನು ಕಂಡು ಕೊಳ್ಳಲು ಕಾಲದ ವಿಕೋಪಕ್ಕೆ ಗುರಿಯಾದ ಆಧಾರಗಳು ಅಷ್ಟು ಸಹಕಾರಿಯಾಗಿಲ್ಲ. ಈ ಹೇಳಿಕೆಯು ನಿಜವೇ ಆಗಿದ್ದರೆ ಶಿವಯೋಗಿ ಶಿವಾಚಾರ್ಯರು ಕರ್ನಾಟಕದವರೆಂಬುದಕ್ಕೆ ಇದೂ ಒಂದು ಪೋಷಕವಾದ ಆಧಾರವಾಗುತ್ತದೆ.

೧. ಸಿದ್ಧಾಂತ ಶಿಖಾಮಣಿಯ ಕಾಲ:

ಸಿದ್ಧಾಂತ ಶಿಖಾಮಣಿಯ ಕರ್ತೃವಿನ ಪರಂಪರೆ ಮತ್ತು ದೇಶದ ಬಗ್ಗೆ ವಿಚಾರಗಳನ್ನು ಮಂಡಿಸಿದ್ದಾಯಿತು. ಇನ್ನು ಅದರ ಕಾಲದ ಬಗ್ಗೆ ವಿಚಾರ ಮಾಡುವುದು ಬಹಳಷ್ಟಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೆಲವು ಮುಖ್ಯವಾದ ಬಾಹ್ಯ ಆಧಾರಗಳ ಮೇಲೆ ಅದರ ಕಾಲದ ಪೂರ್ವೋತ್ತರ ಸೀಮೆಗಳನ್ನು ಗುರುತಿಸುವುದು ಸಾಧ್ಯವಿದೆ. ಆದ್ದರಿಂದ ಮೊದಲಿಗಿಂತ ಈಗ ಅದರ ಕಾಲದ ಬಗ್ಗೆ ಹೆಚ್ಚಿನ ಖಚಿತತ್ವವೂ ಲಭ್ಯವಾಗಿದೆ. ಅದನ್ನಿಲ್ಲಿ ಸಾಧಾರವಾಗಿ ಮಂಡಿಸುತ್ತಿದ್ದೇನೆ.

ಮೊದಲು ಸಿದ್ಧಾಂತ ಶಿಖಾಮಣಿಯ ಕಾಲದ ಉತ್ತರಸೀಮೆ ಯನ್ನು (lower limit) ಗುರುತಿಸಲು ಆಧಾರಗಳು ಹೀಗಿವೆ-

೧. ಮೇಲೆ ಉಲ್ಲೇಖ ಮಾಡಿದ ಶ್ರೀ ಮರಿತೋಂಟದಾರ್ಯರು ಕೆಳದಿಯ ಇಮ್ಮಡಿ ಬಸವಪ್ಪ ನಾಯಕನ ಕಾಲದಲ್ಲಿದ್ದರು. ತಮ್ಮ ವೀರಶೈವಾನಂದಚಂದ್ರಿಕೆ ಎಂಬ ವಾದಗ್ರಂಥದ ಪ್ರಸ್ತಾವನೆಯಲ್ಲಿ 'ಸಂಕೀರ್ತಯಾಮಿ ಬಸವಕ್ಷಿತಿಪಾಲ ತುಭ್ಯಂ ಸಿದ್ಧಾಂತಮ್ ಅನ್ಯಮತಮಪ್ಯಥ ತನ್ನಿರಾಸಮ್' ಎಂದು ಹೇಳಿದ್ದಾರೆ. ಬಸವಪ್ಪ ನಾಯಕನ ಕಾಲ ಕ್ರಿ.ಶ.೧೬೭೭ (ಶಾಲಿ.ಶ.೧೬೬೨). ಇದರಿಂದ ಮರಿತೋಂಟದಾರ್ಯರು ಕ್ರಿ.ಶ.೧೭ನೇ ಶತಮಾನದ ಉತ್ತರಾರ್ಧದಲ್ಲಿ ನೆಲಸಿದ್ದರು ಎಂಬುದು ಸ್ಪಷ್ಟ. ಅವರು ಸಿದ್ಧಾಂತ ಶಿಖಾಮಣಿಗೆ ವ್ಯಾಖ್ಯಾನವನ್ನು ರಚಿಸಿರುವರಲ್ಲದೆ ಅದರ ಶ್ಲೋಕಗಳನ್ನು ತಮ್ಮ ವೀರಶೈವಾನಂದಚಂದ್ರಿಕೆಯಲ್ಲಿ ಪ್ರಮಾಣವನ್ನಾಗಿ ಉಲ್ಲೇಖಿಸಿದ್ದಾರೆ.

೨. ನೀಲಕಂಠ ಶಿವಾಚಾರ್ಯರು ತಮ್ಮ ಕ್ರಿಯಾಸಾರದಲ್ಲಿ ಸಿದ್ಧಾಂತ ಶಿಖಾಮಣಿಯನ್ನು ಹೆಸರೆತ್ತಿ ಉಲ್ಲೇಖಿಸಿಲ್ಲದಿದ್ದರೂ ಅದರ ವಿಷಯ ನಿರೂಪಣೆಯಲ್ಲಿ ಸಿದ್ಧಾಂತ ಶಿಖಾಮಣಿಯ ಛಾಯೆ ಸ್ಪಷ್ಟವಾಗಿ ಕಂಡುಬರುತ್ತದೆ. ಕ್ರಿಯಾಸಾರದ ಪ್ರಥಮೋಪದೇಶದಲ್ಲಿ ಅಧಿಕಾರಿಯ ಲಕ್ಷಣವನ್ನು ಹೇಳುತ್ತಾ, 'ಪಿಂಡಾದಿಜ್ಞಾನ ಶೂನ್ಯಾಂತಮೇಕೋತ್ತರ ಶತಸ್ಥಲಮ್। ಷಟ್‌ಸ್ಥಲಂ ಲಿಂಗಭೇದಂ ಚ ಜಿಜ್ಞಾಸುರ್ಭಕ್ತಿ ಪೂರ್ವಕಮ್॥'[೫] ಎಂದಿದ್ದಾರೆ ನೀಲಕಂಠ ಶಿವಾಚಾರ್ಯರು. ಪಿಂಡಸ್ಥಲದಿಂದ ಜ್ಞಾನ ಶೂನ್ಯ ಸ್ಥಲದವರೆಗೆ ನೂರೊಂದು ಸ್ಥಲಗಳನ್ನು, ಷಟ್ ಸ್ಥಲಗಳನ್ನು, ಲಿಂಗಭೇದವನ್ನು ಭಕ್ತಿಪೂರ್ವಕವಾಗಿ ತಿಳಿಯುವ ಇಚ್ಛೆಯುಳ್ಳವನು ಅಧಿಕಾರಿಯೆಂದು ಅದರ ಅರ್ಥ. ಪಿಂಡಾದಿ- ಜ್ಞಾನಶೂನ್ಯಾಂತ ಏಕೋತ್ತರಶತಸ್ಥಲಗಳ ನಿರೂಪಣೆಯು ನಿರ್ದಿಷ್ಟವಾಗಿ ಬಂದಿರುವುದು ಮೊದಲು ಸಿದ್ಧಾಂತ ಶಿಖಾಮಣಿಯಲ್ಲಿ ಎಂಬುದು ಪ್ರಸಿದ್ಧ. ಅಲ್ಲದೆ "ಅನೇಕಜನ್ಮಶುದ್ಧಾನಾಂ ಶ್ರೌತಸ್ಮಾರ್ತಾನುವರ್ತಿನಾಮ್। ವಿರಕ್ತಾನಾಂ ಪ್ರಬುದ್ಧಾನಾಂ ಪ್ರಸೀದತಿ ಮಹೇಶ್ವರಃ॥" ಎಂಬ ಸಿದ್ಧಾಂತ ಶಿಖಾಮಣಿಯಲ್ಲಿನ ಶ್ಲೋಕವನ್ನು ಸ್ವಲ್ಪ ಮಾರ್ಪಾಟುಗಳೊಂದಿಗೆ ಕ್ರಿಯಾಸಾರವು ಹೀಗೆ ಉದಾಹರಿಸಿದೆ- "ಅನೇಕ ಜನ್ಮ ಸಿದ್ಧಾನಾಂ ಶ್ರೌತಸ್ಮಾರ್ತಾನುವರ್ತಿನಾಮ್। ನರಾಣಾಂ ಕ್ಷೀಣಪಾಪಾನಾಂ ಶಿವೇ ಭಕ್ತಿಃ ಪ್ರಜಾಯತೇ॥" ವೀರಶೈವಾಮೃತಪುರಾಣವು ಕ್ರಿಯಾಸಾರದಿಂದ ಈ ಶ್ಲೋಕವನ್ನು ಉದಾಹರಿಸಿದೆ.[೬] ಈ ಪುರಾಣದ ಕಾಲ ಕ್ರಿ.ಶ.೧೫೩೦. ಕ್ರಿಯಾಸಾರದ ಕಾಲ ಇದಕ್ಕಿಂತ ಮೊದಲು ಎಂದರೆ ಕ್ರಿ.ಶ.೧೪೦೦. "ಮಧ್ವ- ಬೌದ್ಧಾದಿ-ಚಾರ್ವಾಕ- ಮತಾದ್ಯ-

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದ್ವನ್ಯತಾಮಯತ್" ಎಂಬ ಶ್ಲೋಕದಲ್ಲಿ ಕ್ರಿಯಾಸಾರವು ಮಾಧ್ವಮತವನ್ನು ಉಲ್ಲೇಖಿಸುವುದರಿಂದ ಅದು ಮಧ್ವಾಚಾರ್ಯರ ಕಾಲಕ್ಕಿಂತ ಅನಂತರದ ಕಾಲಕ್ಕೆ ಸೇರಿದುದು.[೭]

೩. ಶ್ರೀಕಂಠಶಿವಾಚಾರ್ಯರು ತಮ್ಮ ಭಾಷ್ಯದಲ್ಲಿ "ಮುಕ್ತಿಃ ಶಿವಸಮೋಭವೇತ್"[೮] ಎಂಬ ಸಿದ್ಧಾಂತ ಶಿಖಾಮಣಿಯ ಶ್ಲೋಕಭಾಗವನ್ನು ಉದಾಹರಿಸಿದ್ದಾರೆ. ಅವರ ಕಾಲ ಕ್ರಿ.ಶ.೧೨೭೦.[೯]

೪. ಶ್ರೀಪತಿ ಪಂಡಿತಾರಾಧ್ಯರು ತಮ್ಮ ಶ್ರೀಕರಭಾಷ್ಯದಲ್ಲಿ ಅನೇಕ ಕಡೆ ಸಿದ್ಧಾಂತ ಶಿಖಾಮಣಿಯನ್ನು ಹೆಸರಿಸಿ ಅದರ ಶ್ಲೋಕಗಳನ್ನು ಪ್ರಮಾಣರೂಪದಲ್ಲಿ ಉದಾಹರಿಸಿದ್ದಾರೆ.[೧೦] ಅಂದರೆ ಶ್ರೀಪತಿ ಪಂಡಿತಾರಾಧ್ಯರ ಕಾಲದ ಬಗ್ಗೆ ನಿರ್ಣಯವಾದರೆ ಸಿದ್ಧಾಂತ ಶಿಖಾಮಣಿಯ ಕಾಲದ ಉತ್ತರಸೀಮೆಯನ್ನು ನಿರ್ಧರಿಸಬಹುದು. ಅವರ ಕಾಲದ ಬಗ್ಗೆ ಬಹಳ ಚರ್ಚೆ ನಡೆದು ಈಗ ಒಂದು ಹಂತವನ್ನು ಮುಟ್ಟಿದೆಯೆನ್ನಬಹುದು. ಶ್ರೀಕರಭಾಷ್ಯವನ್ನು ಸಂಪಾದಿಸಿ ಮೊಟ್ಟಮೊದಲಿಗೆ ಬೆಂಗಳೂರಿನಲ್ಲಿ ೧೯೩೬ರಲ್ಲಿ ಪ್ರಕಟಿಸಿದ ಹಯವದನ ರಾವ್ ಅವರು ತಮ್ಮ ಕೆಲವು ಆಧಾರಗಳನ್ನು ಕೊಟ್ಟು ಶ್ರೀಪತಿ ಪಂಡಿತರ ಕಾಲವನ್ನು ಕ್ರಿ.ಶ.೧೪ನೇ ಶತಮಾನವೆಂದು ತೀರ್ಮಾನಿಸಿದ್ದಾರೆ.[೧೧] ಚಿಲಕೂರಿ ನಾರಾಯಣರಾವ್ ಅವರು ಸಂಪಾದಿಸಿದ ಪಾಲ್ಕುರುಕಿ ಸೋಮನಾಥನ ಪಂಡಿತಾರಾಧ್ಯ ಚರಿತ್ರ ಎಂಬ ತೆಲುಗು ಕಾವ್ಯದ ತಮ್ಮ ಸುದೀರ್ಘ ಭೂಮಿಕೆಯಲ್ಲಿ ಹಯವದನ ರಾವ್ ಅವರ ಅಭಿಪ್ರಾಯವನ್ನು ಖಂಡಿಸಿ 'ಶ್ರೀಪತಿ ಪಂಡಿತರು ಕ್ರಿ.ಶ. ೧೨ನೇ ಶತಮಾನಕ್ಕಿಂತ ಈಚಿನವರಲ್ಲ' ಎಂದು ನಿರ್ಣಯಿಸಿದ್ದಾರೆ.[೧೨] ಈ ಎಲ್ಲಾ ಆಧಾರಗಳನ್ನು ಅಲ್ಲದೆ ಕಾಶೀ ಜಂಗಮವಾಡಿ ಪೀಠದ (ಜ್ಞಾನಸಿಂಹಾಸನದ) ಜಗದ್ಗುರುಗಳಾಗಿದ್ದ ಶ್ರೀ ವೀರಭದ್ರ ಶಿವಾಚಾರ್ಯರು ಮತ್ತು ಚಿಲಕೂರಿ ನಾರಾಯಣರಾವ್ ಅವರು ಉಲ್ಲೇಖಿಸಿದ ಶಾಸನಾಧಾರವನ್ನೂ ಪರಿಶೀಲಿಸಿ, ಶ್ರೀ ವಿದ್ವಾನ್ ಎಂ.ಜಿ ನಂಜುಂಡಾರಾಧ್ಯರು ೧೯೭೭ರಲ್ಲಿ ಮೈಸೂರಿನಲ್ಲಿ ಸಂಪಾದಿಸಿ ಓರಿಯೆಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟಿನ ಮೂಲಕ ಪ್ರಕಟಿಸಿದ ಶ್ರೀಕರಭಾಷ್ಯದ ಪ್ರಥಮ ಸಂಪುಟದ ಭೂಮಿಕೆಯಲ್ಲಿ ಶ್ರೀಪತಿ ಪಂಡಿತರ ಕಾಲವನ್ನು ಕ್ರಿ.ಶ. ೧೦೭೦ ಎಂದು ನಿರ್ಧರಿಸಿದ್ದಾರೆ.[೧೩] ಈ ಎಲ್ಲಾ ವಿಷಯಗಳನ್ನು ಸಂಕ್ಷಿಪ್ತವಾಗಿ ನಿರೂಪಿಸಿ, ಈಗಾಗಲೇ ಎದ್ದಿರುವ ಮತ್ತು ಏಳಬಹುದಾದ ಆಕ್ಷೇಪಗಳಿಗೆ ಸಾಧಾರವಾದ ಉತ್ತರವನ್ನು ಕೊಟ್ಟು ಶಾಸನಾಧಾರದಿಂದ ಸಿದ್ಧವಾದ ಶ್ರೀಪತಿ ಪಂಡಿತರ ಕಾಲವನ್ನು, ಅಂದರೆ ಕ್ರಿ.ಶ.೧೦೭೦ ಎಂದು, ಸಮರ್ಥಿಸುವುದು ಇಲ್ಲಿ ಪ್ರಸ್ತುತವಾಗಿದೆ.

ಶ್ರೀಪತಿಪಂಡಿತಾರಾಧ್ಯರ ಕಾಲ:

ಮೇಲೆ ಉಲ್ಲೇಖಿಸಿದಂತೆ ಹಯವದನರಾವ್ ಅವರು ಶ್ರೀಪತಿಪಂಡಿತರ ಕಾಲವನ್ನು ಕ್ರಿ.ಶ.೧೪ನೇ ಶತಮಾನವೆಂದು ತೀರ್ಮಾನಿಸಲು, ಶ್ರೀಕರಭಾಷ್ಯದಲ್ಲಿ ಮೂರು ಕಡೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

‘ಮಧ್ವ’ ಪದದ ಪ್ರಯೋಗವಿದೆ ಎಂಬುದನ್ನು ಆಧಾರವಾಗಿಟ್ಟುಕೊಂಡಿದ್ದಾರೆ.[೧೪] ಅದರಿಂದ ಮಧ್ವಾಚಾರ್ಯರಿಗಿಂತ ಶ್ರೀಪತಿಪಂಡಿತರು ಅನಂತರದವರು. ಅಂದರೆ ಕ್ರಿ.ಶ.೧೫ನೇ ಶತಮಾನದವರು ಎಂದು ಹೇಳಲು ಅವರಿಗೆ ಸಾಧ್ಯವಾಯಿತೆಂದು ತಿಳಿಯಬೇಕಾಗುತ್ತದೆ. ಆದರೆ ಚಿಲಕೂರಿ ನಾರಾಯಣರಾವ್ ಅವರು ನಿಷ್ಪಕ್ಷಪಾತವಾಗಿ ತೋರಿಸಿರುವಂತೆ ಆ ಸಂದರ್ಭಗಳಲ್ಲಿ “ಮಧ್ವ” ಪದದ ಪ್ರಯೋಗವು ಸಂಗತವಲ್ಲ; ಅಷ್ಟೇ ಅಲ್ಲ, ಹಯವದನರಾವ್ ಅವರಿಗೆ ಆಧಾರವಾಗಿದ್ದ ಮೂಲಪ್ರತಿಯಲ್ಲಿ ಆ ಸಂದರ್ಭಗಳಲ್ಲೇ ಆಗಲಿ ಬೇರೆಲ್ಲೇ ಆಗಲಿ “ಮಧ್ವ” ಪದ ಪ್ರಯೋಗವೇ ಇಲ್ಲವೆಂದು ನಾರಾಯಣರಾವ್ ಅವರು ತಿಳಿಸಿದ್ದಾರೆ.[೧೫] ಶ್ರೀಕರಭಾಷ್ಯದ ಮಾತೃಕೆಗಳಾದ ಹಸ್ತ ಪ್ರತಿಗಳಲ್ಲಿ ಯಾವುದರಲ್ಲೂ “ಮಧ್ವ” ಪದ ಪ್ರಯೋಗವಿಲ್ಲವೆಂಬುದು ಪರಿಶೀಲನೆಯಿಂದ ಸಿದ್ಧವಾಗಿದೆ. ಆದ್ದರಿಂದ ಆ ಸ್ಥಲಗಳಲ್ಲಿ “ಮಧ್ವ” ಪದವನ್ನು ಹಯವದನರಾವ್ ಅವರು ತಮ್ಮ ಪೂರ್ವಗ್ರಹಪೀಡಿತ ಅಭಿಪ್ರಾಯವನ್ನು ಸಮರ್ಥಿಸಲು ಸೇರಿಸಿ ಸಂಪಾದನೆಯ ಹೆಸರಿನಲ್ಲಿ ಅಪಚಾರವೆಸಗಿದ್ದಾರೆ ಎಂದು ಹೇಳಬೇಕಾಗುತ್ತದೆ.

ಬೆಜವಾಡ (ಆಂಧ್ರ-ವಿಜಯವಾಡ) ದ ಮಲ್ಲಿಕೇಶ್ವರ ದೇವಾಲಯದಲ್ಲಿ ಚಾಲುಕ್ಯ ವಂಶದ ಮಹಾಮಂಡಲೇಶ್ವರ ಪಲ್ಲಕೇತು ರಾಜನ ಶಾಸನವಿದೆ.[೧೬] ಅದರ ಕಾಲ ಕ್ರಿ.ಶ.೧೨ನೇ ಶತಮಾನಕ್ಕಿಂತ ಹೆಚ್ಚಿನದಲ್ಲ. ಆ ಶಾಸನದ ಕೊನೆಯಲ್ಲಿ ಶ್ರೀಪತಿ ಪಂಡಿತಾರಾಧ್ಯರು ಶಿವಭಕ್ತಿಯ ಪಾರಮ್ಯವನ್ನು ತೋರಿಸಲು ರೇಷ್ಮೆ ವಸ್ತ್ರದಲ್ಲಿ ಬೆಂಕಿಯನ್ನು ಕಟ್ಟಿ ಶಮೀಲತೆಯಿಂದ ಬಂಧಿಸಿ, ತಮ್ಮ ಅಗ್ನಿಸ್ತಂಭನ ವಿದ್ಯೆಯನ್ನು ಪ್ರದರ್ಶಿಸಿದರು ಎಂದು ಹೇಳಲಾಗಿದೆ:[೧೭]

“ತತ್ತಃ ಶ್ರೀ ಪಂಡಿತಾರಾಧ್ಯನಾಮ್ನಾ ಭಕ್ತೋತ್ತಮೇನ ಚ,
ಶಿವಭಕ್ತ ಏವ ನೂನಂ ದೇವರ್ಷಿಭ್ಯೋಽಧಿಕ ಇತಿ;
ಚೀನಾಂಬರೇಽಗ್ನಿಂ ಸಂಸ್ಥಾಪ್ಯ ಶಮೀಕೋಮಲಶಾಖಯಾ
ಬದ್ಧೇ ಮಲ್ಲೇಶ್ವರಃ ಪ್ರೀತಃ ಪ್ರತ್ಯಕ್ಷಃ ಸಮಜಾಯತ”.

ಶಾಸನದಲ್ಲಿ “ಪಂಡಿತಾರಾಧ್ಯನಾಮ್ನಾ” ಎಂದು ಇರುವುದರಿಂದ ಉಲ್ಲೇಖಿಸಲ್ಪಟ್ಟವರು ಶ್ರೀಪತಿ ಪಂಡಿತಾರಾಧ್ಯರೇ ಎಂದು ಹೇಗೆ ಹೇಳುವುದು ಎಂದು ಪ್ರಶ್ನಿಸುವವರಿದ್ದಾರೆ. ಶ್ರೀಪತಿ ಪಂಡಿತ, ಮಂಚಣ ಪಂಡಿತ ಮತ್ತು ಮಲ್ಲಿಕಾರ್ಜುನ ಪಂಡಿತ ಎಂಬ ಮೂವರು ಪಂಡಿತಾರಾಧ್ಯರು ಪ್ರಸಿದ್ಧರು. ಅವರಲ್ಲಿ ಈ ಪಂಡಿತಾರಾಧ್ಯರು ಯಾರು? ಈ ಪ್ರಶ್ನೆಗೆ ಉತ್ತರವನ್ನು ಆಂಧ್ರ ಸಾಹಿತ್ಯ ಪರಂಪರೆಯಲ್ಲಿ ಕಂಡುಕೊಳ್ಳಬಹುದು. ಏನೆಂದರೆ, ಆ ಪರಂಪರೆಯಲ್ಲಿ ಅಗ್ನಿಸ್ತಂಭನವಿದ್ಯೆಯ ಪವಾಡವನ್ನು ಮಾಡಿದವರು ಎಂದು ಪ್ರಸಿದ್ಧರಾಗಿರುವವರು ಶ್ರೀಪತಿಪಂಡಿತಾರಾಧ್ಯರೊಬ್ಬರೇ. ಉದಾಹರಣೆಗೆ, ಮಲ್ಲಿಕಾರ್ಜುನಪಂಡಿತಾರಾಧ್ಯರು ತಮ್ಮ ಶಿವತತ್ತ್ವಸಾರಮು ಎಂಬ ಗ್ರಂಥದಲ್ಲಿ ಶ್ರೀಪತಿಪಂಡಿತರ ಆ ಪವಾಡವನ್ನು ಕೊಂಡಾಡಿದ್ದಾರೆ-

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಒಕ್ಕಂಡೇ ದೈವಮು ಶಿವುಂಡನಿ
ನಿಕ್ಕಮು ಸೇಯುಟಕು ಮುಡಿಚೇ ನಿಪ್ಪುಲು ಚೇರನ್
ಸುಕ್ಕಕ ಶ್ರೀಪತಿಪಂಡಿತುಂ
ಡಕ್ಕಜಮುಗ ವಿಜಯವಾಡಲಜಮ್ಮಿ ಶಿವಾ"[೧೫]

ಪಾಲ್ಕುರಿಕಿ ಸೋಮನಾಥನು ಶ್ರೀಪತಿ ಪಂಡಿತಾರಾಧ್ಯರನ್ನು ಪಂಡಿತತ್ರಯರಲ್ಲಿ ಮೊದಲಿನವರೆಂದೂ ಪ್ರಾಚೀನರೆಂದೂ ವರ್ಣಿಸುತ್ತಾ ಅವರು ಬ್ರಹ್ಮವಾದಿಗಳ ಮತವನ್ನು ಖಂಡಿಸಿ ಹರಭಕ್ತಿಯನ್ನು ಸ್ಥಾಪಿಸಿದರೆಂದು ಹೇಳಿದ್ದಾರೆ-

"ಕಡು ನರ್ಥಿನುತ್ಪತ್ತಿಕರ್ತನಾ ಬ್ರಹ್ಮ
ವಡಿ ಬ್ರಹ್ಮಮನು ಬ್ರಹ್ಮವಾದುಲಂ ದ್ರುಂಚಿ
ಹರಭಕ್ತಿಯುತ್ಪತ್ತಿ ಕಧಿಪತಿ ನಾಂಗಂ
ಬರಗೆಂದಾಂ ದೊಲ್ಲಿ ಶ್ರೀಪತಿಪಂಡಿತಯ್ಯ."[೧೬]

ಇಲ್ಲಿ ಅದ್ವೈತಬ್ರಹ್ಮವಾದಿಗಳ ಮತವನ್ನು ಖಂಡಿಸಿ, ಶಿವಾದ್ವೈತವನ್ನು ಸ್ಥಾಪಿಸಿದ ಕೀರ್ತಿ ಶ್ರೀಪತಿಪಂಡಿತಾರಾಧ್ಯರಿಗೆ ಸಲ್ಲುತ್ತದೆ. ಶ್ರೀಕರಭಾಷ್ಯದಲ್ಲಿ ಅದ್ವೈತದ ಖಂಡನೆ ಮತ್ತು ಶಿವಾದ್ವೈತದ ಮಂಡನೆಯೇ ಪ್ರಧಾನವಾಗಿ ಬಂದಿರುವುದು. ಸೋಮನಾಥನ ಮಾತು ಇದನ್ನೇ ಸ್ಪಷ್ಟವಾಗಿ ಸೂಚಿಸುತ್ತದೆ.[೨೦] ಹೀಗೆ ಶ್ರೀಪತಿಪಂಡಿತರ ಶ್ರೀಕರಭಾಷ್ಯದ ಕಾಲವು ಕ್ರಿ.ಶ.೧೧ನೇ ಶತಮಾನವೆಂದು ನಿರ್ಣಯಕ್ಕೆ ಬರಬಹುದು.

ಕಾಲದ ಬಗ್ಗೆ ನಿರ್ಣಯ:

ಮೇಲಿನ ಆಧಾರಗಳಿಂದ ಸಿದ್ಧವಾದಂತೆ ಕ್ರಿ.ಶ.೧೧ನೇ ಶತಮಾನಕ್ಕೆ ಸೇರಿದ ಶ್ರೀಕರಭಾಷ್ಯವು ಸಿದ್ಧಾಂತ ಶಿಖಾಮಣಿಯನ್ನು ಹೆಸರಿಸಿ ಉಲ್ಲೇಖಿಸುತ್ತದೆ. ಆದ್ದರಿಂದ ಸಿದ್ಧಾಂತ ಶಿಖಾಮಣಿಯ ಕಾಲವು ಕ್ರಿ.ಶ.೧೦ನೇ ಶತಮಾನಕ್ಕಿಂತ ಅನಂತರದ್ದಿರಲಾರದು. ಅದು ಎಷ್ಟು ಪ್ರಾಚೀನವಿರಬಹುದು ಎಂಬುದನ್ನು ನಿರ್ಧರಿಸುವುದು ಕಷ್ಟ. ಆದರೆ ಮುಂದೆ ಚರ್ಚಿಸಲಾಗುವ ವಿಷಯದಿಂದ ಸ್ಪಷ್ಟವಾಗುವಂತೆ ಸಿದ್ಧಾಂತ ಶಿಖಾಮಣಿಯ ಮೇಲೆ ಶಂಕರಾದ್ವೈತದ ಪ್ರಭಾವವು ಕಂಡುಬರುವುದರಿಂದ ಅದು ಕ್ರಿ.ಶ.೮ನೇ ಶತಮಾನಕ್ಕಿಂತ ಹಿಂದನದಿರಲಾರದು.

೨.ಗ್ರಂಥದ ಮೂಲಪಾಠವಿಚಾರ

ಸಿದ್ಧಾಂತ ಶಿಖಾಮಣಿಯ ಉಪಲಬ್ಧವಾದ ಎಲ್ಲಾ ಹಸ್ತಲಿಖಿತ ಪ್ರತಿಗಳಲ್ಲಿ ಒಂದೇ ಬಗೆಯ ಪಾಠ ಕಂಡುಬರುತ್ತದೆ. ಶ್ರೀ ಮರಿತೋಂಟದಾರ್ಯರ ಸಂಸ್ಕೃತ ವ್ಯಾಖ್ಯಾನವುಳ್ಳ ಈ ಗ್ರಂಥದ ಪಾಠಕ್ಕೂ ಕನ್ನಡ ವ್ಯಾಖ್ಯಾನದೊಂದಿಗೆ ಪ್ರಕಟವಾದ ಕರಿಬಸವಶಾಸ್ತ್ರಿಗಳ ಆವೃತ್ತಿಯ ಪಾಠಕ್ಕೂ ವ್ಯತ್ಯಾಸವಿಲ್ಲ. ಉಪಲಬ್ದದ ಗ್ರಂಥದ ಹಸ್ತಲಿಖಿತ ಪ್ರತಿಗಳ ಪಾಠವು ಪ್ರಕಟಿತ ಈ ಆವೃತ್ತಿಗಳ ಪಾಠಕ್ಕಿಂತ ಭಿನ್ನವಾಗಿಲ್ಲ. ಇದು ವಸ್ತುಸ್ಥಿತಿ. ಆದರೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಶೀನಾಥಶಾಸ್ತ್ರಿಗಳು ತಮ್ಮ ಗ್ರಂಥಮಾಲೆಯಲ್ಲಿ ಪ್ರಕಟಿಸಿದ ಸಿದ್ಧಾಂತ ಶಿಖಾಮಣಿಯ ಆವೃತ್ತಿಯಲ್ಲಿ ಒಂದೊಂದು ಪರಿಚ್ಛೇದದಿಂದ ಆಯ್ದು ಬೇರ್ಪಡಿಸಿದ ಕೆಲವು ಶ್ಲೋಕಗಳನ್ನು ಶಿವಾಗಮಾಭಿಪ್ರಾಯಕ್ಕೂ ವೀರಶೈವಸಿದ್ಧಾಂತಕ್ಕೂ ಅತ್ಯಂತ ವಿರುದ್ಧವೆಂದು ಗ್ರಂಥದ ಕೊನೆಯಲ್ಲಿ ಕೊಟ್ಟಿದ್ದಾರೆ. ಇದರಿಂದ ಗ್ರಂಥದ ಮೂಲಪಾಠದ ಬಗ್ಗೆ ಸಂದೇಹ ಹುಟ್ಟಿದೆ. ಅದರ ಬಗ್ಗೆ ಹೆಚ್ಚಿನ ಚರ್ಚೆ ಇಲ್ಲಿ ಪ್ರಸ್ತುತವಾಗಿದೆ:

೧. ೨ನೇ ಪರಿಚ್ಛೇದದಲ್ಲಿ "ತೇಷು ಪ್ರಥಮವರ್ಗೇಷು..." ಇತ್ಯಾದಿ ಶ್ಲೋಕದಿಂದ 'ವಿತೇನತುಃ ವಿಶ್ವಪತೇಸ್ತು ಸೇವಾಮ್' ಎಂದು ಕೊನೆಗೊಳ್ಳುವ ಶ್ಲೋಕದವರೆಗಿನ ೭ ಶ್ಲೋಕಗಳು[೨] ಮತ್ತು ೩ನೇ ಪರಿಚ್ಛೇದದಲ್ಲಿ 'ಶಂಭೋರಾಹ್ವಾನಸಂತೋಷ...' ಇತ್ಯಾದಿ ಶ್ಲೋಕದಿಂದ 'ಕುತೋ ಭೀತಿರಿಹೇಷ್ಯತೇ' ಎಂದು ಅಂತ್ಯಗೊಳ್ಳುವ ಶ್ಲೋಕದ ವರೆಗಿನ ೧೭ ಶ್ಲೋಕಗಳು[೩] ಕಾಶೀನಾಥಶಾಸ್ತ್ರಿಗಳ ಪ್ರಕಾರ ಕೆಲವು ಪ್ರಕ್ಷಿಪ್ತವಾದ ಶ್ಲೋಕಗಳು. ಇವು ರೇಣುಕರ ಭೂಲೋಕಾವತಾರಕ್ಕೆ ಸಂಬಂಧಪಟ್ಟ ಶ್ಲೋಕಗಳು. ಇಲ್ಲಿ ಬಂದಿರುವ ವಿಷಯಗಳು ಶಿವಾಗಮಾಭಿಪ್ರಾಯಕ್ಕೆ ಅತ್ಯಂತ ವಿರುದ್ಧವಾಗಿವೆ ಎಂದು ಅವರ ಹೇಳಿಕೆ. ಅದಕ್ಕೆ ಸಮರ್ಥಕವಾದ ಯಾವ ಶಿವಾಗಮದ ಉಲ್ಲೇಖವನ್ನೂ ಅವರು ಮಾಡಿಲ್ಲ. ಆ ಶ್ಲೋಕಗಳಲ್ಲಿ ಬಂದಿರುವ ವಿಷಯವಾದರೂ ಏನು? ೨ನೇ ಪರಿಚ್ಛೇದದ ೭ ಶ್ಲೋಕಗಳಲ್ಲಿ ಬಂದಿರುವ ವಿಷಯ- "ಪರಮಾತ್ಮನು ಸೃಷ್ಟಿಸಿದ ಪ್ರಮಥರಲ್ಲಿ ರೇಣುಕ ಮತ್ತು ದಾರುಕ ಎಂಬ ಇಬ್ಬರು ಶಿವನಿಗೆ ಪ್ರಿಯರಾಗಿದ್ದರು. ಅವರು ಎಲ್ಲ ವಿದ್ಯೆಗಳಲ್ಲಿ ನಿಷ್ಣಾತರು, ಎಲ್ಲ ಕಾರ್ಯಗಳಲ್ಲಿ ಕುಶಲರು, ಮಾಯಾ ಮಲದಿಂದ ಮುಕ್ತರು, ಮಹಿಮಾತಿಶಯದಿಂದ ಪ್ರಕಾಶಿಸುವವರು, ಆತ್ಮಾನಂದ ಪರಿಸ್ಫೂರ್ತಿಯ ರಸಾಸ್ವಾದದಲ್ಲಿ ಆಸಕ್ತರು. ಶಿವತತ್ತ್ವ ಪರಿಜ್ಞಾನದಿಂದ ಭವದ ಬಾಧೆಯನ್ನು ಪರಿಹರಿಸಿಕೊಂಡವರು, ನಾನಾ ರೀತಿಯಲ್ಲಿ ಮಹಾಶೈವ ತಂತ್ರವನ್ನು ನಿರ್ವಹಿಸುವುದರಲ್ಲಿ ಆಸಕ್ತರು, ವೇದಾಂತದ ಸಾರಸರ್ವಸ್ವವನ್ನು ವಿವೇಚಿಸುವುದರಲ್ಲಿ ಕುಶಲರು, ನಿತ್ಯಸಿದ್ಧರು, ನಿರಾತಂಕರು, ನಿರಂಕುಶ ಪರಾಕ್ರಮಶಾಲಿಗಳು ಆಗಿದ್ದರು. ಅಂತಹ ಮಹಾಭಾಗ್ಯಶಾಲಿಗಳಾಗಿದ್ದ ಅವರನ್ನು ನೋಡಿ ಅವರು ಸಮರ್ಥರು, ಎಲ್ಲ ಕಾರ್ಯಗಳಲ್ಲಿ ವಿಶ್ವಾಸಪಾತ್ರರು ಎಂದು ತಿಳಿದು ಅವರನ್ನು ತನ್ನ ಅಂತಃಪುರದ ದ್ವಾರಪಾಲಕರನ್ನಾಗಿ ನಿಯಮಿಸಿದನು. ಶಿವನ ವಿಶ್ವಾಸಕ್ಕೆ ಪಾತ್ರರಾದ ಆ ರೇಣುಕ-ದಾರುಕರೆಂಬ ಗಣೇಶ್ವರರು ಸದಾ ಅಂತಃಪುರದ ದ್ವಾರದಲ್ಲಿದ್ದು ವಿಶ್ವಪತಿಯ ಸೇವೆಯನ್ನು ಮಾಡಿದರು" ಎಂಬುದು. ಮೇಲಿನ ರೇಣುಕ-ದಾರುಕ ವರ್ಣನೆಯಲ್ಲಿ ಆಕ್ಷೇಪಾರ್ಹವಾದ ವಿಷಯ ಬಹುಮಟ್ಟಿಗೆ ಕಂಡುಬರುವುದಿಲ್ಲ. ಬಹುಶಃ ಅವರು ಶಿವನ ಅಂತಃಪುರದ ದ್ವಾರಪಾಲಕರಾಗಿದ್ದರು ಎಂಬ ವಿಷಯ ಕಾಶೀನಾಥಶಾಸ್ತ್ರಿಗಳಿಗೆ ಸಮಂಜಸವಾಗಿ ಕಂಡಿರಲಾರದು.

೩ನೇ ಪರಿಚ್ಛೇದದಲ್ಲಿ ಪ್ರಕ್ಷಿಪ್ತವೆಂದು ಬಗೆದ ೧೭ ಶ್ಲೋಕಗಳಲ್ಲಿ ಬರುವ ವಿಷಯ ಸಂಕ್ಷಿಪ್ತವಾಗಿ ಇಷ್ಟು ಮಾತ್ರ. ಒಮ್ಮೆ ಒಡ್ಡೋಲಗದಲ್ಲಿ ಸಿಂಹಾಸನಾರೂಢನಾಗಿದ್ದ ಶಿವನು ರೇಣುಕರನ್ನು ಕರೆದನು. ಅದರಿಂದ ಉಂಟಾದ ಸಂತೋಷದಲ್ಲಿ ಮೈಮರೆತ ರೇಣುಕರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವಸರದಲ್ಲಿ ದಾರುಕರನ್ನು ದಾಟಿ ಹೋದರು. ಅದನ್ನು ಕಂಡ ಶಿವನು 'ನನ್ನ ಭಕ್ತನನ್ನು ಉಲ್ಲಂಘಿಸಿದೆ' ಎಂದು ರೇಣುಕರನ್ನು ಕಟುವಾಗಿ ಜರೆದು 'ನೀನು ಭೂಲೋಕದಲ್ಲಿ ಜನ್ಮತಾಳು' ಎಂದು ಆಜ್ಞಾಪಿಸಿದನು. ತಮ್ಮ ತಪ್ಪನ್ನು ಅರಿತ ರೇಣುಕರು ಪಶ್ಚಾತ್ತಾಪದಿಂದ ಕ್ಷಮೆ ಕೇಳಿ, 'ನನಗೆ ಮನುಷ್ಯರಂತೆ ಸಾಮಾನ್ಯ ಜನ್ಮ ಬೇಡ' ಎಂದು ಪ್ರಾರ್ಥಿಸಿದರು. ಶಿವನು ಅವರಿಗೆ ಅಭಯವನ್ನಿತ್ತು ಲಿಂಗಾವತಾರಿಯಾಗುವಂತೆ ಅನುಗ್ರಹಿಸಿದನು. ಇದು ರೇಣುಕರ ಲಿಂಗಾವತಾರಕ್ಕೆ ಹಿನ್ನೆಲೆಯಾದ ಒಂದು ಸನ್ನಿವೇಶ. ಈ ಸನ್ನಿವೇಶದ ವರ್ಣನೆಯಲ್ಲಿ ಬರುವ ವಾಕ್ಯಗಳು ಕಟುವಾಗಿರುವುದರಿಂದ ಕಾಶೀನಾಥಶಾಸ್ತ್ರಿಗಳಿಗೆ ಹಿಡಿಸಿರಲಾರವು. ಆದರೆ ಭಾರತದಲ್ಲಿ ಎಲ್ಲ ಮಹಾನುಭಾವರು ದೇವಾಂಶಸಂಭೂತರಾದ ಅವತಾರಪುರುಷರು ಎಂಬ ಭಾವನೆಯಿದ್ದು, ಅವರ ಅವತಾರಕ್ಕೆ ಒಂದು ಶಾಪದ ಸನ್ನಿವೇಶವನ್ನು ಪೌರಾಣಿಕವಾಗಿ ಕಟ್ಟುವುದು ಸಾಮಾನ್ಯವಾಗಿದೆ. ಇದೂ ಒಂದು ಅಂತಹ ಪ್ರಸಂಗವೆಂದು ಗ್ರಹಿಸಬೇಕು. ಹಾಗೆ ಗ್ರಹಿಸಿದಾಗ ಅದರ ವಿಷಯದಲ್ಲಿ ಅಂತಹ ವಿಮರ್ಶಕ ಬುದ್ಧಿಯನ್ನು ಪ್ರಯೋಗಿಸುವುದು ಬೇಕಾಗಿಲ್ಲ ಎಂದು ಅನ್ನಿಸುತ್ತದೆ. ಆದ್ದರಿಂದ ಈ ಶ್ಲೋಕಗಳ ಬಗ್ಗೆ ಅಷ್ಟಾಗಿ ತಲೆ ಕೆಡಿಸಿಕೊಳ್ಳದೆ, ಗ್ರಂಥದಲ್ಲಿ ಮೂಲಪಾಠವೆಂದು ಉಳಿಸಿಕೊಂಡರೆ ಬಾಧಕವೇನೂ ಇಲ್ಲ.

ಪ್ರಾಸಂಗಿಕವಾಗಿ ಒಂದು ಮಾತು. ೨ನೇ ಪರಿಚ್ಛೇದದಲ್ಲಿ ಇತರ ಆವೃತ್ತಿಗಳ ಪ್ರಕಾರ ೨೪ನೇ ಶ್ಲೋಕವು 'ತೇಷು ಪ್ರಮಥವರ್ಗೇಷು ಸೃಷ್ಟೇಷು ಪರಮಾತ್ಮನಾ। ರೇಣುಕೋ ದಾರುಕಶ್ಚೇತಿ ದ್ವಾವಭೂತಾಂ ಶಿವಪ್ರಿಯೌ॥' ಎಂದಿದೆ. ಇದು ಕಾಶೀನಾಥಶಾಸ್ತ್ರಿಗಳ ಆವೃತ್ತಿಯಲ್ಲಿ 'ಸೃಷ್ಟಪ್ರಮಥವರ್ಗೇಷು ವರ್ಣಾಶ್ರಮಪರಿಕ್ರಮಾನ್। ಅಪ್ರಾಕೃತಸದಾಚಾರಾನುಪಾದಿಶದಥ ಪ್ರಭುಃ' ಎಂದು ಬದಲಾವಣೆ ಹೊಂದಿದೆ. ಇದು ವಿಜಯಾಗಮದ ಶ್ಲೋಕಗಳಲ್ಲಿ ಒಂದೆಂದು ವೀರಶೈವ ಸದಾಚಾರ ಸಂಗ್ರಹದಲ್ಲಿ ಉಲ್ಲೇಖಿಸಲ್ಪಟ್ಟಿದೆಯೆಂದೂ ಸೂಚಿಸಿದ್ದಾರೆ ಕಾಶೀನಾಥಶಾಸ್ತ್ರಿಗಳು.[೨] ಅದರಂತೆ ೩ನೇ ಪರಿಚ್ಛೇದದಲ್ಲಿ ಬೇರೆ ಆವೃತ್ತಿಗಳ ಪ್ರಕಾರ ೬೬ನೇ ಶ್ಲೋಕದ ಉತ್ತರಾರ್ಧ ಪಾಠವು 'ಪ್ರಸಾದಂ ಸುಲಭಂ ದಾತುಂ ತಾಂಬೂಲಂ ಸ ತಮಾಹ್ವಯತ್' ಎಂದಿದ್ದರೆ ಕಾಶೀನಾಥಶಾಸ್ತ್ರಿಗಳು ಅದನ್ನು 'ಪ್ರಸಾದಂ ಸುಲಭಂ ದಾತುಮಾಹೂಯೇತ್ಥಂ ಸಮಾದಿಶತ್' ಎಂದು ಬದಲಾಯಿಸಿ 'ಶ್ರೀಶೈಲಸ್ಯೋತ್ತರೇ ಭಾಗೇ...' ಇತ್ಯಾದಿ ಶ್ಲೋಕದ ವಿಷಯದೊಂದಿಗೆ ನೇರ ಸಂಬಂಧವನ್ನು ಕಲ್ಪಿಸಿದ್ದಾರೆ. ಹೀಗೆ ಗ್ರಂಥದ ಪಾಠದ ಬಗ್ಗೆ ಸ್ವಾತಂತ್ರ್ಯವಹಿಸುವುದು ಸರಿಯಲ್ಲ. ಇದರಿಂದ ಮೂಲಗ್ರಂಥದ ಆಶಯಕ್ಕೆ ಧಕ್ಕೆ ಬರುವ ಸಂಭವವಿರುತ್ತದೆ.

೨. ಹಾಗೆಯೇ ೧೧ನೇ ಪರಿಚ್ಛೇದದಲ್ಲಿ ಯಾವ ರೀತಿಯಲ್ಲೂ ಬಾಧಕವಲ್ಲದ ಎರಡು ಶ್ಲೋಕಗಳನ್ನು ಕಾಶೀನಾಥಶಾಸ್ತ್ರಿಗಳು ಪ್ರಕ್ಷಿಪ್ತವೆಂದು ಬೇರ್ಪಡಿಸಿದ್ದಾರೆ. ಆ ಶ್ಲೋಕಗಳು ಇವು- "ಬ್ರಾಹ್ಮಣಃ ಕ್ಷತ್ರಿಯೋ ವಾಪಿ ವೈಶ್ಯೋ ವಾ ಶೂದ್ರ ಏವ ವಾ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂತ್ಯಜೋ ವಾ ಶಿವೇ ಭಕ್ತಃ ಶಿವವನ್ನಾಮ್ನ ಏವ ಸಃ।। ಶಿವಭಕ್ತಿಸಮಾವೇಶೇ ಕ್ವ ಜಾತಿಪರಿಕಲ್ಪನಾ। ಇಂಧನೇಷ್ವಗ್ನಿದಗ್ಧೇಷು ಕೋ ವಾ ಭೇದಃ ಪ್ರಕೀರ್ತ್ಯತೇ।।”[೨೪] ಇವು ಪ್ರಸಾದಿಸ್ಥಲಾಂತರ್ಗತವಾದ ಭಕ್ತಮಾಹಾತ್ಮ್ಯಸ್ಥಲದ ಶ್ಲೋಕಗಳು. ಇವುಗಳ ವಿಷಯ ವೀರಶೈವಮತಕ್ಕೆ ಹೆಮ್ಮೆ ತರುವಂತಹದು. ಇವುಗಳನ್ನೇಕೆ ಪ್ರಕ್ಷಿಪ್ತ ಶ್ಲೋಕಗಳೆಂದು ಬಗೆದರೋ ತಿಳಿಯದು.

೩. ಇತರ ಪರಿಚ್ಛೇದಗಳಿಂದ ಪ್ರಕ್ಷಿಪ್ತವೆಂದು ಬೇರ್ಪಡಿಸಿದ ಶ್ಲೋಕಗಳ ವಿಷಯದಲ್ಲಿ ಮಾತ್ರ ಅತ್ಯಂತ ಮೂಲಭೂತವಾದ ಪ್ರಶ್ನೆ ಅಡಕವಾಗಿದೆ. ಆದ್ದರಿಂದ ಅವುಗಳ ವಿಷಯವನ್ನು ಆಳವಾಗಿ ಪರಿಶೀಲಿಸಬೇಕಾಗಿದೆ. ಆ ಶ್ಲೋಕಗಳು ಎಲ್ಲವೂ ಅದ್ವೈತ ವೇದಾಂತದ ನಿಲುವನ್ನು ಒಳಗೊಂಡು 'ಬ್ರಹ್ಮವೊಂದೇ ಸತ್ಯ ಜಗತ್ತೆಲ್ಲಾ ಮಿಥ್ಯೆ ಜೀವನು ಬ್ರಹ್ಮವಲ್ಲದೆ ಬೇರಲ್ಲ' ಎಂಬುದನ್ನು ಪ್ರತಿಪಾದಿಸುವಂತಿವೆ. ಅಂತಹ ಶ್ಲೋಕಗಳು ಒಟ್ಟು ೨೫. ಅವು ೫ನೇ, ೧೦ನೇ, ೧೨ನೇ, ೧೭ನೇ, ೧೯ನೇ ಮತ್ತು ೨೦ನೇ ಪರಿಚ್ಛೇದಗಳಿಂದ ಬೇರ್ಪಡಿಸಲ್ಪಟ್ಟಿವೆ.[೨೫] ಆ ಶ್ಲೋಕಗಳಲ್ಲಿ ಅತ್ಯಂತ ಮುಖ್ಯವಾದವುಗಳನ್ನಾದರೂ ಇಲ್ಲಿ ಉಲ್ಲೇಖಿಸುವುದು ಅನಿವಾರ್ಯ.

(ಅ) ತಸ್ಮಾಚ್ಛಿವಮಯಂ ಸರ್ವಂ ಜಗದೇತಚ್ಚರಾಚರಮ್।
ತದಭಿನ್ನತಯಾ ಭಾತಿ ಸರ್ಪತ್ವಮಿವ ರಜ್ಜುತಃ।।

(ಆ) ರಜ್ಜ್ವಾ ಸರ್ಪವದ್ಭಾತಿ ಶುಕ್ತೌ ಚ ರಜತತ್ವವತ್।
ಚೋರತ್ವವದಪಿ ಸ್ಥಾಣೌ ಮರೀಚ್ಯಾಂ ಚ ಜಲತ್ವವತ್।।

(ಇ) ಗಂಧರ್ವಪುರವದ್ವ್ಯೋಮ್ನಿ ಸಚ್ಚಿದಾನಂದಲಕ್ಷಣೇ।
ನಿರಸ್ತಭೇದಸದ್ಭಾವೇ ಶಿವೇ ವಿಶ್ವಂ ವಿರಾಜತೇ।।[೨೬]

(ಈ) ಮಿಥ್ಯೇತಿ ಭಾವಯನ್ ವಿಶ್ವಂ ವಿಶ್ವಾತೀತಂ ಶಿವಂ ಸ್ಮರನ್।
ಸತ್ತಾನಂದಚಿದಾಕಾರಂ ಕಥಂ ಬದ್ಧುಮಿಹಾರ್ಹತಿ।

(ಉ) ಶಿವಾದನ್ಯಜ್ಜಗನ್ಮಿಥ್ಯಾ ಶಿವಃ ಸಂವಿತ್ಸ್ವರೂಪಕಃ।
ಶಿವಸ್ತ್ವಮಿತಿ ನಿರ್ದಿಷ್ಟೋ ಗುರುಣಾ ಮುಕ್ತ ಏವ ಸಃ।।

(ಊ) ಅಯಥಾರ್ಥಪ್ರಪಂಚೋಽಯಂ ಪ್ರತಿತಿಷ್ಠತಿ ಶಂಕರೇ।
ಸದಾತ್ಮನಿ ಯಥಾ ಶುಕ್ತೌ ರಜತತ್ವಂ ವ್ಯವಸ್ಥಿತಮ್।।[೨೭]

(ಋ) ಅಖಂಡಾನಂದಸಂವಿತ್ತಿಸ್ವರೂಪಂ ಬ್ರಹ್ಮ ಕೇವಲಮ್।
ಮಿಥ್ಯಾ ತದನ್ಯದಿತ್ಯೇಷಾಂ ಸ್ಥಿತಿರ್ಜ್ಞಾನಮಿಹೋಚ್ಯತೇ।।[೨೮]

(ೠ) ಅಸದೇವ ಜಗತ್ಸರ್ವಂ ಸದಿವ ಪ್ರತಿಭಾಸತೇ।
ಜ್ಞಾತೇ ಶಿವೇ ತದಜ್ಞಾನಂ ಸ್ವರೂಪಮುಪಪದ್ಯತೇ।।[೨೯]

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೇಲಿನ ಶ್ಲೋಕಗಳೆಲ್ಲವೂ ಶುದ್ಧ ಅದ್ವೈತವನ್ನೇ ಪ್ರತಿಪಾದಿಸುವಂತಿವೆ. ಅವುಗಳನ್ನು ಮತ್ತು ಅದೇ ಅರ್ಥವನ್ನು ಪ್ರತಿಪಾದಿಸುವ ಇತರ ಶ್ಲೋಕಗಳನ್ನು ಗ್ರಂಥದ ಮೂಲ ಪಾಠದಲ್ಲಿ ಒಪ್ಪಿಕೊಳ್ಳಬೇಕೇ ಬೇಡವೇ ಎಂಬ ವಿಷಯದಲ್ಲಿ ಜಿಜ್ಞಾಸೆ ಏಳುತ್ತದೆ. ಗ್ರಂಥದ ಉಪಲಬ್ಧ ಹಸ್ತಲಿಖಿತ ಪ್ರತಿಗಳಲ್ಲಿ ಮತ್ತು ಮುದ್ರಿತವಾದ ಇತರ ಆವೃತ್ತಿಗಳಲ್ಲಿ ಈ ಶ್ಲೋಕಗಳು ಆಯಾಯ ಪರಿಚ್ಛೇದಗಳಲ್ಲಿ ಬಂದಿವೆ. ಆದ್ದರಿಂದ ಇವು ಗ್ರಂಥದ ಮೂಲ ಪಾಠವೆಂದು ಅಂಗೀಕರಿಸುವುದು ಅನಿವಾರ್ಯವಾಗುತ್ತದೆ. ಹಾಗಾದರೆ ಪರಶಿವಬ್ರಹ್ಮ, ಜೀವ ಮತ್ತು ಜಗತ್ತು ಇವುಗಳ ಸಂಬಂಧದ ವಿಷಯದಲ್ಲಿ ವೀರಶೈವ ಸಿದ್ಧಾಂತದ ನಿಲುವೇನು? ಈ ಮೂಲಭೂತವಾದ ಪ್ರಶ್ನೆ ಉದ್ಭವಿಸುತ್ತದೆ. ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಶ್ರೀಕರಭಾಷ್ಯ, ಕ್ರಿಯಾಸಾರ, ವೀರಶೈವಾನಂದಚಂದ್ರಿಕಾ ಮುಂತಾದ ಗ್ರಂಥಗಳಲ್ಲಿ ಶಂಕರಾಚಾರ್ಯರ ಅಧ್ಯಾಸಭಾಷ್ಯವನ್ನು ಸಾಧಾರವಾಗಿ ನಿರಾಕರಿಸಿ, ಭೇದಾಭೇದ ಅಥವಾ ವಿಶೇಷಾದ್ವೈತವನ್ನು ಪ್ರತಿಪಾದಿಸಿ, ಜಗತ್ಸತ್ಯತ್ವವನ್ನು ಸಮರ್ಥಿಸಿದ್ದಾರೆ. ಶ್ರೀಪತಿ ಪಂಡಿತರು ತಮ್ಮ ಶ್ರೀಕರಭಾಷ್ಯದಲ್ಲಿ ಹೀಗೆ ಹೇಳಿದ್ದಾರೆ:

> "ಶುಕ್ತಿರಜತವತ್ತಸ್ಯ ಜೀವತ್ವಂ ಭ್ರಾಂತಿಮಾತ್ರಮಿತಿ ಚೇತ್, ನ।....
> ನ ಸ್ವಪ್ನವತ್ ಪ್ರಪಂಚಸ್ಯ ಮಿಥ್ಯಾತ್ವಂ ಅರ್ಥಸಿದ್ಧಿಕ್ರಿಯಾಸಿದ್ಧಿ
> ದರ್ಶನಾತ್।"[೧೦]

ನೀಲಕಂಠ ಶಿವಾಚಾರ್ಯರು ಕ್ರಿಯಾಸಾರದಲ್ಲಿ ಇದನ್ನೇ ಪ್ರತಿಪಾದಿಸಿದ್ದಾರೆ:

> "ಕೈಶ್ಚಿದ್ 'ಅಥಾತೋ ಬ್ರಹ್ಮಜಿಜ್ಞಾಸಾ' ಇತ್ಯತ್ರ ಅಸೌತ್ರಿಕಃ ಏವ ಅಧ್ಯಾಸಃ ಪ್ರಪಂಚಿತಃ।.... ನಹಿ ಜೀವಬ್ರಹ್ಮಣೋಃ ಸ್ವರೂಪೈಕ್ಯಂ ಕ್ವಚಿತ್ಸೂತ್ರಿತಂ, ಪ್ರತ್ಯುತ 'ಅಂಶೋ ನಾನಾವ್ಯಪದೇಶಾತ್' ಇತ್ಯತ್ರ ಜೀವೋ ಬ್ರಹ್ಮಣೋಽಂಶೋ ಭಿನ್ನೋಽಭಿನ್ನಶ್ಚ ಅಗ್ನೇರಿವ ವಿಸ್ಫುಲಿಂಗಾಃ ಇತ್ಯುಕ್ತಮ್।... ಭೇದಾಭೇದಯೋಃ ಪ್ರಮಾಣ ಸಿದ್ಧತ್ವೇನ ದೃಷ್ಟಾಂತೇ ಸುದೃಷ್ಟತ್ವೇನ ಚಾವಿರೋಧಸ್ಯೈವ ವ್ಯವಸ್ಥಾಪನಾತ್"[೧೧]

> "ಸ್ವರೂಪಬಾಧಾಭಾವೇ ಅಬಾಧಿತತತ್ವರೂಪಸತ್ಯತ್ವಸ್ಯಾಪಿ ಪ್ರಪಂಚೇ ಅಭ್ಯುಪಗಮೇನ ಸತ್ಯತ್ವಬಾಧಸ್ಯ ಅನುಪಪತ್ತೇಃ।"[೧೨]

ಕ್ರಿಯಾಸಾರದ ಪ್ರಮಾಣವನ್ನು ಉಲ್ಲೇಖಿಸಿ ಮರಿತೋಂಟದಾರ್ಯರು ತಮ್ಮ ವೀರಶೈವಾನಂದ ಚಂದ್ರಿಕೆಯಲ್ಲಿ ಜಗತ್ತು ಸತ್ಯವೆಂದೇ ಪ್ರತಿಪಾದಿಸಿದ್ದಾರೆ:

> "ತಸ್ಮಾದವಿದ್ಯಾ ಜಗದುಪಾದಾನಕಾರಣಮಿತಿ ಜಗತೋ ಮಿಥ್ಯಾವಾದೋ ನಿರಸ್ತಃ।[೧೩]

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೀಗೆ ವೀರಶೈವ ಸಿದ್ಧಾಂತವು ಜಗತ್ಸತ್ಯತ್ವವಾದದ ಪರವಾಗಿದೆ. ಆದ್ದರಿಂದ ಸ್ಪಷ್ಟವಾಗಿ ಜೀವ-ಬ್ರಹ್ಮೈಕ್ಯ, ಜಗನ್ಮಿಥ್ಯಾತ್ವ ಮುಂತಾದ ಅದ್ವೈತ ಪರವಾದ ಅರ್ಥವನ್ನು ನೀಡುವ ಮೇಲೆ ಉಲ್ಲೇಖಿಸಿದ ಶ್ಲೋಕಗಳನ್ನು ಸಿದ್ಧಾಂತ ಶಿಖಾಮಣಿಯ ಮೂಲಪಾಠವೆಂದು ಅಂಗೀಕರಿಸುವುದು ಹೇಗೆ? ಇದು ಆಕ್ಷೇಪದೃಷ್ಟಿಯ ಪ್ರಶ್ನೆ. ಅದಕ್ಕೆ ಉತ್ತರ: ಇಲ್ಲಿ ಮರಿತೋಂಟದಾರ್ಯರು ತಮ್ಮ ವ್ಯಾಖ್ಯಾನದಲ್ಲಿ ಆ ಶ್ಲೋಕಗಳನ್ನು ತಾವು ಅಂಗೀಕರಿಸಿದ ಸಿದ್ಧಾಂತಕ್ಕೆ ವಿರೋಧ ಬರದಂತೆ ವಿವರಿಸಲು ಪ್ರಯತ್ನಿಸಿರುವುದನ್ನು ಪರಿಗಣಿಸುವುದು ಪ್ರಸ್ತುತ. ಉದಾಹರಣೆಗೆ ಕೆಳಗಿನ ಶ್ಲೋಕಗಳ ವ್ಯಾಖ್ಯಾನವನ್ನು ನೋಡೋಣ:

೧. ತಸ್ಮಾಚ್ಛಿವಮಯಂ ಸರ್ವಂ ಜಗದೇತಚ್ಚರಾಚರಮ್।
ತದಭಿನ್ನತಯಾ ಭಾತಿ ಸರ್ಪತ್ವಮಿವ ರಜ್ಜುತಃ॥[೨೪]

"ಹಗ್ಗವು ತನ್ನದೇ ಆದ ಉದ್ದವಾಗಿರುವ, ಗೋಧಿಯ ಬಣ್ಣವಾಗಿರುವ ಶಕ್ತಿಯ ಮೂಲಕ ತನ್ನ ಸ್ವರೂಪವನ್ನು ಕಳೆದುಕೊಳ್ಳದೆ ನೋಡುವವರಿಗೆ ಹಾವಿನಂತೆ ಹೇಗೆ ಕಾಣುತ್ತದೆಯೋ ಹಾಗೆ ಶಿವನು ತನ್ನಲ್ಲಿರುವ ಮಾಯಾಶಕ್ತಿಯಿಂದ ಪ್ರಪಂಚಕ್ಕೆ ಅಭಿನ್ನನಾಗಿ ತೋರುತ್ತಾನೆ. ಆದ್ದರಿಂದ ಚರಾಚರಾತ್ಮಕವಾದ ಈ ಜಗತ್ತು ಶಿವಮಯವೇ ಆಗಿದ್ದು ಶಿವನಿಗಿಂತ ಭಿನ್ನವಾಗಿ ಇರುವುದಿಲ್ಲ."- ಇದು ಮರಿತೋಂಟದಾರ್ಯರ ವ್ಯಾಖ್ಯಾನದ ಸಂಗ್ರಹ. ಇಲ್ಲಿ ಅಧ್ಯಾಸರೂಪವಾದ ಪ್ರತೀತಿಯನ್ನು ಬಿಟ್ಟು ಮಾಯಾಶಕ್ತಿಯ ಯೋಜನೆ ಮಾಡಿ ಜಗತ್ತು ಶಿವಮಯ, ಶಿವನಿಗಿಂತ ಭಿನ್ನವಲ್ಲ ಎಂಬುದನ್ನು ಸಾಧಿಸಿದ್ದಾರೆ. ಅದರಂತೆಯೇ, ಮುಂದಿನ ಎರಡು ಶ್ಲೋಕಗಳಲ್ಲಿಯೂ ಅದೇ ಅರ್ಥವನ್ನು ಹೊಮ್ಮಿಸುತ್ತಾರೆ. ಆದರೆ ಅಧ್ಯಾಸಮೂಲಕವಾದ ಭ್ರಾಂತಿಯನ್ನು ಒಪ್ಪಿಕೊಳ್ಳದೆ "ರಜ್ಜೌಸರ್ಪವದ್ಭಾತಿ, ಶುಕ್ತೌ ಚ ರಜತತ್ವವತ್, ಸ್ಥಾಣೌ ಚೋರತ್ವವತ್, ಮರೀಚ್ಯಾಂ ಜಲತ್ವವತ್, ವ್ಯೋಮ್ನಿ ಗಂಧರ್ವಪುರವತ್" ಎಂಬ ದೃಷ್ಟಾಂತಗಳನ್ನು 'ಶಿವನು ಪ್ರಪಂಚಕ್ಕೆ ಅಭಿನ್ನನಾಗಿ ತೋರುತ್ತಾನೆ' ಎಂಬ ಸಂದರ್ಭಕ್ಕೆ ಸಮನ್ವಯ ಮಾಡಿಕೊಳ್ಳುವುದು ಕಷ್ಟಸಾಧ್ಯ. ಇದು ಮರಿತೋಂಟದಾರ್ಯರಿಗೆ ತಿಳಿದಿಲ್ಲವೆಂದಲ್ಲ. ಈ ದೃಷ್ಟಾಂತಗಳನ್ನು ವಿಮರ್ಶಿಸುವುದಾದರೆ ಜಗತ್ತು ಪ್ರಾತಿಭಾಸಿಕವಾದೀತು ಎಂಬ ಶಂಕೆಗೆ ಮುಂದಿನ ಶ್ಲೋಕದ ದೃಷ್ಟಾಂತವು ಉತ್ತರವಾಗಿದೆಯೆಂದು ಯೋಜನೆ ಮಾಡಿದ್ದಾರೆ:

"ಪತ್ರಶಾಖಾದಿರೂಪೇಣ ಯಥಾ ತಿಷ್ಠತಿ ಪಾದಪಃ।
ತಥಾ ಭೂಮ್ಯಾದಿರೂಪೇಣ ಶಿವ ಏಕೋ ವಿರಾಜತೇ॥"[೨೫]

ಮರವು ಮರವಾಗಿಯೇ ಉಳಿದು ಎಲೆ, ಹೂವು, ಮೊದಲಾದವುಗಳಿಂದ ಕೂಡಿ ನಿಂತಿರುವಂತೆ ಶಿವನೂ ಸಹ ತನ್ನ ಮಾಯಾಶಕ್ತಿಯಿಂದ ಭೂಮಿ ಮೊದಲಾದ ಪ್ರಪಂಚರೂಪದಿಂದ ಪ್ರಕಾಶಿಸುತ್ತಾನೆ. ಹೀಗೆ ಮರಿತೋಂಟದಾರ್ಯರು ಈ ಶ್ಲೋಕಗಳನ್ನು ಅನ್ವಯಮಾಡಿಕೊಂಡಿದ್ದಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೨. ಮಿಥ್ಯೇತಿ ಭಾವಯನ್ ವಿಶ್ವಂ ವಿಶ್ವಾತೀತಂ ಶಿವಂ ಸ್ಮರನ್।
ಚಿತ್ತಾನಂದಚಿದಾಕಾರಂ ಕಥಂ ಬದ್ಧುಮಿಹಾರ್ಹತಿ॥[೨೮]

ಈ ಶ್ಲೋಕವನ್ನೂ ಜಗತ್ಸತ್ಯತ್ವ ವಾದಕ್ಕೆ ವಿರುದ್ಧವಾಗದಂತೆ ಯೋಜಿಸಿ ವ್ಯಾಖ್ಯಾನ ಮಾಡಿದ್ದಾರೆ ಮರಿತೋಂಟದಾರ್ಯರು. ಇದು ಪಕ್ಷಾಂತರವಾಗಿ ಹೇಳಿದ ಭಾವನೆಯ ಸ್ವರೂಪವೆಂದು ಅವತರಣಿಕೆಯನ್ನು ಕೊಟ್ಟು ಅದ್ವೈತಪರವಾದ ಅರ್ಥವನ್ನೇ ನೀಡಿದ್ದಾರೆ. ಸಂದರ್ಭ ಭಾವಾರ್ಪಿತ ಸ್ಥಲದಲ್ಲಿ ಪ್ರಸಾದಿಯು ಶಿವನು ವಿಶ್ವಾತೀತನೆಂದು ಬಗೆದು ವಿಶ್ವವನ್ನು ಒಂದು ಸ್ಥಿತಿಯಲ್ಲಿ ಮಿಥ್ಯೆಯೆಂದು ಭಾವಿಸುವುದು, ಮುಂತಾದ ವಿಚಾರಗಳನ್ನು ಹೇಳುವುದು. ಬೇರೆ ಬೇರೆ ಭಾವನೆಗಳೊಂದಿಗೆ ಇದೂ ಒಂದು ಭಾವನೆ ಎಂಬಂತೆ ಬಂದಿರುವ ವಿಚಾರವಿದೆಂದು ವ್ಯಾಖ್ಯಾನಕಾರರ ಅನಿಸಿಕೆ. ಆದರೆ ಮುಂದಿನ ಶಿಷ್ಯಸ್ಥಲದಲ್ಲಿ ಬರುವ ಈ ಶ್ಲೋಕವನ್ನು ಎಳೆದು ಬಗ್ಗಿಸಿ ಅರ್ಥ ಮಾಡಿದ್ದಾರೆ:

"ಶಿವಾದನ್ಯಜ್ಜಗನ್ಮಿಥ್ಯಾ ಶಿವಃ ಸಂತ್ಸ್ವರೂಪಕಃ।
ಶಿವಸ್ತ್ವಮಿತಿ ನಿರ್ದಿಷ್ಟೋ ಗುರುಣಾ ಮುಕ್ತ ಏವ ಸಃ॥"[೨೯]

ಇಲ್ಲಿ 'ಶಿವಾದನ್ಯಜ್ಜಗನ್ಮಿಥ್ಯಾ' ಎಂಬ ವಾಕ್ಯದ ಸಹಜವಾದ ಅರ್ಥ 'ಶಿವನನ್ನು ಬಿಟ್ಟು ಜಗತ್ತು ಸುಳ್ಳು' ಎಂದಾಗುತ್ತದೆ. ಆದರೆ ಮರಿತೋಟದಾರ್ಯರು ಅದನ್ನು

'ಜಗತ್ ಶಿವಾತ್ ಅನ್ಯತ್ ಇತಿ ಮಿಥ್ಯಾ' ಎಂದು 'ಇತಿ'ಯನ್ನು ಅಧ್ಯಾಹಾರಮಾಡಿ ಕೊಂಡಿದ್ದಾರೆ. ಇದರ ಅರ್ಥ ಹೀಗೆ- "ಜಗತ್ತು ಶಿವನಿಗಿಂತ ಭಿನ್ನ 'ಎಂಬುದು' ಸುಳ್ಳು".

೩. ಅಯಥಾರ್ಥಪ್ರಪಂಚೋಽಯಂ ಪ್ರತಿತಿಷ್ಠತಿ ಶಂಕರೇ।
ಸದಾತ್ಮನಿ ಯಥಾ ಶುಕ್ತೌ ರಜತತ್ವಂ ವ್ಯವಸ್ಥಿತಮ್॥[೩೦]

ವ್ಯಾಖ್ಯಾನಕಾರರು ಈ ಶ್ಲೋಕದಲ್ಲಿ 'ಅಯಥಾರ್ಥ' ಎಂಬ ಶಬ್ದಕ್ಕೆ 'ಅನಿತ್ಯ' ಎಂಬ ಅರ್ಥವನ್ನು ಕೊಟ್ಟಿದ್ದಾರೆ. ವ್ಯಾವಹಾರಿಕ ಸತ್ತಿನ ರೂಪದಲ್ಲಿರುವ ಮುತ್ತಿನ ಚಿಪ್ಪಿನಲ್ಲಿ ಪ್ರತೀತಿಗೆ ಮಾತ್ರ ಹೊಳೆಯುವ ರಜತತತ್ವವು ಇದ್ದಂತೆ, ಶಿವನಲ್ಲಿ ಅನಿತ್ಯವಾದ ಈ ಪ್ರಪಂಚವು ನಿಂತಿದೆ ಎಂದು ಈ ಶ್ಲೋಕದ ಅರ್ಥ. ಈ ಅರ್ಥವನ್ನು ಪಡೆಯಲು ಹಿಂದಿನ ಶ್ಲೋಕದಲ್ಲಿ ಮರಿತೋಂಟದಾರ್ಯರಿಗೆ ಸೂಚನೆಯಿದ್ದಂತೆ ಕಾಣುತ್ತದೆ-

"ಶಿವ ಏವ ಪರಂ ತತ್ತ್ವಂ ಚಿದಾನಂದಸದಾಕೃತಿಃ।
ಸ ಯಥಾರ್ಥಸ್ತದನ್ಯಸ್ಯ ಜಗತೋ ನಾಸ್ತಿ ನಿತ್ಯತಾ॥"[೩೧]

ಸಚ್ಚಿದಾನಂದಸ್ವರೂಪನಾದ ಶಿವನೇ ಪರತತ್ತ್ವ, ಅವನೇ ಯಥಾರ್ಥನು, ಅವನಿಗಿಂತ ಭಿನ್ನವಾದ ಜಗತ್ತಿಗೆ ನಿತ್ಯತ್ವವಿಲ್ಲ. ಇಲ್ಲಿ ಶಿವನು ಯಥಾರ್ಥನು, ಜಗತ್ತು ನಿತ್ಯವಲ್ಲ ಎಂದು ಹೇಳುವ ಮಾತಿನಲ್ಲಿ 'ಯಥಾರ್ಥಃ' ಜೊತೆ 'ನಾಸ್ತಿ ನಿತ್ಯತಾ' ಎಂಬ ಶಬ್ದಗಳಿವೆ, "ನಾಸ್ತಿ ಸತ್ಯತಾ" ಎಂಬ ಶಬ್ದಗಳಿಲ್ಲ. ಆದ್ದರಿಂದ 'ಯಥಾರ್ಥಃ' ಎಂದರೆ 'ನಿತ್ಯಃ' ಎಂದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರ್ಥಮಾಡಿಕೊಳ್ಳುವ ಅವಕಾಶವಿದೆ. ಈ ಶ್ಲೋಕದ ಭಾವವನ್ನೇ ಮುಂದಿನ ಶ್ಲೋಕದ ವ್ಯಾಖ್ಯಾನದಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗಿದೆ. ಆದರೆ 'ಶುಕ್ತಿಯಲ್ಲಿ ರಜತತ್ವ' ಎಂಬ ದೃಷ್ಟಾಂತವು ಇಲ್ಲಿಯೂ ತೊಡಕಾಗಿ ಕಾಣುತ್ತದೆ.

೪. ಅಖಂಡಾನಂದಸಂವಿತ್ತಿಸ್ಸ್ವರೂಪಂ ಬ್ರಹ್ಮ ಕೇವಲಮ್।
ಮಿಥ್ಯಾ ತದನ್ಯದಿತ್ಯೇಷಾಂ ಸ್ಥಿತಿರ್ಜ್ಞಾನಮಿಹೋಚ್ಯತೇ॥೪೦
ಅಸದೇವ ಜಗತ್ಸರ್ವಂ ಸದಿವ ಪ್ರತಿಭಾಸತೇ।
ಜ್ಞಾತೇ ಶಿವೇ ತದಜ್ಞಾನಂ ಸ್ವರೂಪಮುಪಪದ್ಯತೇ॥೪೧

ಈ ಶ್ಲೋಕಗಳಲ್ಲಿ ಮೊದಲಿನದು ಜ್ಞಾನದ ಲಕ್ಷಣವನ್ನು ಹೇಳುತ್ತದೆ. ಎರಡನೆಯದು ಶಿವಜ್ಞಾನವು ಪ್ರಾಪ್ತವಾದಾಗ, ಅಸತ್ತಾದ ಎಂದರೆ ಇರದ ಜಗತ್ತು ಸತ್ತಿನಂತೆ ಅಂದರೆ ಇದ್ದಂತೆ ಭಾಸವಾಗುವ ಅಜ್ಞಾನವು ತನ್ನ ಸ್ವರೂಪವನ್ನು ಹೊಂದುತ್ತದೆ ಎಂದು ಹೇಳುತ್ತದೆ. ಇಲ್ಲಿ ವ್ಯಾಖ್ಯಾನಕಾರರು ತನ್ನ ಸ್ವರೂಪವನ್ನು ಅಂದರೆ ಜಗತ್ತಿನ ಕಾರಣವಾದ ಚಿಚ್ಛಕ್ತಿಯ ಆಕಾರವನ್ನು ಹೊಂದುತ್ತದೆ ಎಂದು ವಿವರಿಸಿದ್ದಾರೆ. ಈ ಶ್ಲೋಕಗಳಲ್ಲಿ ಸ್ಫುಟವಾಗಿ ಕಾಣುವದು ಅದ್ವೈತದ ಜಗನ್ಮಿಥ್ಯಾತ್ವವಾದವೆಂದು ಆಕ್ಷೇಪಿಸುವುದಕ್ಕೆ ಸಾಧ್ಯವಿದೆ.

ಈಗಾಗಲೇ ಕೊಟ್ಟ ಕಾರಣಗಳಿಂದ ಈ ಶ್ಲೋಕಗಳನ್ನು ಗ್ರಂಥದ ಮೂಲಪಾಠದಲ್ಲಿ ಅಂಗೀಕರಿಸುವುದು ಅನಿವಾರ್ಯ. ಮರಿತೋಂಟದಾರ್ಯರು ಅವುಗಳನ್ನು ತಮ್ಮ ಆವೃತ್ತಿಯಲ್ಲಿ ಉಳಿಸಿಕೊಂಡಿರುವುದೂ ಅವೇ ಕಾರಣಗಳಿಂದ. ಅವರ ಕಾಲಕ್ಕಿಂತ ಮುಂಚೆ ಅವು ಸಿದ್ಧಾಂತ ಶಿಖಾಮಣಿಯ ಭಾಗವಾಗಿದ್ದವು. ಆದ್ದರಿಂದಲೇ ತಾವು ಒಪ್ಪಿಕೊಂಡ ಭೇದಾಭೇದವಾದ ಮತ್ತು ಜಗತ್ಸತ್ಯತ್ವವಾದಗಳಿಗೆ ವಿರುದ್ಧವಾದ ವಿಷಯವನ್ನು ಒಳಗೊಂಡಿದ್ದರೂ ಅವುಗಳನ್ನು ಉಳಿಸಿಕೊಂಡು, ಅವುಗಳಿಗೆ ಮಾಯಾ ಶಕ್ತಿಯ ತತ್ತ್ವವನ್ನು ಸಮಾವೇಶಗೊಳಿಸಿ ವ್ಯಾಖ್ಯಾನ ಮಾಡಿದ್ದಾರೆ. ಶುಕ್ತಿ-ರಜತ ಮುಂತಾದ ತೊಡಕಿನ ದೃಷ್ಟಾಂತಗಳನ್ನೂ ಅಧ್ಯಾಸದ ಕಲ್ಪನೆಯಿಂದ ಹೊರತಾಗಿ ವಿವರಿಸಲು ಪ್ರಯತ್ನಿಸಿದ್ದಾರೆ.

ಪ್ರಸ್ತುತ ಒಂದು ಪ್ರಶ್ನೆ. ಶಿವಯೋಗಿ ಶಿವಾಚಾರ್ಯರು ಶಿವನ ವಿಶ್ವಭಾವಿನಿಯಾದ ಶಕ್ತಿಯನ್ನು ಅಂಗೀಕರಿಸಿಯೂ ಅಧ್ಯಾಸಪರವಾದ, ಜಗತ್ತಿಗೆ ಕೇವಲ ವ್ಯಾವಹಾರಿಕ ಸತ್ಯತ್ವವನ್ನು ಹೇಳುವ ಈ ಶ್ಲೋಕಗಳನ್ನು ಏಕೆ ರಚಿಸಿದರು? ಬಹುಶಃ ಅದಕ್ಕೆ ಅವರ ಮೇಲೆ ಆಗಿದ್ದ ಅದ್ವೈತದ ಪ್ರಭಾವವು ಕಾರಣವಾಗಿರಬೇಕು. ಹಾಗೆ ಹೇಳಲು ನಮಗೂ ಕಾರಣವಿದೆ. ಶ್ರೀಕರಭಾಷ್ಯಾದಿ ಗ್ರಂಥಗಳು ಬಾದರಾಯಣ ವ್ಯಾಸರ ವೇದಾಂತ ಸೂತ್ರಗಳ ವ್ಯವಸ್ಥಿತ ಕ್ರಮವನ್ನು ಅನುಸರಿಸಿ ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸಿವೆ. ಇವುಗಳು ಪ್ರಮಾಣವೆಂದು ಅಂಗೀಕರಿಸಿರುವ ಸಿದ್ಧಾಂತ ಶಿಖಾಮಣಿಯು ವೀರಶೈವ ಸಿದ್ಧಾಂತವು ರೂಪಿತವಾಗುವ ಆರಂಭ ಕಾಲಕ್ಕೆ ಸೇರಿದ ಗ್ರಂಥ. ಆಗ ಶಂಕರಾಚಾರ್ಯರ ಅದ್ವೈತ ವೇದಾಂತ ಭಾರತದಾದ್ಯಂತ ಎಲ್ಲರ ಮೇಲೆ ಗಾಢವಾದ ಪ್ರಭಾವ ಮುದ್ರೆಯನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೂಡಿಸಿತ್ತು. ವೀರಶೈವ ಆಚಾರ್ಯರು ಮತ್ತು ವಿದ್ವಾಂಸರು ಈ ಪ್ರಭಾವದಿಂದ ಹೊರತಾಗಿರಲಿಲ್ಲ. ಅನಂತರ ಕಾಲದ ನಿಜಗುಣ ಶಿವಯೋಗಿಗಳು, ಸರ್ಪಭೂಷಣ ಶಿವಯೋಗಿಗಳು ಮುಂತಾದ ಅನುಭಾವಿಗಳ ಮೇಲೆ ಅದ್ವೈತದ ಪ್ರಭಾವ ಎಷ್ಟರ ಮಟ್ಟಿಗೆ ಇದೆ ಎಂಬುದು ಅವರ ಗ್ರಂಥಗಳನ್ನು ಅಧ್ಯಯನ ಮಾಡಿದವರಿಗೆಲ್ಲ ಗೊತ್ತು. ನಿಜಗುಣ ಶಿವಯೋಗಿಗಳು ಹೀಗೆ ಹೇಳಿದ್ದಾರೆ: "ಕುವರ ಕೇಳೀ ಪ್ರಪಂಚವೆ ಮಿಥ್ಯೆಯರಿವಿಗ। ನ್ನವೆಯಾಗಿ ಕಾಣಿಸುವದರಿ ಕನಸಿನಿಂ। ದಲೆ ತೋರ್ಪ ದೃಶ್ಯಚಯದಂತೆ॥"[೨] ಹಾಗೆಯೇ ಸರ್ಪಭೂಷಣ ಶಿವಯೋಗಿಗಳು ಕೂಡ "ಆವ ಕಾಲದೊಳು ತತ್ತ್ವಾನುಭವವನು। ಕಾಣುವೀ ವಿಶ್ವವೆಲ್ಲ ಪುಸಿಯೆಂಬ ಪ್ರಜ್ಞೆಯನು। ಭಾವದೊಳು ನೀನೆ ನಾನೆಂಬ ಸಂಧಾನವನು। ದೇವ ಗುರುಸಿದ್ಧನೊಡನೆ ಕಡೆಗೆ ಮುಕ್ತಿಯನು॥" ಎಂದು ಹೇಳಿದ್ದಾರೆ[೩]. ಅದರಂತೆ ಅವರಿಗಿಂತ ಹಿಂದೆ ಇದ್ದ ಶಿವಯೋಗಿ ಶಿವಾಚಾರ್ಯರ ಮೇಲೂ ಅದ್ವೈತದ ಪ್ರಭಾವ ಬಿದ್ದಿತ್ತು ಎಂದು ಭಾವಿಸುವುದು ತಪ್ಪೇನಿಲ್ಲ. ಆದರೆ ಒಂದು ಪ್ರಶ್ನೆ: ತಮ್ಮ ಗ್ರಂಥದ ಬಹುಮಟ್ಟಿನ ಭಾಗದಲ್ಲಿ ಜಗತ್ಸತ್ಯತ್ವಪರವಾದ ನಿರೂಪಣೆಯನ್ನೂ ಸಾಮರಸ್ಯಾತ್ಮಕವಾದ ಶಿವೈಕ್ಯವನ್ನೂ ಹೇಳಿದ ಅವರು ಕೇವಲ ಈ ಇಪ್ಪತ್ತೈದರಷ್ಟು ಶ್ಲೋಕಗಳಲ್ಲಿ ಅದ್ವೈತ ಪರವಾದ ಮಿಥ್ಯಾತ್ವವನ್ನು ಜಗತ್ತಿಗೆ ಏಕೆ ಜೋಡಿಸಿದರು? ಈ ಪ್ರಶ್ನೆಗಳಿಗೆ ಎರಡು ಉತ್ತರಗಳು ಸಾಧ್ಯ: (೧) ಮೊಲನೆಯದಾಗಿ ಮರಿತೋಂಟದಾರ್ಯರು ಸೂಚಿಸಿದಂತೆ ಶಿವಯೋಗಿ ಶಿವಾಚಾರ್ಯರು ಅದ್ವೈತ ಪ್ರಭಾವದಿಂದ ರಜ್ಜು-ಸರ್ಪ, ಶುಕ್ತಿ-ರಜತ, ಸ್ಥಾಣು-ಚೋರ, ವ್ಯೋಮ-ಗಂಧರ್ವಪುರ ಮುಂತಾದ ದೃಷ್ಟಾಂತಗಳನ್ನು ತೆಗೆದುಕೊಂಡರೂ ಅವುಗಳಿಗೆ ಅದ್ವೈತದಲ್ಲಿರುವ ಭ್ರಾಂತಿಪರವಾದ ಅರ್ಥವನ್ನು ಬಿಟ್ಟು ಅವುಗಳನ್ನು ವೀರಶೈವಪರಿಭಾಷೆಗೆ ಪರಿವರ್ತಿಸಿ ಕೊಂಡು, ರಜ್ಜು ತನ್ನ ಗೋಧಿಯ ವರ್ಣ, ಅಂಕುಡೊಂಕು ಎಂಬ ತನ್ನ ವೈಶಿಷ್ಟ್ಯರೂಪ ಶಕ್ತಿಯಿಂದ ಸರ್ಪತ್ವದೊಂದಿಗೆ ಅಭಿನ್ನವಾಗಿರುವಂತೆ, ಹಾಗೆಯೇ ಶುಕ್ತಿಯು ಹೊಳೆಯುವ ಶಕ್ತಿಯ ಕಾರಣ ರಜತತತ್ವದೊಂದಿಗೆ ಅಭಿನ್ನವಾಗಿರುವಂತೆ, ಸ್ಥಾಣು ದೀರ್ಘತ್ವರೂಪಶಕ್ತಿಯ ಕಾರಣ ಚೋರನೊಂದಿಗೆ ಅಭಿನ್ನವಾಗಿರುವಂತೆ; ಪರಶಿವಬ್ರಹ್ಮನು ತನ್ನ ಶಕ್ತಿಯಿಂದ ಶಕ್ತಿಯ ವಿಕಾಸರೂಪವಾದ ಜಗತ್ತಿನೊಂದಿಗೆ ಅಭಿನ್ನನಾಗಿದ್ದಾನೆ ಎಂದು ಅರ್ಥಮಾಡಿಕೊಂಡಿದ್ದಾರೆ ಎಂದು ಭಾವಿಸಲು ಸಾಧ್ಯವಿದೆ. "ಸ ಯಥಾರ್ಥಃ ತದನ್ಯಸ್ಯ ಜಗತೋ ನಾಸ್ತಿ ನಿತ್ಯತಾ" ಎಂಬ ಸ್ಥಳದಲ್ಲಿ 'ಯಥಾರ್ಥಃ' 'ನ ನಿತ್ಯತಾ' ಎಂಬ ಶಬ್ದಗಳಿಗೆ ಸಹಜವಾಗಿ 'ನಿತ್ಯ' ಮತ್ತು 'ಅನಿತ್ಯ' ಎಂಬ ಅರ್ಥಗಳನ್ನು ತೆಗೆದುಕೊಳ್ಳಬಹುದು. ಬಂದ ಕಡೆ 'ಮಿಥ್ಯಾ' ಶಬ್ದಕ್ಕೂ 'ಮಿಥ' ಧಾತುವಿನ ಅರ್ಥಗಳಲ್ಲೊಂದಾದ ನಾಶದ ಅರ್ಥವನ್ನು ಗ್ರಹಿಸಿ ನಾಶವಾಗುವಂಥಾದ್ದು, ನಶ್ವರವಾದದ್ದು ಎಂಬ ಅರ್ಥವನ್ನು ತೆಗೆದುಕೊಳ್ಳಲು ಸಾಧ್ಯವಿದೆ. (೨)ಅಥವಾ ಈ ಶ್ಲೋಕಗಳು ಬಂದಿರುವ ಸಂದರ್ಭಗಳೆಲ್ಲವೂ ಶಿವಜಗನ್ಮಯತ್ವವನ್ನು ಮತ್ತು ಶಿವಯೋಗಿಯ ಜೀವನ್ಮುಕ್ತ ಸ್ಥಿತಿಯನ್ನೂ ವರ್ಣಿಸುವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂದರ್ಭಗಳಾದ್ದರಿಂದ ಇನ್ನೊಂದು ರೀತಿಯಲ್ಲಿ ಭಾವಿಸಲು ಸಾಧ್ಯವಿದೆ. ಜೀವನ್ಮುಕ್ತನು ಶಿವನ ನೆಲೆಯಲ್ಲಿ ಒಂದಾಗಿರುವುದರಿಂದ ಅವನಿಗೆ ಜಗತ್ತಿನ ಅಸ್ತಿತ್ವ ಸರ್ವಥಾ ಇಲ್ಲ, ಅವನಿಗೆ ಆ ನೆಲೆಯಲಿ ಜಗತ್ತು ಪುಸಿ ಎಂಬ ವಿಚಾರವನ್ನು ಹೇಳುವಾಗ ಶಿವಯೋಗಿ ಶಿವಾಚಾರ್ಯರು ಶುದ್ಧ ಅದ್ವೈತದ ಪರಿಭಾಷೆಯನ್ನು ಬಳಸಿಕೊಂಡಿರಬಹುದು ಎಂದು ಭಾವಿಸಬಹುದು. ಆದರೂ ಅವರ ನಿಜವಾದ ಅಭಿಪ್ರಾಯವೇನಿತ್ತೋ ಅವರೊಬ್ಬರೇ ಬಲ್ಲರು!

೩. ಗ್ರಂಥದ ಮೂಲ ಆಕರಗಳು ಮತ್ತು ವಿಷಯ

ಶಿವಯೋಗಿ ಶಿವಾಚಾರ್ಯರು ಸಿದ್ಧಾಂತ ಶಿಖಾಮಣಿಯ ಮೊದಲನೆ ಪರಿಚ್ಛೇದದಲ್ಲಿ ಅದರ ಮೂಲ ಆಕರಗಳನ್ನು ಹೆಸರಿಸಿದ್ದಾರೆ.[೪೪] ಅವುಗಳಲ್ಲದೆ ಅವರು ಅಲ್ಲಿ ಹೆಸರಿಸದ ಬೇರೆ ಆಕರಗಳೂ ಅವರಿಗಿದ್ದವು. ಕಾಮಿಕಾಗಮದಿಂದ ವಾತುಲಾಗಮದ ವರೆಗಿನ ೨೮ ಶೈವಾಗಮಗಳು, ಶೈವ ಪುರಾಣಗಳು ವೀರಶೈವ ಮತದ ಮೂಲ ಆಕರಗಳು. ಅವೇ ಸಿದ್ಧಾಂತ ಶಿಖಾಮಣಿಯ ಮೂಲ ಆಕರಗಳು. ವೇದಮಾರ್ಗಕ್ಕೆ ವಿರೋಧವಿಲ್ಲದಂತೆ ಆಗಮಗಳ ಮತ್ತು ಶೈವ ಪುರಾಣಗಳ ವೀರಶೈವಪರವಾದ ವಿಷಯಗಳನ್ನು ಧರ್ಮಾಚಾರಗಳನ್ನು ಸಂಗ್ರಹಿಸುವುದು ಶಿವಯೋಗಿ ಶಿವಾಚಾರ್ಯರ ಉದ್ದೇಶ:

ವೇದಧರ್ಮಾಭಿಧಾಯಿತ್ವಾತ್ ಸಿದ್ಧಾಂತಾಖ್ಯಃ ಶಿವಾಗಮಃ।
ವೇದಬಾಹ್ಯವಿರೋಧಿತ್ವಾದ್ ವೇದಸಂಮತ ಉಚ್ಯತೆ॥[೪೫]

ಎಂದು ಕಾಮಿಕಾದಿ ಶಿವಾಗಮಗಳು ವೇದಸಂಮತವೆಂದು ಮುಂದೆ ಪ್ರತಿಪಾದಿಸಿದ್ದಾರೆ. ಅವುಗಳ ಉತ್ತರಭಾಗದಲ್ಲಿ ವೀರಶೈವ ಮತದ ನಿರ್ದೇಶವಿದೆ:

ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ।
ನಿರ್ದಿಷ್ಟಮುತ್ತರೇ ಭಾಗೇ ವೀರಶೈವಮತಂ ಪರಮ್॥[೪೬]

ಹೀಗೆ ಶಿವಾಗಮಗಳ ಉತ್ತರಭಾಗವು ತಮ್ಮ ಗ್ರಂಥದ ಮೂಲ ಆಕರವೆಂದು ಸೂಚಿಸಿದ್ದಾರೆ. ಶೈವ ಪುರಾಣಗಳೂ ಮೂಲ ಆಕರಗಳೆಂದು ಮೊದಲೇ ಸೂಚಿಸಿದ್ದಾರೆ.

ಇವುಗಳಲ್ಲದೆ ವೇದ ಮತ್ತು ಉಪನಿಷತ್ತುಗಳೂ ಈ ಗ್ರಂಥದ ಆಕರಗಳೆಂದು ಆಂತರಿಕ ಆಧಾರದಿಂದ ಸಿದ್ಧವಾಗುತ್ತದೆ. ವೇದಾಂತಿಗಳು "ಬ್ರಹ್ಮ"ನೆಂದು ಕರೆಯುವ ಪರವಸ್ತುವೇ ಶಿವನು ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ ಗ್ರಂಥಕಾರರು:

ಬ್ರಹ್ಮೇತಿ ವ್ಯಪದೇಶಸ್ಯ ವಿಷಯಂ ಯಂ ಪ್ರಚಕ್ಷತೇ।
ವೇದಾಂತಿನೋ ಜಗನ್ಮೂಲಂ ತನ್ನಮಾಮಿ ಪರಂ ಶಿವಮ್॥[೪೭]

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಯದ್ಭಾಸಾ ಭಾಸತೇ ವಿಶ್ವಂ"[೪೮] ಎಂಬ ಶ್ಲೋಕದಲ್ಲಿ "ತಸ್ಯ ಭಾಸಾ ಸರ್ವಮಿದಂ ವಿಭಾತಿ" ಎಂಬ ಕಠೋಪನಿಷದ್ವಾಕ್ಯದ ಛಾಯೆ ಸ್ಪಷ್ಟವಾಗಿದೆ. "ಇಚ್ಛಾಜ್ಞಾನಾದಿ ರೂಪೇಣ ಯಾ ಶಂಭೋರ್ವಿಶ್ವಭಾವಿನೀ"[೪೯] ಎಂಬ ಶಕ್ತಿವಿಷಯಕವಾದ ಶ್ಲೋಕವು "ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ" ಎಂಬ ಶ್ವೇತಾಶ್ವತರೋಪನಿಷತ್ತಿನ ವಾಕ್ಯದ ವಿಷಯವನ್ನು ಅನುವಾದ ಮಾಡುತ್ತದೆ. ಹೀಗೆ ಗ್ರಂಥದಲ್ಲಿ ಉಪನಿಷದ್ವಾಕ್ಯಗಳ ಛಾಯೆಯನ್ನು ಗುರುತಿಸಬಹುದು. ಲಿಂಗಧಾರಣೆಯ ಪ್ರಸ್ತಾವದಲ್ಲಿ[೫೦] "ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೇ" ಎಂಬ ಋಗ್ವೇದ ಮಂತ್ರವನ್ನೂ, "ಯಾತೇ ರುದ್ರ ಶಿವಾ ತನೂರಘೋರಾऽಪಾಪಕಾಶಿನೀ" ಎಂಬ ಯಜುರ್ವೇದ ಮಂತ್ರವನ್ನೂ ಗ್ರಂಥಕಾರರು ಉದಾಹರಿಸಿ, ಲಿಂಗಧಾರಣೆ ಮುಂತಾದ ವೀರಶೈವ ಸಂಸ್ಕಾರಗಳಿಗೆ ವೇದಮೂಲತ್ವವನ್ನು ಸಮರ್ಥಿಸಲು ಪ್ರಯತ್ನಿಸಿದ್ದಾರೆ. ಅದ್ವೈತಪರವಾದ ಶ್ಲೋಕಗಳ ಬಗ್ಗೆ ಈಗಾಗಲೇ ವಿಚಾರ ಮಾಡಲಾಗಿದೆ. ಅವುಗಳಲ್ಲಿ ಸ್ಪಷ್ಟವಾಗಿ ಶಂಕರಾಚಾರ್ಯರ ಗ್ರಂಥಗಳ ಛಾಯೆಯು ಕಂಡುಬರುತ್ತದೆ. ಪ್ರಾಣಲಿಂಗಿಸ್ಥಲದ ಸಂದರ್ಭದಲ್ಲಿ ಯೋಗಶಾಸ್ತ್ರದ ಪ್ರಕ್ರಿಯೆಗಳ ಪ್ರಭಾವ ಸ್ಪಷ್ಟವಾಗಿದೆ.

೪. ಗ್ರಂಥದ ವಿಷಯ:

ಸಿದ್ಧಾಂತ ಶಿಖಾಮಣಿಯಲ್ಲಿ ಒಟ್ಟು ೨೧ ಪರಿಚ್ಛೇದಗಳಿವೆ. ಅವುಗಳಲ್ಲಿ ೧,೨,೩,೪ಮತ್ತು೨೧ ನೆಯ ಪರಿಚ್ಛೇದಗಳಲ್ಲಿ ಶಿವ-ಶಕ್ತಿಯರ ಸ್ತುತಿ, ಗ್ರಂಥಕಾರರ ಪರಂಪರೆ, ಜಗತ್‌ಸೃಷ್ಟಿಯ ವಿಚಾರ, ರೇಣುಕರ ಅವತಾರಕ್ಕೆ ಹಿನ್ನಲೆಯಾದ ಸನ್ನಿವೇಶ, ರೇಣುಕರ ಅವತಾರ, ಆಗಸ್ತ್ಯಾಶ್ರಮದಲ್ಲಿ ರೇಣುಕ-ಅಗಸ್ತ್ಯರ ಭೇಟಿ, ಅಂತಿಮವಾಗಿ ವಿಭೀಷಣನಿಗೆ ಅನುಗ್ರಹ ಮತ್ತು ರೇಣುಕರ ಲಿಂಗೈಕ್ಯ ಮುಂತಾದ ವಿಷಯಗಳು ಬಂದಿದೆ. ೫ನೇ ಪರಿಚ್ಛೇದದಲ್ಲಿ ರೇಣುಕರು ಅಗಸ್ತ್ಯಮುನಿಗೆ ಮಾಡಿದ ಶಿವತತ್ತ್ವೋಪದೇಶವು ಆರಂಭವಾಗಿ ೨೦ನೇ ಪರಿಚ್ಛೇದದಲ್ಲಿ ಕೊನೆಗೊಳ್ಳುತ್ತದೆ. ಹೀಗೆ ಈ ೧೬ ಪರಿಚ್ಛೇದಗಳಲ್ಲಿ ಷಟ್‌ಸ್ಥಲಾಂತರ್ಗತವಾಗಿ ನೂರೊಂದು ಸ್ಥಲಗಳ ನಿರೂಪಣೆಯಿದೆ. ೫ರಿಂದ ೧೪ನೇ ಪರಿಚ್ಛೇದದವರೆಗೆ ೪೪ ಅಂಗಸ್ಥಲಗಳ ನಿರೂಪಣೆಯು ಸುದೀರ್ಘವಾಗಿ ಬಂದಿದೆ. ೧೫ರಿಂದ ೨೦ರ ವರೆಗಿನ ಆರು ಪರಿಚ್ಛೇದಗಳಲ್ಲಿ ೫೭ ಲಿಂಗಸ್ಥಲಗಳ ನಿರೂಪಣೆಯಿದೆ. ಇವುಗಳ ಪರಿಚಯವನ್ನಿಲ್ಲಿ ಮಾಡಿಕೊಡಲಾಗಿದೆ:

೧. ಶಿವಸ್ತುತಿ ಮತ್ತು ಶಕ್ತಿಸ್ತುತಿಗಳಲ್ಲಿ ಶಿವನ ಸಚ್ಚಿದಾನಂದ ಸ್ವರೂಪ, ಅವನು ಪರಬ್ರಹ್ಮ; ೩೬ ತತ್ತ್ವಗಳು ಶಿವನೆಂಬ ಮಹಾಸಮುದ್ರದ ತೆರೆಗಳಂತೆ; ಅವನು ಶಕ್ತಿವಿಶಿಷ್ಟ; ಆ ಶಕ್ತಿಯ ಸ್ಪಂದನದಿಂದಲೇ ಜಗತ್ತಿನ ಆವಿರ್ಭಾವ; ಇಚ್ಛಾ, ಜ್ಞಾನ ಮತ್ತು ಕ್ರಿಯಾ ರೂಪದಿಂದ ಜಗತ್ತಿನ ಮೂಲಕಾರಣಳಾದ ಶಕ್ತಿಯು ಶಿವನ ಸಹಧರ್ಮಿಣಿಯಾಗಿ ಅವನೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದ್ದಾಳೆ ಮುಂತಾದ ತತ್ತ್ವವಿಚಾರಗಳು ಅಡಕವಾಗಿವೆ. ಇವೇ ವಿಚಾರಗಳು ಗ್ರಂಥದಲ್ಲಿ ಅಲ್ಲಲ್ಲಿ ಸೂಕ್ತವಾಗಿ ನಿರೂಪಿಸಲ್ಪಟ್ಟಿವೆ. ಇವೆಲ್ಲವೂ ವೀರಶೈವರ ಆಚಾರಕ್ಕೆ ತಾತ್ತ್ವಿಕ ತಳಹದಿಯನ್ನು ಒದಗಿಸುತ್ತವೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೨. ಗ್ರಂಥಕಾರರಾದ ಶಿವಯೋಗಿ ಶಿವಾಚಾರ್ಯರ ಪರಂಪರೆ ಮತ್ತು ಅವರು ನಿರೂಪಿಸಿದ ರೇಣುಕಾವತಾರಕ್ಕೆ ಸಂಬಂಧಿಸಿದ ಸನ್ನಿವೇಶದ ವಿಷಯ, ಮುಂತಾದ ವಿಷಯಗಳನ್ನು ಈ ಲೇಖನದಲ್ಲಿ ಈಗಾಗಲೇ ನಿರೂಪಿಸಿದ್ದೇನೆ.

೩. ೪೪ ಅಂಗಸ್ಥಲಗಳ ನಿರೂಪಣೆಗೆ ಪೂರ್ವಭಾವಿಯಾಗಿ ಸಿದ್ಧಾಂತವೆಂಬ ಶಿವಾಗಮಸಂಚಯದ ಪ್ರಾಶಸ್ತ್ಯವನ್ನೂ ಅದರ ವೇದಾರ್ಥಪರತ್ವ ಮತ್ತು ವೇದ ಸಂಮತತತ್ವಗಳನ್ನೂ ಪ್ರತಿಪಾದಿಸಲಾಗಿದೆ. ವೀರಶೈವ ಶಬ್ದದ ನಿಷ್ಪತ್ತಿಯನ್ನು ಕೊಟ್ಟು, ಆರು ಸ್ಥಲಗಳ ಧರ್ಮಭೇದಕ್ಕೆ ಅನುಸಾರವಾಗಿ ವೀರಶೈವರು ಆರು ವಿಧವಾಗಿದ್ದಾರೆಂದು ಸಮಾಜ ವ್ಯವಸ್ಥೆಯನ್ನು ಸೂಚಿಸಿದ್ದಾರೆ. ವೀರಶೈವರ ಶಾಸ್ತ್ರವೂ ಕೂಡ ಸ್ಥಲಭೇದದಂತೆ ಆರು ಬಗೆಯಾಗಿದೆ. ವೀರಶೈವ ಧರ್ಮಸಂಹಿತೆ ಮತ್ತು ಸಮಾಜ ವ್ಯವಸ್ಥೆಗೆ ಆಧಾರವಾಗಿ ಭಕ್ತಸ್ಥಲ, ಮಾಹೇಶ್ವರಸ್ಥಲ, ಪ್ರಸಾದಿಸ್ಥಲ, ಪ್ರಾಣಲಿಂಗಿಸ್ಥಲ, ಶರಣಸ್ಥಲ ಮತ್ತು ಐಕ್ಯ ಸ್ಥಲಗಳೆಂಬ ಆರು ಸ್ಥಲಗಳ ವಿಭಾಗವನ್ನು ಮಾಡಿದ್ದಾರೆ.

ಭಕ್ತಸ್ಥಲದ ಅಂಗವಾಗಿ ೧೫ ಅವಾಂತರ ಸ್ಥಲಗಳು ಬರುತ್ತವೆ. ಅವುಗಳಲ್ಲಿ ಮೊದಲ ಎರಡು ಸ್ಥಲಗಳಲ್ಲಿ ಆತ್ಮನ ಸ್ವರೂಪ, ಅವನು ಶಿವಾಂಶಸಂಭೂತನು ಎಂಬ ವಿಚಾರವು ಅತ್ಯಂತ ತಾತ್ತ್ವಿಕವಾಗಿದೆ. ಶಕ್ತಿಪಾತದಿಂದ ಸಂಸಾರ ದುಃಖವನ್ನು ಪರಿಹರಿಸಿಕೊಳ್ಳುವ ಬುದ್ಧಿಯು ಜೀವನಲ್ಲಿ ಹುಟ್ಟಿ ಮಾರ್ಗದರ್ಶಕನಾದ ಗುರುವಿನ ಬಳಿಗೆ ಹೋಗುವಂತೆ ಪ್ರೇರಣೆಮಾಡುತ್ತದೆ ಎಂಬ ವಿಷಯ ಮುಂದಿನ ಸ್ಥಲದಲ್ಲಿ ಬರುತ್ತದೆ. ಶಿವದೀಕ್ಷೆ, ಅಷ್ಟಾವರಣಸಂಪನ್ನತೆ ಮುಂತಾದ ವೀರಶೈವ ಸಂಸ್ಕಾರಗಳು ಮುಂದಿನ ಸ್ಥಲಗಳ ವಿಷಯ. ಭಕ್ತಿಮಾರ್ಗಕ್ರಿಯಾಸ್ಥಲವು ವೀರಶೈವರ ಆಚಾರ ಸಂಹಿತೆಯನ್ನು ಹೇಳುವ ಮುಖ್ಯ ಸ್ಥಲ. ಅದರಲ್ಲಿ ನವವಿಧಭಕ್ತಿ, ಇಷ್ಟಲಿಂಗಪೂಜೆಯೆಂಬ ಬಾಹ್ಯಭಕ್ತಿ, ಅಂತರ್ಲಿಂಗಾನುಸಂಧಾನವೆಂಬ ಆಭ್ಯಂತರ ಭಕ್ತಿ, ಐದು ಪ್ರಕಾರವಾದ ಶಿವಯಜ್ಞ, ಪಂಚಸೂತಕಗಳ ವಿಚಾರ, ತೀರ್ಥಯಾತ್ರೆ ಮುಂತಾದ ವಿಷಯಗಳು ನಿರೂಪಿಸಲ್ಪಟ್ಟಿವೆ. ಮುಂದಿನ ಸ್ಥಲಗಳಲ್ಲಿ ಗುರು-ಲಿಂಗ-ಜಂಗಮರಲ್ಲಿ ಸಮಾನವಾದ ಭಾವ, ಪಾದೋದಕ ಮತ್ತು ಪ್ರಸಾದಗಳ ಸ್ವೀಕಾರ, ಸೋಪಾಧಿಕದಾನ ಮತ್ತು ನಿರುಪಾಧಿಕದಾನ ಮುಂತಾದ ವೀರಶೈವ ಆಚರಣೆಗಳ ವಿಷಯ ವಿಶದವಾಗಿ ಬಂದಿದೆ. ಇವೆಲ್ಲಾ ವೀರಶೈವ ಧರ್ಮಾಚರಣೆಯ ಮೂಲ ವಿಚಾರಗಳು.

ಮಾಹೇಶ್ವರ ಸ್ಥಲದ ೯ ಅವಾಂತರ ಸ್ಥಲಗಳಲ್ಲಿ ಸಾಧಕನ ಲಿಂಗನಿಷ್ಠೆಯ ಗಾಢವಾದ ಸ್ಥಿತಿಯನ್ನು ಕಾಣುತ್ತೇವೆ. ಶಿವನೊಬ್ಬನೇ ಅನುಗ್ರಹಕಾರಕ ಎಂಬ ಸ್ಥಿರಬುದ್ಧಿ; ಅದರೊಂದಿಗೆ ಲಿಂಗನಿಷ್ಠೆ; ಅದಕ್ಕೆ ವಿರುದ್ಧವಾದ ಪ್ರಾಕೃತಾಚಾರಗಳನ್ನು ಬಿಡುವುದು; ಈ ಲಿಂಗನಿಷ್ಠೆಯನ್ನು ಬಲಿಸಲು ಸರ್ವಾದ್ವೈತಭಾವ ನಿರಸನ, ಅಷ್ಟಮೂರ್ತಿ ನಿರಸನ, ಶಿವನು ಸರ್ವಗತನೆಂಬ ಭಾವವನ್ನು ಬಿಡುವುದು ಮುಂತಾದ ವಿಷಯಗಳನ್ನು ಹೇಳಿ, ಪೂಜೆಯ ಸಂದರ್ಭಕ್ಕಾಗಿ ಈ ಭಾವಗಳನ್ನು ತೊಡೆದು ಕೊಂಡರೂ, 'ಶಿವನು ಜಗನ್ಮಯ' ಎಂಬುದನ್ನು ಮರೆಯಬಾರದೆಂದು ಹೇಳಲಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಏಳು ಸ್ಥಲಗಳನ್ನುಳ್ಳ ಪ್ರಸಾದಿಸ್ಥಲದ ನಿರೂಪಣೆಯಲ್ಲಿ ಸಾಧಕನು ಹೇಗೆ ತನ್ನ ಸುಖಕ್ಕಾಗಿ ಸಂಪಾದಿಸಿದ ಎಲ್ಲವನ್ನೂ ಶಿವನಿಗೆ ಅರ್ಪಿಸಿ ಅವನ ಪ್ರಸಾದವೆಂದು ಅವನ್ನು ಸ್ವೀಕರಿಸಬೇಕು ಮತ್ತು ಪ್ರಸಾದ ಸ್ವೀಕಾರದಿಂದ ಹೇಗೆ ಮನಸ್ಸಿನ ಪ್ರಸನ್ನತೆ ಪ್ರಾಪ್ತವಾಗುತ್ತದೆ ಎಂಬ ವಿಷಯವು ಬಹುವಿಧವಾಗಿ ಬಂದಿದೆ. ಗುರು, ಲಿಂಗ, ಜಂಗಮ, ಭಕ್ತ, ಪ್ರಸಾದ ಮುಂತಾದವುಗಳ ಮಾಹಾತ್ಮ್ಯವು ಇಲ್ಲಿ ನಿರೂಪಿತವಾಗಿದೆ.

ಐದು ಅವಾಂತರ ಸ್ಥಲಗಳನ್ನೊಳಗೊಂಡ ಪ್ರಾಣಲಿಂಗಿಸ್ಥಲದ ವಿವರಣೆಯಲ್ಲಿ ಪ್ರಾಣಲಿಂಗಾರ್ಚನೆ, ಶಿವಯೋಗ ಸಮಾಧಿ, ಮುಂತಾದ ವಿಷಯಗಳು ಬಂದಿವೆ. ಶಿವಯೋಗ ಸಂಪನ್ನನು ಮಹಾಲಿಂಗವೇ ಆತ್ಮತತ್ತ್ವವೆಂಬ ನೆಲೆಗೆ ಮುಟ್ಟಿ ಲಿಂಗಾಂಗ ಸಾಮರಸ್ಯದೆಡೆಗೆ ಹೇಗೆ ಪ್ರವೃತ್ತನಾಗುತ್ತಾನೆ ಎಂಬುದರ ನಿರೂಪಣೆಯಿದೆ.

ಶರಣಸ್ಥಲದ ನಾಲ್ಕು ಅವಾಂತರ ಸ್ಥಲಗಳಲ್ಲಿ ಶಿವಜ್ಞಾನಸ್ವರೂಪನೇ ಆದ ಶರಣನು ಶಿವಾನಂದದಲ್ಲಿ ಮಗ್ನನಾಗಿರುವ ಸ್ಥಿತಿಯು ವರ್ಣಿಸಲ್ಪಟ್ಟಿದೆ. ಶರಣನಲ್ಲಿ ಎಲ್ಲ ತಾಮಸಭಾವಗಳು ಅಳಿದು ಸಾತ್ತ್ವಿಕಭಾವಗಳು ನೆಲೆಗೊಂಡು ಶಿವೈಕವಿಜ್ಞಾನವು ಹೇಗೆ ಬಲಿಯುತ್ತದೆ ಎಂಬುದು ಇಲ್ಲಿನ ಮುಖ್ಯ ವಿಷಯ.

ಐಕ್ಯಸ್ಥಲದಲ್ಲಿ ನಾಲ್ಕು ಸ್ಥಲಗಳಿವೆ. ಶಿವೋಽಹಂಭಾವವು ರೂಢಮೂಲವಾಗಿರುವ ಐಕ್ಯನು ಮಾಯಾಕಲ್ಪಿತ ವೈಭವವುಳ್ಳ ಜಗತ್ತನ್ನು ನೋಡುವುದೇ ಇಲ್ಲ. ತನ್ನ ಆಚಾರಗಳಿಗೆ ಅಂಟಿಕೊಳ್ಳದವನು, ಎಲ್ಲ ಕ್ರಿಯೆಗಳ ಮಧ್ಯದಲ್ಲೂ ಶಿವಯೋಗದಲ್ಲಿರುವ ಜೀವನ್ಮುಕ್ತನು, ಶಿವೈಕಭಾಜನಾತ್ಮನು ಮುಂತಾದ ವಿಷಯಗಳು ಅಲ್ಲಿ ಬಂದಿವೆ.

ಷಟ್‌ಸ್ಥಲಗಳಲ್ಲಿ ಹೇಳಿದ ಸದಾಚಾರಗಳನ್ನು ಸಂಪಾದಿಸಿಕೊಂಡ ಸಾಧಕನಿಗೆ ಜೀವನ್ಮುಕ್ತಿಪರವಾದ ೫೭ ಲಿಂಗಸ್ಥಲಗಳ ಜ್ಞಾನ ಅವಶ್ಯಕವೆಂದು ಹೇಳಿದ್ದಾರೆ. ಭಕ್ತಸ್ಥಲದ ಸಾಧಕನಿಗೆ ದೀಕ್ಷಾಗುರು, ಶಿಕ್ಷಾಗುರು, ಕ್ರಿಯಾಲಿಂಗ, ಭಾವಲಿಂಗ, ಜ್ಞಾನಲಿಂಗ, ಸ್ವಯ, ಚರ, ಪರ ಮುಂತಾದ ವಿಷಯಗಳ ಸರಿಯಾದ ತಿಳುವಳಿಕೆಯನ್ನು ನೀಡಲಾಗಿದೆ. ಮಾಹೇಶ್ವರನಿಗೆ ಶಿವಪೂಜಾಪರವಾದ ಆಗಮವೆಂಬ ಕ್ರಿಯಾಗಮ; ಶಿವಯೋಗಿಯ ಭಾವಲಕ್ಷಣಗಳನ್ನು ಸಕಲ ಶರೀರಿಗಳಲ್ಲಿ ಕಾಣುವ ಭಾವಾಗಮ; ಜ್ಞಾನಚಿಹ್ನೆಗಳೆಂಬ ಜ್ಞಾನಾಗಮ; ಶಿವಯೋಗಿಯು ಲೋಕದೇಹಿಯೆಂಬ ಸಕಾಯಸ್ಥಿತಿ; ಅವನೇ ಅಕಾಯನು, ಪರಕಾಯನು ಎಂಬುದು; ಧರ್ಮಾಚಾರ, ಭಾವಾಚಾರ, ಜ್ಞಾನಾಚಾರಗಳು, ಮುಂತಾದವುಗಳ ಅರಿವು ಬೇಕು. ಒಂಬತ್ತು ಸ್ಥಲಗಳುಳ್ಳ ಪ್ರಸಾದಿಸ್ಥಲದಲ್ಲಿ ಪ್ರಸಾದಿ ತಿಳಿಯಬೇಕಾದ ಶಿವಯೋಗಿಯ ಮಹಿಮಾತಿಶಯಗಳು ನಿರೂಪಿತವಾಗಿವೆ. ಪ್ರಾಣಲಿಂಗಿಗೆ ಪರಮಾತ್ಮ ನಿರ್ದೇಹಾಗಮ, ನಿರ್ಭಾವಾಗಮ ಮುಂತಾದವುಗಳ ವಿಷಯ ಪರಿಜ್ಞಾನವು ಆವಶ್ಯಕ. ಶರಣ ಸ್ಥಲಾಂತರ್ಗತವಾಗಿ ಮತ್ತು ಐಕ್ಯಸ್ಥಲಾಂತರ್ಗತವಾಗಿ ಆನಂದಸ್ಥಿತಿಯಲ್ಲಿರುವ, ಐಕ್ಯಸಮರಸಸ್ಥಿತಿಯಲ್ಲಿರುವ ಶಿವಯೋಗಿಯ ಸ್ವರೂಪವು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವರ್ಣಿಸಲ್ಪಟ್ಟಿದೆ. ಈ ಲಿಂಗ ಸ್ಥಲಗಳಲ್ಲಿ ತತ್ವವಿಚಾರವು ಅತ್ಯಂತ ಸೂಕ್ಷ್ಮವಾಗಿ ನಿರೂಪಿಸಲ್ಪಟ್ಟಿದೆ.

ಮೇಲೆ ನೀಡಿದ ಸ್ಥೂಲವಾದ ವಿವರಣೆಯಿಂದ ಸಿದ್ಧಾಂತಶಿಖಾಮಣಿಯ ವಿಷಯಸಂಪತ್ತು ಅಗಾಧವಾಗಿದೆಯೆಂಬುದು ಸ್ಪಷ್ಟವಾಗಿದೆ.

ಉಲ್ಲೇಖಗಳು ಮತ್ತು ಟಿಪ್ಪಣಿಗಳು

೧. ಸಿದ್ಧಾಂತ ಶಿಖಾಮಣಿ (ಸಿ.ಶಿ.) ೧. ೧೩-೨೧.

೨. ಸಿ.ಶಿ. ೧-೧೩.

೩. ಸಿ.ಶಿ. ೧-೧೭.

೪. ಸಿದ್ಧಾಂತ ಶಿಖಾಮಣಿಯ ಸೌಂದರ್ಯ ದರ್ಶನ, ಪೀಠಿಕೆಯಲ್ಲಿ.

೫. ಕ್ರಿಯಾಸಾರ (ಕ್ರಿ.ಸಾ) O.R.I., Mysore ಆವೃತ್ತಿ, ಪ್ರಥಮಭಾಗ, ಪು.೧೧ ಶ್ಲೋ.೬.

೬. ಸಿ.ಶಿ. ix -೧೩; ವೀರಶೈವಾನಂದಚಂದ್ರಿಕಾ (ವೀ. ಆ.ಚಂ., viii.೨೨. ೫೦); ಕ್ರಿ.ಸಾ., ಭಾಗ ೧, ಪು. ೧೯, ಶ್ಲೋ. ೧೦೨; ಉಪೋದ್ಘಾತವನ್ನೂ ನೋಡಿರಿ (ಪು.vii).

೭. ಕ್ರಿ.ಸಾ. ೧, ಪು. ೧೮ ಶ್ಲೋ. ೯೯.

೮. ಶ್ರೀಕಂಠಭಾ., iv ೪.೪ 'ಅವಿಭಾಗೇನ ದೃಷ್ಟತ್ವಾತ್'. ಎಂಬ ಸೂತ್ರದ ಭಾಷ್ಯದಲ್ಲಿ.

೯. S.N.Dasgupta: History of Indian philosophy, Vol. V., P.9.

೧೦. ಶ್ರೀಕರಭಾ., iv ೧ i.೧ - 'ಅಥಾತೋಬ್ರಹ್ಮಜಿಜ್ಞಾಸಾ' ಸೂತ್ರಭಾಷ್ಯದಲ್ಲಿ ಖುಗಿತ್ಯಾಹ ಪವಿತ್ರಂತೇ (ಸಿ.ಶಿ.vi. ೫೮); ಪಿಂಡತಾ ಪಿಂಡವಿಜ್ಞಾನಂ' (ಸಿ.ಶಿ., V .೨೧/೩೧); ii. ೨.೩.೭ 'ಪತ್ಯುರಸಾಮಂಜಸ್ಯಾತ್' ಸೂತ್ರ ಭಾಷ್ಯದಲ್ಲಿ ಮುಂತಾದ ಕಡೆಗಳಲ್ಲಿ.

೧೧. ಶ್ರೀಕರಭಾಷ್ಯ, ಹಯವದನರಾವ್ ಸಂಪಾದಿತ, ೧೯೩೬, ಭಾಗ ೧, ಪು.೩೧.

೧೨. ಪಂಡಿತಾರಾಧ್ಯ ಚರಿತಮು, ಉಪೋದ್ಘಾತಮು,(೧೯೩೯). ಪು. ೩೦.

೧೩. ಶ್ರೀಕರಭಾಷ್ಯ, ಓ.ಆರ್. ಐ.ಪ್ರಕಟಿತ (೧೯೭೭), ಭೂಮಿಕೆ ಪು. ೧೨೧-೧೨೨; ಶ್ರೀಕರ ಭಾಷ್ಯ, ಚತುಸ್ಸೂತ್ರೀ, ಜಂಗಮವಾಡಿ ಮಠ, ಕಾಶಿ ಪ್ರಕಾಶನ, (೧೯೫೬) ಜಗದ್ಗುರು ವೀರಭದ್ರ ಶಿವಾಚಾರ್ಯರ ಪೀಠಿಕೆ, ೯; ಬಲದೇವ ಉಪಾಧ್ಯಾಯ, ಭಾರತೀಯ ದರ್ಶನ (ಹಿಂದಿ) ಪು. ೪೭೯-ಶ್ರೀಪತಿ ಪಂಡಿತಾರಾಧ್ಯರು ೧೧೬೦ರಲ್ಲಿ ಇದ್ದರು.

೧೪. (೧) "ಮಧ್ವದ್ವೈತ-ಕ್ಷಪಣಕ ತಾರ್ಕಿಕಾದಯೋ ಜೀವಾನಾಂ ವಿಭುತ್ವಾಂಕಾರತ್ (II.೧೨-೧೮; (೨) "ಭಾಗವತ- ಪಾಂಚರಾತ್ರ-ಮಧ್ವಾದಿವೈಷ್ಣವಾನಾಂ" (II. ವಾ/೨/೮/೩); (3)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಮಧ್ವಾದಿಕೇವಲಭೇದವಾದಿನಾಂ"(II.೩/೧೫). ಇಲ್ಲಿ ಮೊದಲ ವಾಕ್ಯದಲ್ಲಿ "ಮಧ್ವ" ಪದವು ಅಪ್ರಸ್ತುತ; ಏಕೆಂದರೆ ಮಧ್ವಾಚಾರ್ಯರ ಮತದಲ್ಲಿ ಜೀವವು ವಿಭುವೆಂದು ಅಂಗೀಕೃತವಾಗಿಲ್ಲ. ಎರಡನೆ ವಾಕ್ಯದಲ್ಲಿ ಕೂಡ ಭಾಗವತ, ಪಂಚರಾತ್ರಗಳಂತೆ" ಮಧ್ವ "ಎಂಬುದು ಮತವಾಚಕವಲ್ಲ. ಮೂರನೇ ವಾಕ್ಯವೂ ಕೂಡಾ " ಮಧ್ವ" ಪದವಿರಬೇಕಾದದ್ದೇನಲ್ಲ. ಹಸ್ತ ಪ್ರತಿಗಳಲ್ಲಿ ಎಲ್ಲಿಯೂ "ಮಧ್ವ" ಪದಪ್ರಯೋಗವಿಲ್ಲ.

೧೫. "ಆ ವಾಕ್ಯಮುಲಲೋ 'ಮಧ್ವ' ಶಬ್ದಮಪ್ರಸ್ತುಮು, ಅಸಂಬದ್ಧಮನಿ ತಲಚಿ, ಹಯವದನರಾವುಗಾರಚ್ಚುಚೇಯಡಮುನಕು ಮೂಲಪ್ರತಿನಿಚ್ಚಿನ ದೇವಿಡಿ ಜಮೀನ್ದಾರುಗಾರಿಕಿ ಜಾಬು ವ್ರಾಯಗ ವಾರು ಮೂಲಮೂನು ಚೂಚಿ ಅಂದುಲೋ ಆ ಸ್ಥಲಮುಲೋ 'ಮಧ್ವ' ಶಬ್ದಮು ಲೇದನಿ ನಾಕು ವ್ರಾಸಿನಾರು. ಕಾಬಟ್ಟಿ ಶ್ರೀಪತಿಪಂಡತುನಿ ಕಾಲಮು ಕ್ರಿ.ಶ.೧೪೦೦ ಅನಿ ನಿರ್ಣಯಚಡಾನಿಕಿ ಸಾಧಕಮುಗಾ ಉಂಟುಂದನಿ ಕಾಬೋಲು ತತ್ಪರಿಷ್ಕರ್ತಲಾ ಪದಮುನಿ ಚೇರ್ಚಿ ಉಂಟಾರನಿ ನಿಶ್ಚಯಿಂಚಿಕೊನ್ನಾಮು" (ಪಂಡಿತಾರಾಧ್ಯ ಚರಿತ್ರ, ಭೂಮಿಕೆ, ಪು. ೩೦-೩೧).

೧೬. Inscriptions of Madras presidency, Vol ii, No. 305; South Indian Inscriptions, Vol. iv, P. 489, ಇವುಗಳಲ್ಲಿ ಉಲ್ಲೇಖಿತನು.

೧೭. Inscriptions M.E.R. No. 536.

೧೮. ಪಂಡಿತಾರಾಧ್ಯಚರಿತ್ರ, ಭೂಮಿಕೆ, ಪು. ೨೬ರಲ್ಲಿ ಉಲ್ಲೇಖಿಸಲ್ಪಟ್ಟಿದೆ. ಪಂಡಿತಾರಾಧ್ಯ ಚರಿತ್ರ, I.೪೦೭/೮ ಪು.ಮತ್ತು ಪಾಲ್ಕುರುಕಿ ಸೋಮನಾಥನ ತೆಲುಗು ಬಸವಪುರಾಣದಲ್ಲಿ (ಪು.೨೧೦) ಇದೇ ಪವಾಡದ ಉಲೇಖವಿದೆ. ಗುಬ್ಬಿ ಮಲ್ಲಣಾರ್ಯನ ಭಾವಚಿಂತಾರತ್ನ, ವೀರಾರಾಧ್ಯನ ಧರ್ಮಗುಪ್ತಾಭ್ಯುದಯಗಳಲ್ಲಿಯೂ ಇದರ ಉಲ್ಲೇಖವಿದೆ.

೧೯. ಪಂಡಿತಾರಾಧ್ಯ ಚರಿತ್ರೆ, ೧/೭ ಪು; ಚಿಲಕೂರಿ ನಾರಾಯಣರಾವ್ ಅವರ ಉಪೋದ್ಘಾತದಲ್ಲಿ ಮತ್ತು O.R.I (ಮೈಸೂರು) ಪ್ರಕಾಶಿತ ಶ್ರೀಕರಭಾಷ್ಯದ ಮೊದಲ ಸಂಪುಟದಲ್ಲಿ ಬರುವ ವಿದ್ವಾನ್ ನಂಜುಂಡಾರಾಧ್ಯರ ಸಂಸ್ಕೃತ ಭೂಮಿಕೆಯಲ್ಲಿ ಹೆಚ್ಚಿನ ವಿವರಗಳನ್ನು ಶಂಕೆ ಸಮಾಧಾನಗಳನ್ನು ನೋಡಿರಿ. ವಿಸ್ತಾರಭಯದಿಂದ ಇಲ್ಲಿ ಆದೆಲ್ಲವನ್ನೂ ಕೊಟ್ಟಿಲ್ಲ.

೨೦. ವೀರಶೈವದರ್ಶನ. ಪಂಪಾ ಸಾಹಿತ್ಯ ಪ್ರಕಟನಾಲಯ, ದಾವಣಗೆರೆಯಿಂದ ಪ್ರಕಾಶಿತ; ೧೯೫೫- ಈ ಗ್ರಂಥದಲ್ಲಿ ಬರುವ, ಶ್ರೀ ಟಿ.ಎಚ್.ಎಂ. ಸದಾಶಿವಯ್ಯನವರು ೧೯-೪-೧೯೫೫ರಲ್ಲಿ ನೆಲ್ಲೂರು ಪಟ್ಟಣದಲ್ಲಿ ಮಾಡಿದ ಭಾಷಣದ ಮುದ್ರಿತ ಪ್ರತಿಯ, ೫ನೇ ಪುಟವಲ್ಲಿ "ಇತ್ತೀಚೆಗೆ ಅಂದರೆ ಗತ ಶತಮಾನದ ಕೊನೆಯ ಭಾಗದಲ್ಲಿ ಸಿಕಂದರಾಬಾದಿನ ಕೆಲ ಆರಾಧ್ಯ ಪಂಡಿತರು ಸೃಷ್ಟಿಸಿದ ಶ್ರೀಕರಭಾಷ್ಯದಲ್ಲಿ" ಇತ್ಯಾದಿಯಾಗಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

-

ಸ್ವಕಪೋಲಕಲ್ಪಿತವೂ ಅಪಪ್ರಚಾರೋದ್ದೇಶಿತವೂ ಆದ ಮಾತು ಬರುತ್ತದೆ. ಈ ಮಾತು ನಿರಾಧಾರವಾದುದು ಎಂಬುದು ದೊರೆಯುವ ಹಸ್ತಪ್ರತಿಗಳ ಆಧಾರದಿಂದ ಸ್ಪಷ್ಟವಾಗುತ್ತದೆ.

೨೧. ಸಿ.ಶಿ. ii. ೨೮-೩೪ (ಪರಿಚ್ಛೇದ ಕಡೆಯ ಶ್ಲೋಕಗಳು).

೨೨. ಸಿ.ಶಿ. iii. ೬೭-೮೩.

೨೩. ಕಾಶೀನಾಥ ಶಾಸ್ತ್ರಿಗಳ ಪ್ರಸ್ತಾವನೆ. ಪು. ೯; ವೀ. ಆ.ಚಂ,ಪು. ೪೪೭ರಲ್ಲಿ ಶ್ಲೋಕ ಹೀಗೆಯೇ ಇದೆ.

೨೪. ಸಿ.ಶಿ. xi ೫೪-೫೫.

೨೫. ಸಿ.ಶಿ. v. ೪೧ ;x ೯೯,೭೧ ; xvii. ೩೬; xvii, ೩೭,೩೯ xix, ೨.

೨೬. ಸಿ.ಶಿ. x., ೬೯-೭೧.

೨೭. ಸಿ.ಶಿ. x vii. ೫೬,೬೬,೭೭.

೨೮. ಸಿ.ಶಿ. xx. ೪೭.

೨೯. ಸಿ.ಶಿ. ೨೭.

೩೦. ಶ್ರೀಕರ ಭಾ., (ORI ಆವೃತ್ತಿ) ಭಾಗ ೧. ಪು. ೮.

೩೧. ಕ್ರಿಯಾಸಾರ, (ORI ಆವೃತ್ತಿ) ಭಾಗ ೧, ಪು. ೯೬.

೩೨. ಅದೇ. ಪು. ೧೯೯.

೩೩. ವೀ. ಆ.ಚಂ (ಮೂರುಸಾವಿರ ಮಠ ಗ್ರಂಥ ಮಾಲಾ-೮), ಪು. ೧೨.

೩೪. ಸಿ.ಶಿ. x. ೯೯.

೩೫. ಸಿ.ಶಿ. x. ೭೨.

೩೬. ಅದೇ, xvii. ೫೬.

೩೭. ಅದೇ, xvii. ೬೬.

೩೮. ಅದೇ, xvii. ೭೭.

೩೯. ಅದೇ, xvii. ೭೬.

೪೦. ಅದೇ, xix. ೪೭.

೪೧. ಅದೇ, xx. ೨೭.

೪೨. ನಭವಸಾರ, ಸಂ. ೪, ಸೂ. ೨, ಪು. ೫.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೪೩. ಕೈವಲ್ಯ ಕಲ್ಪವಲ್ಲರಿ.

೪೪. ಸಿ.ಶಿ. XXV. ೨೦.

೪೫. ಸಿ.ಶಿ. V. ೧೨.

೪೬. ಅದೇ, V. ೧೪.

೪೭. ಅದೇ, i. ೨.

೪೮. ಅದೇ, i. ೪.

೪೯. ಅದೇ, i. ೧೧.

೫೦. ಅದೇ, vi. ೫೮, ೬೧.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೨. ಸಿದ್ಧಾಂತ ಶಿಖಾಮಣಿಯ ಮೂಲ ಆಕರಗಳು

– ವಿದ್ವಾನ್ ಬಿ. ರಾಜಶೇಖರಯ್ಯ

ಯಾವುದೇ ಕೃತಿಯ ಉಗಮಕ್ಕೆ ಕನಿಷ್ಠ ಯಾವುದಾದರೊಂದು ಆಧಾರ ಅಥವಾ ಮೂಲ ಅಥವಾ ಪ್ರೇರಕ ಅಂಶ ಇರಲೇಬೇಕೆಂಬುದು ಒಂದು ಸಾಮಾನ್ಯ ಹೇಳಿಕೆ. 'ರಾಮಾಯಣ', 'ಮಹಾಭಾರತ'ಗಳ ಮೂಲ ಆಕರಗಳೆಂದರೆ -ಆ ಕಾಲದಲ್ಲಿ ಹೆಚ್ಚು ಪ್ರಚಲಿತವಿದ್ದ 'ವೀರಗಾಥೆ'ಗಳು -ಎಂಬುದು ವಿಮರ್ಶಕರ ಅಭಿಪ್ರಾಯ. ಅಂತೆಯೇ ಬೃಹತ್ಕಥಾದಿಗಳಿಗೂ ಯಾವುದಾದರೊಂದು ಆಕರವಿದ್ದಿರಬೇಕು; ಅಥವಾ ಕೆಲವಕ್ಕೆ ಯಾವುದೇ ಆಕರವಿಲ್ಲದಿದ್ದರೂ, ಕೃತಿಕಾರನು ಬೇರೆ ಬೇರೆ ಅಂಶಗಳಿಂದ ಪ್ರೇರಿತನಾಗಿ ಸ್ವಯಂ ವಸ್ತುವನ್ನು ಕಲ್ಪಿಸಲೂಬಹುದು. ಈ ಒಂದು ಸಾಮಾನ್ಯ ದೃಷ್ಟಿಯಿಂದ ಪರಿಶೀಲಿಸಿದಾಗ 'ಸಿದ್ಧಾಂತ ಶಿಖಾಮಣಿ'ಗೆ ಮೂಲ ಆಕರಗಳಿರಲೇಬೇಕು -ಎಂಬುದು ಸತ್ಯವೇ ಆಗುತ್ತದೆ. ಗ್ರಂಥದ ಆಕರಗಳ ಬಗ್ಗೆ ಕೃತಿಕಾರರೇ ಹೀಗೆ ಹೇಳಿದ್ದಾರೆ- (ಪರಿಚ್ಛೇದ-೧)

ಆಲೋಕ್ಯ ಶೈವತಂತ್ರಾಣಿ ಕಾಮಿಕಾದ್ಯಾನಿ ಸಾದರಮ್।
ವಾತುಲಾಂತಾನಿ ಶೈವಾನಿ ಪುರಾಣಾನ್ಯಖಿಲಾನಿ ತು ॥ ೨೫ ॥

ವೇದಮಾರ್ಗಾವಿರೋಧೇನ ವಿಶಿಷ್ಟಾಚಾರಸಿದ್ಧಯೇ।
ಅಸನ್ಮಾರ್ಗನಿರಾಸಾಯ ಪ್ರಮೋದಾಯ ವಿವೇಕಿನಾಮ್ ॥ ೨೬ ॥

ಸರ್ವಸ್ವಂ ವೀರಶೈವಾನಾಂ ಸಕಲಾರ್ಥಪ್ರಕಾಶನಮ್।
ಅಸ್ಪೃಷ್ಟಮಖಿಲೈರ್ದೋಷೈರಾದೃತಂ ಶುದ್ಧಮಾನಸೈಃ ॥ ೨೭ ॥

ಶೈವಾಗಮೇಷು ಸರ್ವೇಷು ಪುರಾಣೇಷ್ವಖಿಲೇಷು ಚ।
ಪುರಾ ದೇವೇನ ಕಥಿತಂ ದೇವ್ಯೈ ತನ್ನಂದನಾಯ ಚ ॥ ೨೮ ॥

ತತ್ಸಂಪ್ರದಾಯಸಿದ್ಧೇನ ರೇಣುಕೇನ ಮಹಾತ್ಮನಾ।
ಗಣೇಶ್ವರೇಣ ಕಥಿತಮಗಸ್ತ್ಯಾಯ ಪುನಃ ಕ್ಷಿತೌ ॥ ೨೯ ॥

ವೀರಶೈವಮಹಾತಂತ್ರಮೇಕೋತ್ತರಶತಸ್ಥಲಮ್।
ಅನುಗ್ರಹಾಯ ಲೋಕಾನಾಮಭ್ಯದಾತ್ ಸುಧಿಯಾಂ ವರಃ ॥ ೩೦ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಮಿಕಾದಿ ವಾತುಲಾಂತ ಇಪ್ಪತ್ತೆಂಟು ಶಿವಾಗಮಗಳನ್ನೂ, ಎಲ್ಲ ಶೈವ ಪುರಾಣಗಳನ್ನೂ ಪರಿಶೀಲಿಸಿ, ವೇದಮಾರ್ಗಕ್ಕೆ ವಿರೋಧಬಾರದ ರೀತಿಯಲ್ಲಿ, ಸಮಸ್ತ ಆಚಾರಗಳನ್ನೂ ಸ್ಥಿರಪಡಿಸುವ ಸಲುವಾಗಿ, ದುರ್ಮಾರ್ಗಗಳನ್ನು ನಿರಸನಮಾಡುವ ಸಲುವಾಗಿ, ಜ್ಞಾನಿಗಳ ಮನಸ್ಸಂತೋಷಕ್ಕಾಗಿ, ವೀರಶೈವರ ಸರ್ವಸ್ವವೂ, ಸಕಲಾರ್ಥಪ್ರಕಾಶಕವೂ, ಅಖಿಲದೋಷದೂರವೂ, ಶುದ್ಧಮನಸ್ಕ ಜ್ಞಾನಿಗಳಿಂದ ಸ್ವೀಕೃತವೂ ಆಗಿರುವ ಮತ್ತು ಎಲ್ಲ ಶಿವಾಗಮಗಳಲ್ಲಿ ಹಾಗೂ ಎಲ್ಲ ಪುರಾಣಗಳಲ್ಲಿ ಶಿವನು ಪಾರ್ವತಿಗೂ ಮತ್ತು ಪುತ್ರನಾದ ಷಣ್ಮುಖನಿಗೂ ಉಪದೇಶಿಸಿರುವ ಏಕೋತ್ತರ ಶತಸ್ಥಲಾತ್ಮಕವಾದ 'ವೀರಶೈವ ಮಹಾತಂತ್ರ'ವನ್ನು, ಈ ಶಿವಸಂಪ್ರದಾಯದ ಸ್ಥಾಪಕರಾದ ಶ್ರೀ ರೇಣುಕ ಗಣಾಧೀಶ್ವರರೆಂಬ ಮಹಾತ್ಮರು ಈ ಲೋಕದಲ್ಲಿ ಅಗಸ್ತ್ಯ ಮಹರ್ಷಿಗಳಿಗೆ ಬೋಧಿಸಿರುವರಷ್ಟೆ! ಇಂತಹ ಈ ವೀರಶೈವ ಮಹಾತಂತ್ರವನ್ನೇ ಶಿವಯೋಗಿ ಶಿವಾಚಾರ್ಯನು ಲೋಕಾನುಗ್ರಹಕ್ಕಾಗಿ ಹೇಳಿರುವರು -ಅಂದರೆ, ಈ ಕೃತಿರೂಪವಾಗಿ ರಚಿಸಿರುವನು.

ಅಂದರೆ, ಈ ಕೃತಿಗೆ ಇಪ್ಪತ್ತೆಂಟು ಶಿವಾಗಮಗಳೂ, ಎಲ್ಲ ಪುರಾಣಗಳೂ ಮೂಲ ಆಕರಗಳೆಂಬುದು ಸಿದ್ಧವಾಗುತ್ತದೆ. ಇಷ್ಟೇ ಅಲ್ಲದೆ, ವೇದಾದಿಗಳೂ ಸಹ ಈ ಕೃತಿಗೆ ಮೂಲ ಆಕರಗಳೆಂಬುದನ್ನೂ ನಾವು ಅಲ್ಲಗಳೆಯುವಂತಿಲ್ಲ. ಹೇಗೆಂದರೆ-

ತ್ವನ್ಮುಖಾಚ್ಛ್ರೋತುಮಿಚ್ಛಾಮಿ ಸಿದ್ಧಾಂತಂ ಶ್ರುತಿಸಮ್ಮತಮ್।
ಸರ್ವಜ್ಞ ವದ ಮೇಸಾಕ್ಷಾಚ್ಛೈವಂ ಸರ್ವಾರ್ಥಸಾಧಕಮ್॥

(ಪರಿ. ೪-೫೧)

ಎಂಬ ಅಗಸ್ತ್ಯರ ಪ್ರಾರ್ಥನಾ ವಾಕ್ಯದ ಆಧಾರದಿಂದ, ಹಾಗೆಯೇ,

ಶೈವತಂತ್ರಮಿತಿಪ್ರೋಕ್ತಂ ಸಿದ್ಧಾಂತಾಖ್ಯಂ ಶಿವೋದಿತಮ್।
ಸರ್ವವೇದಾರ್ಥರೂಪತ್ವಾತ್ ಪ್ರಾಮಾಣಂ ವೇದವತ್ಸದಾ॥

(ಪರಿ. ೫-೮)

ಎಂಬ ಆಚಾರ್ಯರ ಉಪದೇಶದ ವಾಕ್ಯದ ಆಧಾರದಿಂದ ಈ ಕೃತಿಗೆ ನಿಗಮ-ಆಗಮ-ಪುರಾಣಾದಿಗಳ ಆಕರತ್ವ ಸಿದ್ಧವಾಗುತ್ತದೆ.

ಈ ಸಂದರ್ಭದಲ್ಲಿ ಮತ್ತೊಂದು ಸಂಗತಿಯನ್ನು ಮಾನ್ಯ ಸಹೃದಯರ ಗಮನಕ್ಕೆ ತರಬಯಸುತ್ತೇನೆ. ಏನೆಂದರೆ-

'ಉಪದೇಶಮಾಗಮೋಕ್ತಂ ಕುರ್ವಂತಿ ವಸುಧಾತಲೇ।
ತ ಏತೇ ಗುರವಃ ಸರ್ವೇ ಕೈಲಾಸಸ್ಥಗಣೇಶ್ವರಾಃ॥'

ಎಂಬ ವೀರಾಗಮದ ಈ ಪದ್ಯವನ್ನು ಪ್ರಸ್ತಾಪಿಸುತ್ತಾ- 'ಶಿವಾಗಮ ಸೌರಭ' ಗ್ರಂಥದ ನೂರಏಳನೆಯ ಪುಟದಲ್ಲಿ, ಆಸ್ಥಾನ ವಿದ್ವಾನ್ ವೇದಮೂರ್ತಿ ಶ್ರೀ ಎಂ.ಜಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಂಜುಂಡಾರಾಧ್ಯರವರು -'ಇಲ್ಲಿ ಉಕ್ತವಾಗಿರುವ ರೇಣುಕತಂತ್ರ, ದಾರುಕತಂತ್ರ, ಘಂಟಾಕರ್ಣತಂತ್ರ ಮತ್ತು ಗಜಕರ್ಣತಂತ್ರಗಳು ಮೇಲೆ ಕಂಡ ಆಚಾರ್ಯ ಪ್ರಣೀತಗಳೆಂದು ತಿಳಿದುಬರುತ್ತದೆ. ಇವುಗಳಲ್ಲಿ ರೇಣುಕತಂತ್ರವು ಶಿವಯೋಗಿ ಶಿವಾಚಾರ್ಯ ವಿರಚಿತ ಸಿದ್ಧಾಂತ ಶಿಖಾಮಣಿಯ ಮೂಲವಿರಬಹುದು. ಇನ್ನುಳಿದ ತಂತ್ರಗಳು ಉಪಲಬ್ಧವಿಲ್ಲ' -ಎಂದು ಅಭಿಪ್ರಾಯಪಟ್ಟಿರುತ್ತಾರೆ. ಬಹುಮಟ್ಟಿಗೆ 'ರೇಣುಕತಂತ್ರ'ವು ಮೂಲವಾಗಿದ್ದಿರಬಹುದು. ಆದರೆ, ಈ ಗ್ರಂಥದ ಬಗ್ಗೆ ಶ್ರೀ ಶಿವಯೋಗಿ ಶಿವಾಚಾರ್ಯರು ಯಾವುದೇ ಚಕಾರವನ್ನೂ ಎತ್ತಿದಂತೆ ಕಂಡು ಬರುತ್ತಿಲ್ಲ. ಹಾಗೆ ಇದ್ದಿದ್ದ ಪಕ್ಷದಲ್ಲಿ ಆಗಮ-ಪುರಾಣಗಳ ಜತೆಗೆ ಈ ಕೃತಿಯನ್ನೂ ಅವರು ಹೆಸರಿಸದೆ ಬಿಡುತ್ತಿರಲಿಲ್ಲವೆಂಬುದು ನನ್ನ ಅಭಿಪ್ರಾಯ.

ಇನ್ನು ಪ್ರಕೃತ ವಿಷಯಕ್ಕೆ ಬರುತ್ತೇನೆ -ಈ ಪವಿತ್ರ ಕೃತಿಯ ಮೂಲ ಆಕರಗಳನ್ನು ಪ್ರಧಾನವಾಗಿ ಶ್ರುತಿ ಅಥವಾ ನಿಗಮ (ವೇದ-ಉಪನಿಷತ್ ಇತ್ಯಾದಿಗಳ ಸಮುದಾಯ), ಆಗಮ ಮತ್ತು ಪುರಾಣ -ಎಂದು ಮೂರು ವಿಧವಾಗಿ ವಿಂಗಡಿಸಬಹುದು.

ಸಿದ್ಧಾಂತ ಶಿಖಾಮಣಿಯಲ್ಲಿ ಆದ್ಯಂತ ಪ್ರತಿಪಾದಿತವಾಗಿರುವ ಎಲ್ಲ ಅಂಶಗಳನ್ನೂ ಈ ಆಕರಗ್ರಂಥೋಕ್ತ ವಿಷಯಗಳೊಡನೆ ಹೋಲಿಸಿ ಪರಾಮರ್ಶಿಸುವುದು ಅತ್ಯಂತ ಸಾಹಸದ ಕಾರ್ಯವೇ ಹೌದು. ಆದರೆ, ಪ್ರಕೃತ ಈ ಪ್ರಬಂಧದಲ್ಲಿ ಆಯ್ದ ಕೆಲವೇ ಅಂಶಗಳನ್ನು ಪರಿಗಣಿಸಿ, ತೌಲನಿಕವಾಗಿ ಯಥಾಶಕ್ತಿ ಪರಾಮರ್ಶಿಸಿರುವ ಪ್ರಯತ್ನ ನಡೆದಿದೆ.

೧. ಪಂಚವಿಂಶತಿ ತತ್ತ್ವಗಳು :

ವೀರಶೈವ ದರ್ಶನದಲ್ಲಿ ಮೂವತ್ತಾರು ತತ್ತ್ವಗಳನ್ನು ಪ್ರತಿಪಾದಿಸಲಾಗಿದೆ. ಈ ತತ್ತ್ವಗಳನ್ನು ಶ್ರೀ ಶಿವಯೋಗಿ ಶಿವಾಚಾರ್ಯರು ಪ್ರತಿಪಾದಿಸದೇ ಇದ್ದರೂ, ಶಿವಸ್ತುತಿಯಲ್ಲಿ-

ಯಸ್ಮಿನ್ನೂರ್ಮಿಬುದ್ಬುದಾಭಾಸಃ ಷಟ್‌ತ್ರಿಂಶತ್ತತ್ತ್ವಸಂಚಯಃ।

-ಶಿವ-ಶಕ್ತಿ-ಸದಾಶಿವ-ಈಶ್ವರ-ಶುದ್ಧವಿದ್ಯಾ-ಮಾಯಾ-ಕಲಾ-ವಿದ್ಯಾರಾಗ-ಕಾಲ-ನಿಯತಿ -ಎಂಬ ಹನ್ನೊಂದು, ಮತ್ತು ಸಾಂಖ್ಯದ ಅಂಗೀಕರಿಸಿರುವ ಪುರುಷ- ಪ್ರಕೃತಿ -ಬುದ್ಧಿ-ಅಹಂಕಾರ-ಮನಸ್-ಶ್ರೋತ್ರ-ತ್ವಕ್-ನೇತ್ರ-ಜಿಹ್ವಾ-ಘ್ರಾಣ-ವಾನೆ-ಪಾಣಿ- ಪಾದ-ಪಾಯು-ಉಪಸ್ಥ-ಶಬ್ದ-ಸ್ಪರ್ಶ-ರೂಪ-ರಸ-ಗಂಧ-ಆಕಾಶ-ವಾಯು- ಅಗ್ನಿ-ಜಲ ಮತ್ತು ಪೃಥ್ವೀ -ಎಂಬ ಇಪ್ಪತ್ತೈದು -ಹೀಗೆ ಒಟ್ಟು ಮೂವತ್ತಾರು ತತ್ತ್ವಗಳು ಶಿವನೆಂಬ ಸಮುದ್ರದಲ್ಲಿ ತರಂಗ (ಅಲೆ) -ಬುದ್ಬುದ (ಗುಳ್ಳೆ)ಗಳಂತೆ ಇವೆ ಎಂದು ವರ್ಣಿಸಿರುತ್ತಾರೆ. ವೀರಶೈವದರ್ಶನವು ಈ ಮೂವತ್ತಾರು ತತ್ತ್ವಗಳನ್ನು ಅಂಗೀಕರಿಸಿದೆಯೆಂಬ ಅಂಶ ಇದರಿಂದ ಸ್ಪಷ್ಟವಾಗುತ್ತದೆ. ಈ ತತ್ತ್ವಗಳ ಪ್ರತಿಪಾದನೆ ಅಥವಾ ಸೂಚನೆ ಚಂದ್ರಜ್ಞಾನಾಗಮದಲ್ಲಿ ಹೀಗಿದೆ-

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬ್ರಹ್ಮಾದಿಸ್ತಂಭಪರ್ಯಂತಾನ್ ಪಶೂನ್ ಬಧ್ವಾ ಮಹೇಶ್ವರಃ।
ಪಾಶೈರೇತೈಃ ಪತಿರ್ದೇವಃ ಕಾರ್ಯಂ ಕಾರಯತಿ ಸ್ವತಃ ॥ ೧೩ ॥

ತಸ್ಯಾಜ್ಞಯಾ ಮಹೇಶಸ್ಯ ಪ್ರಕೃತಿಃ ಪುರುಷೋಚಿತಾಮ್।
ಬುದ್ಧಿಂ ಪ್ರಸೂತೇ ಸಾ ಬುದ್ಧಿರಹಂಕಾರಮಹಂಕೃತಿಃ ॥ ೧೪ ॥

ಇಂದ್ರಿಯಾಣಿ ದಶೈಕಂ ಚ ತನ್ಮಾತ್ರಪಂಚಕಂ ತಥಾ।
ಶಾಸನಾದ್ದೇವದೇವಸ್ಯ ಶಿವಸ್ಯ ಶಿವದಾಯಿನಃ ॥ ೧೫ ॥

ತನ್ಮಾತ್ರಾಣ್ಯಪಿ ತಸ್ಯೈವ ಶಾಸನೇನ ಮಹೀಯಸಾ।
ಮಹಾಭೂತಾನ್ಯಶೇಷಾಣಿ ಭಾವಯಂತ್ಯನುಪೂರ್ವಶಃ ॥ ೧೬ ॥

ಇತ್ಯಾದಿ. (ಪಟಲ. ೧೨, ೧೩-೧೬)

ಶಿವಮಹಾಪುರಾಣದಲ್ಲಿ ಈ ತತ್ತ್ವ ನಿರೂಪಣೆ ಹೀಗಿದೆ-

ಏತಸ್ಮಿನ್ನಂತರೇ ಕಾಲೇ ತತ್ತ್ವಾನ್ಯಾಸನ್ಮಹಾತ್ಮನಃ।
ತತ್ಪ್ರಕಾರಂ ಶೃಣು ಪ್ರಾಜ್ಞ ಗದತೋ ಮೇ ಮಹಾಮತೇ ॥ ೫೫ ॥

ಪ್ರಕೃತೇಶ್ಚ ಮಹಾನಾಸೀನ್ಮಹತಶ್ಚ ಗುಣಾಸ್ತ್ರಯಃ।
ಅಹಂಕಾರಸ್ತತೋಽಜಾತಸ್ತ್ರಿವಿಧೋ ಗುಣಭೇದತಃ ॥ ೫೬ ॥

ತನ್ಮಾತ್ರಾಶ್ಚ ತತೋ ಜಾತಾಃ ಪಂಚಭೂತಾನಿ ವೈ ತತಃ।
ತದೈವ ತಾನೀಂದ್ರಿಯಾಣಿ ಜ್ಞಾನಕರ್ಮಮಯಾನಿ ಚ ॥ ೫೭ ॥

ತತ್ತ್ವಾನಾಮಿತಿ ಸಂಖ್ಯಾನಮುಕ್ತಂ ತೇ ಋಷಿಸತ್ತಮ।
ಜಡಾತ್ಮಕಂ ಚ ತತ್ಸರ್ವಂ ಪ್ರಕೃತೇಃ ಪುರುಷಂ ವಿನಾ ॥ ೫೮ ॥

ಇತ್ಯಾದಿ. (ರುದ್ರಸಂಹಿತಾ- ಅಧ್ಯಾಯ-೬, ೫೫-೫೮)

೨. ಶಿವ-ಶಕ್ತಿಯರ ನಿತ್ಯಯೋಗ

'ಶಿವಶಕ್ತಸಮುತ್ಪನ್ನೇ ಪ್ರಪಂಚೇಽಸ್ಮಿನ್ ವಿಶಿಷ್ಯತೇ।' (ಪರಿಚ್ಛೇದ-೫, ೩೨)

-ಎಂಬ ಪಿಂಡಸ್ಥಲ ನಿರೂಪಣೆಯ ಈ ವಾಕ್ಯದಲ್ಲಿ ಶಿವ-ಶಕ್ತಿಯರ ಅವಿನಾಭಾವತ್ವವನ್ನು ಸೂಚಿಸಲಾಗಿದೆ.

ಶ್ವೇತಾಶತ್ವರೋಪನಿಷತ್ತಿನಲ್ಲಿ- 'ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನ ಬಲಕ್ರಿಯಾ ಚ' (೬-೮); ಯಜುರ್ವೇದದ ತೈತ್ತಿರೀಯ ಸಂಹಿತೆಯಲ್ಲಿ-

'ಆಖುಸ್ತೇ ರುದ್ರ ಪಶುಸ್ತಂ ಜುಷಸ್ವೈಷ ತೇ ರುದ್ರಭಾಗಃ ಸಹ ಸ್ವಸ್ರಾಂಬಿಕಯಾ ತಂ ಜುಷಸ್ವ' (೧-೮-೬) ಮತ್ತು, 'ನಮಃ ಸೋಮಾಯ ಚ ರುದ್ರಾಯ ಚ' (೪-೫-೮),

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೈವಲ್ಯೋಪನಿಷತ್ತಿನಲ್ಲಿ -'ಉಮಾಸಹಾಯಂ ಪರಮೇಶ್ವರಂ ಪ್ರಭುಮ್' (೧-೭).

ಹೀಗೆ ಶಿವ ಶಕ್ತಿಯರ ಅವಿನಾಭಾವತ್ವವನ್ನು ವಿವರಿಸುವ ಶ್ರುತ್ಯಾದಿವಾಕ್ಯಗಳು ಅನಂತಗಳುಂಟು. ಕಾಳಿದಾಸ ಮಹಾಕವಿಯ ಪ್ರಸಿದ್ಧ ಮಂಗಳ ಶ್ಲೋಕವೂ ಸಹ ಇದನ್ನೇ ಪ್ರತಿಪಾದಿಸುತ್ತದೆ-

'ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ।
ಜಗತಃ ಪಿತರೌ ವಂದೇ ಪಾರ್ವತೀಪರಮೇಶ್ವರೌ॥

(ರಘು. ಸ.೧, ಪ.೧)

ಭಾಜನ ಸ್ಥಲವನ್ನು ವಿವರಿಸುವ ಪದ್ಯಗಳಲ್ಲಿಯೂ ಪ್ರಾಸಂಗಿಕವಾಗಿ ಈ ಅಂಶವನ್ನು ಇನ್ನೂ ವಿಸ್ತಾರವಾಗಿ ಆಚಾರ್ಯರು ಪ್ರತಿಪಾದಿಸಿರುತ್ತಾರೆ-

'ಸಮಸ್ತಜಗದಂಡಾನಾಂ ಸರ್ಗಸ್ಥಿತ್ಯಂತಕಾರಣಮ್।
ವಿಮರ್ಶೋ ಭಾಸತೇ ಯತ್ರ ತದ್ಭಾಜನಮಿಹೋಚ್ಯತೇ ॥ ೩೦ ॥
ವಿಮರ್ಶಾಖ್ಯಾ ಪರಾಶಕ್ತಿರ್ವಿಶ್ವವೈಚಿತ್ರ್ಯಕಾರಿಣೀ।
ಯಸ್ಮಿನ್ ಪ್ರತಿಷ್ಠಿತಾ ಬ್ರಹ್ಮ ತದಿದಂ ವಿಶ್ವಭಾಜನಮ್ ॥ ೩೧ ॥
ಯಥಾ ಚಂದ್ರೇ ಸ್ಥಿರಾ ಜ್ಯೋತ್ಸ್ನಾ ವಿಶ್ವವಸ್ತುಪ್ರಕಾಶಿನೀ।
ತಥಾ ಶಕ್ತಿರ್ವಿಮರ್ಶಾಖ್ಯಾ ಪ್ರಕಾಶೇ ಬ್ರಹ್ಮಣಿ ಸ್ಥಿರಾ ॥ ೩೨ ॥

(ಪರಿ. ೨೦, ೩೦-೩೩)

ಪರಾಶಕ್ತಿಯ ಬಗ್ಗೆ ಶಿವಮಹಾಪುರಾಣದ ವಾಕ್ಯ ಹೀಗಿದೆ-

'ಶುದ್ಧಾ ಸ್ವಾಭಾವಿಕೀ ತಸ್ಯ ಶಕ್ತಿಃ ಸರ್ವಾತಿಶಾಯಿನೀ।
ಜ್ಞಾನಮಪ್ರತಿಮಂ ನಿತ್ಯಂ ವಪುರತ್ಯಂತನಿರ್ಮಲಮ್॥'

(ವಾಯವೀಯ ಸಂಹಿತಾ-ಅಧ್ಯಾಯ ೬, ೨೦)

ಹಾಗೆಯೇ,

'ಶಕ್ತಿಃ ಸ್ವಾಭಾವಿಕೀ ತಸ್ಯ ವಿದ್ಯಾ ವಿಶ್ವವಿಲಕ್ಷಣಾ।..... ॥ ೧ ॥
ಸಾ ಶಕ್ತಿಃ ಸರ್ವದಾ ಸೂಕ್ಷ್ಮಾ ಪ್ರಬೋಧಾನಂದರೂಪಿಣೀ।
ಶಕ್ತಿಮಾನುಚ್ಯತೇ ದೇವಃ ಶಿವಃ ಶೀತಾಂಶುಭೂಷಣಃ ॥ ೫ ॥

(ಅಧ್ಯಾಯ-೭, ೧-೫ ಮತ್ತು ೨೧)

ಮತ್ತು

ನಹಿ ಶಕ್ತಿಮತಃ ಶಕ್ತ್ಯಾ ವಿಪ್ರಯೋಗೋಽಸ್ತಿ ಜಾತುಚಿತ್।
ತಸ್ಮಾಚ್ಛಕ್ತೇಃ ಶಕ್ತಿಮತಸ್ತಾದಾತ್ಮ್ಯಾನ್ನಿರ್ವೃತಿರ್ದ್ವಯೋಃ ॥ ೨ ॥

ಇತ್ಯಾದಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಾಗೆಯೇ ಸೂಕ್ಷ್ಮಾಗ್ರಮದಲ್ಲಿ-

'ಧ್ಯಾಯಮಾನಾತ್ತತೋ ದೇವೀ ಪರಾಶಕ್ತಿರಜಾಯತ।
ಆದಿಶಕ್ತಿಸ್ತತೋ ಜಾತಾ ಪರಾಶಕ್ತ್ಯಂಶಭೇದತಃ ॥ ೨೦ ॥

ಆದಿಶಕ್ತ್ಯಂಶತಃ ಸಾಕ್ಷಾದಿಚ್ಛಾಶಕ್ತಿರಜಾಯತ।
ಇಚ್ಛಾಶಕ್ತ್ಯಂಶಭೇದೇನ ಜ್ಞಾನಶಕ್ತಿರಜಾಯತ ॥ ೨೧ ॥

ಜ್ಞಾನಶಕ್ತ್ಯಂಶಭೇದೇನ ಕ್ರಿಯಾಶಕ್ತಿರಜಾಯತ।
ಏಕೈವ ಪಂಚಧಾ ಭಿನ್ನಾ ನಿರ್ಮಲಾ ಶಿವಚಿಂತಯಾ ॥ ೨೨ ॥

(ಪಟಲ-೧, ೨೦-೨೨)

೩. ಪತಿ-ಪಶು ಮತ್ತು ಪಾಶ :

ಅನಂತ ಜೀವರುಗಳೇ ಪಶುಗಳು; ಶಿವನೇ ಪಶುಪತಿ; ಆಣವಾದಿ ಮಲಾದಿಗಳೇ ಪಾಶ. ಇದು ಸ್ಥೂಲಾರ್ಥ. ಈ ಬಗ್ಗೆ ಸಿದ್ಧಾಂತ ಶಿಖಾಮಣಿಯಲ್ಲಿ ಶಿವನನ್ನು 'ಪ್ರೇರಕ' ಎಂದು ಹೇಳಲಾಗಿದೆ-

'ಅತ್ರ ಪ್ರೇರಯಿತಾ ಶಂಭುಃ ಶುದ್ಧೋಪಾಧಿರ್ಮಹೇಶ್ವರಃ।
ಸಮಿಶ್ರೋಪಾಧಯಃ ಸರ್ವೇ ಭೋಕ್ತಾರಃ ಪಶವಃ ಸ್ಮೃತಾಃ॥

ಇತ್ಯಾದಿ. (ಪರಿ. ೫, ೩೯)

ಈ ವಸ್ತುತ್ರಯದ ಬಗ್ಗೆ ಶಿವಮಹಾಪುರಾಣ ಹೀಗೆ ಹೇಳುತ್ತಿದೆ-

ಪಶವಃ ಪರಿಕೀರ್ತ್ಯಂತೇ ಸಂಸಾರವಶವರ್ತಿನಃ ॥ ೧ ॥

ತೇಷಾಂ ಪತಿತ್ವಾದ್ದೇವೇಶಃ ಶಿವಃ ಪಶುಪತಿಃ ಸ್ಮೃತಃ।
ಮಲಮಾಯಾದಿಭಿಃ ಪಾಶೈಃ ಸ ಬಧ್ನಾತಿ ಪಶೂನ್ ಪತಿಃ ॥ ೧೨ ॥

ಇತ್ಯಾದಿ (ವಾಯವೀಯಸಂಹಿತಾ, ಅ. ೨, ೧೧-೧೨)

ಚಂದ್ರಜ್ಞಾನಾಗಮದಲ್ಲಿ -ಪಟಲ-೧ರಲ್ಲಿ ೧೦ ಮತ್ತು ೧೧ನೆಯ ಪದ್ಯಗಳ ಅನುಕ್ರಮಣಿಕೆ ಈ ಪುರಾಣದ ಪದ್ಯಗಳೇ ಆಗಿರುತ್ತವೆ.

೪. ಶಕ್ತಿಪಾತ: ಗುರುವು ತ್ರಿವಿಧ ದೀಕ್ಷೆಯನ್ನು ಶಿಷ್ಯನಿಗೆ ಕರುಣಿಸುವ ಮುನ್ನ ಶಿಷ್ಯನ'ಶಕ್ತಿಪಾತ'ವನ್ನು ಗಮನಿಸಬೇಕು.

ಇತಿ ಶುದ್ಧೇನ ಶಿಷ್ಯೇಣ ಪ್ರಾರ್ಥಿತಃ ಪರಮೋ ಗುರುಃ।
'ಶಕ್ತಿಪಾತಂ ಸಮಾಲೋಕ್ಯ ದೀಕ್ಷಯಾ ಯೋಜಯೇದಮುಮ್॥'

(ಸಿ.ಶಿ., ಪರಿ. ೬,೧೦)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಶಕ್ತಿಪಾತ'ವೆಂದರೆ, ಶಿಷ್ಯನ ಹೃದಯದಲ್ಲಿ 'ತಾನು ಶಿವಾದ್ವೈತರೂಪ ಮೋಕ್ಷವನ್ನು ಹೊಂದಬೇಕು' -ಎಂಬ ಬಯಕೆಯ ಹುಟ್ಟುವಿಕೆ. ಇದನ್ನು ಶಿವಮಹಾಪುರಾಣವು ಹೀಗೆ ವಿವರಿಸುತ್ತದೆ-

'ಶಕ್ತಿಪಾತಾನುಸಾರೇಣ ಶಿಷ್ಯೋಽನುಗ್ರಹಮರ್ಹತಿ।
ಶೈವಧರ್ಮಾನುಸಾರಸ್ಯ ತನ್ಮೂಲತ್ವಾತ್ ಸಮಾಸತಃ ॥ ೧೨ ॥

ಯತ್ರ ಶಕ್ತಿರ್ನ ಪತಿತಾ ತತ್ರ ಶುದ್ಧಿರ್ನಜಾಯತೇ।
ನ ವಿದ್ಯಾ ನ ಶಿವಾಚಾರೋ ನ ಮುಕ್ತಿರ್ನಚ ಸಿದ್ಧಯಃ ॥ ೧೩ ॥

ತಸ್ಮಾಲ್ಲಿಂಗಾನಿ ಸಂವೀಕ್ಷ್ಯ ಶಕ್ತಿಪಾತಸ್ಯ ಭೂಯಸಃ।
ಜ್ಞಾನೇನ ಕ್ರಿಯಯಾ ವಾಥ ಗುರುಃ ಶಿಷ್ಯಂ ವಿಶೋಧಯೇತ್॥ ೧೪ ॥

(ಅಧ್ಯಾಯ-೧೫, ೧೨-೧೪)

೫. ದೀಕ್ಷಾ : 'ದೀಕ್ಷಾ' ಪದದ ನಿರ್ವಚನವನ್ನು ಸಿದ್ಧಾಂತ ಶಿಖಾಮಣಿಯಲ್ಲಿ ಹೀಗೆ ಕಾಣಬಹುದು-

'ದೀಯತೇ ಚ ಶಿವಜ್ಞಾನಂ ಕ್ಷೀಯತೇ ಪಾಶಬಂಧನಮ್।
ಯಸ್ಮಾದತಃ ಸಮಾಖ್ಯಾತಾ ದೀಕ್ಷೇತೀಯಂ ವಿಚಕ್ಷಣೈಃ॥

(ಪರಿ. ೬,೧೧)

ಮಹಾಪುರಾಣದ ೧೫ನೆ ಅಧ್ಯಾಯದಲ್ಲಿ ದೀಕ್ಷಾ ಶಬ್ದದ ನಿರ್ವಚನ ಹೀಗೆ ಕಂಡುಬರುತ್ತದೆ-

'ದೀಯತೇ ಯೇನ ವಿಜ್ಞಾನಂ ಕ್ಷೀಯತೇ ಪಾಶಬಂಧನಮ್।
ತಸ್ಮಾತ್ಸಂಸ್ಕಾರ ಏವಾಯಂ ದೀಕ್ಷೇತ್ಯಪಿ ಚ ಕಥ್ಯತೇ ॥ ೫ ॥

ಕಾರಣಾಗಮದಲ್ಲಿ ಹೀಗೆ ವಿವೃತವಾಗಿರುತ್ತದೆ-

'ದೀಯತೇ ಲಿಂಗಸಂಬಂಧಃ ಕ್ಷೀಯತೇ ಚ ಮಲತ್ರಯಂ।
ದೀಯತೇ ಕ್ಷೀಯತೇ ಯಸ್ಮಾತ್ ಸಾ ದೀಕ್ಷೇತಿ ನಿಗದ್ಯತೇ॥'

(ಕ್ರಿಯಾಪಾದ, ಪಟಲ-೧, ೧೨)

೬. ಲಿಂಗಃ 'ಲಿಂಗ' ಪದದ ನಿರ್ವಚನ ಸಿದ್ಧಾಂತ ಶಿಖಾಮಣಿಯಲ್ಲಿ ಹೀಗಿರುತ್ತದೆ-

'ಲಯಂ ಗಚ್ಛತಿ ಯತ್ರೈವ ಜಗದೇತಚ್ಚರಾಚರಮ್।
ಪುನಃ ಪುನಃ ಸಮುತ್ಪತ್ತಿಂ ತಲ್ಲಿಂಗಂ ಬ್ರಹ್ಮ ಶಾಶ್ವತಮ್॥'

(ಪರಿ. ೬, ೩೬)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮತ್ತು,

'ಪೀಠಿಕಾ ಪರಮಾ ಶಕ್ತಿರ್ಲಿಂಗಂ ಸಾಕ್ಷಾತ್ಪರಃ ಶಿವಃ।
ಶಿವಶಕ್ತಿಸಮಾಯೋಗಂ ವಿಶ್ವಂ ಲಿಂಗಂ ತದುಚ್ಯತೇ॥'

(ಪರಿ.೧೧, ೩೨)

ಸೂಕ್ಷ್ಮಾಗಮದಲ್ಲಿ ಹೀಗೆ ಹೇಳಲಾಗಿದೆ-

'ನಾದರೂಪಃ ಶಿವಃ ಸಾಕ್ಷಾಲ್ಲಿಂಗಮಿತ್ಯಭಿಧೀಯತೇ।
ತತ್ಪೀಠಿಕಾ ಮಹಾಶಕ್ತಿಃ ಸಾ ಚ ವೈ ಬಿಂದುರೂಪಿಣೀ।
ತಯೋಃ ಸಮ್ಮೇಲನಾದ್ದೇವಿ ಕಲಾ ತತ್ರ ಪ್ರತಿಷ್ಠಿತಾ ॥ ೩ ॥

ಸಾ ಕಲಾ ಪರಮಾ ಸೂಕ್ಷ್ಮಾ ವ್ಯಾಪ್ತಾ ಸರ್ವತ್ರ ಸರ್ವದಾ।
ತಸ್ಮಾಲ್ಲಿಂಗಮಿತಿಖ್ಯಾತಂ ನಾದಬಿಂದುಕಲಾತ್ಮಕಮ್ ॥ ೪ ॥

ಲಿಕಾರೋ ಲಯಬುದ್ಧಿಸ್ಥೋ ಬಿಂದುನಾ ಸ್ಥಿತಿರುಚ್ಯತೇ।
ಗಕಾರಾತ್ ಸೃಷ್ಟಿರಿತ್ಯುಕ್ತಾ ಲಿಂಗಂ ಸೃಷ್ಟ್ಯಾದಿಕಾರಣಮ್ ॥ ೫ ॥

....

ಲಿಂಗಂ ಶೈವಮಿದಂ ಸಾಕ್ಷಾಚ್ಛಿವಶಕ್ತ್ಯುಭಯಾತ್ಮಕಮ್।
ಧ್ಯಾತವ್ಯಮರ್ಚನೀಯಂ ಚ ಭುಕ್ತಿಮುಕ್ತಿಫಲೇಚ್ಛುನಾ ॥ ೭ ॥

ಇತ್ಯಾದಿ (ಪಟಲ-೬, ೩-೭)

ಶಿವಮಹಾಪುರಾಣ ಈ ಬಗ್ಗೆ ಹೀಗೆ ವಿವರ ನೀಡುತ್ತದೆ-

'ಅವ್ಯಕ್ತಂ ಲಿಂಗಮಾಖ್ಯಾತಂ ತ್ರಿಗುಣಪ್ರಭವಾಪ್ಯಯಮ್।
ಅನಾದ್ಯನಂತಂ ವಿಶ್ವಸ್ಯ ಯದುಪಾದಾನಕಾರಣಮ್ ॥ ೭ ॥

ತದೇವ ಮೂಲಪ್ರಕೃತಿರ್ಮಾಯಾ ಚ ಗಗನಾತ್ಮಿಕಾ।
ತತ ಏವ ಸಮುತ್ಪನ್ನಂ ಜಗದೇತಚ್ಚರಾಚರಮ್ ॥ ೮ ॥

....

ತತೋ ಜಾತಸ್ಯ ವಿಶ್ವಸ್ಯ ತತ್ರೈವ ವಿಲಯೋ ಯತಃ ॥ ೧೧ ॥

ಅನೇನ ಲಿಂಗತಾ ತಸ್ಯ ಭವೇನ್ನಾನ್ಯೇನ ಕೇನಚಿತ್।
ಲಿಂಗಂ ಚ ಶಿವಯೋರ್ದೇಹಸ್ತಾಭ್ಯಾಂ ಯಸ್ಮಾದಧಿಷ್ಠಿತಮ್ ॥ ೧೨ ॥

ಅತಸ್ತತ್ರ ಶಿವಃ ಸಾಂಬೋ ನಿತ್ಯಮೇವ ಸಮರ್ಚ್ಯತೇ।
ಲಿಂಗವೇದೀ ಮಹಾದೇವೀ ಲಿಂಗಂ ಸಾಕ್ಷಾನ್ಮಹೇಶ್ವರಃ ॥ ೧೩ ॥

ಇತ್ಯಾದಿ (ಅಧ್ಯಾಯ-೩೪, ೩-೧೭)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೭. ದಾನ : ವೀರಶೈವನು ಗುರು-ಲಿಂಗ-ಜಂಗಮ ದಾಸೋಹಿಯಾಗಿರಬೇಕು -ಎಂಬಂಶವನ್ನು 'ತ್ರಿವಿಧ ಸಂಪತ್ತಿ' ಮೊದಲಾದ ಸ್ಥಲಗಳು ವಿವರಿಸುತ್ತವೆ. ಅದರಲ್ಲಿ 'ಸಹಜದಾನಸ್ಥಲ'ವು ಹೀಗೆ ಹೇಳುತ್ತದೆ-

'ಶಿವಯೋಗೀ ಶಿವಃ ಸಾಕ್ಷಾಚ್ಛಿವಜ್ಞಾನಮಹೋದಧಿಃ।
ಯತ್ಕಿಂಚಿದ್ದೀಯತೇ ತಸ್ಮೈ ತದ್ದಾನಂ ಪಾರಮಾರ್ಥಿಕಮ್ ॥ ೮೮ ॥

ಶಿವಯೋಗೀ ಮಹಾಪಾತ್ರಂ ಸರ್ವೇಷಾಂ ದಾನಕರ್ಮಣಿ।
ತಸ್ಮಾನ್ನಾಸ್ತಿ ಪರಂ ಕಿಂಚಿತ್ಪಾತ್ರಂ ಶಾಸ್ತ್ರವಿಚಾರತಃ ॥ ೮೯ ॥

ಭಿಕ್ಷಾಮಾತ್ರಪ್ರದಾನೇನ ಶಾಂತಾಯ ಶಿವಯೋಗಿನೇ।
ಯತ್ಫಲಂ ಲಭ್ಯತೇ ನೈತದ್ಯಜ್ಞಕೋಟಿಶತೈರಪಿ ॥ ೯೦ ॥

ಶಿವಯೋಗಿನಿ ಸಂತೃಪ್ತೇ ತೃಪ್ತೋ ಭವತಿ ಶಂಕರಃ।
ತತ್ತೃಪ್ತ್ಯಾ ತನ್ಮಯಂ ವಿಶ್ವಂ ತೃಪ್ತಿಮೇತಿ ಚರಾಚರಮ್ ॥ ೯೧ ॥
ತಸ್ಮಾತ್ಸರ್ವಪ್ರಯತ್ನೇನ ಯೇನ ಕೇನಾಪಿ ಕರ್ಮಣಾ।
ತೃಪ್ತಿಂ ಕುರ್ಯಾತ್ಸದಾಕಾಲಮನ್ನಾದ್ಯೈಃ ಶಿವಯೋಗಿನಃ ॥ ೯೨ ॥

ಈ ಬಗ್ಗೆ ಶಿವ ಮಹಾಪುರಾಣದ ವಾಯವೀಯ ಸಂಹಿತೆಯಲ್ಲಿ-

'ದ್ವಿಜಾನಾಂ ವೇದವಿದುಷಾಂ ಕೋಟಿಂ ಸಂಪೂಜ್ಯ ಯತ್ಫಲಮ್।
ಭಿಕ್ಷಾಮಾತ್ರಪ್ರದಾನೇನ ತತ್ಫಲಂ ಶಿವಯೋಗಿನೇ ॥ ೩೬ ॥

ಯಜ್ಞಾಗ್ನಿಹೋತ್ರದಾನೇಷು ತೀರ್ಥಹೋಮೇಷು ಯತ್ಫಲಮ್।
ಯೋಗಿನಾಮನ್ನದಾನೇನ ತತ್ಸಮಸ್ತಂ ಫಲಂ ಲಭೇತ್ ॥ ೩೭ ॥

ಇತ್ಯಾದಿ (ಅಧ್ಯಾಯ-೩೯)

೮. ಮಂತ್ರ: ಸಿದ್ಧಾಂತ ಶಿಖಾಮಣಿಯ ಎಂಟನೆಯ ಪರಿಚ್ಛೇದದಲ್ಲಿ ಮಂತ್ರದ ಬಗ್ಗೆ ಹೀಗೆ ಹೇಳಲಾಗಿದೆ-

'ತಸ್ಯ ವಾಚಕಮಂತ್ರೋಽಯಂ ಸರ್ವಮಂತ್ರೈಕಕಾರಣಮ್ ॥ ೫ ॥
ತಸ್ಯಾಭಿಧಾನಮಂತ್ರೋಽಯಮಭಿಧೇಯಶ್ಚ ಸ ಸ್ಮೃತಃ।
ಅಭಿಧಾನಾಭಿಧೇಯತ್ವಾನ್ಮಂತ್ರಾತ್‌ಸಿದ್ಧಃ ಪರಃ ಶಿವಃ ॥ ೬ ॥

ನಮಃಶಬ್ದಂ ವದೇತ್ಪೂರ್ವಂ ಶಿವಾಯೇತಿ ತತಃ ಪರಮ್।
ಮಂತ್ರಃ ಪಂಚಾಕ್ಷರೋ ಹ್ಯೇಷ ಸರ್ವಶ್ರುತಿಶಿರೋಗತಃ ॥ ೭ ॥

ಶಿವಮಹಾಪುರಾಣದ ವಾಯವೀಯ ಸಂಹಿತೆಯ ಹನ್ನೆರಡನೆಯ ಅಧ್ಯಾಯದಲ್ಲಿ ಮಂತ್ರದ ಬಗ್ಗೆ ಹೀಗೆ ಹೇಳಲಾಗಿದೆ-

'ಮಂತ್ರಂ ಸುಖಮುಖೋಚ್ಚಾರ್ಯಮಶೇಷಾರ್ಥಪ್ರಸಿದ್ಧಯೇ।
ಪ್ರಾಹೋಂ ನಮಃಶಿವಾಯೇತಿ ಸರ್ವಜ್ಞಃ ಸರ್ವದೇಹಿನಾಮ್ ॥ ೬ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತದ್ಬೀಜಂ ಸರ್ವವಿದ್ಯಾನಾಂ ಮಂತ್ರಮಾದ್ಯಂ ಷಡಕ್ಷರಮ್।
ಅತಿಸೂಕ್ಷ್ಮಂ ಮಹಾರ್ಥಂ ಚ ಜ್ಞೇಯಂ ತದ್ವಟಬೀಜವತ್ ॥ ೭ ॥
ದೇವೋ ಗುಣತ್ರಯಾತೀತಃ ಸರ್ವಜ್ಞಃ ಸರ್ವಕೃತ್ಪ್ರಭುಃ।
ಓಮಿತ್ಯೇಕಾಕ್ಷರೇ ಮಂತ್ರೇ ಸ್ಥಿತಃ ಸರ್ವಗತಃ ಶಿವಃ ॥ ೮ ॥
ಈಶಾನಾದ್ಯಾನಿ ಸೂಕ್ಷ್ಮಾಣಿ ಬ್ರಹ್ಮಾಣ್ಯೇಕಾಕ್ಷರಾಣಿ ತು।
ಮಂತ್ರೇ ನಮಃಶಿವಾಯೇತಿ ಸಂಸ್ಥಿತಾನಿ ಯಥಾಕ್ರಮಮ್ ॥ ೯ ॥
ಮಂತ್ರೇ ಷಡಕ್ಷರೇ ಸೂಕ್ಷ್ಮೇ ಪಂಚಬ್ರಹ್ಮತನುಃ ಶಿವಃ।
ವಾಚ್ಯ-ವಾಚಕಭಾವೇನ ಸ್ಥಿತಃ ಸಾಕ್ಷಾತ್ ಸ್ವಭಾವತಃ॥
ವಾಚ್ಯಃ ಶಿವೋಽಪ್ರಮೇಯತ್ವಾನ್ಮಂತ್ರಸ್ತದ್ವಾಚಕಃ ಸ್ಮೃತಃ ॥ ೧೦ ॥
....

ತಸ್ಯಾಭಿಧಾನ ಮಂತ್ರೋಽಯಮಭಿಧೇಯಶ್ಚ ಸ ಸ್ಮೃತಃ।
ಅಭಿಧಾನಾಭಿಧೇಯತ್ವಾನ್ಮಂತ್ರಸಿದ್ಧಃ ಪರಶ್ಶಿವಃ ॥ ೧೯ ॥
ಇತ್ಯಾದಿ

ಹಾಗೆಯೇ ಚಂದ್ರಜ್ಞಾನಾಗಮದ ಎಂಟನೇ ಪಟಲದಲ್ಲಿ-

'ಆದೌ ನಮಃ ಪ್ರಯೋಕ್ತವ್ಯಂ ಶಿವಾಯೇತಿ ತತಃ ಪರಮ್।
ಸೈಷಾ ಪಂಚಾಕ್ಷರೀ ವಿದ್ಯಾ ಸರ್ವಶ್ರುತಿಶಿರೋಗತಾ ॥ ೫ ॥
....

ಇಯಂ ಪ್ರಣವಪೂರ್ವಾತು ಷಡಕ್ಷರೀತಿ ಕಥ್ಯತೇ ॥ ೯ ॥
ಇತ್ಯಾದಿ

೯. ಜಪತ್ರೈವಿಧ್ಯ : ಇಷ್ಟಲಿಂಗಪೂಜೆಯ ಸಮಯದಲ್ಲಿ ಓಂಕಾರ ಸಹಿತ ಪಂಚಾಕ್ಷರ ಮಹಾಮಂತ್ರದ ಜಪವು ಅತ್ಯವಶ್ಯ. ಈ ಜಪವು ಮೂರು ವಿಧ (ಪರಿ.೮, ೨೬-೩೨)

ಜಪಸ್ತು ತ್ರಿವಿಧಃ ಪ್ರೋಕ್ತೋ ವಾಚಿಕೋಪಾಂಶುಮಾನಸಃ ॥ ೨೬ ॥
ಶ್ರೂಯತೇ ಯಸ್ತು ಪಾರ್ಶ್ವಸ್ಥೈರ್ಯಥಾ ವರ್ಣಸಮನ್ವಯಃ।
ವಾಚಿಕಃ ಸ ತು ವಿಜ್ಞೇಯಃ ಸರ್ವಪಾಪಪ್ರಭಂಜನಃ ॥ ೨೭ ॥
ಈಷತ್ ಸ್ಪೃಷ್ಟಾಧರಪುಟಂ ಯೋ ಮಂದಮಭಿಧೀಯತೇ।
ಪಾರ್ಶ್ವಸ್ಥೈ ರಶ್ರುತಃ ಸೋಽಯಮುಪಾಂಶುಃ ಪರಿಕೀರ್ತಿತಃ ॥ ೨೮ ॥
ಅಸ್ಪೃಷ್ಟಾಧರಮಸ್ಪಂದಿ ಜಿಹ್ವಾಗ್ರಂ ಯೋಽಂತರಾತ್ಮನಾ।
ಭಾವ್ಯತೇ ವರ್ಣರೂಪೇಣ ಸ ಮಾನಸ ಇತಿ ಸ್ಮೃತಃ ॥ ೨೯ ॥
....

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಾಚಿಕಾತ್ತದುಪಾಂಶೋಶ್ಚ ಜಪಾದಸ್ಯ ಮಹಾಮನೋಃ।
ಮಾನಸೋ ಹಿ ಜಪಃ ಶ್ರೇಷ್ಠೋ ಘೋರಸಂಸಾರನಾಶಕಃ ॥ ೩೨ ॥

ಈ ಬಗ್ಗೆ ಶಿವಮಹಾಪುರಾಣದ ವಾಕ್ಯ ಹೀಗಿದೆ- (ಅಧ್ಯಾಯ-೧೨)

'ಉತ್ತಮಂ ಮಾನಸಂ ಜಾಪ್ಯಮುಪಾಂಶುಶ್ಚೈವ ಮಧ್ಯಮಮ್।
ಅಧಮಂ ವಾಚಿಕಂ ಪ್ರಾಹುರಾಗಮಾರ್ಥವಿಶಾರದಾಃ ॥ ೨೪ ॥'

ಚಂದ್ರಜ್ಞಾನಾಗಮದ ಎಂಟನೆಯ ಪಟಲದಲ್ಲಿಯೂ ಇದೇ ಅಭಿಪ್ರಾಯವಿದೆ-

'ಉತ್ತಮೋ ಮಾನಸಃ ಪ್ರೋಕ್ತ ಉಪಾಂಶುರ್ಮಧ್ಯಮಸ್ತಥಾ।
ಅಧಮೋ ವಾಚಿಕಃ ಪ್ರೋಕ್ತ ಇತ್ಯೇತಚ್ಛಿವಶಾಸನಮ್ ॥ ೫೬ ॥

ಇತ್ಯಾದಿ-

ಹೀಗೆ, ಮಾಯಾ, ಮಲತ್ರಯ, ಭಸ್ಮ, ರುದ್ರಾಕ್ಷ, ಆಚಾರಸಂಪತ್ತಿ, ಮೋಕ್ಷ, ದಾರ್ಶನಿಕ ವಿಚಾರಗಳು- ಇತ್ಯಾದಿ ಎಲ್ಲ ಅಂಶಗಳನ್ನೂ ನಾವು ಸಮಗ್ರವಾಗಿ ಪರಿಶೀಲಿಸಬಹುದು. ಹೀಗೆ ಪರಿಶೀಲಿಸುವಾಗ ಅನೇಕ ಪದಗಳು, ವಾಕ್ಯಗಳು, ಶ್ಲೋಕ ಪಾದಗಳು, ಶ್ಲೋಕಾರ್ಧಗಳು ಅಥವಾ ಸಮಗ್ರ ಶ್ಲೋಕಗಳು ಗ್ರಂಥಗಳಲ್ಲಿ ಏಕಪ್ರಕಾರವಾಗಿರುವುದನ್ನು ನಾವು ಮನಗಾಣಬಹುದು. ಈಗ ನಾನು ಆರಿಸಿರುವ ಈ ಕೆಲವೇ ಉದಾಹರಣೆಗಳಲ್ಲಿ ಈ ಅಂಶ ಕಂಡುಬಂದಿದೆ. ಇದಕ್ಕೆ ಕಾರಣವೇನೇ ಇರಲಿ, ವೇದ-ವೇದಾಂತ -ಆಗಮ- ಪುರಾಣಾದಿಗಳ ಸಾರಸರ್ವಸ್ವವೇ ಈ ಸಿದ್ಧಾಂತ ಶಿಖಾಮಣಿ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆದ್ದರಿಂದಲೇ ಈ ಗ್ರಂಥದ ಮಹತ್ತ್ವವನ್ನು ಶ್ರೀ ಶಿವಯೋಗಿ ಶಿವಾಚಾರ್ಯರು ಕಟ್ಟಕಡೆಯಲ್ಲಿ ಹೀಗೆ ನಿರೂಪಿಸಿರುತ್ತಾರೆ-

ಶ್ರೀವೇದಾಗಮವೀರಶೈವಸರಣಿಂ ಶ್ರೀಷಟ್‌ಸ್ಥಲೋದ್ಯನ್ಮಣಿಮ್।
ಶ್ರೀಜೀವೇಶ್ವರಯೋಗಪದ್ಮತರಣೀಂ ಶ್ರೀಗೋಪ್ಯಚಿಂತಾಮಣಿಮ್॥
ಶ್ರೀಸಿದ್ಧಾಂತ ಶಿಖಾಮಣಿಂ ಲಿಖತಿ ಯಸ್ತಂ ಲೇಖಯತ್ಯಾದರಾತ್।
ಶ್ರೋತಾ ಶ್ರಾವಯಿತಾ ಸ ಯಾತಿ ವಿಮಲಾಂ ಭುಕ್ತಿಂ ಚ ಮುಕ್ತಿಂ
ಪರಾಮ್॥

ಹೀಗೆ, ಕೇವಲ ಕೆಲವೇ ಅಂಶಗಳ ಆಧಾರದ ಮೇಲೆ ಕೇವಲ ಆಯ್ದ ಎರಡು-ಮೂರು ಗ್ರಂಥಗಳ ವಾಕ್ಯಗಳನ್ನು ಹೋಲಿಸಿ, ಪ್ರಕೃತ ವಿಷಯವನ್ನು ಈ ಹಲವು ತೊದಲು ನುಡಿಗಳ ಮುಖಾಂತರ ಮಾನ್ಯ ಸಹೃದಯರಾದ ತಮ್ಮ ಮುಂದೆ ಮಂಡಿಸಿರುತ್ತೇನೆ. ಇದು ಅಪಾರ ಸಾಗರದಲ್ಲಿ ಒಂದು ಜಲಬಿಂದುವನ್ನು ಪ್ರದರ್ಶಿಸುವ ಪ್ರಯತ್ನವಷ್ಟೆ!

❑

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೩. ಸ್ಥಲಪರಿಕಲ್ಪನೆ ಮತ್ತು ಏಕೋತ್ತರಶತಸ್ಥಲ ವ್ಯವಸ್ಥೆ

- ವಿದ್ವಾನ್ ಪಿ.ಎಸ್. ರಾಜಶೇಖರಯ್ಯ

ವ್ಯಾಸ ಮಹರ್ಷಿಗಳು ಶ್ರೀಕೃಷ್ಣಾರ್ಜುನ ಸಂವಾದವನ್ನು ಸಂಗ್ರಹಿಸಿ ಭಗವದ್ಗೀತೆಯನ್ನು ರಚಿಸಿರುವಂತೆ ಶ್ರೀ ಶಿವಯೋಗಿ ಶಿವಾಚಾರ್ಯರು ಶ್ರೀ ರೇಣುಕಾಗಸ್ತ್ಯ ಸಂವಾದವನ್ನು ಸಂಗ್ರಹಿಸಿ ಸಿದ್ಧಾಂತ ಶಿಖಾಮಣಿಯನ್ನು ರಚಿಸಿರುತ್ತಾರೆ. ಬೌದ್ಧಾದಿ ಪ್ರತಿಕೂಲ ಸಿದ್ಧಾಂತ ಖಂಡನಕ್ಕಾಗಿ, ಶಿವಾಗಮಜ್ಞಾನದ ಪರಿಣತಿಯಿಂದ ಶಿವತತ್ತ್ವಜ್ಞಾನಿಯೂ ವೀರಶೈವ ಧರ್ಮಮಾರ್ಗಪ್ರವರ್ತಕನೂ ಆದ ಶಿವಯೋಗಿ ಶಿವಾಚಾರ್ಯನು ಕಾಮಿಕಾದಿ ವಾತುಲಾಂತವಾದ ಇಪ್ಪತ್ತೆಂಟು ಶಿವಾಗಮಗಳನ್ನೂ, ಸಮಸ್ತ ಪುರಾಣಗಳನ್ನೂ ಕೂಲಂಕಷವಾಗಿ ಪರಾಮರ್ಶಿಸಿ, ಸಕಲನಿಗಮಾಗಮಾರ್ಥ ಪ್ರಕಾಶಕವಾದ, ನಿರ್ಮಲ ಹೃದಯವಾದ ಜ್ಞಾನಿಗಳಿಂದ ಅಂಗೀಕೃತವಾದ, ನೂರೊಂದು ಸ್ಥಲಗಳಿಂದ ವಿಭೂಷಿತವಾದ, ಲೋಕಾನುಗ್ರಹಕ್ಕಾಗಿ ಶ್ರೀ ಜಗದ್ಗುರು ರೇಣುಕಗಣಾಧೀಶ್ವರರಿಂದ ಅಗಸ್ತ್ಯ ಮಹರ್ಷಿಗಳಿಗೆ ಉಪದಿಷ್ಟವಾದ ವೀರಶೈವ ಮಹಾಶಾಸ್ತ್ರವನ್ನು ಗ್ರಂಥಸ್ಥವಾಗಿ ನಿರೂಪಿಸಿರುವನು. "ವೇದಾಂತಸಾರ", "ವೀರಶೈವ ಚಿಂತಾಮಣಿ' ಮೊದಲಾದ ಗ್ರಂಥಕಾರರು ಇದನ್ನು 'ರೇಣುಕಾಗಮ' ಎಂಬ ನಾಮಾಂತರದಿಂದಲೂ ಉಲ್ಲೇಖಿಸಿರುವರು. ಈ ಗ್ರಂಥವು 'ಸಿದ್ಧಾಂತಾಗಮ'ವೆಂಬ ಪರ್ಯಾಯ ನಾಮಕ ಸಿದ್ಧಾಗಮದ ಸಾರರೂಪವಾಗಿರುವುದೆಂಬ ವಿಷಯವು ಶ್ರೀಪತಿ ಪಂಡಿತರ ಶ್ರೀಕರ ಭಾಷ್ಯದಿಂದ ತಿಳಿದುಬರುತ್ತದೆ. ಇದು ತನ್ನ ಹೆಸರಿಗೆ ತಕ್ಕಂತೆ ಸಿದ್ಧಾಂತ ತತ್ತ್ವವನ್ನು ಪ್ರತಿಪಾದಿಸತಕ್ಕ ಸಮಸ್ತ ಗ್ರಂಥಗಳಲ್ಲಿ ಶಿಖಾಮಣಿಯಂತೆ ಒಪ್ಪುತ್ತಿರುವುದು. ಈ ಗ್ರಂಥವು ಬಹು ಹೃದಯಂಗಮವಾದ ಪ್ರಾಂಜಲವೂ ಸಮಧುರವೂ ಆದ ಸರಳ ಸಂಸ್ಕೃತ ಭಾಷೆಯಲ್ಲಿ ಪದ್ಯರೂಪದಲ್ಲಿ ರಚಿಸಲ್ಪಟ್ಟಿರುತ್ತದೆ. ಪದ್ಯರೂಪದಲ್ಲಿ ಸ್ವಾಭಾವಿಕವಾಗಿ ಒಂದು ಬಗೆಯ ಲಾಲಿತ್ಯವೂ, ಆಕರ್ಷಣಶಕ್ತಿಯೂ, ಮನೋಹರತೆಯೂ ಇರುವುದಲ್ಲದೇ ಭಾವವ್ಯಕ್ತಿಯ ಪ್ರಧಾನಸಾಧನವೂ ಆಗಿದೆ. ವೀರಶೈವ ಸಿದ್ಧಾಂತ ಪ್ರತಿಪಾದಕ ಗ್ರಂಥಗಳಲ್ಲೆಲ್ಲಾ ಈ ಗ್ರಂಥದ ಹೆಸರು ಉಲ್ಲೇಖಿತವಾಗಿರುವುದು ಇದರ ಪ್ರಾಚೀನತೆ ಮತ್ತು ಮಹತ್ತ್ವಕ್ಕೆ ಕುರುಹಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅನುಬಂಧ ಚತಷ್ಟಯ :

ವೀರಶೈವ ಶಾಸ್ತ್ರವು ಸ್ಥಲಭೇದದಿಂದಲೂ ಆಯಾ ಸ್ಥಲಗಳಲ್ಲಿ ಉಕ್ತವಾಗಿರುವ ಆಚಾರ ಭೇದದಿಂದಲೂ, ಅಧಿಕಾರಿ ಭೇದದಿಂದಲೂ ಆರು ಪ್ರಕಾರವಾಗಿರುವುದು. ಈ ಶಾಸ್ತ್ರಕ್ಕೆ ವೀರಶೈವ ಧರ್ಮನಿಷ್ಠನಾದ ಮುಮುಕ್ಷುವೇ ಅಧಿಕಾರಿಯು, ಶಿವಚೈತನ್ಯರೂಪ ಸಾಯುಜ್ಯ ಮುಕ್ತಿಯೇ ಪ್ರಯೋಜನವು, ಷಟ್‌ಸ್ಥಲಾಂತರ್ಗತ ಏಕೋತ್ತರಶತಸ್ಥಲಗಳೇ ವಿಷಯವು. ಈ ವಿಷಯಕ್ಕೂ ಶಾಸ್ತ್ರಕ್ಕೂ ಪ್ರತಿಪಾದ್ಯ- ಪ್ರತಿಪಾದಕ ಭಾವವೇ ಸಂಬಂಧವು. ಈ ರೀತಿಯಾಗಿ ವೀರಶೈವ ಶಾಸ್ತ್ರವು ಅನುಬಂಧ ಚತುಷ್ಟಯದಿಂದ ಕೂಡಿರುವುದು.

ಸ್ಥಲ ಪರಿಕಲ್ಪನೆ :

ಶಿವಜೀವೈಕ್ಯ ರೂಪದ ಈ ಧ್ಯೇಯ ಸಾಧನೆಗಾಗಿ ಷಡಧ್ವ, ಷಟ್‌ಸ್ಥಲಮಾರ್ಗವನ್ನನುಸರಿಸಬೇಕು. ಇಲ್ಲಿ ಸ್ಥಲವೆಂದರೆ ಮೆಟ್ಟಲು ಅಥವಾ ಸ್ಥಾನ. ಸಾಧಕನು ಸಾಧನಸೋಪಾನವನ್ನೇರಿ ಸಿದ್ಧಪದವಿಯನ್ನು ಪಡೆಯಲೋಸುಗ ಸಾಧಕನ ಆಯಾ ಕಾಲದ ವಿಶಿಷ್ಟ ಗುಣ, ಕರ್ಮ, ಚಿತ್‌ಸ್ಥಿತಿ ಇತ್ಯಾದಿಗಳನ್ನು ಲಕ್ಷಿಸಿ ಆರು ಮೆಟ್ಟಲುಗಳು ಕಟ್ಟಲ್ಪಟ್ಟಿವೆ. ಇವೇ ಷಟ್‌ಸ್ಥಲಗಳೆನಿಸುವವು. ಸಾಧನ ಸೋಪಾನದ ದೃಷ್ಟಿಯಿಂದ ಅಂಗ ಮತ್ತು ಲಿಂಗ ಅಥವಾ ಜೀವ ಮತ್ತು ಶಿವ ಇವರ ನಡುವಿನ ಆಯಾ ಮೆಟ್ಟಲಿನಲ್ಲಿರುವ ಸಂಬಂಧವನ್ನು ಷಟ್‌ಸ್ಥಲಗಳ ಮೂಲಕ ವೀರಶೈವರು ಹೇಗೆ ತೋರಿರುವರೆಂಬುದನ್ನು ನೋಡೋಣ.

ಲಿಂಗದಲ್ಲಿ ಶಕ್ತಿ ಅಂಗದಲ್ಲಿ ಭಕ್ತಿ :

ಸೃಷ್ಟಿಯು ಪ್ರವೃತ್ತಿಯಿಂದಲೂ ಮುಕ್ತಿಯು ನಿವೃತ್ತಿಯಿಂದಲೂ ಉಂಟಾಗುತ್ತವೆ. ಸೃಷ್ಟಿಯು ಮಾಯಾಶಕ್ತಿಯ ಕಾರ್ಯವಾದರೆ ಮುಕ್ತಿಯು ಭಕ್ತಿಯ ಪರಿಣಾಮವಾಗಿದೆ. ಅಂಗ-ಲಿಂಗ ಸಂಬಂಧವು ಪೂಜ್ಯ-ಪೂಜಕ, ಸೇವ್ಯ-ಸೇವಕ ಸಂಬಂಧದಂತೆ. ಮಾಯೆಯಿಂದ ವಿಷಯಾಸಕ್ತಿಯುಂಟಾದರೆ ಭಕ್ತಿಯಿಂದ ಲಿಂಗಾಸಕ್ತಿಯುಂಟಾಗುತ್ತದೆ. ಮೆಲ್ಲ ಮೆಲ್ಲನೇ ಮಾಯೆಯಿಂದ ಮುಕ್ತನಾಗುತ್ತಾ ಹೋದಂತೆ ಅಂಗವು ಲಿಂಗವನ್ನು ಸಮೀಪಿಸಿ ಕೊನೆಗೆ ಅದರಲ್ಲಿ ಲಯವನ್ನು ಹೊಂದುವುದು. ಶಿವನು ತನ್ನ ಶಕ್ತಿಮುಖದಿಂದ ಸೃಷ್ಟಿಯನ್ನು ನಿರ್ಮಿಸಿ ಭಕ್ತಿಮುಖದಿಂದ ಅಂಗನನ್ನು ಮುಕ್ತಮಾಡುವನು. ಪರಮಾರ್ಥದಲ್ಲಿ ಶಕ್ತಿ-ಭಕ್ತಿಗಳಿಗೆ ಭೇದವಿಲ್ಲ. ಏಕೆಂದರೆ ಅವೆರಡೂ ಶಿವನ ಪ್ರವೃತ್ತಿ ನಿವೃತ್ತಿಗಳೆಂಬ ಉಚ್ಛ್ವಾಸ-ನಿಃಶ್ವಾಸಗಳು. ಶಿವನೇ ಲಿಂಗಸ್ಥಲದಲ್ಲಿ ಶಕ್ತಿರೂಪದಿಂದ ಮತ್ತು ಅಂಗಸ್ಥಲದಲ್ಲಿ ಭಕ್ತಿರೂಪದಿಂದ ಕಾರ್ಯಮಾಡುವನು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂಗಸ್ಥಲ-ಲಿಂಗಸ್ಥಲ :

ಶ್ರೀ ಜಗದ್ಗುರು ಆದಿ ರೇಣುಕರು, ಸರ್ವಾಗಮ ಪಾರಂಗತನಾದ ಅಗಸ್ತ್ಯ ಮಹರ್ಷಿಗೆ, ಶಿವಜ್ಞಾನಕರವಾದ ಸಿದ್ಧಾಂತವನ್ನು ಉಪದೇಶಿಸುವುದಕ್ಕೆ ಮುಂಚೆ, ಸಾಂಖ್ಯಾದಿಶಾಸ್ತ್ರಗಳಿಗಿಂತಲೂ ಸರ್ವವೇದಗಳನ್ನು ಅನುಸರಿಸುವ ಶೈವಶಾಸ್ತ್ರವು ವಿಶಿಷ್ಟವಾದುದೆಂತಲೂ, ಇದಕ್ಕೆ ಸಿದ್ಧಾಂತಶಾಸ್ತ್ರವೆಂದೂ ಹೆಸರಿರುವುದೆಂದೂ ವೇದಗಳಂತೆ ಪ್ರಾಮಾಣ್ಯವಿರುವುದೆಂದೂ ಹೇಳಿ, ಲಿಂಗಾಂಗ- ಸಾಮರಸ್ಯ ರೂಪ ಶಿವಜೀವೈಕ್ಯ ವಿದ್ಯೆಯಲ್ಲಿ ಯಾರು ವಿನೋದದಿಂದ ಪ್ರೀತಿಸುತ್ತಾರೆಯೋ ಅವರು ವೀರಶೈವರೆಂದೂ ಬೋಧಿಸುತ್ತಾ ಸ್ಥಲಭೇದದಿಂದ ಆರು ಪ್ರಕಾರವಾಗಿರುವ ವೀರಶೈವ ಶಾಸ್ತ್ರವನ್ನು ಬಹು ವಿಶದವಾಗಿ ಮನಸ್ಸಿಗೆ ಒಪ್ಪುವಂತೆ ಉಪದೇಶಿಸಿದ್ದಾರೆ. ಸ್ಥಲವೆಂಬುದು ಪಾರಮಾರ್ಥಿಕ ಅರ್ಥದಲ್ಲಿ ಪರಶಿವ ಬ್ರಹ್ಮವೇ. ಶಿವಾಗಮಗಳಲ್ಲಿ ಹೇಳಿದ "ಸ್ಥೀಯತೇ ಲೀಯತೇ ಯತ್ರ ಜಗದೇತಚ್ಚರಾಚರಮ್" ಎಂಬ ನಿಷ್ಪತ್ತಿಯಂತೆ ಸ್ಥಲವೆಂದರೆ ಪರಶಿವನೆಂದರ್ಥ.

ಆ ಸ್ಥಲವು ತನ್ನ ಅವಿನಾಭಾವ ಶಕ್ತಿಯ ಸ್ಪಂದದಿಂದ ಅಂಗ (ಜೀವ) ಲಿಂಗ (ಪರಮಾತ್ರ)ವೆಂದು ಎರಡಾಯಿತು. ಹೀಗೆ ಅಂಗನ ಸಾಧನೆಯ ಮಾರ್ಗದಲ್ಲಿ ಸದ್ಭಕ್ತಿ, ಸದಾಚಾರಗಳ ನೆಲೆಗಳೆಂದು ಅಂಗಸ್ಥಲಗಳಾದವು. ಅವನ ಸದ್ಭಕ್ತಿ- ಸದಾಚಾರಗಳಿಗೆ ಜ್ಞಾನದ ಹಿನ್ನೆಲೆಯನ್ನು ಒದಗಿಸಲು ಗುರು-ಲಿಂಗ-ಜಂಗಮ ಸ್ವರೂಪಾತಿಶಯಗಳನ್ನು ಪ್ರತಿಪಾದಿಸುವ, ಸಾಕಾರಲಿಂಗವಾದ ಶಿವಯೋಗಿಯ ನೆಲೆಗಳೆಂದು ಲಿಂಗಸ್ಥಲಗಳಾದವು. ಸಿದ್ಧಾಂತಶಿಖಾಮಣಿಯು ಈ ಹಿನ್ನೆಲೆಯನ್ನಿಟ್ಟುಕೊಂಡು ಅಂಗ-ಲಿಂಗ ಸ್ಥಲಗಳ ನಿರೂಪಣೆಯನ್ನು ಕೊಟ್ಟಿದೆ. ಪಿಂಡಸ್ಥಲದಿಂದ ಹಿಡಿದು ಸಹಭಾಜನಸ್ಥಲದವರೆಗಿನ ೪೪ ಅಂಗಸ್ಥಲಗಳನ್ನು ಷಟ್‌ಸ್ಥಲಾಂತರ್ಗತವಾಗಿ ಹೇಳಿ, ಸಾಧಕನಿಗೆ ಜೀವನ್ಮುಕ್ತಿಯನ್ನು ಕೊಡುವಂತಹ ದೀಕ್ಷಾಗುರುಸ್ಥಲದಿಂದ ಜ್ಞಾನಶೂನ್ಯಸ್ಥಲದವರೆಗಿನ ೫೭ ಲಿಂಗಸ್ಥಲಗಳನ್ನು ಭಕ್ತಾದಿ ಷಟ್‌ಸ್ಥಲಗಳಿಗೆ ಅನ್ವಯಿಸಿ ನಿರೂಪಿಸಿರುವುದು ಅತ್ಯಂತ ಮಾರ್ಮಿಕವಾಗಿದೆ. ಹೀಗೆ ಆಯಾಯ ಸ್ಥಲಾಂತರ್ಗತವಾದ ಅಂಗಸ್ಥಲಗಳನ್ನು ಅನುಸರಿಸುವ ಸಾಧಕನು ಆಯಾಯ ಸ್ಥಲಾಂತರ್ಗತವಾದ ಲಿಂಗಸ್ಥಲಗಳ ಅರಿವನ್ನು ಪಡೆಯುತ್ತಾ ಹೋಗಬೇಕು. ಗುರು, ಲಿಂಗ, ಜಂಗಮ ಮತ್ತು ಶಿವಯೋಗಿ ಎಂಬ ಪರಿಕಲ್ಪನೆಗಳಲ್ಲಿ ತಾತ್ವಿಕವಾಗಿ ಭೇದವಿಲ್ಲ. ಅವುಗಳ ನೈಜ ನೆಲೆಯನ್ನೇ ನಾವು ಲಿಂಗಸ್ಥಲಗಳ ನಿರೂಪಣೆಯಲ್ಲಿ ಕಾಣುತ್ತೇವೆ. ಲಿಂಗಾಂಗ ಸಾಮರಸ್ಯವು ಷಟ್‌ಸ್ಥಲ ಮಾರ್ಗದ ಗುರಿ. ಅಂಗಸ್ಥಲ ಮತ್ತು ಲಿಂಗಸ್ಥಲಗಳ ತಾತ್ವಿಕ ಸಾಮರಸ್ಯವು ಸಾಧನೆಯ ಮಾರ್ಗ. ಅದೇ ಸಿದ್ಧಾಂತ ಶಿಖಾಮಣಿಯು ಬೋಧಿಸುವ ಭಕ್ತಿ-ಕ್ರಿಯಾ-ಜ್ಞಾನ ಸಮುಚ್ಚಯಾತ್ಮಕ ಮಾರ್ಗದ ರಹಸ್ಯ. ಭಕ್ತಿಯಿಂದ ಕ್ರಿಯೆ, ಕ್ರಿಯೆಯು ಪರಿಣಮಿಸಿ ಶಿವಯೋಗ, ಅದೇ ಪರಿಪಕ್ವವಾಗಿ ಸಾಮರಸ್ಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿದ್ಯೆಯ ನೆಲೆಯಾಗುವುದು ವೀರಶೈವನ ಪರಮ ಗುರಿ. ಈ ಹಿನ್ನೆಲೆಯಲ್ಲಿ ಸಿದ್ಧಾಂತ ಶಿಖಾಮಣಿಯ ಏಕೋತ್ತರ ಶತಸ್ಥಲಗಳ ವ್ಯವಸ್ಥೆಯನ್ನು ನೋಡಬೇಕು.

ಏಕೋತ್ತರಶತಸ್ಥಲ ವ್ಯವಸ್ಥೆ; ೧. ಭಕ್ತಸ್ಥಲ :

ಷಟ್‌ಸ್ಥಲಗಳಲ್ಲಿ ಮೊದಲನೆಯದಾದ ಭಕ್ತಸ್ಥಲವನ್ನು ಪಿಂಡ, ಪಿಂಡಜ್ಞಾನ, ಸಂಸಾರಹೇಯ, ಗುರುಕಾರುಣ್ಯ, ಲಿಂಗಧಾರಣ, ಭಸ್ಮಧಾರಣ, ರುದ್ರಾಕ್ಷಧಾರಣ, ಪಂಚಾಕ್ಷರ ಜಪ, ಭಕ್ತಿಮಾರ್ಗ ಕ್ರಿಯಾ, ಉಭಯ, ತ್ರಿವಿಧ ಸಂಪತ್ತಿ, ಪ್ರಸಾದ ಸ್ವೀಕಾರ, ಸೋಪಾಧಿದಾನ, ನಿರುಪಾಧಿದಾನ, ಸಹಜದಾನ ಸ್ಥಲಗಳೆಂಬುದಾಗಿ ಹದಿನೈದು ವಿಧವಾಗಿ ಕಲ್ಪಿಸಲಾಗಿದೆ. ವೀರಶೈವ ಸಂಪ್ರದಾಯ ರೀತ್ಯಾ ಜೀವನು ಬಹುಜನ್ಮಕೃತ ಪಾಪಕ್ಷಯವನ್ನು ಹೊಂದಿ ಶುದ್ಧಾಂತಃಕರಣನಾದಾಗ "ಪಿಂಡ"ನೆನಿಸಿಕೊಳ್ಳುವನು. ಈತನಿಗೆ ಶಿವಕಾರುಣ್ಯದಿಂದ ಶಿವಸಂಬಂಧವಾದ ಶುದ್ಧಭಕ್ತಿಯುಂಟಾಗುತ್ತದೆ. ಆಗ ಈ ಜೀವನು ಪಿಂಡಶಬ್ದವಾಚ್ಯನಾಗುವನು.

ಶರೀರಕ್ಕಿಂತಲೂ ಆತ್ಮನು ಭಿನ್ನನಾಗಿರುವನೆಂದೂ, ಆತ್ಮನಿಗಿಂತಲೂ ಪ್ರೇರಕನಾದ ಈಶ್ವರನು ಭಿನ್ನನಾಗಿರುವನೆಂತಲೂ ತಿಳಿಯುವವನಿಗೆ 'ಪಿಂಡಜ್ಞಾನಿ'ಯೆನ್ನುವರು. ಈ ಜ್ಞಾನಿಯ ಬುದ್ಧಿಯು ಸಾಂಸಾರಿಕ ದುಃಖವನ್ನು ನಾಶ ಮಾಡುವುದರಲ್ಲಿ ಪ್ರವರ್ತಿಸುತ್ತದೆ. ಆಗ ಆತನು ಶ್ರೀ ಗುರುವನ್ನು ಆಶ್ರಯಿಸುತ್ತಾನೆ. ಶ್ರೀ ಗುರುವು ಶಿಷ್ಯನಲ್ಲಿ ಈಶ್ವರ ಶಕ್ತಿಪಾತವನ್ನು ಪರಾಮರ್ಶಿಸಿ ಶಿವದೀಕ್ಷೆಯನ್ನು ಅನುಗ್ರಹಿಸುವನು. ಈ ಶಿವದೀಕ್ಷೆಯು ವೇದಾ-ಮಂತ್ರ- ಕ್ರಿಯಾ ಎಂದು ಮೂರು ವಿಧವಾಗಿರುವುದು. ಶಿಷ್ಯನ ಪ್ರಾಣವನ್ನು ಸರ್ವಸಂಸ್ಕಾರ ಸಂಸ್ಕೃತವಾದ ಶಿವಲಿಂಗದಲ್ಲಿ ನಿಯೋಜಿಸಿ, ಶಿವಕಲಾ- ಜೀವಕಲಾ ಸಾಮರಸ್ಯವನ್ನು ಮಾಡಿ ಶಿಷ್ಯನ ಹಸ್ತದಲ್ಲಿರಿಸಿ, ಇದು ನಿನ್ನ ಪ್ರಾಣಲಿಂಗ, ಇದನ್ನು ನಿನ್ನ ಪ್ರಾಣದಂತೆ ಧರಿಸಬೇಕು. ಇದನ್ನು ಶರೀರದಿಂದ ಯಾವ ಕಾರಣದಿಂದಲೂ ಅಗಲಿಸಬೇಡ ಇತ್ಯಾದಿ ಆವಶ್ಯಕ ಉಪದೇಶವನ್ನು ಮಾಡಿ ಶಿಷ್ಯನಿಗೆ ಶಿವಲಿಂಗವನ್ನು ಧರಿಸಿ ನಿತ್ಯವೂ ಪೂಜಿಸಲು ಅಪ್ಪಣೆ ಮಾಡುವನು.

ಈ ಲಿಂಗಧಾರಣೆಯ ಸಂಸ್ಕಾರದೊಂದಿಗೆ ಶಿಷ್ಯನು ಅಷ್ಟಾವರಣ ಸಂಪನ್ನನೂ ಆಗುತ್ತಾನೆ. ಗುರು-ಲಿಂಗ-ಜಂಗಮ-ಭಸ್ಮ-ರುದ್ರಾಕ್ಷ- ಪಾದೋದಕ-ಪ್ರಸಾದಗಳ ಸಂಪತ್ತನ್ನು ಪಡೆಯುತ್ತಾನೆ.

ಭಕ್ತಸ್ಥಲಕ್ಕೆ ಸೇರಿದ ೯ ಲಿಂಗಸ್ಥಲಗಳಲ್ಲಿ ಗುರು-ಲಿಂಗ-ಜಂಗಮದ ಸ್ವರೂಪವನ್ನು ನಿರೂಪಿಸಲಾಗಿದೆ. ದೀಕ್ಷಾಗುರು- ಶಿಕ್ಷಾಗುರು- ಜ್ಞಾನಗುರು ಸ್ಥಲಗಳು ತ್ರಿವಿಧ ಗುರುವಿನ ಮಹತ್ವ -ಮಹಿಮೆಗಳನ್ನು ವರ್ಣಿಸುವ ಸ್ಥಲಗಳು. ಕ್ರಿಯಾಲಿಂಗ, ಭಾವಲಿಂಗ ಮತ್ತು ಜ್ಞಾನಲಿಂಗ ಸ್ಥಲಗಳು ಲಿಂಗದ ಇಷ್ಟ, ಪ್ರಾಣ ಮತ್ತು ಪರಾತ್ಪರ ಲಿಂಗಗಳ ಸ್ವರೂಪವನ್ನು ಬೋಧಿಸುತ್ತವೆ. ಸ್ವಸ್ಥಲ, ಚರಸ್ಥಲ ಮತ್ತು ಪರಸ್ಥಲಗಳು ಜಂಗಮದ ನಿಲುವನ್ನು ಅರಿವಿಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಂದುಕೊಡುತ್ತವೆ. ಭಕ್ತನ ಸದ್ಭಕ್ತಿ-ಸದಾಚಾರಗಳಿಗೆ ಈ ತತ್ತ್ವತ್ರಯದ ಅಂದರೆ ಗುರು-ಲಿಂಗ- ಜಂಗಮದ ಸ್ವರೂಪ ಮತ್ತು ಮಾಹಾತ್ಮ್ಯಗಳ ಜ್ಞಾನವು ಶ್ರದ್ಧೆಯನ್ನು ಬಲಿಸಲು, ಪೋಷಿಸಲು, ಅತ್ಯಂತವಾಗಿ ಬೇಕು. ಅಂದರೆ ಇವೆಲ್ಲಾ ಅವನ ಶ್ರದ್ಧಾ ಭಕ್ತಿಗೆ ಪೋಷಕಗಳು. ಹೀಗೆ ಭಕ್ತಸ್ಥಲದ ಅಂಗ-ಲಿಂಗ ಸ್ಥಲಗಳ ಸಮನ್ವಿತವಾದ ವ್ಯವಸ್ಥೆ. ಒಟ್ಟು ಸ್ಥಲಗಳು -೧೫ + ೯ = ೨೪.

ಸಿದ್ಧಾಂತ ಶಿಖಾಮಣಿಯ ಭಕ್ತ ಸ್ಥಲಾಂತರ್ಗತವಾದ ಅಂಗಸ್ಥಲಗಳ ಹಾಗೂ ಲಿಂಗಸ್ಥಲಗಳ ನಿರೂಪಣೆಯು ಅತ್ಯಂತ ದೀರ್ಘವಾಗಿದೆ. ಬೇರೆ ಸ್ಥಲಗಳ ನಿರೂಪಣೆಗೆ ಈ ಸ್ಥಲಗಳ ನಿರೂಪಣೆಯೇ ಬುನಾದಿ. ಭಕ್ತಸ್ಥಲದಲ್ಲಿ ಸಾಧಕನಿಗೆ ಎಲ್ಲ ರೀತಿಯ ಬೆಳವಣಿಗೆಯ ಬೀಜವನ್ನು ಬಿತ್ತಲಾಗುತ್ತದೆ. ಕ್ಷೇತ್ರವನ್ನು ಫಲವತ್ತಾಗಿಸಲು ಬೇಕಾದ ಎಲ್ಲಾ ಸಲಕರಣೆಗಳನ್ನು ನೀಡುವ ಉದ್ದೇಶವಿರುವುದರಿಂದ ಭಕ್ತಸ್ಥಲದ ನಿರೂಪಣೆಗೆ ಗ್ರಂಥದ ಹೆಚ್ಚಿನ ಭಾಗವನ್ನು ಮೀಸಲಿರಿಸಲಾಗಿದೆ.

೨. ಮಾಹೇಶ್ವರಸ್ಥಲ:

ಈ ವಿಧವಾದ ಪೂಜೆ, ಗುರು-ಜಂಗಮ ಕೈಂಕರ್ಯ, ಸದಾಚಾರ, ದಾನ-ಧರ್ಮಗಳಲ್ಲಿ ನಿಷ್ಣಾತನೂ, ಶಿವಾಸಕ್ತನೂ, ಬ್ರಹ್ಮಾದಿಸ್ಥಾನ ವಿಮುಖನೂ ಆದ ಭಕ್ತನೇ ಮಾಹೇಶ್ವರನಾಗುವನು. "ವಿಶ್ವಾಧಿಕೋ ರುದ್ರೋ ಮಹರ್ಷಿಃ" ಎಂಬ ಶ್ವೇತಾಶ್ವತರಶೃತಿವಾಕ್ಯದಂತೆ ಶಿವನು ಸಮಸ್ತ ಪ್ರಪಂಚಕ್ಕಿಂತಲೂ ಅಧಿಕನೂ, ಸಮಸ್ತ ಪ್ರಪಂಚಕ್ಕೆ ಅನುಗ್ರಹವನ್ನುಂಟು ಮಾಡುವವನೂ ಆಗಿದ್ದಾನೆಂಬ ಸ್ಥಿರ ಬುದ್ಧಿಯುಳ್ಳವನೇ ಮಾಹೇಶ್ವರನೆನಿಸಿಕೊಳ್ಳುವನು. ಶಿವಸ್ತೋತ್ರಗಳಿಂದುಂಟಾದ ಆನಂದ, ರಸಸ್ವೀಕಾರದಿಂದ ಸಂತುಷ್ಟವಾದ ಮನಸ್ಸುಳ್ಳವನೂ, ನಿರ್ಮಲನೂ, ಶಿವಸರ್ವೋತ್ತಮತ್ತ್ವವನ್ನು ಪ್ರತಿಪಾದಿಸುವ ಪ್ರಮಾಣಗಳನ್ನು ಸಂಗ್ರಹಿಸುವುದರಲ್ಲಿ ಆಸಕ್ತನೂ, ಶಿವಲಿಂಗೈಕನಿಷ್ಠನೂ, ಸರ್ವವನ್ನೂ ತನ್ನಂತೆ ತಿಳಿಯುವವನೂ ಆದವನು ವೀರಮಾಹೇಶ್ವರನೆನಿಸಿಕೊಳ್ಳುವನು. ಶಿವಲಿಂಗೈಕನಿಷ್ಠನಾದ ಮಾಹೇಶ್ವರನು ಯಾವಾಗಲೂ ತನ್ನ ಆಚಾರ- ಧರ್ಮಗಳಿಗೆ ವಿರುದ್ಧಗಳಾದ ಪೂರ್ವಾಶ್ರಯ ಧರ್ಮಗಳನ್ನು ಬಿಡಬೇಕು. ಶಿವಸಂಸ್ಕಾರದಿಂದ ಪರಿಶುದ್ಧವಾದ ಮಹಾತ್ಮರಿಗೆ ಪೂರ್ವ ಜಾತಿಸಂಬಂಧಿಗಳಾದ ಧರ್ಮಗಳಿಂದ ಏನು ಪ್ರಯೋಜನ? ಶಿವಲಿಂಗಪೂಜಾದಿ ಕರ್ಮಗಳನ್ನಾಚರಿಸುವ ಮಾಹೇಶ್ವರನು ಸರ್ವಾದ್ವೈತ ನಿರಾಸಕನೇ ಆಗಿರಬೇಕು. ಶಿವನು ಪ್ರೇರಕನೆಂದೂ, ಜೀವನು ಪ್ರೇರ್ಯನೆಂದೂ ತಿಳಿದು, ಭೇದ ಭಾವದಿಂದ ಶಿವನನ್ನು ಪೂಜಿಸಬೇಕಲ್ಲದೆ, ಶಿವ-ಜೀವರಲ್ಲಿ ಅದ್ವೈತವನ್ನು ಭಾವಿಸಿ ಅದ್ವೈತದಲ್ಲಿ ಆಸಕ್ತನಾಗಬಾರದು. ಇಷ್ಟಲಿಂಗದಲ್ಲಿ ಶಿವನನ್ನು ಆವಾಹಿಸಬಾರದು. ಸಂಸ್ಕಾರಯುಕ್ತಗಳಾದ ಲಿಂಗಗಳಲ್ಲಿ ಶಿವನು ಯಾವಾಗಲೂ ಸನ್ನಿಹಿತನಾಗಿರುತ್ತಾನೆ. ಆಹ್ವಾನವು ಶಿವದೀಕ್ಷಾ ಜ್ಞಾನಕ್ಕೆ ವಿರೋಧವಾಗುವುದರಿಂದ ಆ ಶಿವದೀಕ್ಷಾ ಸಂಸ್ಕೃತ ಲಿಂಗಗಳಲ್ಲಿ ಆಹ್ವಾನವನ್ನು ಮಾಡಬಾರದು. ಇವೇ ಮಾಹೇಶ್ವರ ಸ್ಥಲಾಂತರ್ಗತವಾದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂಗಸ್ಥಲಗಳಲ್ಲಿ ಲಿಂಗನಿಷ್ಠಾ, ಪೂರ್ವಾಶ್ರಯನಿರಸನ, ಸರ್ವಾದ್ವೈತ ನಿರಸನ, ಆಹ್ವಾನ ನಿರಸನ, ಅಷ್ಟಮೂರ್ತಿ ನಿರಸನವೆಂಬ ಮೊದಲ ಐದು ಸ್ಥಲಗಳು. ಇವುಗಳೂ ಮತ್ತು ಮುಂದಿನ ಅಷ್ಟಮೂರ್ತಿ ನಿರಸನ, ಸರ್ವಗತ್ವನಿರಸನ ಎಂಬ ಸ್ಥಲಗಳು ಒಟ್ಟಿನಲ್ಲಿ ಲಿಂಗನಿಷ್ಠೆಯನ್ನು ದೃಢವಾಗಿಸಲು ನಿರೂಪಿಸಿದ ಸ್ಥಲಗಳು. ಇವುಗಳಲ್ಲಿ ಅಡಕವಾದ ಬೋಧೆಯ ಬಲದಿಂದಲೇ ಮಾಹೇಶ್ವರನ ಭಕ್ತಿಯ ವೈಶಿಷ್ಟ್ಯವನ್ನು ನಿಷ್ಠಾಭಕ್ತಿಯೆಂದು ಗುರುತಿಸುತ್ತಾರೆ. ಲಿಂಗಪೂಜೆಯಲ್ಲಿ ನಿಷ್ಠೆಗಾಗಿ ಹೇಳಿದ ಮೇಲಿನ ಸ್ಥಲಗಳು ಒತ್ತಿ ಹೇಳುವ ವಿಷಯವನ್ನೂ, ಅದರ ಉದ್ದೇಶವನ್ನೂ ಮನನ ಮಾಡಿಕೊಂಡ ಮಾಹೇಶ್ವರನಿಗೆ ತಾತ್ವಿಕವಾಗಿ ಶಿವನು ಜಗನ್ಮಯನು ಎಂಬುದನ್ನು ಮರೆಯದಂತೆ ಬಿಂಬಿಸಲು ಶಿವಜಗನ್ಮಯ ಸ್ಥಲವೆಂಬ ಎಂಟನೇ ಸ್ಥಲವನ್ನು ಹೇಳಿದೆ. ಶಿವಜಗನ್ಮಯವೆಂಬ ಭಾವನೆಯನ್ನು ಮರೆಯದೆ, ಪೂಜೆಯಲ್ಲಿ ಲಿಂಗನಿಷ್ಠೆಯನ್ನು ಬಲಗೊಳಿಸಲು ಲಿಂಗ ನಿಷ್ಠಾದಿಸ್ಥಲಗಳು ಬಂದಿವೆಯೆಂದು ತಿಳಿಯಬೇಕು. ಭಕ್ತದೇಹಿಕಲಿಂಗಸ್ಥಲವು ಒಂಬತ್ತನೆಯದು.

ಇನ್ನು ಮಾಹೇಶ್ವರಸ್ಥಲಕ್ಕೆ ಸಂಬಂಧಿಸಿದಂತೆ ನಿಷ್ಠೆಯೊಂದಿಗೆ ಕರ್ಮ- ಜ್ಞಾನಗಳ ಸಮನ್ವಯವನ್ನು ಹೇಳುವ ಕ್ರಿಯಾಗಮಸ್ಥಲ, ಭಾವಾಗಮಸ್ಥಲ ಮತ್ತು ಜ್ಞಾನಾಗಮ ಸ್ಥಲಗಳೆಂಬ ಮೊದಲ ಮೂರು ಲಿಂಗಸ್ಥಲಗಳು ಸಮನ್ವಿತವಾಗಿವೆ. ಸಕಾಯಸ್ಥಲ, ಅಕಾಯಸ್ಥಲ, ಮತ್ತು ಪರಕಾಯಸ್ಥಲಗಳೆಂಬ ಮುಂದಿನ ಮೂರು ಸ್ಥಲಗಳು ಕಾಯವಿರುವವರೆಗೂ ಕರ್ಮಮಾಡುವುದು, ಮಾಯಾಸಂಬಂಧ ದೂರವಾಗುವುದು, ಸಚ್ಚಿದಾನಂದ ಸ್ವರೂಪವನ್ನು ಅರಿಯುವುದು ಎಂಬ ಮೂರು ನೆಲೆಗಳನ್ನು ಮಾಹೇಶ್ವರನಿಗೆ ಧ್ಯೇಯರೂಪದಲ್ಲಿ ನಿರೂಪಿಸುತ್ತವೆ. ಧರ್ಮಾಚಾರಸ್ಥಲ, ಭಾವಾಚಾರಸ್ಥಲ ಮತ್ತು ಜ್ಞಾನಾಚಾರಸ್ಥಲಗಳು ಲಿಂಗನಿಷ್ಠೆಯನ್ನು ಬಲಪಡಿಸುವ ತಾತ್ವಿಕ ವಿಚಾರಗಳನ್ನು ಹೇಳುತ್ತವೆ. ಹೀಗೆ ಮಾಹೇಶ್ವರಸ್ಥಲದಲ್ಲಿ ಅಂಗ-ಲಿಂಗಸ್ಥಲಗಳು ಒಟ್ಟು ೯+೯=೧೮. ಇವುಗಳ ಸಮನ್ವಯ ವ್ಯವಸ್ಥೆಯನ್ನು ಹೀಗೆ ಗುರುತಿಸಿಕೊಳ್ಳಬೇಕು.

೩. ಪ್ರಸಾದಿಸ್ಥಲ :

ಮಾಹೇಶ್ವರನು ಲಿಂಗನಿಷ್ಠಾದಿಸ್ಥಲಗಳನ್ನು ಆಚರಿಸುವುದರಿಂದ ಪಾಪದಿಂದ ದೂರನಾಗಿ, ಮನಃಪ್ರಸಾದ ಯೋಗದಿಂದ ಪ್ರಸಾದಿಯೆಂದು ಹೇಳಿಸಿಕೊಳ್ಳಲ್ಪಡುವನು. ಮನಸ್ಸಿನ ನಿರ್ಮಲತ್ವ ಚಿಹ್ನವೇ ಪ್ರಸಾದವೆನಿಸುವುದು. ಇದು ಲಿಂಗರೂಪಿಯಾದ ಶಿವನ ಪ್ರಸಾದದಿಂದಲೇ ಸಿದ್ಧಿಸುವುದು. ಇದೇ ಒಟ್ಟಿನಲ್ಲಿ ಪ್ರಸಾದದ ಮಾಹಾತ್ಮ್ಯವನ್ನು ಹೇಳುವ ಪ್ರಸಾದಿಸ್ಥಲ, ಈ ಸ್ಥಲದಲ್ಲಿ ಮೊದಲ ಅಂಗಸ್ಥಲ. ಹಾಗೆಯೇ ಮುಂದಿನ ಗುರುಮಾಹಾತ್ಮ್ಯ, ಲಿಂಗಮಹಾತ್ಮ್ಯ, ಜಂಗಮಮಾಹಾತ್ಮ್ಯ, ಭಕ್ತಮಾಹಾತ್ಮ್ಯ, ಶರಣ ಮಹಾತ್ಮ್ಯ, ಪ್ರಸಾದಮಾಹಾತ್ಮ್ಯವೆಂಬ ಆರು ಸ್ಥಲಗಳು ಗುರು-ಲಿಂಗ-ಜಂಗಮ ಮುಂತಾಗಿ ಶಿವಯೋಗಿಗಳ ಪ್ರಸಾದ ಸ್ವೀಕಾರವನ್ನು ಭುಕ್ತಿ-ಮುಕ್ತಿಗೆ ಸಾಧಕವೆಂದೂ, ಅದನ್ನು ಜಾಗ್ರತ್, ಸ್ವಪ್ನ, ಸುಷುಪ್ತಿ ಸ್ಥಿತಿಗಳಲ್ಲಿ ಉಳಿಸಿಕೊಳ್ಳಲು ಸದಾ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜಾಗರೂಕನಾಗಿರಬೇಕೆಂದೂ, ಅವಧಾನ ಭಕ್ತಿಯ ನೆಲೆಯನ್ನೂ ಸ್ಥಿರವಾಗಿಸಲು ಹೇಳಲ್ಪಟ್ಟಿದೆ. ಇದೇ ಉದ್ದೇಶದಿಂದಲೇ ಪ್ರಸಾದಿಸ್ಥಲಕ್ಕೆ ಸಂಬಂಧಿಸಿದಂತೆ ೬ ಲಿಂಗ ಸ್ಥಲಗಳನ್ನು ಹೇಳಿದ್ದಾರೆ. ಇವುಗಳ ಉದ್ದೇಶವೆಂದರೆ, ಪ್ರಸಾದಿಗೆ ಎಲ್ಲವೂ ಶಿವಮಯವೆಂಬ ಭಾವನೆಯನ್ನು ಸ್ಥಿರಗೊಳಿಸಿ, ಮುಂದಿನ ಪ್ರಾಣಲಿಂಗಿಸ್ಥಲಕ್ಕೆ ಅವನನ್ನು ಅಣಿಗೊಳಿಸುವುದೇ ಆಗಿದೆ. ಹೀಗೆ ಈ ಸ್ಥಲದ ಒಟ್ಟು ಅಂಗ-ಲಿಂಗಸ್ಥಲಗಳು ೭+೬=೧೩.

ಪ್ರಾಣಲಿಂಗಿಸ್ಥಲ :

ಇಲ್ಲಿಯವರೆಗೆ ಕರ್ಮಪ್ರಧಾನವಾದ ಭಕ್ತ-ಮಾಹೇಶ್ವರ- ಪ್ರಸಾದಿಸ್ಥಲಗಳ ನಿರೂಪಣೆಯಾಯಿತು. ಈಗ ಜ್ಞಾನ ಪ್ರಧಾನವಾಗಿರುವ ಪ್ರಾಣಲಿಂಗಿ ಶರಣ ಐಕ್ಯ ಸ್ಥಲಗಳ ನಿರೂಪಣ.

ಸೂರ್ಯನಾಡಿ ಚಂದ್ರನಾಡಿ (ಇಡಾ-ಪಿಂಗಳಾ)ಗಳ ಸಂಘರ್ಷಣದಿಂದ ಪ್ರಾಣವಾಯುವು ಪರಬ್ರಹ್ಮ ಸ್ವರೂಪವಾದ ಯಾವ ಶಿವಲಿಂಗದಲ್ಲಿ ಅಡಗುವುದೋ ಅದೇ ಪ್ರಾಣಲಿಂಗವೆನಿಸುವದು. ಅದನ್ನು ಧರಿಸಿದವನು ಆ ಆಕಾರವುಳ್ಳವನೇ ಆಗುವನು. ಯಾವನು ಸ್ಥಾವರಲಿಂಗಾದಿಗಳಲ್ಲಿಯೂ, ತತ್ಪೂಜಾ ಸಾಮಗ್ರಿಗಳಲ್ಲಿಯೂ ಪರಾಙ್ಮುಖನಾಗಿ, ಯಾವಾಗಲೂ ಚಿದ್ರೂಪನಾದ ಪ್ರಾಣಲಿಂಗ ವಿಚಾರವನ್ನು ಮಾಡುತ್ತಿರುವನೋ ಆ ಶಿವಯೋಗಿಯು ಪ್ರಾಣಲಿಂಗಿಯೆನಿಸಿಕೊಳ್ಳುವನು. ಮಾಯಿಕ ಗುಣಭೇದದಿಂದ ಉತ್ಪನ್ನವಾದ ಚರಾಚರಾತ್ಮಕವಾದೀ ಜಗತ್ತಿನಲ್ಲಿ ಹೇಯ ಬುದ್ಧಿಯನ್ನು ತಳೆದು ಸಚ್ಚಿದಾನಂದ ಸ್ವರೂಪವಾದ ಪ್ರಾಣಲಿಂಗದಲ್ಲಿ ಮನಸ್ಸನ್ನು ಲಯಗೊಳಿಸುವವನು ಪ್ರಾಣಲಿಂಗಿಯೆನಿಸಿಕೊಳ್ಳುವನು.

ಹೃದಯಕಮಲಾಂತರ್ಗತವಾದುದೂ, ಚಿತ್‌ಸ್ವರೂಪವಾದುದೂ, ಶಿವಮಯವಾದುದೂ, ಶ್ರೇಷ್ಠವಾದುದೂ ಆದ ಪ್ರಾಣಲಿಂಗಕ್ಕೆ ಅಂತಃಕರಣ ವೃತ್ತಿ ವಿಶೇಷಗಳಿಂದ ಯಾವ ಅರ್ಚನವು ಮಾಡಲ್ಪಡುವುದೋ ಅದು ಪ್ರಾಣಲಿಂಗಾರ್ಚನ-ವೆನಿಸುವುದು. ಪ್ರಾಣಲಿಂಗಿಯ ಶಿವಜೀವೈಕ್ಯಾನುಸಂಧಾನ ರೂಪವಾದ ಸಂಪತ್ತೇ ಶಿವಯೋಗ ಸಮಾಧಿಯೆನಿಸಿಕೊಳ್ಳುವುದು. ಪೃಥಿವ್ಯಾದಿ ಷಟ್‌ತ್ರಿಂಶತ್ ತತ್ತ್ವಗಳಿಗಿಂತಲೂ ಮೇಲಿರುವವನೂ, ಸತ್-ಚಿತ್ -ಆನಂದಗಳಿಂದ ಪ್ರಕಾಶಿಸುವವನೂ, ಹಂಸರೂಪನೂ ಆದ ಪರಮಾತ್ಮನನ್ನು ಸೋಹಂಭಾವದಿಂದ ಧ್ಯಾನಿಸಬೇಕು. ಶಿವ-ಜೀವರ ಏಕತ್ವ ಸಿದ್ಧಿಯೇ ಶ್ರೇಷ್ಠವಾದ ಶಿವಯೋಗ ಸಮಾಧಿಯೆನಿಸಿಕೊಳ್ಳುವುದು.

ಈ ಮೂರು ಅಂಗಸ್ಥಲಗಳ ಜೊತೆಗೆ ಲಿಂಗನಿಜಸ್ಥಲ, ಅಂಗಲಿಂಗಸ್ಥಲಗಳೆಂಬ ಎರಡು ಅಂಗಸ್ಥಲಗಳನ್ನು ಪ್ರಾಣಲಿಂಗಿಯ ಶಿವಾನುಭವ, ಆಂತರಿಕವಾದ ಪ್ರಾಣಲಿಂಗ ಪೂಜೆಗಳಿಗೆ ಪೋಷಕಗಳಾಗಿ ನಿರೂಪಿಸಲಾಗಿದೆ. ಇವುಗಳ ಸಾಧನೆಯೇ ಪ್ರಾಣಲಿಂಗಿಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅನುಭಾವ ಭಕ್ತಿಗೆ ಆಧಾರ. ಈ ಪ್ರಾಣಲಿಂಗಿ ಸ್ಥಲವನ್ನಾಶ್ರಯಿಸಿದ ಆತ್ಮಸ್ಥಲ, ಅಂತರಾತ್ಮಸ್ಥಲ, ಪರಮಾತ್ಮಸ್ಥಲ ಮುಂತಾಗಿ ೯ ಲಿಂಗಸ್ಥಲಗಳಿವೆ. ಇವುಗಳಲ್ಲಿ ಅಡಕವಾದ ಶಿವಯೋಗಕ್ಕೆ ಬೇಕಾದ ಜ್ಞಾನದಿಂದ ಪ್ರಾಣಲಿಂಗಿಯ ಅನುಭಾವವು ಬಲಿತು ಅವನು ಶರಣಸ್ಥಲದ ಮೆಟ್ಟಿಲಿನಲ್ಲಿ ಸರ್ವಾರ್ಪಣಭಾವ, ಅದರಿಂದ ದೊರೆಯುವ ಆನಂದ ಭಕ್ತಿಯನ್ನು ಪಡೆಯಲು ಅರ್ಹನಾಗುತ್ತಾನೆ. ಹೀಗೆ ಈ ಸ್ಥಲದಲ್ಲಿ ಅಂಗ-ಲಿಂಗ ಸ್ಥಲಗಳು ಒಟ್ಟು ೫+೯=೧೪.

೫. ಶರಣಸ್ಥಲ:

ಪ್ರಾಣಲಿಂಗಿಯು ತಾನು ಸತಿಯೆಂದೂ, ಶಿವನು ಪತಿಯೆಂದೂ ತಿಳಿಯಬೇಕು. ಸ್ತ್ರೀ-ಪುರುಷ ಸಂಬಂಧದಿಂದುಂಟಾಗುವ ಸಖ್ಯದಂತೆ ಅಂಗ- ಲಿಂಗರೂಪ ಸತೀ-ಪತಿ ಭಾವದಿಂದುಂಟಾಗುವ ಸೌಖ್ಯವುಳ್ಳವನೇ ಶರಣನೆನಿಸುವನು. ಸಂಸಾರವೆಂಬ ಸರ್ಪದಿಂದ ಕಟ್ಟಲ್ಪಟ್ಟ ಸಮಸ್ತ ಶರಣಾಗತರಿಗೆ ಸರ್ವದೋಷನಾಶಕನೂ, ಸರ್ವಜ್ಞನೂ ಆದ ಶಿವನೇ ರಕ್ಷಕನಾಗಿದ್ದಾನೆ. ಶಿವಭಕ್ತಿರೂಪ ಪರಮಾನಂದದಿಂದ ಸಂತೋಷಪಡುತ್ತಿರುವ ಶ್ರೇಷ್ಠನಾದ ಶರಣನಿಂದ ತಾಮಸಗುಣಗಳು ನಿರಾಕರಿಸಲ್ಪಡುತ್ತವೆ. ಆ ಕಾರಣ ಆತನು ತಾಮಸನಿರಾಸಕನು. ಶರಣ ಸ್ಥಲಾಂತರ್ಗತವಾಗಿ ಶರಣಸ್ಥಲ, ತಾಮಸನಿರಸನ ಸ್ಥಲ, ನಿರ್ದೇಶಸ್ಥಲ, ಶೀಲಸಂಪಾದನಸ್ಥಲ ಎಂದು ನಾಲ್ಕು ಅಂಗಸ್ಥಲಗಳು ಶುದ್ಧವಾದ ಲಿಂಗಾಂಗ ಸಾಮರಸ್ಯದ ಆನಂದವನ್ನು ನಿರೂಪಿಸುತ್ತವೆ. ಇದೇ ಶರಣನ ಆನಂದ ಭಕ್ತಿ. ಇದನ್ನು ಜ್ಞಾನದ ದೀವಿಗೆಯಿಂದ ಬೆಳಗಿಸಲು ದೀಕ್ಷಾಪಾದೋದಕ, ಶಿಕ್ಷಾಪಾದೋದಕ, ಜ್ಞಾನಪಾದೋದಕ, ಕ್ರಿಯಾನಿಷ್ಪತ್ತಿ, ಭಾವನಿಷ್ಪತ್ತಿ, ಜ್ಞಾನನಿಷ್ಪತ್ತಿ ಮುಂತಾದ ೧೨ ಲಿಂಗಸ್ಥಲಗಳು ಶರಣಸ್ಥಲಕ್ಕೆ ಸಮನ್ವಿತವಾಗಿವೆ. ಹೀಗೆ ಈ ಸ್ಥಲದ ಅಂಗ-ಲಿಂಗ ಸ್ಥಲಗಳು ಒಟ್ಟು ೪+೧೨=೧೬.

೬. ಐಕ್ಯಸ್ಥಲ:

ಅಂತರ್ಲಿಂಗ ಧ್ಯಾನಪೂಜಾದಿ ಯೋಗದಿಂದ ಸುಖಾತಿಶಯವನ್ನು ಹೊಂದಿದ ಶರಣನು ಶಿವನೊಡನೆ ಏಕತ್ವವನ್ನು ಭಾವಿಸುತ್ತಿರುವುದರಿಂದ ಅವನು ಐಕ್ಯನೆನಿಸುವನು. ಶುದ್ಧಾಂತಃಕರಣನಾದ ಜೀವನು ಅತ್ಯಲ್ಪವಾದ ವಿಷಯಾನಂದವೆಂಬ ಶೀಕರದಲ್ಲಿ (ಜಲ ಕಣ) ನಿಃಸ್ಪೃಹನಾಗಿ, ಶಿವಾನಂದವೆಂಬ ಮಹಾಸಮುದ್ರದಲ್ಲಿಯೇ ಮುಳುಗುವುದರಿಂದ ಅರ್ಥಾತ್ ತತ್‌ಸ್ವರೂಪವನ್ನೇ ಧರಿಸುವುದರಿಂದ, ಅವನು ಐಕ್ಯನೆಂದು ಹೇಳಿಸಿಕೊಳ್ಳುವನು. ಜೀವರೂಪವಾದ ಪಶುತ್ವವಾಗಲಿ, ಶಿವರೂಪವಾದ ಪತಿತ್ವವಾಗಲಿ ಮಾಯಾಶಕ್ತಿಯ ಮೋಹದಿಂದ ಉತ್ಪನ್ನವಾಗುವುದು. ಆ ಉಭಯವೂ ಲಯವನ್ನು ಹೊಂದಲು ಯಾವನು ಪಶುವು? ಯಾವನು ಸತಿಯು? ಈ ಪಶು- ಪತಿಭೇದವೇ ಉಳಿಯುವುದಿಲ್ಲ. ಭೇದಬುದ್ಧಿಯಿಂದುತ್ಪನ್ನವಾದ ಮಹಾ ಸಂಸಾರ ಸಮುದ್ರವನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಲಿಂಗೈಕ್ಯನು ಶಿವಾದ್ವೈತ ಬುದ್ಧಿರೂಪವಾದ ದೋಣಿಯಿಂದ ದಾಟುವನು. ಐಕ್ಯನಿಗೆ ಸಂಬಂಧಿಸಿದ ಅಂಗಸ್ಥಲಗಳು ಐಕ್ಯನ ಸ್ವರೂಪವನ್ನು ಹೇಳುವ ಐಕ್ಯಸ್ಥಲ, ದೇಹವಿದ್ದರೂ ದೇಹಧರ್ಮಕ್ಕೆ ಅಂಟದಿರುವುದನ್ನು ಬಿಂಬಿಸುವ ಆಚಾರ ಸಂಪತ್ತಿಸ್ಥಲ, ಸರ್ವತ್ರ ಶಿವತ್ವ ಬುದ್ಧಿಯನ್ನು ನಿರೂಪಿಸುವ ಏಕಭಾಜನಸ್ಥಲ, ಸರ್ವಭೇದವನ್ನು ನಿರಾಸಗೊಳಿಸಿದ ನೆಲೆಯನ್ನು ಹೇಳುವ ಸಹಭಾಜನಸ್ಥಲ ಎಂಬ ನಾಲ್ಕು ಸ್ಥಲಗಳು. ಇವುಗಳಲ್ಲಿ ಶಿವ-ಜೀವೈಕ್ಯಾನುಸಂಧಾನ ಸಾಮರಸ್ಯವು ನಿರೂಪಿತವಾಗಿದೆ. ಐಕ್ಯನ ಭಕ್ತಿಯನ್ನು ಸಮರಸ ಭಕ್ತಿಯೆಂದು ಕರೆಯುತ್ತಾರೆ. ಈ ಸಮರಸವನ್ನು ಬೆಸೆದು, ಅಂತಿಮವಾಗಿ ಭೇದಜ್ಞಾನ ಶೂನ್ಯತ್ವದಲ್ಲಿ ನಿಲ್ಲುವ ನೆಲೆಯವರೆಗೆ ೯ ಲಿಂಗ ಸ್ಥಲಗಳು ನಿರೂಪಿಸಲ್ಪಟ್ಟಿವೆ. ಸ್ವೀಕೃತ ಪ್ರಸಾದನಾಗಿ, ಮಹಾಲಿಂಗ ಸ್ವರೂಪನಾಗಿ, ಚರಾಚರ ಭಾವಗಳ ಲಯದಿಂದ ಶಾಂತನಾಗಿ, ಏಕತ್ವದಲ್ಲಿ ನಿಂತು, ಭೇದವಿಲ್ಲದ ಪರಶಿವಬ್ರಹ್ಮದಲ್ಲಿ ನೀರು ನೀರಿನಲ್ಲಿ ಬೆರೆದಂತೆ ಇರುವ ಸಾಮರಸ್ಯಾತ್ಮಕ ಐಕ್ಯವೇ ಪರಮಗುರಿ. ಈ ಸ್ಥಲದ ಅಂಗಲಿಂಗ ಸ್ಥಲಗಳು ಒಟ್ಟು ೪+೯=೧೩ ಆಗಿ ವ್ಯವಸ್ಥಿತವಾಗಿವೆ.

ಹೀಗೆ ಭಕ್ತಾದಿ ಐಕ್ಯಾಂತ ಸ್ಥಲಗಳ ವ್ಯವಸ್ಥೆಯಲ್ಲಿ ಭಕ್ತ-೨೪, ಮಾಹೇಶ್ವರ-೧೮, ಪ್ರಸಾದಿ-೧೬, ಪ್ರಾಣಲಿಂಗಿ-೧೪, ಶರಣ-೧೬, ಐಕ್ಯ-೧೩, ಎಂದು-೧೦೧ (ಒಂದು ನೂರಾ ಒಂದು) ಅಂಗ-ಲಿಂಗಸ್ಥಲಗಳ ಸಮನ್ವಿತವಾದ ವಿಚಾರವು ಅಡಕವಾಗಿದೆ. ಈ ವ್ಯವಸ್ಥೆಯ ಸ್ಥೂಲವಾದ, ಅಂದರೆ ಅತ್ಯಂತ ಸ್ಥೂಲವಾದ ಸ್ವರೂಪವನ್ನು ಸಿದ್ಧಾಂತ ಶಿಖಾಮಣಿಯ ಪ್ರಕಾರ ತೋರಿಸಿದ್ದೇನೆ.

ಈ ನೂರೊಂದು ಸ್ಥಲಗಳ ನಿರೂಪಣೆಯು ಮುಂದೆ ಶರಣರ ವಚನಗಳ ವ್ಯವಸ್ಥೆಗೂ ಅಳವಡಿಸಿಕೊಳ್ಳಲಾಗಿದೆ. ಚನ್ನಬಸವಣ್ಣ ಮುಂತಾದವರು ತಮ್ಮ 'ಕರಣ ಹಸುಗೆ' ಮುಂತಾದ ಗ್ರಂಥಗಳಲ್ಲಿ ಸ್ಥಲಗಳ ವಿಭಾಗವನ್ನು ಬೇರೆ ಬೇರೆ ಕ್ರಮಗಳನ್ನು ಅನುಸರಿಸಿ ಮಾಡಿದ್ದರೂ, ಹೆಚ್ಚಿನ ಸಂಖ್ಯೆಯ ಸ್ಥಲಗಳನ್ನು ಗುರುತಿಸಿದ್ದರೂ, ಮೂಲಭೂತವಾದ ವ್ಯವಸ್ಥೆಯು ಈ ನೂರೊಂದು ಸ್ಥಲಗಳ ವ್ಯವಸ್ಥೆಯೇ. ಅದನ್ನು ನಮಗೆ ಮೊಟ್ಟಮೊದಲಿಗೆ ಕೊಟ್ಟಿರುವುದು ಶ್ರೀ ಶಿವಯೋಗಿ ಶಿವಾಚಾರ್ಯರ ಸಿದ್ಧಾಂತ ಶಿಖಾಮಣಿಯೆಂಬುದನ್ನು ಮರೆಯುವಂತಿಲ್ಲ.

❑

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೪. ಸಿದ್ಧಾಂತ ಶಿಖಾಮಣಿಯಲ್ಲಿ ಭಕ್ತಸ್ಥಲ

–ಇಂಗ್ಲಿಷ್ ಮೂಲ: ಡಾ।। ಕೆ. ಪ್ರತಾಪ್
–ಕನ್ನಡಕ್ಕೆ : ಡಾ।। ಸಿ. ಶಿವಕುಮಾರಸ್ವಾಮಿ

ಭಾರತೀಯ ತತ್ತ್ವಶಾಸ್ತ್ರದ ಪ್ರತಿಯೊಂದು ಶಾಖೆಯೂ ತಮ್ಮ ಧರ್ಮದ ಸಿದ್ಧಾಂತದ ಪರಿಕಲ್ಪನೆಗೆ ಅನ್ವಯವಾಗುವ ಅನೇಕ ಪಾರಿಭಾಷಿಕ ಪದಗಳನ್ನು ಅಭಿವೃದ್ಧಿಪಡಿಸಿವೆ. ವೀರಶೈವ ಧರ್ಮವೂ ಇದಕ್ಕೆ ಅಪವಾದವಲ್ಲ. ವೀರಶೈವ ಧರ್ಮವು ಸ್ಥಲ, ಅಂಗ, ಲಿಂಗ ಮುಂತಾದ ಪಾರಿಭಾಷಿಕ ಪದಗಳನ್ನು ರೂಪಿಸಿದೆ. ವೀರಶೈವ ಸಿದ್ಧಾಂತದ ಪ್ರಕಾರ ಮೋಕ್ಷವೆಂದರೆ ಲಿಂಗಾಂಗ ಸಾಮರಸ್ಯವನ್ನು ಪಡೆಯುವುದು. ಅದೇ ಜೀವನದ ಏಕೈಕ ಗುರಿ. ಈ ಲಿಂಗಾಂಗ ಸಾಮರಸ್ಯವೆಂದರೆ ಜೀವನು ಶಿವನಲ್ಲಿ ಸಮರಸರೂಪದ ಐಕ್ಯವನ್ನು ಹೊಂದುವುದು ಎಂದರ್ಥ.[1]

ಭಾರತೀಯ ತತ್ತ್ವಶಾಸ್ತ್ರಕ್ಕೆ ವೀರಶೈವರ ಪ್ರಮುಖ ಕೊಡುಗೆ ಷಟ್‌ಸ್ಥಲ ವ್ಯವಸ್ಥೆ. ಲಿಂಗದೊಡನೆ (ಪರಮಾತ್ಮನೊಡನೆ) ಅಂಗದ (ಜೀವಾತ್ಮನ) ಸಾಮರಸ್ಯವನ್ನು ಹೊಂದುವ ಮಾರ್ಗವನ್ನು ಷಟ್‌ಸ್ಥಲ ಸಿದ್ಧಾಂತವು ನಿರೂಪಿಸುತ್ತದೆ. ವೀರಶೈವ ಧರ್ಮದ 'ಸ್ಥಲ' ಎಂಬ ಶಬ್ದವು ವೇದಾಂತಿಗಳು ನಿರೂಪಿಸಿರುವ 'ಬ್ರಹ್ಮ' ಶಬ್ದಕ್ಕೆ ಸಮಾನವಾದುದು. ಈ ಶಬ್ದವು 'ಸ್ಥಾ' ಮತ್ತು 'ಲೀ' ಎಂಬ ಎರಡು ಧಾತುಗಳಿಂದ ನಿಷ್ಪನ್ನವಾಗಿದ್ದು, ಯಾವುದನ್ನು ಆಧರಿಸಿ ಎಲ್ಲ ವಸ್ತುಗಳು ನಿಂತಿವೆಯೋ ಯಾವುದರಲ್ಲಿ ಲೀನವಾಗುತ್ತವೆಯೋ ಅದನ್ನೇ ಸ್ಥಲವೆನ್ನುತ್ತಾರೆ:

> ಯತ್ರಾದೌ ಸ್ಥೀಯತೇ ವಿಶ್ವಂ ಪ್ರಾಕೃತಂ ಪುರುಷಂ ಯತಃ।
> ಲೀಯತೇ ಪುನರಂತೇ ಚ ಸ್ಥಲಂ ತತ್ ಪ್ರೋಚ್ಯತೇ ತತಃ।।
> ಆಲಯಂ ಸರ್ವಭೂತಾನಾಂ ಲೋಕಾನಾಂ ಸರ್ವಸಂಪದಾಮ್।
> ಯದ್ಭವೇತ್ ಪರಮಂ ಬ್ರಹ್ಮ ಸ್ಥಲಂ ತತ್ ಪ್ರಾಹುರಕ್ಷರಮ್।।[2]

ಸಾಮಾನ್ಯವಾಗಿ ಸ್ಥಲ ಶಬ್ದಕ್ಕೆ 'ಜಾಗ', 'ಭೂಭಾಗ' ಇತ್ಯಾದಿ ಅರ್ಥಗಳಿವೆ. 'ಷಟ್‌ಸ್ಥಲ'ಕ್ಕೆ ಸಂಬಂಧಿಸಿದಂತೆ "ಆಧ್ಯಾತ್ಮಿಕತೆಯನ್ನು ಬೆನ್ನಟ್ಟುವ ಆತ್ಮದ ಒಂದು ಹಂತ" ಎಂಬುದು ಇದರ ವಿಶೇಷವಾದ ಅರ್ಥ. ಸ್ಥಲಗಳನ್ನು ಕ್ರಮವಾಗಿ ಮೇಲೇರಿ ಶಿವೈಕ್ಯವನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾಧಿಸುವುದೇ ಷಟ್‌ಸ್ಥಲ ಮಾರ್ಗದ ಗುರಿ. ಸಾಧಕನು ತನ್ನ ಆಧ್ಯಾತ್ಮಿಕ ಗುರಿಯನ್ನು ಮುಟ್ಟಲು ಈ ಸ್ಥಲಗಳನ್ನು ಹಂತ ಹಂತವಾಗಿ ಏರಿ ಹೋಗಬೇಕು.

ಭಕ್ತಸ್ಥಲವು ಷಟ್‌ಸ್ಥಲಗಳಲ್ಲಿ ಮೊದಲನೆಯದು ಹಾಗೂ ಪ್ರಮುಖವಾದದ್ದು. ಏಕೆಂದರೆ ಈ ಸ್ಥಲವನ್ನು ವೀರಶೈವರ ಮುಕ್ತಿ ಮಾರ್ಗಕ್ಕೆ ಹೊಸ್ತಿಲು ಎಂದು ಕರೆಯಲಾಗಿದೆಯಲ್ಲದೆ ಮುಂದಿನ ಸ್ಥಲಗಳ ಬೀಜಗಳನ್ನು ಇಲ್ಲಿ ಬಿತ್ತಲಾಗಿದೆ. ಭಕ್ತಸ್ಥಲವು ಮೋಕ್ಷ ಸಾಧನೆಯ ಗುರಿಯಾಗಿರುವುದರ ಜೊತೆಗೆ ಮುಂದಿನ ಸ್ಥಲಗಳಲ್ಲಿ ಆತ್ಮದ ಬೆಳವಣಿಗೆಗೆ ಪೂರಕವಾದ ಬೀಜಗಳನ್ನು ಸಲಹಿ ಅಭಿವೃದ್ಧಿಪಡಿಸುವ ಭೂಮಿಕೆಯಾಗಿದೆ ಎಂಬುದನ್ನು ಸ್ಪಷ್ಟಪಡಿಸುವುದೇ ಈ ಪ್ರಬಂಧದ ಉದ್ದೇಶ.

ಜೀವನು ಅಶುದ್ಧಮಾಯೆಯ ಕಾರಣದಿಂದ ಎಣೆಯಿಲ್ಲದ ಅಜ್ಞಾನವನ್ನು ಹೊಂದಿರುತ್ತಾನೆ. ಈ ಭೌತಿಕವಾದ ಜಗತ್ತು ತನ್ನ ಸುಖಕ್ಕಾಗಿಯೇ ಇದೆ ಎಂಬುದೇ ಅದರ ಅಜ್ಞಾನದ ರೂಪ. ಅದಕ್ಕಿಂತ ಮೇಲಿನದು ಯಾವುದೂ ಇಲ್ಲ ಎಂದು ಅದರಿಂದ ಹೆಚ್ಚು ಹೆಚ್ಚು ಸುಖವನ್ನು ಪಡೆಯಲು ಪ್ರಯತ್ನಮಾಡುತ್ತಾನೆ. ಒಮ್ಮೆ ಈ ಭೌತಿಕ ವಸ್ತುಜಾತವು ಎಲ್ಲವೂ ಅಲ್ಲ, ಅದಕ್ಕಿಂತ ಮೀರಿದ ರಹಸ್ಯ ಶಕ್ತಿಯೊಂದಿದೆ ಎಂಬ ಭಾವನೆ ಜಾಗೃತವಾಗುತ್ತದೆ. ಈ ಭಾವನೆಯು ಕ್ರಮವಾಗಿ ವಿಕಾಸಹೊಂದಿ ಆ ಪರಮಾತ್ಮನಲ್ಲಿ ವಿಶ್ವಾಸವಾಗಿ ಪರಿಣಮಿಸುತ್ತದೆ. ಅದರಿಂದ ಪರಮಾತ್ಮನನ್ನು ಅರಿಯುವ ಸದಿಚ್ಛೆ ಮೂಡುತ್ತದೆ. ಇದೇ ಪರಮಾರ್ಥಾನ್ವೇಷಣೆಯ ಆರಂಭದ ಹಂತ. ಇದೇ ಭಕ್ತಸ್ಥಲದ ಆರಂಭವನ್ನು ಪ್ರತಿನಿಧಿಸುತ್ತದೆ. ಈ ಹಂತದಲ್ಲಿ ಶರೀರದಲ್ಲಿ ಯಾವುದೋ ಒಂದು ವಿಶಿಷ್ಟವಾದ ಶಕ್ತಿಯಿದ್ದು, ಅದು ಅಂಗಾಂಗಗಳ ಕ್ರಿಯೆಗಳನ್ನು ನಿಯಂತ್ರಿಸುತ್ತವೆ ಎಂದು ಜೀವ ಯೋಚಿಸುತ್ತದೆ. ಅದು 'ಅಹಂ' ಭಾವದಿಂದ ವ್ಯಕ್ತವಾದರೂ ಸಹ ಭೌತಿಕ ಶರೀರಕ್ಕೆ ಸಂಬಂಧಿಸಿದೆ ಎಂಬುದನ್ನು ಗುರುತಿಸುವುದಿಲ್ಲ. ತನ್ನಲ್ಲಿ ಚೈತನ್ಯವಿರುವಂತೆ ಜಗತ್ತಿನಲ್ಲಿಯೂ ಯಾವುದೋ ಒಂದು ಚೈತನ್ಯವಿದ್ದು, ಅದು ಜಗತ್ತಿನ ಕ್ರಿಯೆಯನ್ನು ನಿಯಂತ್ರಿಸುತ್ತದೆ. ದೇಹದಲ್ಲಿನ ಚೈತನ್ಯವು ಜಗತ್ತಿನ ಚೈತನ್ಯವನ್ನು ನಿಯಂತ್ರಿಸಲು ಸಾಧ್ಯವಿಲ್ಲದಿರುವುದರಿಂದ ದೇಹದ ಚೈತನ್ಯವು ಜಗತ್ತಿನ ಚೈತನ್ಯಕ್ಕಿಂತ ಕೀಳಾದುದು. ಆದ್ದರಿಂದ ಜಗತ್ತಿನ ಚೈತನ್ಯವು 'ದೇವ' ಅಥವಾ 'ಶಿವ' ಎಂದು ಪ್ರಸಿದ್ಧವಾಗಿದ್ದರೆ, ದೇಹದ ಚೈತನ್ಯವು 'ಆತ್ಮ' ಅಥವಾ 'ಜೀವ' ಎಂದು ವಿಖ್ಯಾತವಾಗಿದೆ. ಸ್ವಾನುಭವದ ದುಃಖದಿಂದಲೂ ಮತ್ತು ಬೇರೆಯವರು ಅನುಭವಿಸುವ ದುಃಖಗಳನ್ನು ನೋಡಿದ ಕಾರಣದಿಂದಲೂ ಲೌಕಿಕ ಸುಖಗಳು ಅಶಾಶ್ವತವಾದವುಗಳು, ಶಾಶ್ವತವಾದ ಸುಖ-ಭೋಗಗಳು ಲೌಕಿಕ ಜಗತ್ತಿನ ಯಾವುದೇ ವಸ್ತುವನ್ನೂ ಆಶ್ರಯಿಸಿಲ್ಲ ಎಂಬ ನಿರ್ಣಯಕ್ಕೆ ಬಂದಿದ್ದಾನೆ. ಇಂತಹ ಜಾಗೃತಿಯು ಹೆಚ್ಚಾಗಿ ಮನದಟ್ಟಾದಾಗ ಶಿವನಲ್ಲಿ ಅಚಲವಾದ ಭಕ್ತಿಯೇ ಶಾಶ್ವತವಾದ ಸುಖಕ್ಕೆ ಕಾರಣ ಎಂದು ದೇವತಾನುಗ್ರಹದಿಂದ ಅರಿಯುತ್ತಾನೆ. ಇಂತಹ ತಿಳುವಳಿಕೆಯು ಅವನನ್ನು ಸೂಕ್ತ ಮಾರ್ಗದರ್ಶನಕ್ಕೆ ಗುರುವಿಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶರಣು ಹೋಗುವಂತೆ ಮಾಡುತ್ತದೆ. ಆಗ ಅವನಲ್ಲಿ ಉಂಟಾಗಿರುವ ಭಕ್ತಿರೂಪದ ಶಕ್ತಿಪಾತವಾಗಿರುವುದನ್ನು ಗಮನಿಸಿ, ತ್ರಿವಿಧ ದೀಕ್ಷೆಯ ಮೂಲಕ ಇಷ್ಟಲಿಂಗವನ್ನು ಅನುಗ್ರಹಿಸಿ, ಅದರ ಪೂಜೆಯನ್ನು ಮಾಡುವಂತೆ ಗುರು ಉಪದೇಶಿಸುತ್ತಾನೆ. ಗುರುವಿನ ಮಾರ್ಗದರ್ಶನ ಅವನನ್ನು ಆಧ್ಯಾತ್ಮಿಕ ಬೆಳವಣಿಗೆಯ ಮಾರ್ಗವನ್ನು ಪಡೆಯುವಂತೆ ಮಾಡುತ್ತದೆ. ಇದೇ ಭಕ್ತಸ್ಥಲದ ಸ್ವರೂಪ. ಈ ಭಕ್ತಿಯ ಕಾರಣದಿಂದ ಜೀವನು ಮೋಕ್ಷದ ಕಡೆಗೆ ಹಂತ ಹಂತವಾಗಿ ಮೇಲೇರುತ್ತಾನೆ. ಆದ್ದರಿಂದ ಆತ್ಮಾವಲೋಕನದಿಂದ ಉಂಟಾಗುವ ಭಕ್ತಿ ಮತ್ತು ಗುರುವಿನ ಅನುಗ್ರಹಗಳು ಆತ್ಮವನ್ನು (ಜೀವವನ್ನು) ಶಿವನಲ್ಲಿ ಐಕ್ಯ ಮಾಡುವುದಕ್ಕೆ ಇರುವ ಮುಖ್ಯವಾದ ಕಾರಣಗಳು. "ಯಾರಲ್ಲಿ ಶಿವ ಸಂಬಂಧವಾದ ಭಕ್ತಿಯು ಹುಟ್ಟುವುದೋ ಅವನು ಭಕ್ತ" ಎಂದು ಸಿದ್ಧಾಂತ ಶಿಖಾಮಣಿಯು ಭಕ್ತನ ಲಕ್ಷಣವನ್ನು ವಿವರಿಸುತ್ತದೆ:

ಶೈವೀ ಭಕ್ತಿಃ ಸಮುತ್ಪನ್ನಾ ಯಸ್ಯಾಸೌ ಭಕ್ತ ಉಚ್ಯತೇ॥[೨]

ಭಕ್ತಸ್ಥಲದಲ್ಲಿ ಅವಾಂತರ ಸ್ಥಲಗಳ ಸಂಖ್ಯೆ ೨೪. ಅವುಗಳಲ್ಲಿ ಅಂಗಸ್ಥಲಗಳು ೧೫, ಲಿಂಗಸ್ಥಲಗಳು ೯. ಪ್ರತಿಯೊಂದು ಸ್ಥಲದ ಮುಖ್ಯಾಂಶಗಳು ಈ ರೀತಿಯಾಗಿವೆ:

ಅನೇಕ ಜನ್ಮಗಳಲ್ಲಿ ಸಂಪಾದಿಸಿದ ಪುಣ್ಯದಿಂದ ಪಾಪ ಸಮೂಹವೆಲ್ಲ ನಷ್ಟವಾಗಲಾಗಿ, ಪರಿಶುದ್ಧವಾದ ಅಂತಃಕರಣವುಳ್ಳ ಜೀವವೇ 'ಪಿಂಡ' ಎನಿಸಿಕೊಳ್ಳುತ್ತದೆ[೩] (ಪಿಂಡಸ್ಥಲ-೧). ಶರೀರಕ್ಕಿಂತ ಆತ್ಮನು (ಜೀವ) ಭಿನ್ನ, ಆತ್ಮನಿಗಿಂತ ಪ್ರೇರಕನಾದ ಈಶ್ವರನು ಭಿನ್ನ ಎಂದು ಯಾರು ತಿಳಿಯುತ್ತಾನೆಯೋ ಅವನು ಪಿಂಡಜ್ಞಾನಿ. ಆತ್ಮದ ಜ್ಞಾನವು ಶರೀರ, ಇಂದ್ರಿಯ, ಮನಸ್ಸು ಮತ್ತು ಬುದ್ಧಿ -ಇವುಗಳಿಗಿಂತ ಭಿನ್ನ ಎಂಬುದು ಈ ಹಂತದಲ್ಲಿ ಸ್ಪಷ್ಟ[೪] (ಪಿಂಡಜ್ಞಾನಸ್ಥಲ-೨). ಲೌಕಿಕ ವಸ್ತುಗಳು ತಾತ್ಕಾಲಿಕ ಸ್ವರೂಪದವುಗಳಾಗಿದ್ದು, ದುಃಖಕ್ಕೆ ಮೂಲ ಎಂಬುದನ್ನು ಈ ಸ್ಥಲವು ಮನದಟ್ಟು ಮಾಡಿಕೊಡುತ್ತದೆ. ಇದರ ಪರಿಣಾಮವಾಗಿ ಸಂಸಾರಹೇಯತ್ವ ಬುದ್ಧಿಯು ಪಿಂಡಜ್ಞಾನಿಗೆ ಉಂಟಾಗುತ್ತದೆ[೫] (ಸಂಸಾರಹೇಯಸ್ಥಲ-೩). ಸಂಸಾರದ ದುಃಖತ್ರಯಗಳನ್ನು ಹೋಗಲಾಡಿಸಿಕೊಳ್ಳಬೇಕೆಂಬ ಉತ್ಕಟವಾದ ಬಯಕೆಯಿಂದಲೂ ಮತ್ತು ಅದಕ್ಕೆ ಸಾಧನವನ್ನು ಕಂಡುಕೊಳ್ಳಲು ಜೀವ ಗುರುವಿನಲ್ಲಿಗೆ ಹೋಗುತ್ತಾನೆ. ಆಗ ಗುರುವು ಜೀವನಲ್ಲಿ ಉಂಟಾಗಿರುವ ಭಕ್ತಿಯನ್ನು ಗಮನಿಸಿ, ಕರುಣೆಯಿಂದ ದೀಕ್ಷೆ ಕೊಡುತ್ತಾನೆ[೬] (ಗುರುಕಾರುಣ್ಯಸ್ಥಲ-೪).

ದೀಕ್ಷೆಯು ವೇಧಾ, ಮಂತ್ರ ಮತ್ತು ಕ್ರಿಯೆ ಎಂದು ಮೂರು ವಿಧ, ಗುರುವು ತನ್ನ ಕೃಪಾದೃಷ್ಟಿಯಿಂದ ಶಿಷ್ಯನನ್ನು ನೋಡಿ, ತನ್ನ ಹಸ್ತವನ್ನು ಶಿಷ್ಯನ ಮಸ್ತಕದೊಂದಿಗೆ ಸಂಯೋಜಿಸಿದ ಮಾತ್ರದಿಂದಲೇ ಶಿವಭಾವವು ಭಕ್ತನಲ್ಲಿ ಸಮಾವಿಷ್ಟವಾಗುತ್ತದೆ. ಈ ಶಿವಭಾವ ಸಮಾವೇಶವೇ ವೇಧಾದೀಕ್ಷೆ. ಗುರು ಶಿಷ್ಯನ ಬಲಗಿವಿಯಲ್ಲಿ ಪಂಚಾಕ್ಷರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಂತ್ರವನ್ನು ಉಪದೇಶಿಸುವುದಕ್ಕೆ ಮಂತ್ರದೀಕ್ಷೆಯೆಂದು ಹೆಸರು. ಕಲಶಗಳನ್ನಿಟ್ಟು, ಸ್ವಸ್ತಿಕವನ್ನು ರಚಿಸಿ ಲಿಂಗಧಾರಣ ಕ್ರಿಯಾಪರವಾದ ದೀಕ್ಷೆಯು ಕ್ರಿಯಾದೀಕ್ಷೆ.[೮] ಇವುಗಳ ಮೂಲಕ ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಎಂಬ ಮೂರು ಶರೀರದಲ್ಲಿ (ಜೀವನಲ್ಲಿ) ಇಷ್ಟಲಿಂಗ, ಪ್ರಾಣಲಿಂಗ ಮತ್ತು ಭಾವಲಿಂಗ ಎಂಬ ಮೂರು ಲಿಂಗಗಳನ್ನು ಸ್ಥಾಪಿಸಬೇಕು.

ಗುರು ತನ್ನ ಶಿಷ್ಯನ ಹಸ್ತದಲ್ಲಿ ಅಭಿಷೇಕದಿಂದ ಹಾಗೂ ಮಂತ್ರದಿಂದ ಪವಿತ್ರವಾದ ಲಿಂಗವನ್ನು ಸ್ಥಾಪನೆ ಮಾಡುವುದು ದೀಕ್ಷೆಯ ಪ್ರಮುಖವಾದ ಅಂಗ. ನಂತರ ಗುರುವು ತನ್ನ ಯೌಗಿಕ ಶಕ್ತಿಯಿಂದ ಭಕ್ತನ ಪ್ರಾಣವನ್ನು ಮತ್ತು ಭಾವವನ್ನು ಅದರಲ್ಲಿ ಸಮಾವೇಶಗೊಳಿಸಬೇಕು. ಈ ಸಂಸ್ಕಾರದ ಪ್ರಕ್ರಿಯೆಯಲ್ಲಿ ಭಕ್ತನಲ್ಲಿ ಪ್ರಾಣಲಿಂಗ ಮತ್ತು ಭಾವಲಿಂಗಗಳ ಸ್ಥಾಪನೆಯಾಗುತ್ತದೆ. ಹಸ್ತದಲ್ಲಿರುವ ಲಿಂಗವು ಇಷ್ಟಲಿಂಗ. ಇಷ್ಟಲಿಂಗ ಪೂಜೆಯ ಮೂಲಕ ಶಿಷ್ಯನು ತನ್ನ ಅಂತರಂಗದಲ್ಲಿರುವ ಮತ್ತೆರಡು ಲಿಂಗಗಳ ಆಧ್ಯಾತ್ಮಿಕ ಸ್ವರೂಪವನ್ನು ಅರಿಯುತ್ತಾನೆ. ದೀಕ್ಷೆಯ ನಂತರ ಗುರುವು ಶಿಷ್ಯನಿಗೆ ಈ ರೀತಿಯಾಗಿ ಉಪದೇಶಿಸುತ್ತಾನೆ- "ಇದು ನಿನ್ನ ಪ್ರಾಣಲಿಂಗ. ಇದನ್ನು ನಿನ್ನ ಪ್ರಾಣದಂತೆ ದೇಹದಲ್ಲಿ ಧರಿಸಿರಬೇಕು. ಯಾವ ಸಂದರ್ಭದಲ್ಲಿಯೂ ಇದನ್ನು ನಿನ್ನ ದೇಹದಿಂದ ಹೊರ ತೆಗೆಯಬೇಡ. ಯಾವಾಗಲಾದರೂ ಪ್ರಮಾದವಶಾತ್ ಲಿಂಗವು ದೇಹದಿಂದ ನೆಲಕ್ಕೆ ಬಿದ್ದರೆ ಕೂಡಲೇ ಪ್ರಾಣವನ್ನು ಬಿಡು. ಅದರಿಂದ ಮೋಕ್ಷವು ದೊರೆಯುತ್ತದೆ."[೯] ನಂತರ ಗುರುವು ಇಷ್ಟಲಿಂಗದ ಪೂಜಾ ವಿಧಾನವನ್ನು ಉಪದೇಶಿಸುತ್ತಾನೆ (ಲಿಂಗಧಾರಣಸ್ಥಲ-೫).

ಲಿಂಗಧಾರಣ ವಿಧಿಯು ಭಕ್ತನನ್ನು ಅಷ್ಟಾವರಣ ಸಂಪನ್ನನಾಗುವಂತೆ ಮಾಡುತ್ತದೆ. ಅವುಗಳು ಯಾವುವೆಂದರೆ- ಗುರು, ಲಿಂಗ, ಜಂಗಮ, ಭಸ್ಮ, ರುದ್ರಾಕ್ಷ, ಮಂತ್ರ, ಪಾದೋದಕ ಮತ್ತು ಪ್ರಸಾದ. ಈ ಎಂಟು ಆವರಣಗಳು ಭಕ್ತನ ಧರ್ಮಶ್ರದ್ಧೆಯನ್ನು ರಕ್ಷಿಸುವ ಕವಚಗಳು. ಶಿಷ್ಯನಿಗೆ ದೀಕ್ಷಾಸಂಸ್ಕಾರವನ್ನು ಮಾಡುವ ವ್ಯಕ್ತಿ ಗುರು. ಗುರುವು ದೀಕ್ಷಾಕಾಲದಲ್ಲಿ ಶಿಷ್ಯನಿಗೆ ನೀಡುವ ಪೂಜ್ಯ ವಸ್ತು ಲಿಂಗ. ಗುರು ಶಿಷ್ಯನಿಗೆ ದೀಕ್ಷೆ ನೀಡಿದ ಸಂದರ್ಭದಲ್ಲಿ ಸಾಕ್ಷಿಯಾಗಿ ಇರುವ ವ್ಯಕ್ತಿ ಜಂಗಮ. ಪವಿತ್ರವಾದ ಭಸ್ಮವನ್ನು ಸಮಗ್ರ ಶರೀರಕ್ಕೆ ಲೇಪಿಸುವುದರ ಜೊತೆಗೆ ಶರೀರದ ನಿರ್ದಿಷ್ಟವಾದ ಅಂಗಗಳಲ್ಲಿ ತ್ರಿಪುಂಡ್ರರೂಪವಾಗಿ ಧರಿಸುವಂತಹದು ಭಸ್ಮ. ಇದನ್ನು 'ವಿಭೂತಿ' ಎಂದೂ ಕರೆಯಲಾಗಿದೆ. ರುದ್ರಾಕ್ಷಗಳು ಶರೀರದಲ್ಲಿ ಧರಿಸುವಂತಹವುಗಳು. ಇಷ್ಟಲಿಂಗದ ಪೂಜಾಕಾಲದಲ್ಲಿ ಭಕ್ತನು ಶಿವನಾಮವನ್ನು ಜಪಿಸುವುದು ಮಂತ್ರ. ಗುರು-ಲಿಂಗ-ಜಂಗಮರ ಪೂಜೆಯಿಂದ ಶಿಷ್ಯನು ಪಡೆಯುವ ಪ್ರತಿಫಲವೇ ಪಾದೋದಕ ಮತ್ತು ಪ್ರಸಾದ. ಈ ಎಂಟು ಆವರಣಗಳ ಸಹಾಯದಿಂದ ಭಕ್ತನು ಸ್ಥಿರವಾದ ಭಕ್ತಿಯನ್ನು ಪಡೆದು, ತನ್ನ ಗುರುವಿನ ಉಪದೇಶದಂತೆ ಪೂಜಾ ವಿಧಾನವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು (ವಿಭೂತಿಸ್ಥಲ-೬; ರುದ್ರಾಕ್ಷಸ್ಥಲ-೫; ಮಂತ್ರಸ್ಥಲ-೮, ಭಕ್ತಮಾರ್ಗಕ್ರಿಯಾಸ್ಥಲ-೭). ಶಿವಯೋಗಿ ಶಿವಾಚಾರ್ಯರು ಭಕ್ತಿಯನ್ನು ಒಂಬತ್ತು ವಿಧ ಎಂದು ನಿರೂಪಿಸುತ್ತಾರೆ:

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರವಣಂ ಕೀರ್ತನಂ ಶಂಭೋಃ ಸ್ಮರಣಂ ಪಾದಸೇವನಮ್।
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಮ್॥[೧೦]

"ಶಿವಸಂಬಂಧವಾದ ಕಥೆಗಳನ್ನು ಕೇಳುವುದು, ಶಿವನಾಮ ಸಂಕೀರ್ತನೆ, ಶಿವಸ್ವರೂಪವನ್ನು ಧ್ಯಾನಿಸುವುದು, ಶಿವನ ಪಾದಸೇವೆ, ಶಿವನ ಪೂಜೆ, ಶಿವನಿಗೆ ವಂದನೆ, ಶಿವನಿಗೆ ದಾಸನೆಂಬ ಭಾವ, ಶಿವನೊಂದಿಗೆ ಮೈತ್ರಿ ಮತ್ತು ಶಿವನಿಗೆ ತನ್ನನ್ನೇ ಅರ್ಪಿಸಿಕೊಳ್ಳುವುದು." ತಪಸ್ಸು, ಕರ್ಮ, ಜಪ, ಧ್ಯಾನ ಮತ್ತು ಜ್ಞಾನ[೧೧] -ಇವು ಐದು ವಿಧವಾದ 'ಭಜನ' ಎಂದರೆ ಸೇವೆ. ಸಿದ್ಧಾಂತ ಶಿಖಾಮಣಿಯು ಈ ಪಂಚಯಜ್ಞಗಳನ್ನು ಶಿವಯಜ್ಞಗಳೆಂದು ನಿರೂಪಿಸಿ, ಇವುಗಳ ಆಚರಣೆಯಿಂದ ವೀರಶೈವರಿಗೆ ಶಿವಜ್ಞಾನ ಲಭಿಸುತ್ತದೆ ಎಂದು ವಿವರಿಸುತ್ತದೆ.

ಅನಂತರ ಗುರು ಮತ್ತು ಲಿಂಗಗಳಲ್ಲಿ ವ್ಯತ್ಯಾಸವನ್ನು ಸಾಧಕನು ಮಾಡದೆ, ಎರಡರಲ್ಲಿಯೂ ಸಮನಾದ ಭಕ್ತಿಭಾವವುಳ್ಳವನಾಗುತ್ತಾನೆ. ಏಕೆಂದರೆ ಗುರುವನ್ನು ಪೂಜಿಸುವುದರಿಂದ ಸಾಕ್ಷಾತ್ ಶಿವನನ್ನೇ ಪೂಜಿಸಿದಂತಾಗುತ್ತದೆ (ಉಭಯಸ್ಥಲ-೧೦). ಇದೇ ರೀತಿಯಾಗಿ ಜಂಗಮನನ್ನೂ ಸಮಭಾವದಿಂದ ಕಾಣಬೇಕು. ಏಕೆಂದರೆ ಜಂಗಮನು ಎಲ್ಲ ವಿಧವಾದ ಸಂಸಾರದ ಬಂಧನದಿಂದ ಮುಕ್ತನಾಗಿದ್ದು ಯಾವುದೇ ರೀತಿಯ ದೈಹಿಕ ಲಾಲಸೆಯಿಲ್ಲದವನಾಗಿರುತ್ತಾನೆ (ತ್ರಿವಿಧಸಂಪತ್ತಿಸ್ಥಲ-೧೧). ಗುರು-ಲಿಂಗ-ಜಂಗಮರಲ್ಲಿನ ಭಕ್ತಿಯ ಕಾರಣದಿಂದ ಸಾಧಕನು ಅವರ ಪಾದೋದಕ ಮತ್ತು ಪ್ರಸಾದವನ್ನು ಪಡೆಯುವ ಅರ್ಹತೆಯನ್ನು ಪಡೆಯುತ್ತಾನೆ. ಗುರು-ಲಿಂಗ- ಜಂಗಮರ ಪಾದಸ್ಪರ್ಶದಿಂದ ಪವಿತ್ರವಾದ ಜಲವೇ ಪಾದೋದಕ. ಗುರು-ಲಿಂಗ- ಜಂಗಮರಿಗೆ ಅರ್ಪಿಸಿದ ವಸ್ತುಗಳನ್ನು ಅವರ ಅನುಗ್ರಹರೂಪವಾಗಿ ಹಿಂದಕ್ಕೆ ಪಡೆಯುವುದು ಪ್ರಸಾದ (ಪ್ರಸಾದಸ್ವೀಕಾರಸ್ಥಲ-೧೨). ಗುರು-ಲಿಂಗ -ಜಂಗಮರಲ್ಲಿ ಭಕ್ತಿಯನ್ನಿರಿಸಿ ಅವರ ಪಾದೋದಕ- ಪ್ರಸಾದಗಳನ್ನು ಪಡೆದ ಭಕ್ತನು, ಅವರಿಗೆ ಪ್ರತಿಫಲದ ಅಪೇಕ್ಷೆಯಿಂದ ಯಥಾಶಕ್ತಿ ದಾನಮಾಡಬೇಕು (ಸೋಪಾಧಿದಾನಸ್ಥಲ-೧೩). ಯಾವುದಾದರೂ ಫಲಾಪೇಕ್ಷೆಯ ಆಸೆಯಿಂದ ದಾನ ಮಾಡುವುದು ಮುಮುಕ್ಷುವಿನ ಉದ್ದೇಶವಲ್ಲ ಎಂಬುದನ್ನು ಕಾಲಾನಂತರದಲ್ಲಿ ಮನಗಂಡ ಸಾಧಕನು, ನಂತರದಲ್ಲಿ ಯಾವುದೇ ರೀತಿಯ ಸುಖ-ಸಂತೋಷಗಳ ಆಸೆಯಿಲ್ಲದೆ ದಾನ ಮಾಡುತ್ತಾನೆ (ನಿರೂಪಾಧಿದಾನಸ್ಥಲ-೧೪). ಆದ್ದರಿಂದ ದಾನ ಮಾಡುತ್ತಿರುವವನು, ದಾನವನ್ನು ಸ್ವೀಕರಿಸುವವನು ಮತ್ತು ದಾನ ಮಾಡುವ ವಸ್ತು ಇವುಗಳಲ್ಲೆಲ್ಲಾ ಶಿವಭಾವವುಂಟಾಗಿ, ತಾನು ದಾನ ಮಾಡುವುದಕ್ಕೂ, ಅದರ ಫಲವನ್ನು ಅನುಭವಿಸುವುದಕ್ಕೂ ಕರ್ತೃವಲ್ಲವೆಂಬ ಭಾವನೆಯುಂಟಾಗುತ್ತದೆ. (ಸಹಜದಾನ ಸ್ಥಲ-೧೫).

ಈ ಹದಿನೈದು ಭಕ್ತಸ್ಥಲದ ಅಂಗಸ್ಥಲಗಳು. ಶಿವದೀಕ್ಷೆ ಮತ್ತು ಗುರುವಿನ ಉಪದೇಶದ ಮೂಲಕ ಸಾಧಕನಿಗೆ ಹೇಗೆ ಶಿವ ವಿಷಯಕವಾದ ಭಕ್ತಿಯುಂಟಾಯಿತು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂಬುದನ್ನು ಈ ಸ್ಥಲಗಳು ನಿರೂಪಿಸುತ್ತವೆ. ಸಾಧಕನ ಭಕ್ತಿಯು ಹಂತ ಹಂತವಾಗಿ ಬೆಳೆದು ಭಸ್ಮ ರುದ್ರಾಕ್ಷ ಮತ್ತು ಮಂತ್ರಗಳಿಂದ ಗುರು-ಲಿಂಗ- ಜಂಗಮರ ಪೂಜೆಗೆ ತನ್ನನ್ನು ತಾನು ಸಮರ್ಪಿಸಿಕೊಂಡು, ಪ್ರತಿಫಲರೂಪವಾಗಿ ಪಾದೋದಕ ಮತ್ತು ಪ್ರಸಾದವನ್ನು ಸ್ವೀಕರಿಸುತ್ತಾನೆ. ಅಲ್ಲದೆ ತನ್ನನ್ನು ಗುರು-ಲಿಂಗ- ಜಂಗಮರ ಸೇವೆಯಲ್ಲಿ ನಿಸ್ವಾರ್ಥ ಭಾವನೆಯಿಂದ ತೊಡಗಿಸಿಕೊಳ್ಳುತ್ತಾನೆ. ಈ ಹಂತಗಳಲ್ಲಿ ನಿರೂಪಿತವಾಗಿರುವ ಕರ್ಮಗಳ ಅನುಷ್ಠಾನದ ಸಂದರ್ಭದಲ್ಲಿ, ಗುರು-ಲಿಂಗ- ಜಂಗಮರ ಆಧ್ಯಾತ್ಮಿಕತೆಯ ಹಿರಿತನವು ತನ್ನ ಭಕ್ತಿಗೆ ಪೋಷಕವೆಂದು ತಿಳಿಯುತ್ತಾನೆ. ಈ ಉದ್ದೇಶದಿಂದ ಭಕ್ತಸ್ಥಲದ ಅಡಿಯಲ್ಲಿ ಒಂಬತ್ತು ಲಿಂಗಸ್ಥಲಗಳನ್ನು ಹೇಳಲಾಗಿದೆ. ಧಾರ್ಮಿಕ ಆಚರಣೆಗಳ ಜೊತೆ ಜೊತೆಗೇ ಭಕ್ತನು ಈ ಸ್ಥಲಗಳ ಜ್ಞಾನವನ್ನು ಪಡೆಯುತ್ತಾನೆ. ಈ ಲಿಂಗಸ್ಥಲಗಳ ಪರಿಚಯವನ್ನು ಇಲ್ಲಿ ಕೊಡಲಾಗಿದೆ:

ಭಕ್ತನಿಗೆ ಶಿವದೀಕ್ಷೆಯನ್ನು ಮಾಡಿ ತನ್ನ ಉಪದೇಶದ ಮೂಲಕ ಅವನಿಗೆ ಜ್ಞಾನವುಂಟಾಗುವಂತೆ ಮಾಡುವವನೇ 'ಗುರು' ಎಂದು ಮೊದಲಿನ ಮೂರು ಲಿಂಗಸ್ಥಲಗಳಲ್ಲಿ ನಿರೂಪಿಸಲಾಗಿದೆ. ಹುಟ್ಟು-ಸಾವುಗಳೆಂಬ ಬಂಧನದಿಂದ ಬಿಡುಗಡೆ ಮಾಡುವ ಉದ್ದೇಶದಿಂದ ಗುರು ಶಿಷ್ಯನಿಗೆ ಪಿಂಡದೀಕ್ಷೆಯನ್ನು ಮಾಡುತ್ತಾನೆ (ದೀಕ್ಷಾಗುರುಸ್ಥಲ-೧೬). ದೀಕ್ಷೆಯ ನಂತರ ಯಾವ ಗುರುವು ಭಕ್ತನಿಗೆ ಸೂಕ್ತಕಾಲದಲ್ಲಿ ಉಪದೇಶ ಮತ್ತು ಮಾರ್ಗದರ್ಶನ ಮಾಡುವ ಕಾರ್ಯದಲ್ಲಿ ನಿರತನಾಗಿರುತ್ತಾನೆಯೋ ಅವನು ಶಿಕ್ಷಾಗುರು (ಶಿಕ್ಷಾ ಗುರುಸ್ಥಲ-೧೭). ಭಕ್ತನ ಎಲ್ಲ ವಿಧವಾದ ಸಂದೇಹಗಳನ್ನು ನಿವಾರಿಸಿ, ಶಿವನೇ ಪರಮೋಚ್ಚದೇವ, ಆತನಲ್ಲಿ ಸಾಮರಸ್ಯವನ್ನು ಹೊಂದುವುದೇ ಜೀವನದ ಅಂತಿಮ ಗುರಿ ಎಂಬ ಜ್ಞಾನವನ್ನು ಬೋಧಿಸುವವನು ಜ್ಞಾನಗುರು. ಇಲ್ಲಿ ಗುರುವಿನ ಉಪದೇಶವು ಜೀವಾತ್ಮ (ಅಂಗ), ಪರಮಾತ್ಮ (ಲಿಂಗ) ಮತ್ತು ಈಶ್ವರ ಹಾಗೂ ಸಹಜೀವಿಗಳ ಬಗ್ಗೆ ಜೀವಾತ್ಮನ ಕರ್ತವ್ಯಗಳ ವಿಷಯವನ್ನು ಒಳಗೊಂಡಿರುತ್ತದೆ. ಭಕ್ತನ ಯೋಚನೆ ಮತ್ತು ಕ್ರಿಯೆಗಳು ಶಿವನೆಡೆಗೆ ತಿರುಗುತ್ತವೆ. ತನ್ನ ಆಂತರಿಕ ಚೈತನ್ಯದ ಪ್ರತ್ಯಕ್ಷರೂಪವಾದ ಇಷ್ಟಲಿಂಗದ ಪೂಜೆಯು ಭಕ್ತನ ಪ್ರಮುಖವಾದ ಕರ್ತವ್ಯ ಮತ್ತು ಪ್ರೀತಿ, ಸೌಜನ್ಯ, ಔದಾರ್ಯ, ಹಿರಿಯರಿಗೆ ಗೌರವ ಮುಂತಾದವುಗಳು ಇತರರ ವಿಷಯದಲ್ಲಿ ಆತನು ಆಚರಿಸಬೇಕಾದ ಕರ್ತವ್ಯಗಳು. ಈ ವಿಷಯದಲ್ಲಿ ದೀಕ್ಷಾದಿ ರೂಪ ತಾಳಿದ ಗುರುವಿನ ಉಪದೇಶಗಳು ಒಂದಕ್ಕೊಂದು ಪ್ರತ್ಯೇಕವಲ್ಲ, ಪರಸ್ಪರ ಪೂರಕ (ಜ್ಞಾನಗುರುಸ್ಥಲ-೧೮).

ಗುರುವಿನ ಉಪದೇಶದ ಫಲವಾಗಿ ದೀಕ್ಷಾ ಸಮಯದಲ್ಲಿ ಗುರು ನೀಡಿದ ಇಷ್ಟಲಿಂಗವೇ ಅತ್ಯುತ್ತಮವಾದ ತತ್ತ್ವ, ಪರಶಿವ-ಬ್ರಹ್ಮನ ಪೂಜೆಯೊಂದೇ ಶಿವನಲ್ಲಿ ಸಾಮರಸ್ಯವನ್ನು ಹೊಂದಲು ಇರುವ ಸಾಧನವೆಂದು ಭಕ್ತನು ಮನಸ್ಸಿನಲ್ಲಿ ಭಾವಿಸುತ್ತಾನೆ. ಆದ್ದರಿಂದ ಬೇರೆಲ್ಲ ಧಾರ್ಮಿಕ ಕ್ರಿಯೆಗಳನ್ನು ತಿರಸ್ಕರಿಸುತ್ತಾನೆ (ಕ್ರಿಯಾಲಿಂಗಸ್ಥಲ-೧೯).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಷ್ಟಲಿಂಗದ ವ್ಯವಸ್ಥಿತವಾದ ಪೂಜೆಯು ಭಾವಲಿಂಗದ ಕಲ್ಪನೆಯನ್ನು ಭಕ್ತನಿಗೆ ಶೀಘ್ರವಾಗಿ ಉಂಟುಮಾಡುತ್ತದೆ. ಈ ಭಾವಲಿಂಗವನ್ನು ಭಕ್ತನ ಶರೀರದಿಂದ ತೆಗೆದು ದೀಕ್ಷಾ ಕಾಲದಲ್ಲಿ ಗುರುವು ಇಷ್ಟಲಿಂಗದಲ್ಲಿ ತುಂಬಿರುತ್ತಾನೆ. ಭಾವಲಿಂಗವನ್ನು ಮನಸ್ಸಿನ ಸೂಕ್ಷ್ಮ ಭಾವನೆಗಳಾದ ಅಹಿಂಸಾ, ದಯಾ ಮುಂತಾದವುಗಳಿಂದ ಪೂಜಿಸಬೇಕು. ಇಷ್ಟಲಿಂಗ ಪೂಜೆಯು ಭಕ್ತನನ್ನು ಬಾಹ್ಯವಾಗಿ ಶುದ್ಧಿಗೊಳಿಸಿದರೆ, ಭಾವಲಿಂಗವು ಆಂತರಿಕವಾಗಿ ಶುದ್ಧಿಗೊಳಿಸುತ್ತದೆ (ಭಾವಲಿಂಗಸ್ಥಲ-೨೦). ಭಕ್ತನ ಬಾಹ್ಯ ಮತ್ತು ಆಂತರಿಕ ಶುದ್ಧತೆಗಳು 'ಜ್ಞಾನಲಿಂಗ'ವೆಂಬ ಮತ್ತೊಂದು ಲಿಂಗದ ಜ್ಞಾನವನ್ನು ಉಂಟುಮಾಡುತ್ತದೆ. ಈ ಜ್ಞಾನಲಿಂಗವು ಅತ್ಯುತ್ತಮ ಲಿಂಗವಾಗಿದ್ದು, ಜಗತ್ತಿನ ಸೃಷ್ಟಿಗೆ ಮೂಲ ಕಾರಣವಾಗಿದೆ. ಇಂತಹ ಜ್ಞಾನಲಿಂಗದ ಕಲ್ಪನೆಯು ಭಕ್ತನ ಹೆಬ್ಬಯಕೆಯ ಕೊನೆಯ ಮಿತಿಯಾಗಿದ್ದು, ಇದನ್ನು ತೃಪ್ತಿಲಿಂಗವೆಂದು ಕರೆಯುತ್ತಾರೆ. ಇದು ಭಕ್ತನಿಗೆ ಮೋಕ್ಷವನ್ನುಂಟುಮಾಡುತ್ತದೆ (ಜ್ಞಾನಲಿಂಗಸ್ಥಲ-೨೧).

ಭಕ್ತನ ಆತ್ಮಜ್ಞಾನವು ಯಾವಾಗ ಜ್ಞಾನಲಿಂಗದ ಜ್ಞಾನದಲ್ಲಿ ಲೀನವಾಗುತ್ತದೆಯೋ ಆಗ ಭಕ್ತನು 'ಶಿವಲಿಂಗಿ' ಎನಿಸಿಕೊಳ್ಳುತ್ತಾನೆ. ಈ ಶಿವಲಿಂಗಿ ಜ್ಞಾನವು ಅವನನ್ನು ಅಹಂಕಾರ, ಮಮಕಾರ ಮತ್ತು ಕ್ಲೇಶಗಳಿಂದ ಮುಕ್ತನನ್ನಾಗಿ ಮಾಡುತ್ತದೆ. ಆದ್ದರಿಂದ ಭಕ್ತನು ಜೀವನದ ಎಲ್ಲ ಹಂತಗಳಲ್ಲಿಯೂ ಸಮಭಾವವನ್ನು ತಾಳುತ್ತಾನೆ (ಸ್ವಸ್ಥಲ-೨೨). ಈ ವಿಧವಾದ ಸಮರಸಭಾವದಿಂದ (ತಾನು ಮತ್ತು ಶಿವ ಒಂದೇ ಎಂಬ ಭಾವನೆ) ಕೂಡಿರುವ ಯೋಗಿಯು ಕಾಮ, ಕ್ರೋಧ..... ಮುಂತಾದವುಗಳಿಲ್ಲದೆ ಶಿವನನ್ನು ಎಲ್ಲೆಡೆಯೂ ಕಾಣುತ್ತಾ, ಪ್ರತಿಯೊಬ್ಬರಿಗೂ ಶಿವನನ್ನು ಕುರಿತು ಬೋಧಿಸುತ್ತಾ ಪ್ರಪಂಚದಲ್ಲೆಲ್ಲಾ ಅಲೆಯುತ್ತಾನೆ. ಆದ್ದರಿಂದ ಅವನು 'ಚರ' ಅಥವಾ 'ಜಂಗಮ' ಎನಿಸಿಕೊಳ್ಳುತ್ತಾನೆ (ಚರಸ್ಥಲ -೨೩). ಪರಶಿವನಿಗೂ ತನಗೂ ತಾದಾತ್ಮ್ಯವನ್ನು ಕಲ್ಪಿಸಿಕೊಂಡು ಶಾಶ್ವತವಾದ ಶಿವತತ್ತ್ವವನ್ನು ಧ್ಯಾನಿಸುತ್ತಾನೆ. ಈ ರೀತಿಯಾಗಿ ಮಾಡುವುದರಿಂದ ಅವನು ಜೀವಂತವಿರುವಾಗಲೇ ಸಂಸಾರ ಬಂಧನದಿಂದ ಮುಕ್ತನಾಗಿರುತ್ತಾನೆ (ಪರಸ್ಥಲ-೨೪).

ಮೇಲೆ ನಿರೂಪಿಸಿದ ಭಕ್ತಸ್ಥಲದ ಭೇದಗಳಾದ ಅಂಗಸ್ಥಲ ಮತ್ತು ಲಿಂಗಸ್ಥಲಗಳು ಪರಸ್ಪರ ಪೂರಕವಾಗಿದ್ದು, ಅವುಗಳನ್ನು ಒಟ್ಟಾಗಿ ತೆಗೆದುಕೊಂಡರೆ ಭಕ್ತನ ಸದಾಚಾರ ಮತ್ತು ಜ್ಞಾನವನ್ನು ಕ್ರಮವಾಗಿ ತಿಳಿಸುತ್ತವೆ. ವಸ್ತುವಿನ ಜ್ಞಾನವಿಲ್ಲದೆ ಯಾವುದೇ ವಿಧವಾದ ಆಚರಣೆಯನ್ನು ಮಾಡಬಾರದು. ಆಚರಣೆಯಿಲ್ಲದ ಜ್ಞಾನ ನಿಷ್ಪ್ರಯೋಜನ. ಆದ್ದರಿಂದ ಅಂಗಸ್ಥಲ ಮತ್ತು ಲಿಂಗಸ್ಥಲಗಳನ್ನು ಒಟ್ಟಿಗೆ ಅರಿಯಬೇಕು. ಆದರೆ ಅವುಗಳ ಕ್ರಮವೇ ಬೇರೆ. ಉದಾಹರಣೆಗೆ- ದೀಕ್ಷಾಗುರುಸ್ಥಲ (ಲಿಂಗಸ್ಥಲ-೧೬) ಸಂಸಾರ ಹೇಯಸ್ಥಲದ (ಅಂಗಸ್ಥಲ-೩) ನಂತರ ಬರುತ್ತದೆ. ಲಿಂಗಧಾರಣಸ್ಥಲದಿಂದ ಭಕ್ತಿಮಾರ್ಗಕ್ರಿಯಾ ಸ್ಥಲದವರೆಗೆ (ಅಂಗಸ್ಥಲ ೫ ರಿಂದ ೯) ಶಿಕ್ಷಾಗುರುಸ್ಥಲದ (ಲಿಂಗಸ್ಥಲ -೧೭)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವಶ್ಯಕತೆಯಿದೆ. ಗುರು-ಲಿಂಗ- ಜಂಗಮ ಮತ್ತು ಅವರ ಪಾದೋದಕ ಮತ್ತು ಪ್ರಸಾದ (ಉಭಯಸ್ಥಲದಿಂದ ಪ್ರಸಾದ ಸ್ವೀಕಾರಸ್ಥಲದವರೆಗೆ- ಅಂಗಸ್ಥಲ ೧೦-೧೨) ಇವುಗಳ ವಿಷಯದಲ್ಲಿ ಒಂದೇ ರೀತಿಯ ಭಕ್ತಿಯುಂಟಾಗಲು ಜ್ಞಾನಗುರುಸ್ಥಲ (ಲಿಂಗಸ್ಥಲ-೧೮) ಕಾರಣ. ಆದ್ದರಿಂದ ಅವುಗಳು ಅಂಗಸ್ಥಲ ಮತ್ತು ಲಿಂಗಸ್ಥಲಗಳ ಅಡಿಯಲ್ಲಿ ನಿರೂಪಿತವಾಗಿದ್ದರೂ, ಅವುಗಳನ್ನು ಪ್ರತಿಯೊಂದು ಸ್ಥಲದ ಅಡಿಯಲ್ಲಿ ಒಟ್ಟಿಗೇ ತೆಗೆದುಕೊಳ್ಳಬೇಕು.

ಕೊನೆಯದಾಗಿ, ಮುಂದಿನ ಐದು ಸ್ಥಲಗಳ ಬೀಜವನ್ನು ಭಕ್ತಸ್ಥಲದಲ್ಲಿಯೇ ಗುರುತಿಸಬಹುದಾಗಿದೆ. ಭಕ್ತಸ್ಥಲವು ವೀರಶೈವರ ಆಧ್ಯಾತ್ಮಿಕ ಪ್ರಕ್ರಿಯೆಯ ಮೊದಲಿನ ಮೆಟ್ಟಲಾಗಿರದೆ, ವೀರಶೈವ ಸಿದ್ಧಾಂತದ ಮೂಲತತ್ತ್ವವನ್ನೇ ಒಳಗೊಂಡಿದೆ.

ವೈರಾಗ್ಯದ ಗಾಢತ್ವದಿಂದ ಬೇರೆ ದೇವತೆಗಳ ಪೂಜೆಯನ್ನು ತ್ಯಜಿಸಿ ಇಷ್ಟಲಿಂಗದಲ್ಲಿನ ಅತಿಶಯವಾದ ಭಕ್ತಿ ಮತ್ತಷ್ಟು ಗಾಢವಾಗುತ್ತದೆ ಎಂಬ ಮಾಹೇಶ್ವರಸ್ಥಲದ ಮೂಲವು ದೀಕ್ಷಾಗುರು (೧೬), ಗುರುಕಾರುಣ್ಯ (೪), ಲಿಂಗಧಾರಣ (೫), ವಿಭೂತಿ (೬), ರುದ್ರಾಕ್ಷ (೭), ಪಂಚಾಕ್ಷರೀಜಪ (೮) ಮತ್ತು ಭಕ್ತಿಮಾರ್ಗಕ್ರಿಯಾ (೯) ಎಂಬ ಉಪಸ್ಥಲಗಳಲ್ಲಿ ಕಂಡುಬರುತ್ತದೆ.

ಭಕ್ತನು ತನ್ನ ಅಚಲವಾದ ಭಕ್ತಿಯಿಂದ ಎಲ್ಲ ಪಾಪಗಳಿಂದ ಮುಕ್ತನಾಗಿ, ಗುರು-ಲಿಂಗ-ಜಂಗಮರ ಮತ್ತು ಅವರ ಪಾದೋದಕ ಮತ್ತು ಪ್ರಸಾದಗಳ ವಿಷಯದಲ್ಲಿ ವ್ಯತ್ಯಾಸದ ಜ್ಞಾನವನ್ನು ನಿವಾರಿಸುವ ಮಾನಸಿಕ ಪರಿಶುದ್ಧತೆಯನ್ನು ಪಡೆಯುತ್ತಾನೆ ಎಂಬ ಪ್ರಸಾದಿಸ್ಥಲದ ಬೇರುಗಳನ್ನು ಉಭಯ (೧೦), ತ್ರಿವಿಧಸಂಪತ್ತಿ (೧೧), ಪ್ರಸಾದಸ್ವೀಕಾರ (೧೨) ಎಂಬ ಉಪಸ್ಥಲಗಳಲ್ಲಿ ಗುರುತಿಸಬಹುದಾಗಿದೆ.

ಜ್ಞಾನ ಸ್ವರೂಪವಾದ ಬ್ರಹ್ಮವೇ ಶಿವಲಿಂಗ ಮತ್ತು ಶಕ್ತಿಯು (ಪೀಠ) ಅದರ ಆತ್ಮ ಎಂಬ ಪ್ರಾಣಲಿಂಗಿಯ ಸ್ವರೂಪವು ಕ್ರಿಯಾಲಿಂಗ, ಭಾವಲಿಂಗ ಮತ್ತು ಜ್ಞಾನಲಿಂಗ ಎಂಬ ಉಪಸ್ಥಲಗಳ ನಿರೂಪಣೆಯಲ್ಲಿ ಬರುವ ಗುರುವಿನ ಉಪದೇಶದಲ್ಲಿ ಕಂಡುಬರುತ್ತದೆ.

ಲಿಂಗ-ಅಂಗಗಳ ತಾದಾತ್ಮ್ಯವನ್ನು ಹೇಳುವ ಶರಣಸ್ಥಲದ ಸ್ವರೂಪವು ಶಿವಲಿಂಗಿ (೨೨) ಮತ್ತು ಚರಲಿಂಗ (೨೩) ಎಂಬ ಉಪಸ್ಥಲಗಳಲ್ಲಿ ಕಂಡುಬರುತ್ತದೆ. ಈ ಸ್ಥಲಗಳಲ್ಲಿ ಭಕ್ತನು ತನ್ನನ್ನು ಶಿವನೊಡನೆ ತಾದಾತ್ಮ್ಯತೆಯಿಂದ ಕಲ್ಪಿಸಿಕೊಂಡು ಶಿವನನ್ನು ಎಲ್ಲೆಡೆಯೂ ಕಾಣುತ್ತಾನೆ.

ಶಿವನೂ ತಾನೂ ಒಂದೇ ಎಂಬ ಸಾಧಕನ ಸಾಮರಸ್ಯ ಸ್ಥಿತಿಯನ್ನು ನಿರೂಪಿಸುವ ಐಕ್ಯಸ್ಥಲದ ಮೂಲವನ್ನು ಪರಸ್ಥಲ (೨೪) ಮತ್ತು ಭಕ್ತಸ್ಥಲ ಎಂಬ ಉಪಸ್ಥಲಗಳಲ್ಲಿ ಕಾಣಬಹುದಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಷಟ್‌ಸ್ಥಲ ವ್ಯವಸ್ಥೆಯ ಕೊನೆಯ ಐದು ಸ್ಥಲಗಳ ವಿಷಯವು ಭಕ್ತಸ್ಥಲದಲ್ಲಿ ಬಿತ್ತಿದ ಬೀಜದ ವಿಸ್ತಾರವಷ್ಟೆ. ಶಿವಯೋಗಿ ಶಿವಾಚಾರ್ಯರು ಸಿದ್ಧಾಂತ ಶಿಖಾಮಣಿಯ ಐದು ಅಧ್ಯಾಯಗಳಲ್ಲಿ (ಅಧ್ಯಾಯ ೫ ರಿಂದ ೯ ರವರೆಗೆ) ಭಕ್ತಸ್ಥಲದ ನಿರೂಪಣೆಯನ್ನು ಮಾಡಿದ್ದರೆ, ಉಳಿದ ಐದು ಸ್ಥಲಗಳ ನಿರೂಪಣೆಗೆ ತಲಾ ಒಂದೊಂದು ಅಧ್ಯಾಯವನ್ನು (ಅಧ್ಯಾಯ ೧೦,೧೧,೧೨,೧೩, ಮತ್ತು೧೪) ಮೀಸಲಿಟ್ಟಿರುವುದರಿಂದಲೇ ಮೇಲಿನ ಅಂಶವು ಸ್ಪಷ್ಟವಾಗುತ್ತದೆ.

ಪರಾಮರ್ಶನ ಗ್ರಂಥಗಳು:

೧. Dr. S.C. Nandimath-A Hand Book of Virasaivism: Motilal Banarsidass, Delhi,1979.

೨. Dr. H.P. Malledevaru -Essentials of Virasaivism, Bharatiya Vidya Bhavan, Bombay, 1973.

೩. ಡಾ।। ಎಂ. ಶಿವಕುಮಾರಸ್ವಾಮಿ -ಸಿದ್ಧಾಂತ ಶಿಖಾಮಣಿ ಒಂದು ಅಧ್ಯಯನ, ಭಾರವಿ ಪ್ರಕಾಶನ, ಬೆಂಗಳೂರು, ೧೯೮೭.

೪. ಡಾ।। ಎಂ. ಶಿವಕುಮಾರಸ್ವಾಮಿ -ಶ್ರೀ ಜಗದ್ಗುರು ರೇಣುಕಗೀತಾ, ರೀಸರ್ಚ್ ಇನ್‌ಸ್ಟಿಟ್ಯೂಟ್ ಆಫ್ ರಿಲಿಜನ್ ಅಂಡ್ ಫಿಲಾಸಫಿ, ಉಜ್ಜನಿ, ೧೯೬೮.

೫. ಶಿವಯೋಗಿ ಶಿವಾಚಾರ್ಯ- ಸಿದ್ಧಾಂತ ಶಿಖಾಮಣಿ: ಸಂ. ಡಾ।। ಸಂ. ಶಿ.ಭೂಸನೂರಮಠ ಮತ್ತು ಡಾ. ಎಸ್.ಜಿ. ಘಿವಾರಿ, ಶ್ರೀ ಮದ್ವೀರಶೈವ ಶಿವಯೋಗಮಂದಿರ, ನಾಗನೂರು, ೧೯೯೨.

ಅಡಿಟಿಪ್ಪಣಿ

೧. A Hand Book of Virasaivism, P. 56.

೨. ಶಿವಾನುಭವಸೂತ್ರಮ್, II,V. ೪ ಮತ್ತು ೮, ಪು. ೧೭-೧೮ (ಹೋಲಿಸಿ: Essentials of Virasaivism, P. 15).

೩. ಸಿದ್ಧಾಂತ ಶಿಖಾಮಣಿ, V. ೨೬.

೪. ಬಹುಜನ್ಮಕೃತೈಃ ಪುಣ್ಯೈಃ ಪ್ರಕ್ಷೀಣೇ ಪಾಪಪಂಜರೇ।
ಶುದ್ಧಾಂತಃಕರಣೋ ದೇಹೀ ಪಿಂಡಶಬ್ದೇನ ಗೀಯತೇ।। -ಅದೇ, V. ೩೨.

೫. ಶರೀರಾತ್ ಪೃಥಗಾತ್ಮಾನಂ ಆತ್ಮನಃ ಪೃಥಗೀಶ್ವರಮ್।
ಪ್ರೇರಕಂ ಚ ವಿಜಾನಾತಿ ಪಿಂಡಜ್ಞಾನೀ ಸ ಕಥ್ಯತೇ।। -ಅದೇ. V. ೬೧.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೬. ನಿರಸ್ತಹೃತ್ಕಲಂಕಸ್ಯ ನಿತ್ಯಾನಿತ್ಯವಿವೇಕಿನಃ।
ಸಂಸಾರಹೇಯತಾಬುದ್ಧಿರ್ಜಾಯತೇ ವಾಸನಾಬಲಾತ್॥ -ಅದೇ. v. ೬೨.

೭. ಅತಿಶುದ್ಧೇನ ಶಿಷ್ಯೇನ ಪ್ರಾರ್ಥಿತಃ ಪರಮೋ ಗುರುಃ।
ಶಕ್ತಿಪಾತಂ ಸಮಾಲೋಕ್ಯ ದೀಕ್ಷಯಾ ಯೋಜಯೇದಮುಮ್॥

ರೇಣುಕ ಗೀತ, ಪು. ೨೪-೧.

೮. ವೇಧಾರೂಪಾ ಕ್ರಿಯಾರೂಪಾ ಮಂತ್ರರೂಪಾ ಚ ತಾಪಸ।
ಗುರೋರಾಲೋಕಮಾತ್ರೇಣ ಹಸ್ತಮಸ್ತಕಯೋಗತಃ॥
ಯಃ ಶಿವತ್ವಸಮಾವೇಶೋ ವೇಧಾದೀಕ್ಷೇತಿ ಸಾ ಮತಾ।
ಮಾಂತ್ರೀದೀಕ್ಷೇತಿ ಸಾ ಪ್ರೋಕ್ತಾ ಮಂತ್ರಮಾತ್ರೋಪದೇಶಿನೀ॥
ಕುಂಡಕುಂಡಲಿಕೋಪೇತಾ ಕ್ರಿಯಾದೀಕ್ಷಾ ಕ್ರಿಯೋತ್ತರಾ।

-ಸಿದ್ಧಾಂತ ಶಿಖಾಮಣಿ, vi, ೧೩-೧೫.

೯. ಅದೇ. vi. ೨೬-೨೭.

೧೦. ಅದೇ. ix. ೨.

೧೧. ಪಂಚಧಾ ಕಥ್ಯತೇ ಸದ್ಭಿಸ್ತದೇವ ಭಜನಂ ಪುನಃ।
ತಪಃ ಕರ್ಮ ಜಪೋಧ್ಯಾನಂ ಜ್ಞಾನಂ ಚೇತ್ಯನುಪೂರ್ವಕಮ್॥
....
ಇತಿ ಪಂಚಪ್ರಕಾರೋಽಯಂ ಶಿವಯಜ್ಞಃ ಪ್ರಕೀರ್ತಿತಃ।

-ಅದೇ. IX.೨೧-೨೨.

೧೨. ಭಕ್ತೇರ್ಯದಾ ಸಮುತ್ಕರ್ಷೋ ಭವೇದ್ ವೈರಾಗ್ಯಗೌರವಾತ್।
ತದಾ ಮಹೇಶ್ವರಃ ಪ್ರೋಕ್ತೋ ಭಕ್ತಃ ಸ್ಥಿರವಿವೇಕವಾನ್॥ -ಅದೇ. x. ೩.

೧೩. ಲಿಂಗನಿಷ್ಠಾದಿಭಾವೇನ ಧ್ವಸ್ತಪಾಪನಿಬಂಧನಃ।
ಮನಃಪ್ರಸಾದಯೋಗೇನ ಪ್ರಸಾದೀತ್ಯೇಷ ಕಥ್ಯತೇ॥ -ಅದೇ xi. ೨.

೧೪. ಲಿಂಗಂ ಚಿದಾತ್ಮಕಂ ಬ್ರಹ್ಮ ತಚ್ಛಕ್ತಿಃ ಪ್ರಾಣರೂಪಿಣೀ।
ತದ್ರೂಪಲಿಂಗವಿಜ್ಞಾನೀ ಪ್ರಾಣಲಿಂಗೀತಿ ಕಥ್ಯತೇ॥ -ಅದೇ xii. ೩.

೧೫. ಅಂಗಲಿಂಗಿಜ್ಞಾನರೂಪಃ ಸತೀ ಜ್ಞೇಯಃ ಶಿವಃ ಪತಿಃ।
ಯತ್ಸೌಖ್ಯಂ ತತ್ಸಮಾವೇಶಾತ್ ತದ್ವಾನ್ ಶರಣನಾಮವಾನ್॥ -ಅದೇ. xiii. ೨.

೧೬. ಪ್ರಾಣಲಿಂಗಾದಿಯೋಗೇನ ಸುಖಾತಿಶಯಮೇಯಿವಾನ್।
ಶರಣಾಖ್ಯಃ ಶಿವೇನೈಕ್ಯಭಾವನಾದೈಕ್ಯವಾನ್ ಭವೇತ್॥ -ಅದೇ. xiv. ೨.

❑

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೫. ಮಾಹೇಶ್ವರ ಮತ್ತು ಪ್ರಸಾದಿ ಸ್ಥಲಗಳಲ್ಲಿ ಸಾಧಕ

-ವಿದ್ವಾನ್ ಎನ್.ಕೆ. ಮೃತ್ಯುಂಜಯಸ್ವಾಮಿ

ಸಾಧಕನೆಂದರೆ ಗುರುವಿನ ಮೂಲಕ ತ್ರಿವಿಧ ದೀಕ್ಷೆಯನ್ನು ಪಡೆದಿರುವವ. ಆದ್ದರಿಂದಲೇ ಲಿಂಗಾಂಗ ಸಾಮರಸ್ಯ ರೂಪವಾದ ಮೋಕ್ಷಕ್ಕೆ ಅರ್ಹನಾದ ಅಥವಾ ಅಧಿಕಾರಿಯಾದ ಅಂಗ (ಜೀವ)ನು ಅಂಗನೆನಿಸದೆ ಲಿಂಗಾಂಗ ಸಾಮರಸ್ಯಕ್ಕೆ ವಸ್ತುತಃ ಅನಧಿಕಾರಿ. ಆದ್ದರಿಂದಲೇ ಸಾಧಕ ಪದಕ್ಕೆ ಇಲ್ಲಿ 'ಅಂಗ' ಎಂಬ ಅರ್ಥವನ್ನೇ ಸ್ವೀಕರಿಸಬೇಕು. ಈ ಅಂಗನು ಶ್ರದ್ಧಾಭಕ್ತಿಯಿಂದಾಗಿ ಭಕ್ತನೆನಿಸುತ್ತಾನೆ. ಈ ಸ್ಥಿತಿಯು ಮುಂದೆ ನಿಷ್ಠಾಭಕ್ತಿಯುಕ್ತ ಮಾಹೇಶ್ವರ ಸ್ಥಲಕ್ಕೆ ಕಾರಣವಾಗುತ್ತದೆ. ಈ ನಿಷ್ಠಾಭಕ್ತಿಯು ಅವಧಾನ ಭಕ್ತಿಯಾಗಿ ಪರಿಣಮಿಸುವುದರಿಂದ ಈ ಮಾಹೇಶ್ವರ ನಾಮಕ ಅಂಗನು ಪ್ರಸಾದಿ ಎನಿಸುತ್ತಾನೆ.

ಹೀಗೆ ಅಂಗನು ಲಿಂಗನಾಗಲು ಈ ಕ್ರಮವಾದ ಹಂತಗಳ ಏರಿಕೆ ಅಂಗನಿಗೆ ಅತ್ಯವಶ್ಯ. ಈ ಪ್ರಧಾನ ಸ್ಥಲಗಳಾದ ಮಾಹೇಶ್ವರ- ಪ್ರಸಾದಿಸ್ಥಲಗಳಲ್ಲಿಯೂ ಅವಾಂತರ ಪ್ರಕಾರಗಳೂ ಉಂಟು, ಅಂದರೆ ಭಕ್ತನು ಮಾಹೇಶ್ವರನಾಗಲು ಭಕ್ತಸ್ಥಲದ ಅವಾಂತರ ಪ್ರಕಾರಗಳು ಹೇಗೆ ಕಾರಣಗಳೋ ಹಾಗೆಯೇ ಮಾಹೇಶ್ವರನು ಪ್ರಸಾದಿಯಾಗಲು ಮಾಹೇಶ್ವರಸ್ಥಲದ ಅವಾಂತರ ಪ್ರಕಾರಗಳು ಮತ್ತು ಈ ಪ್ರಸಾದಿಯು ಪ್ರಾಣಲಿಂಗಿಯಾಗಲು ಪ್ರಸಾದಿಸ್ಥಲದ ಅವಾಂತರ ಪ್ರಕಾರಗಳೂ ಸಹ ಮುಖ್ಯಕಾರಣಗಳೆಂಬುದೂ ಅತ್ಯಂತ ಗಮನಾರ್ಹ.

ಆದ್ದರಿಂದಲೇ ಶ್ರೀ ಶಿವಯೋಗಿ ಶಿವಾಚಾರ್ಯರು ಮಾಹೇಶ್ವರ ಸ್ಥಲದಲ್ಲಿ ಒಟ್ಟು ಒಂಬತ್ತು ಅವಾಂತರ ಪ್ರಕಾರಗಳನ್ನು ಹೇಳುತ್ತಾರೆ. ಹಾಗೆಯೇ ಪ್ರಸಾದಿ ಸ್ಥಲದಲ್ಲಿ ಒಟ್ಟು ಏಳು ಅವಾಂತರ ಪ್ರಕಾರಗಳನ್ನು ಹೇಳುತ್ತಾರೆ. ಇವುಗಳ ಕ್ರಮವರಿತ ವಿವರಣೆಯು ಕ್ರಮವಾಗಿ ಮಾಹೇಶ್ವರಸ್ಥಲಾಪನ್ನನಾದ ಅಂಗನು ಹೇಗೆ ಪ್ರಸಾದಿಸ್ಥಲಾಪನ್ನನಾಗುತ್ತಾನೆ ಮತ್ತು ಪ್ರಸಾದಿಸ್ಥಲಾಪನ್ನನಾದ ಈತನು ಹೇಗೆ ಪ್ರಾಣಲಿಂಗಿಸ್ಥಲಾಪನ್ನನಾಗುತ್ತಾನೆ ಎಂಬ ವಿಷಯವು ಸುಸ್ಪಷ್ಟವಾಗುತ್ತದೆ. ಆದ್ದರಿಂದಲೇ ಇವುಗಳ ಕ್ರಮವರಿತ ವಿವರಣೆಯನ್ನು ಹೀಗೆ ನೋಡಬಹುದು-

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧. ಮಾಹೇಶ್ವರಪ್ರಶಂಸಾಸ್ಥಲ–

ವಿಶ್ವಸ್ಮಾದಧಿಕೋರುದ್ರೋ ವಿಶ್ವಾನುಗ್ರಹಕಾರಕಃ।
ಇತಿ ಯಸ್ಯ ಸ್ಥಿರಾ ಬುದ್ಧಿಃ ಸ ವೈ ಮಾಹೇಶ್ವರಃ ಸ್ಮೃತಃ॥

ಈ ಸ್ಥಲದಲ್ಲಿ ಇರತಕ್ಕಂಥ ಸಾಧಕನು ಶಿವನನ್ನೇ ಸಮಸ್ತ ಪ್ರಪಂಚಕ್ಕಿಂತಲೂ ಅಧಿಕ, ಸಮಸ್ತ ಪ್ರಪಂಚಕ್ಕೂ ಅನುಗ್ರಹ ಮಾಡುವವನು ಶಿವನೇ ಆಗಿದ್ದಾನೆ ಎಂದು ಸ್ಥಿರವಾದ ಬುದ್ಧಿಯುಳ್ಳವನಾಗಿರಬೇಕು. ಈ ವಿಷಯವನ್ನೇ ಶ್ವೇತಾಶ್ವತರ ಶೃತಿಯಲ್ಲಿಯೂ 'ಯೋ ದೇವಾನಾಂ....... ವಿಶ್ವಾಧಿಕೋ ರುದ್ರೋ ಮಹರ್ಷಿಃ' ಮತ್ತು 'ಯೋ ವೇದಾದೌ ಸ್ವರಃಪ್ರೋಕ್ತೌ....... ಯಃ ಪರಸ್ಸ ಮಹೇಶ್ವರಃ' ಮತ್ತು 'ಈಶಾನಸ್ಸರ್ವ ವಿದ್ಯಾನಾಂ..... ಅಸ್ತು ಸದಾಶಿವೋಂ'.

ಸಮಸ್ತ ಪ್ರಾಣಿಗಳಿಗೂ ಬ್ರಹ್ಮಾದಿ ದೇವತೆಗಳಿಗೂ ಶಿವನೇ ಸ್ವಾಮಿಯಾಗಿದ್ದಾನೆಂಬ ಬುದ್ಧಿಯೋಗದಿಂದ ತಿಳಿಯತಕ್ಕವನಾಗಿರಬೇಕು.

ಅನಾದಿಮುಕ್ತೋ ಭಗವಾನೇಕ ಏವ ಮಹೇಶ್ವರಃ।
ಮುಕ್ತಿದಶ್ಚೇತಿ ಯೋ ವೇದ ಸ ವೈ ಮಾಹೇಶ್ವರಃ ಸ್ಮೃತಃ॥

ಸಾಧಕನು ಅನಾದಿ ಮುಕ್ತನಾದಂತ ಭಗವಂತನಾದ ಶಿವನೇ ಜನನ-ಮರಣ ರಹಿತವಾದ ಮುಕ್ತಿಯನ್ನು ಅನುಗ್ರಹಿಸಲು ಸಮರ್ಥನು ಎಂದು ದೃಢವಾಗಿ ನಂಬಿದವನಾಗಿರಬೇಕು ಮತ್ತು ಶಿವಕಾರ್ಯಕ್ಕೆ ವಿಘ್ನವುಂಟಾದಾಗ ಅವುಗಳನ್ನು ನಿವಾರಣೆ ಮಾಡತಕ್ಕವನು ಹಾಗೂ ಶಿವಕಾರ್ಯಗಳಲ್ಲಿ ಸಹಕರಿಸುವವನೂ, ಪರಸ್ತ್ರೀ ಸಂಗ, ಪರ ದ್ರವ್ಯಗಳಿಂದ ದೂರನಾದವನೂ ಆಗಿರಬೇಕು.

೨. ಲಿಂಗನಿಷ್ಠಾಸ್ಥಲ

ಅಸ್ಯ ಮಾಹೇಶ್ವರಸ್ಯೋಕ್ತಂ ಲಿಂಗನಿಷ್ಠಾಮಹಾಸ್ಥಲಮ್।
ಪ್ರಾಣಾತ್ಯಯೇಽಪಿ ಸಂಪನ್ನೇ ಯದತ್ಯಾಜ್ಯಂ ವಿಧೀಯತೇ॥
ಚಿನ್ಮಯೇ ಶಾಂಕರೇ ಲಿಂಗೇ ಸ್ಥಿರಂ ಯೇಷಾಂ ಮನಃ ಸದಾ।
ವಿಮುಕ್ತೇತರಸರ್ವಾರ್ಥಂ ತೇ ಶಿವಾ ನಾತ್ರ ಸಂಶಯಃ॥

ಈ ಸ್ಥಲದಲ್ಲಿ ಸಾಧಕನು ಪ್ರಾಣಸಂಕಟವು ಪ್ರಾಪ್ತವಾದರೂ ಕೂಡ ಇಷ್ಟಲಿಂಗ ಪೂಜೆಯನ್ನು ಬಿಡುವುದಿಲ್ಲ. ಅಂತಹವನೇ ಮಾಹೇಶ್ವರನೆಂದು ಕರೆಯಿಸಿಕೊಳ್ಳುತ್ತಾನೆ. ಯಾವ ಸಾಧಕನ ಮನಸ್ಸು ಸಂಪೂರ್ಣವಾಗಿ ಲಿಂಗದಲ್ಲಿಯೇ ಮಗ್ನವಾಗಿರುವುದೋ. ಯಾವಾತನ ಮಾತುಗಳು ಶಿವನ ಪ್ರಶಂಸೆಯಲ್ಲಿಯೇ ನಿರತವಾಗಿರುವವೋ ಅಂತಹವನೇ ಲಿಂಗನಿಷ್ಠಾಸ್ಥಲದ ಮಾಹೇಶ್ವರನೆನಿಸುತ್ತಾನೆ.

೩. ಪೂರ್ವಾಶ್ರಯನಿರಸನಸ್ಥಲ

ಸ್ವಜಾತಿಕುಲಜಾನ್ ಧರ್ಮಾನ್ ಲಿಂಗನಿಷ್ಠಾವಿರೋಧಿನಃ।
ತ್ಯಜನ್ ಮಾಹೇಶ್ವರೋ ಜ್ಞೇಯಃ ಪೂರ್ವಾಶ್ರಯನಿರಾಸಕಃ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಸಂಸ್ಕಾರ ವಿಶಿಷ್ಟನಾದ ಮಾಹೇಶ್ವರನು ತನ್ನ ಪೂರ್ವಾಶ್ರಮದವರಾದ ಅಲಿಂಗಿಗಳು ಮತ್ತು ಪ್ರಾಕೃತಿಕರ ಸಂಬಂಧವನ್ನು ತ್ಯಜಿಸಲ್ಪಟ್ಟವನಾಗಿರಬೇಕು. ಇಂತಹ ಸಾಧಕನೇ ಪೂರ್ವಾಶ್ರಯನಿರಸನಸ್ಥಲಾಪನ್ನನಾದ ಮಾಹೇಶ್ವರನೆನಿಸುವನು.

೪. ಸರ್ವಾದ್ವೈತನಿರಸನಸ್ಥಲ

ಸರ್ವಾದ್ವೈತವಿಚಾರಸ್ಯ ಜ್ಞಾನಾಭಾವೋ ವ್ಯವಸ್ಥಿತಃ।
ಭವೇನ್ಮಾಹೇಶ್ವರಃ ಕರ್ಮೀ ಸರ್ವಾದ್ವೈತನಿರಾಸಕಃ॥

ಭೇದ ಬುದ್ಧಿಯುಳ್ಳವನಾಗಿ ಸದಾ ಲಿಂಗಪೂಜಾಸಕ್ತನಾಗಿರುವ ಶಿವನು ಪ್ರೇರಕನು, ಅಂಗನು, ಪ್ರೇರ್ಯನೂ ಎಂದು ತಿಳಿದು ಶಿವಕಾರ್ಯದಲ್ಲಿ ತೊಡಗಿರುವವನೇ ಸರ್ವಾದ್ವೈತನಿರಸನಸ್ಥಲಾಪನ್ನನಾದ ಮಾಹೇಶ್ವರನೆನಿಸುತ್ತಾನೆ.

೫. ಆಹ್ವಾನನಿರಸನಸ್ಥಲಂ

ನಾಹ್ವಾನಂ ನ ವಿಸರ್ಗಂ ಚ ಸ್ವೇಷ್ಟಲಿಂಗೇ ತು ಕಾರಯೇತ್।
ಲಿಂಗನಿಷ್ಠಾಪರೋ ನಿತ್ಯಮಿತಿಶಾಸ್ತ್ರಸ್ಯ ನಿಶ್ಚಯಃ॥

ಗುರುವಿನಿಂದ ದೀಕ್ಷಾತ್ರಯಗಳಿಂದ ಸಂಸ್ಕರಿಸಿ ಕರುಣಿಸಲ್ಪಟ್ಟ ಇಷ್ಟಲಿಂಗದಲ್ಲಿ ಶಿವನು ಸದಾ ಸನ್ನಿಹಿತನಾಗಿರುವನೆಂದು ಸ್ಥಿರ ಮನಸ್ಸುಳ್ಳವನಾಗಿ ಆಹ್ವಾನ ವಿಸರ್ಜನೆ ರಹಿತನಾಗಿ ಸದಾ ಇಷ್ಟಲಿಂಗಾರ್ಚನೆಯನ್ನು ಮಾಡುವವನೇ ಆಹ್ವಾನ ನಿರಸನ ಸ್ಥಲಾಪನ್ನನಾದ ಮಾಹೇಶ್ವರನೆಂದು ಕರೆಯಿಸಿಕೊಳ್ಳುತ್ತಾನೆ.

೬. ಅಷ್ಟಮೂರ್ತಿನಿರಸನಸ್ಥಲ

ಇತಿ ಯಶ್ಚಿಂತಯೇನ್ನಿತ್ಯಂ ಪೃಥ್ವ್ಯಾದೇರಷ್ಟಮೂರ್ತಿತಃ।
ವಿಲಕ್ಷಣಂ ಮಹಾದೇವಂ ಸೋಽಷ್ಟಮೂರ್ತಿನಿರಾಸಕಃ॥

ಈ ಪೃಥ್ವಿ ಮೊದಲಾದ ಅಷ್ಟಶರೀರಗಳಿಗಿಂತ ಪರಮಾತ್ಮನು ವಿಲಕ್ಷಣವಾದವನು ಎಂದು ತಿಳಿದು ಮತ್ತು ಶರೀರಿ-ಶರೀರ ಭಾವವು ಅಧಿಷ್ಠಾತೃ-ಅಧಿಷ್ಠೇಯ ಭಾವದಿಂದಲೇ ಉಂಟಾಗುವುದೇ ಹೊರತು ಸ್ವರೂಪೈಕ್ಯದಿಂದಲ್ಲ ಎಂದು ತಿಳಿದು ಪೂಜಿಸುವವನೇ ಅಷ್ಟಮೂರ್ತಿನಿರಸನಸ್ಥಲಗತ ಮಾಹೇಶ್ವರನೆನಿಸುತ್ತಾನೆ.

೭. ಸರ್ವಗತ್ವನಿರಸನಸ್ಥಲ

ಶಿವಃ ಸರ್ವಗತಶ್ಚಾಪಿ ಸ್ವಾಧಾರೇ ವ್ಯಜ್ಯತೇ ಭೃಶಂ।
ಶಮೀಗರ್ಭೇ ಯಥಾ ವಹ್ನಿರ್ವಿಶೇಷೇಣ ವಿಭಾವ್ಯತೇ॥

ಶಿವಸ್ಯ ಸರ್ವಗತ್ವೇಽಪಿ ಸರ್ವತ್ರ ರತಿವರ್ಜಿತಃ।
ಸ್ವೇಷ್ಟಲಿಂಗೇ ಯಜನ್ ದೇವಂ ಸರ್ವಗತ್ವನಿರಾಸಕಃ॥

'ಈಶಾವಾಸ್ಯಮಿದಂ ಸರ್ವಂ ಯತ್ಕಿಂ ಚ ಜಗತ್ಯಾಂ ಜಗತ್'-

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೇಲಿನ ಶ್ರುತಿಯಿಂದ ಪರಮಾತ್ಮನು ಸರ್ವತ್ರ ವ್ಯಾಪಿಯಾದರೂ ಸಹ ಅಂಗನಿಗೆ ಆಧಾರಭೂತವಾದ ಇಷ್ಟಲಿಂಗದಲ್ಲಿ ವಿಶೇಷವಾಗಿ ನೆಲೆಸಿದ್ದಾನೆ. ಹೇಗೆ ಎಲ್ಲಾ ಕಾಷ್ಠಗಳಲ್ಲಿ ಅಗ್ನಿ ಇದ್ದರೂ ಸಹ, ವಿಶೇಷ ರೂಪವಾಗಿ ಶಮೀಕಾಷ್ಠದಲ್ಲಿಯೇ ಅಧಿಕವಾಗಿರುತ್ತದೆಯೋ ಹಾಗೆ ಶಿವನು ಸರ್ವತ್ರ ವ್ಯಾಪಿಯಾದರೂ ಸಹ ವಿಶೇಷವಾಗಿ ಇಷ್ಟಲಿಂಗದಲ್ಲಿರುತ್ತಾನೆ. ಎಂದು ತಿಳಿದು ಸರ್ವತ್ರ ಪ್ರೀತಿ ವರ್ಜಿತನಾಗಿ ಇಷ್ಟಲಿಂಗೈಕ ರತಿಯುಳ್ಳವನಾದ ಸಾಧಕನು ಸರ್ವಗತ್ವನಿರಸನಸ್ಥಲಾಪನ್ನನಾದ ಮಾಹೇಶ್ವರನೆನಿಸುತ್ತಾನೆ.

೮. ಶಿವಜಗನ್ಮಯಸ್ಥಲ

ಪತ್ರಶಾಖಾದಿರೂಪೇಣ ಯಥಾ ತಿಷ್ಠತಿ ಪಾದಪಃ।
ತಥಾ ಭೂಮ್ಯಾದಿರೂಪೇಣ ಶಿವ ಏಕೋ ವಿರಾಜತೇ॥

ಶಕ್ತಿ ಸಂಪನ್ನನಾದ ಶಿವನೇ ಜಗನ್ಮಯರೂಪದಿಂದ, ಮರವು ರೆಂಬೆ, ಎಲೆ, ಹೂವು, ಹಣ್ಣುಗಳಿಂದ ಪೂರಿತವಾಗಿ ಹೇಗೆ ಶೋಭಿಸುತ್ತದೆಯೋ ಅದರಂತೆ ಶಿವನು ಚರಾಚರಾತ್ಮಕವಾದ ಸಾಕ್ಷಾತ್ ಜಗತ್‌ದ್ರೂಪವಾಗಿ ಶೋಭಿಸುತ್ತಿದ್ದಾನೆ ಎಂದು ತಿಳಿದು ಯಾವನು ಪೂಜಿಸುತ್ತಾನೆಯೋ ಅಂತಹವನೇ ಶಿವಜಗನ್ಮಯಸ್ಥಲಾಪನ್ನನಾದ ಮಾಹೇಶ್ವರನೆನಿಸುತ್ತಾನೆ.

೯. ಭಕ್ತದೇಹಿಕಲಿಂಗಸ್ಥಲಂ

ನಿತ್ಯಂ ಸಂತೋಷಯುಕ್ತಾನಾಂ ಜ್ಞಾನನಿರ್ಧೂತಕರ್ಮಣಾಮ್।
ಮಾಹೇಶ್ವರಾಣಾಮಂತಸ್ಸ್ಫೋ ವಿಭಾತಿ ಪರಮೇಶ್ವರಃ॥

ಪರಮಾತ್ಮನು ಯಾವಾಗಲೂ ಸಂತೋಷದಿಂದ ಕೂಡಿದವನಾದ ಮತ್ತು ತನ್ನ ಜ್ಞಾನದಿಂದ ಪಾಪಕರ್ಮವನ್ನು ಹೋಗಲಾಡಿಸಿ ಕೊಂಡಿರುವಂತಹವನ ಹೃದಯದಲ್ಲಿ ಸದಾ ಪ್ರಕಾಶಿಸುತ್ತಾನೆ ಎಂದು ಯಾವ ಸಾಧಕನು ದೃಢವಾಗಿ ನಂಬಿರುತ್ತಾನೆಯೋ ಅಂತಹ ಸಾಧಕನೇ ಭಕ್ತದೇಹಿಕಲಿಂಗಸ್ಥಲಭೂಯಿಷ್ಠನಾದ ಮಾಹೇಶ್ವರನೆನಿಸುತ್ತಾನೆ.

ಈ ಮೇಲ್ಕಂಡ ಮಾಹೇಶ್ವರಸ್ಥಲದ ಅವಾಂತರ ಪ್ರಕಾರಗಳನ್ನು ಅವಲೋಕಿಸಿದಾಗ ಕಂಡುಬರುವ ಮೂಲ ಅಂಶಗಳೆಂದರೆ ಶಿವನಲ್ಲಿ ಅಚಲವಾದ ನಂಬಿಕೆಯುಳ್ಳವನು ಅನ್ಯದೇವಪೂಜಾನಿರಾಸಕ್ತನೂ ಅರಿಷಡ್ವರ್ಗರಹಿತನೂ, ಈಷಣತ್ರಯ ಅಷ್ಟಮದಾದಿವರ್ಜಿತನೂ, ಪಂಚಕ್ಲೇಶರಹಿತನೂ, ಸರ್ವದಯಾಪರನೂ, ಪರಸ್ತ್ರೀ-ಪರದ್ರವ್ಯ ವರ್ಜಿತನೂ, ಗುರು, ಲಿಂಗ, ಜಂಗಮ ಆರಾಧಕನೂ, ನಿರ್ಮಲ ಮನಸ್ಕನೂ ಆಗಿ ಸದಾ ಇಷ್ಟಲಿಂಗ ಪೂಜಕನೂ ಆಗಿರುವವನೇ ಮಾಹೇಶ್ವರಸ್ಥಲಾಪನ್ನನಾದ ಸಾಧಕನು. ಇದಕ್ಕೆ ಪುಷ್ಟೀಕೃತವಾಗಿ ಸೂಕ್ಷ್ಮ ತಂತ್ರದಲ್ಲಿ ಈರೀತಿ ಉಕ್ತವಾಗಿರುತ್ತದೆ-

'ತಚ್ಚಿತ್ತಮಮಲಂ ಯಸ್ಯ ಸ ವೈ ಮಾಹೇಶ್ವರಃಸ್ಮೃತಃ'

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯಾವನ ಮನಸ್ಸು ಪರಿಶುದ್ಧವಾಗಿರುತ್ತದೆಯೋ ಅಂತಹವನೇ ಮಾಹೇಶ್ವರನೆನಿಸುತ್ತಾನೆ. ಪಾರತಂತ್ರಾಗಮದಲ್ಲಿ-

ಯೋ ಗುರೂಕ್ತಮಾರ್ಗೇಣ ಲಿಂಗಪೂಜಾರತಃ ಸದಾ।
ಸ್ವಮತಾಚಾರನಿರತಃ ಸ ವೈ ಮಾಹೇಶ್ವರಃ ಪ್ರಿಯೇ॥

ಗುರುವಿನಿಂದ ಹೇಳಲ್ಪಟ್ಟಂತೆ ಯಾವಾಗಲೂ ಸ್ವೇಷ್ಟಲಿಂಗ ಪೂಜಾಸಕ್ತನಾಗಿ ಸ್ವಮತೋಕ್ತ ಆಚಾರದಲ್ಲಿ ನಿರತನಾದವನು ಮಾಹೇಶ್ವರನೆಂದು ಕರೆಯಿಸಿಕೊಳ್ಳುತ್ತಾನೆ.

ಅನ್ಯತ್ರ ಶಂಭೋರತಿಮಾತ್ರಶೂನ್ಯೋ
ನಿಜೇಷ್ಟಲಿಂಗೇ ನಿಯತಾಂತರಾತ್ಮಾ।

ಶಿವಾತ್ಮಕಂ ವಿಶ್ವಮಿದಂ ವಿಬುಧ್ಯನ್
ಮಾಹೇಶ್ವರೋಽಸೌ ಭವತಿ ಪ್ರಸಾದೀ॥

ಶಿವೇತರ ದೇವತೆಗಳಲ್ಲಿ ಪ್ರೀತಿ ಶೂನ್ಯನೂ, ತನ್ನ ಇಷ್ಟಲಿಂಗದಲ್ಲಿ ಅಂತರಾತ್ಮನನ್ನು ಸಂಬಂಧಿಸಿಕೊಂಡವನೂ, ಚರಾಚರ ಪ್ರಪಂಚವನ್ನು ಶಿವಸ್ವರೂಪವನ್ನಾಗಿ ತಿಳಿಯುವವನೂ ಆದ ಈ ಮಾಹೇಶ್ವರನೇ ಪ್ರಸಾದಿ ಸ್ಥಲಕ್ಕೆ ಅಧಿಕಾರಿ ಎನಿಸುತ್ತಾನೆ. ಇನ್ನು ಮುಂದೆ ಪ್ರಸಾದಿ ಸ್ಥಲಾಪನ್ನನಾದ ಅಂಗನು ಸಾವಧಾನ ಭಕ್ತಿಯುಕ್ತನಾಗಿ ಹೇಗೆ ಪ್ರಸಾದಿಕನಾಗುತ್ತಾನೆಂದು ವಿವೇಚಿಸೋಣ. ಪ್ರಸಾದಿಸ್ಥಲದ ಅವಾಂತರ ಪ್ರಕಾರಗಳು ಏಳು. ಅವುಗಳಲ್ಲಿ ಮೊದಲನೆಯದು-

೧. ಪ್ರಸಾದಿಸ್ಥಲ

ನೈರ್ಮಲ್ಯಂ ಮನಸೋ ಲಿಂಗಂ ಪ್ರಸಾದ ಇತಿ ಕಥ್ಯತೇ।
ಶಿವಸ್ಯ ಲಿಂಗರೂಪಸ್ಯ ಪ್ರಸಾದಾದೇವ ಸಿಧ್ಯತಿ॥

ಮನಸ್ಸಿನ ನಿರ್ಮಲತ್ವವೇ ಪ್ರಸಾದವೆನಿಸುವುದು, ಈ ಪ್ರಸಾದವು ಶಿವನ ಪ್ರಸಾದದಿಂದಲೇ ಸಿದ್ಧಿಸುವುದು.

ಶಿವಪ್ರಸಾದಂ ಯದ್ದ್ರವ್ಯಂ ಶಿವಾಯ ವಿನಿವೇದಿತಮ್।
ನಿರ್ಮಾಲ್ಯಂ ತತ್ತು ಶೈವಾನಾಂ ಮನೋನೈರ್ಮಲ್ಯಕಾರಣಮ್॥

ಯಾವ ವಸ್ತುವು ಶಿವನಿಗೆ ಸಮರ್ಪಿಸಲ್ಪಡುವುದೋ ಅದು ಶಿವಪ್ರಸಾದವೆನಿಸುವುದು. ಆ ಶಿವಪ್ರಸಾದ ರೂಪವಾದ ನಿರ್ಮಾಲ್ಯವನ್ನು ಸ್ವೀಕರಿಸುವುದರಿಂದ ಪ್ರಸಾದಿಸ್ಥಲಾಪನ್ನನಾದ ಅಂಗನ ಮನಸ್ಸು ನಿರ್ಮಲವಾಗುತ್ತದೆ.

ಮನಃಪ್ರಸಾದಸಿಧ್ಯರ್ಥಂ ನಿರ್ಮಲಜ್ಞಾನಕಾರಣಮ್।
ಶಿವಪ್ರಸಾದಂ ಸ್ವೀಕುರ್ವನ್ ಪ್ರಸಾದೀತ್ಯೇಷ ಕಥ್ಯತೇ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಜ್ಞಾನಕ್ಕೆ ಕಾರಣೀಭೂತವಾದ ಲಿಂಗಪ್ರಸಾದವನ್ನು ಯಾವನು ಸ್ವೀಕರಿಸುತ್ತಾನೋ ಅವನೇ ಪ್ರಸಾದಿ ಎನಿಸಿಕೊಳ್ಳುತ್ತಾನೆ.

ಅನ್ನಶುದ್ಧ್ಯಾ ಹಿ ಸರ್ವೇಷಾಂ ಸತ್ವಶುದ್ಧಿರುದಾಹೃತಾ।
ವಿಶುದ್ಧಮನ್ನಜಾತಂ ಹಿ ಯಚ್ಛಿವಾಯ ಸಮರ್ಪಿತಮ್॥

ಆಹಾರ ಶುದ್ಧಿಯಿಂದ ಸಕಲ ದೈಹಿಕ ತತ್ತ್ವಗಳೂ ಶುದ್ಧವಾಗುತ್ತವೆ. ತನ್ಮೂಲಕ ದೇಹ, ಇಂದ್ರಿಯಗ್ರಾಮ ಮೊದಲಾದ ಪ್ರಪಂಚವು ಶುದ್ಧಿಯಾಗುತ್ತದೆ. ಶಿವನಿಗೆ ನಿವೇದನೆ ಮಾಡಿದ ಅನ್ನ ಮೊದಲಾದವುಗಳು ಶುದ್ಧವಾಗುತ್ತವೆ. ಲಿಂಗನಿಷ್ಠೆಯುಳ್ಳವನಾಗಿ ಸದಾಕಾಲ ಶಿವಪ್ರಸಾದವನ್ನು ಭುಂಜಿಸುವಾತನೇ ಪ್ರಸಾದಿಸ್ಥಲಾಪನ್ನನಾದ ಸಾಧಕನಾಗುತ್ತಾನೆ.

೨. ಗುರುಮಹಾತ್ಮ್ಯಸ್ಥಲ

ಗುರುರೇವಾತ್ರ ಸರ್ವೇಷಾಂ ಕಾರಣಂ ಸಿದ್ಧಿಕರ್ಮಣಾಮ್।
ಗುರುರೂಪೋ ಮಹಾದೇವೋ ಯತಸ್ಸಾಕ್ಷಾದುಪಸ್ಥಿತಃ॥

ಯಥಾ ಶಿವಪ್ರಸಾದಾನ್ನಂ ಸ್ವೀಕಾರ್ಯಂ ಲಿಂಗತತ್ಪರೈಃ।
ತಥಾಗುರೋಃ ಪ್ರಸಾದಾನ್ನಂ ತಥೈವ ಶಿವಯೋಗಿನಾಮ್॥

ಗುರುಭಕ್ತಿವಿಹೀನಸ್ಯ ಶಿವಭಕ್ತಿರ್ನ ಜಾಯತೇ।
ಅತಃ ಶಿವೇ ಯಥಾಭಕ್ತಿ ಸ್ತಥಾ ಭಕ್ತಿರ್ಗುರಾವತಿ॥

ಈ ಲೋಕದಲ್ಲಿ ಪಡೆಯಬೇಕಾದ ಭೋಗ, ಮೋಕ್ಷರೂಪ ಸಕಲ ಸಿದ್ಧಿಗಳನ್ನು ಒದಗಿಸಿಕೊಡಬಲ್ಲ ಸರ್ವಕರ್ಮಗಳಿಗೂ ಗುರುವೇ ಕಾರಣನಾಗಿದ್ದಾನೆ. ಗುರುವಿಗಿಂತಲೂ ಅಧಿಕನಿಲ್ಲ. ಶಿವನೇ ಗುರುಸ್ವರೂಪನಾಗಿದ್ದಾನೆಂದು ದೃಢವಾಗಿ ನಂಬಿ, ಅನನ್ಯ ಭಕ್ತಿ ಪುರಸ್ಸರನಾಗಿ ಸದಾ ಪೂಜೆಗೈಯುತ್ತಾ ಸರ್ವವನ್ನೂ ಆತನಿಗೆ ಸಮರ್ಪಿಸಿ ಶುದ್ಧರೂಪವಾದ ಗುರುಪ್ರಸಾದವನ್ನು ಸದಾ ಉಪಭುಂಜಿಸುವವನಾಗಿರುವವನನ್ನೇ ಗುರುಮಹಾತ್ಮ್ಯ ಸ್ಥಲದ ಪ್ರಸಾದಿ ಎಂದು ಕರೆಯಲಾಗುತ್ತದೆ.

೩. ಲಿಂಗಮಾಹಾತ್ಮ್ಯಸ್ಥಲ

ಪರಂ ಪವಿತ್ರಮಮಲಂ ಲಿಂಗಂ ಬ್ರಹ್ಮ ಸನಾತನಮ್।
ಶಿವಾಭಿಧಾನಂ ಚಿನ್ಮಾತ್ರಂ ಸದಾನಂದಂ ನಿರಂಕುಶಮ್॥

ಬಹುನಾತ್ರ ಕಿಮುಕ್ತೇನ ಲಿಂಗಂ ಬ್ರಹ್ಮ ಸನಾತನಮ್।
ಯೋಗಿನೋ ಯತ್ರ ಲೀಯಂತೇ ಮುಕ್ತಪಾಶನಿಬಂಧನಾಃ॥

ವಿಶ್ವಾಧಿಪತ್ಯಮೀಶಸ್ಯ ಲಿಂಗಮೂರ್ತೇಃ ಸ್ವಭಾವಜಮ್।
ಅನನ್ಯದೇವಸಾದೃಶ್ಯಂ ಶ್ರುತಿರಾಹ ಸನಾತನೀ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವ- ಶಕ್ತ್ಯಾತ್ಮಕವಾದ ಲಿಂಗವು ಪಂಚಕೃತ್ಯಗಳಿಗೆ ಕಾರಣೀಭೂತವಾದುದು. ಬ್ರಹ್ಮ-ವಿಷ್ಣ್ವಾದಿಗಳಿಂದ ದುರ್ಲಭ್ಯವಾದ ಈ ಲಿಂಗವನ್ನು ಗುರುವಿನ ಅನುಗ್ರಹದಿಂದ ಪಡೆದುಕೊಂಡು, ಈ ಲಿಂಗವು ಎಲ್ಲಕ್ಕಿಂತಲೂ ಅಧಿಕವಾದದ್ದು, ಮೋಕ್ಷೈಕ ಫಲದಾಯಕವಾದದ್ದು ಎಂದು ನಂಬಿ ಸ್ಥಿರಚಿತ್ತನಾಗಿ ಭಕ್ತಿಯಿಂದ ಗುರೂಕ್ತ ಕ್ರಮದಲ್ಲಿ ಅರ್ಚಿಸಿ, ಸಕಲವನ್ನೂ ಆತನಿಗೆ ಸಮರ್ಪಿಸಿ, ಲಿಂಗ ನಿವೇದಿತವಾದ ಸಿದ್ಧಪ್ರಸಾದವನ್ನು ಸದಾಕಾಲ ಸೇವಿಸುವಾತನೇ ಲಿಂಗಮಾಹಾತ್ಮ್ಯ ಸ್ಥಲಾಪನ್ನನಾದ ಪ್ರಸಾದಿ ಎನಿಸುತ್ತಾನೆ.

೪. ಜಂಗಮಮಾಹಾತ್ಮ್ಯಸ್ಥಲ

ಜಾನಂತ್ಯತಿಶಯಾದ್ಯೇತು ಶಿವಂ ವಿಶ್ವಪ್ರಕಾಶಕಮ್।
ಸ್ವ- ಸ್ವರೂಪತಯಾ ತೇ ತು ಜಂಗಮಾ ಇತಿ ಕೀರ್ತಿತಾಃ॥

ಪಾದಾಗ್ರರೇಣವೋ ಯತ್ರ ಪತಂತಿ ಶಿವಯೋಗಿನಾಮ್।
ತದೇವ ಸದನಂ ಪುಣ್ಯಂ ಪಾವನಂ ಗೃಹಮೇಧಿನಾಮ್॥

ಸಾಕ್ಷಾತ್ ಶಿವ ಸ್ವರೂಪರಾದ, ಸಮಸ್ತ ಪ್ರಪಂಚವನ್ನೂ ಚಿತ್ಕ್ರಿಯಾ ಸ್ವರೂಪನನ್ನಾಗಿ ಅತಿಶಯವಾಗಿ ಯಾರು ತಿಳಿದಿದ್ದಾರೋ ಅವರೇ ಜಂಗಮರು. ಶಿವಯೋಗಿಗಳೂ, ಶಿವಜ್ಞಾನಿಗಳೂ, ಕಾಮ-ಕ್ರೋಧಗಳನ್ನು ಜಯಿಸಿದವರೂ, ನಿರ್ಮೋಹಿಗಳೂ ಕಾಮಿನಿ-ಕಾಂಚನಗಳನ್ನು ತೃಣೀಕರಿಸಿದವರೂ, ಸಮತಾ ಬುದ್ಧಿಯುಳ್ಳವರೂ ವೇದಾಗಮಪುರಾಣಜ್ಞರೂ ಆದ ಜಂಗಮರನ್ನು ಸಾಕ್ಷಾತ್ ಶಿವಸ್ವರೂಪರೆಂದು ತಿಳಿದು ಭಯ ಭಕ್ತಿಯಿಂದ ಅವರ ಸೇವೆಯನ್ನು ಸದಾಕಾಲ ಮಾಡುತ್ತಾ ಅವರಿಗೆ ಅನ್ನ ಪಾನಾದಿಗಳನ್ನು ಸಮರ್ಪಿಸಿ ಅವರಿಂದ ಭುಕ್ತಾವಶಿಷ್ಟವಾದ ಪ್ರಸಿದ್ಧ ಪ್ರಸಾದವನ್ನು ಎಡೆಬಿಡದೆ ಸ್ವೀಕರಿಸುವಾತನೇ ಜಂಗಮಮಾಹಾತ್ಮ್ಯಸ್ಥಲಾಪನ್ನನಾದ ಪ್ರಸಾದಿ ಎನಿಸುತ್ತಾನೆ.

೫. ಭಕ್ತಮಾಹಾತ್ಮ್ಯಸ್ಥಲಂ

ಯೇ ಭಜಂತಿ ಮಹಾದೇವಂ ಪರಮಾತ್ಮಾನಮವ್ಯಯಮ್।
ಕರ್ಮಣಾ ಮನಸಾ ವಾಚಾ ತೇ ಭಕ್ತಾ ಇತಿ ಕೀರ್ತಿತಾಃ॥

ದುರ್ಲಭಾ ಹಿ ಶಿವೇ ಭಕ್ತಿಃ ಸಂಸಾರಭಯತಾರಿಣೀ।
ಸಾ ಯತ್ರ ವರ್ತತೇ ಸಾಕ್ಷಾತ್ ಸ ಭಕ್ತ ಇತಿ ಗೀಯತೇ॥

ಈ ಸ್ಥಲದಲ್ಲಿ ಸಾಧಕನು ಅಚಲವಾದ ನವವಿಧ ಭಕ್ತಿಯಿಂದ ಪರಮಾತ್ಮನನ್ನು ಭಜಿಸುತ್ತಾ ಮತ್ತು ಶಿವಭಕ್ತಿಯೇ ಯಾವಾತನಲ್ಲಿ ಮೂರ್ತಿಮತ್ತಾಗಿ ಇರುವುದೋ ಹಾಗೆಯೇ ಕಾಯ ವಾಕ್ಕರ್ಮಗಳಿಂದ ಶಿವನನ್ನು ನಂಬಿ ಅಹರ್ನಿಶವು ಗುರು- ಲಿಂಗ- ಜಂಗಮರನ್ನು ಭಕ್ತಿಯಿಂದ ಸೇವಿಸುತ್ತಾನೆಯೋ ಅಂತಹವನೇ ಭಕ್ತ ಮಾಹಾತ್ಮ್ಯ ಸ್ಥಲದ ಪ್ರಸಾದಿ ಎನಿಸುತ್ತಾನೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೬. ಶರಣಮಾಹಾತ್ಮ್ಯಸ್ಥಲ

ಶರಣ್ಯಃ ಸರ್ವಭೂತಾನಾಂ ಶಂಕರಃ ಶಶಿಶೇಖರಃ।
ಸರ್ವಾತ್ಮನಾ ಪ್ರಪನ್ನಸ್ತಂ ಶರಣಾಗತ ಉಚ್ಯತೇ।

ಸಮಸ್ತ ಪ್ರಪಂಚಕ್ಕೂ ಸರ್ವಮಂಗಳಕರನಾದ ಚಂದ್ರಶೇಖರನೇ ಶರಣ್ಯನಾಗಿದ್ದಾನೆ, ಆದ್ದರಿಂದಲೇ ಅಂತಹ ಪರಮಾತ್ಮನನ್ನು ಸರ್ವರೀತಿಯಿಂದಲೂ ರಕ್ಷಿಸು ಎಂದು ಮೊರೆ ಹೊಕ್ಕವನು ಶರಣಾಗತನೆನಿಸುತ್ತಾನೆ. ಇಂತಹ ಪರಮಾತ್ಮನೇ ಸಮಸ್ತ ಪಾಪವನ್ನು ಕಳೆದು ಅಕ್ಷಯ ಫಲರೂಪವಾದ ಮೋಕ್ಷವನ್ನು ಅನುಗ್ರಹಿಸುವಾತನು ಎಂದು ಆಶ್ರಯಿಸಿ ಸದಾಕಾಲ ಅರ್ಚಿಸುವಾತನೇ ಶರಣಮಾಹಾತ್ಮ್ಯಸ್ಥಲದ ಪ್ರಸಾದಿ ಎಂದು ಕರೆಯಿಸಿಕೊಳ್ಳುತ್ತಾನೆ.

೭. ಪ್ರಸಾದಮಾಹಾತ್ಮ್ಯಸ್ಥಲ

ಸದಾ ಲಿಂಗೈಕನಿಷ್ಠಾನಾಂ ಗುರುಪೂಜಾನುಷಂಗಿಣಾಮ್।
ಪ್ರಪನ್ನಾನಾಂ ವಿಶುದ್ಧಾನಾಂ ಪ್ರಸೀದತಿ ಮಹೇಶ್ವರಃ॥
ಪ್ರಸಾದೇ ಶಾಂಭವೇ ಸಿದ್ಧೇ ಪರಮಾನಂದಕಾರಣೇ।
ಸರ್ವಂ ಶಿವಮಯಂ ವಿಶ್ವಂ ದೃಶ್ಯತೇ ನಾತ್ರ ಸಂಶಯಃ॥

ಸರ್ವದಾ ಲಿಂಗದಲ್ಲಿಯೇ ಏಕಾಗ್ರತೆಯುಳ್ಳವನು, ಗುರುಪೂಜೆಯಲ್ಲಿ ಅತ್ಯಂತ ಆಸಕ್ತನು, ಶುದ್ಧಾಂತಕರಣನು ಆಗಿದ್ದಾನೆಯೋ ಮತ್ತು ಪರಮ ಆನಂದವನ್ನು ಉಂಟುಮಾಡುವಂತಹ ಶಿವ ಸಂಬಂಧಿಯಾದ ಪ್ರಸಾದವು ಸಿದ್ಧಿಸುವುದರಿಂದ ಸಕಲ ಚರಾಚರವಾದ ಈ ಜಗತ್ತು ಶಿವಮಯವಾಗಿದೆ ಎಂದು ಅಚಲವಾಗಿ ನಂಬಿದವನಾಗಿ ಯಾವಾತನಿದ್ದಾನೆಯೋ ಅಂತಹ ಸಾಧಕನೇ ಪ್ರಸಾದಮಾಹಾತ್ಮ್ಯಸ್ಥಲದ ಪ್ರಸಾದಿ ಎನಿಸುತ್ತಾನೆ.

ಈ ಮೇಲ್ಕಂಡ ಪ್ರಸಾದಿಸ್ಥಲದ ಅವಾಂತರ ಪ್ರಕಾರಗಳನ್ನು ಅವಲೋಕಿಸಿದಾಗ ಕಂಡು ಬರುವ ಮುಖ್ಯಾಂಶವೆಂದರೆ, ಅನ್ನದಿಂದಲೇ ಸಮಸ್ತವಾದ ರೋಗ ರುಜಿನಗಳು ಉಂಟಾಗುತ್ತವೆ ಮತ್ತು ಅನ್ನದಿಂದಲೇ ಈ ಪ್ರಪಂಚವು ಹುಟ್ಟುತ್ತದೆ ಮತ್ತು ಇದರಿಂದಲೇ ಜೀವಿಸುತ್ತದೆ ಮತ್ತು ಇದರಲ್ಲಿಯೇ ಲಯವನ್ನು ಹೊಂದುತ್ತದೆ. ಆದುದರಿಂದ ಅನ್ನ ಶುದ್ಧಿಯು ಅತ್ಯವಶ್ಯಕ. ಈ ಅನ್ನಶುದ್ಧಿಯಿಂದ ಸಕಲ ಪ್ರಾಣಿಗಳ ತತ್ವಶುದ್ಧಿಯಾಗುತ್ತದೆ. ಈ ಅನ್ನಶುದ್ಧಿಯಾದರೋ ಪರಮಾತ್ಮನಿಗೆ ನಿವೇದಿಸುವುದರಿಂದ ಶುದ್ಧವಾಗುತ್ತದೆ. ಈ ನಿವೇದಿತವಾದ, ಆದ್ದರಿಂದಲೇ ಪರಿಶುದ್ಧವಾದ ಅನ್ನವನ್ನೇ ಪ್ರಸಾದವೆಂದು ಕರೆಯಲಾಗುತ್ತದೆ. ಈ ಪ್ರಸಾದ ಸೇವನೆಯಿಂದ ಅಂಗನ ಕಾಯವೆಲ್ಲವೂ ಪುನೀತವಾಗುತ್ತದೆ. ಪ್ರಸಾದಿ ಸ್ಥಲಾಪನ್ನನಾದ ಅಂಗನು ಸಕಲಪದಾರ್ಥಗಳನ್ನೂ ಅಂದರೆ ತತ್ತದಿಂದ್ರಿಯ ಅಂತರ್ವರ್ತಿಯಾದ ಆಚಾರಾದಿ ಷಡ್ಲಿಂಗಗಳಿಗೆ ಅರ್ಪಿಸಿ, ಪ್ರಸಾದ ರೂಪವಾಗಿ ಸಕಲ ವಿಷಯಗಳನ್ನೂ ಉಪಭೋಗಿಸುವವನಾಗಬೇಕು ಮತ್ತು ಶಿವನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಸಾದ ಸೇವನೆಯಿಂದ ಅಂಗನ ಮನಸ್ಸು ನಿರ್ಮಲಗೊಳ್ಳುತ್ತದೆ. ಗುರು-ಲಿಂಗ -ಜಂಗಮರಿಗೆ ಅರ್ಪಿಸದೆ ಇರುವ ಪದಾರ್ಥವನ್ನು ಸ್ವೀಕರಿಸಬಾರದು. ಇದಕ್ಕೆ ಶ್ರುತಿಯಲ್ಲಿ-

ಭುಂಜೀತ ರುದ್ರಭುಕ್ತಾನ್ನಂ ರುದ್ರಪೀತಂ ಜಲಂ ಪಿಬೇತ್।
ರುದ್ರಾಘ್ರಾತಂ ಸದಾ ಜಿಘ್ರೇತ್ ಇತಿಜಾಬಾಲಕೀ ಶ್ರುತಿಃ॥

ರುದ್ರೇಣಾಕ್ತಮಶ್ನಂತಿ ರುದ್ರೇಣ ಪೀತಂ ಪಿಬಂತಿ।
ರುದ್ರೇಣಾಘ್ರಾತಂ ಜಿಘ್ರಂತಿ॥

ಆದ್ದರಿಂದ ಗುರು-ಲಿಂಗ -ಜಂಗಮರಿಗೆ ಅರ್ಪಿಸಿದ, ಶುದ್ಧ- ಸಿದ್ಧ-ಪ್ರಸಿದ್ಧರೂಪವಾದ ಪ್ರಸಾದವನ್ನೇ ಭುಂಜಿಸಬೇಕು, ಸದಾ ಭಕ್ತಿಯುಕ್ತನಾಗಿ ಶಿವ-ಶಕ್ತ್ಯಾತ್ಮಕವಾದ ವಿಶ್ವಾಧಿಕ್ಯವನ್ನು ಪಡೆದ ಲಿಂಗವನ್ನು ಪೂಜಿಸುವವನಾಗಿಯೂ ಈ ಜಗತ್ತೆಲ್ಲವೂ ಶಿವನ ಪ್ರಸಾದವೆಂದು ತಿಳಿದು ಸರ್ವಸ್ವವನ್ನೂ ಅವನಿಗೆ ಅರ್ಪಿಸಿ, ತದನಂತರ ತಾನು ಸ್ವೀಕರಿಸಬೇಕೆಂದು ಈಶಾವಾಸ್ಯೋನಿಷತ್ತಿನಲ್ಲಿ ಉಕ್ತವಾಗಿದೆ.

ತೇನ ತ್ಯಕ್ತೇನ ಭುಂಜೀಥಾ ಮಾಗೃಧಃ ಕಸ್ಯಸ್ವಿದ್ಧನಮ್॥
ನಾಶ್ನಾತಿ ನ ತ್ಯಜೇನ್ಮಹ್ಯಮರ್ಪಿತಂ ಕೃಛ್ರಗೋಽಪಿ ವಾ।
ತತ್ಪ್ರಸಾದಿಸ್ಥಲಂ ವಿದ್ಧಿ ಮಮ ಚಾತಿಪ್ರಿಯಂ ಶಿವೇ॥

ಶಿವನಿಗೆ ಅರ್ಪಿತವಾಗದೇ ಇರುವುದನ್ನು ಭುಂಜಿಸಲಾರನು, ಶಿವಾರ್ಪಿತವಾದುದನ್ನು ಭುಂಜಿಸದೇ ಇರಲಾರನು. ಈತನೇ ಪ್ರಸಾದಿ ಎಂಬುದಾಗಿ ಪಾರಮೇಶ್ವರ ತಂತ್ರದಲ್ಲಿ ಉಕ್ತವಾಗಿದೆ ಮತ್ತು ಸೂಕ್ಷ್ಮಾಗಮದಲ್ಲಿಯೂ ಸಹ ಹೀಗೆ ಹೇಳಿದೆ-

ಚಿತ್ತಂ ಸ್ಥಿರಂ ಭವೇದ್ಯಸ್ಯ ಸ ಪ್ರಸಾದೀ ಭವತ್ಯಸೌ।

ಪ್ರಸಾದದಲ್ಲಿ ಸ್ಥಿರವಾದ ಬುದ್ಧಿಯುಳ್ಳವನು ಪ್ರಸಾದಿಯಾಗುತ್ತಾನೆ ಮತ್ತು ಪ್ರಸಾದ ನಿಂದಾಽಸಹಿಷ್ಣುವು ಆಗಿರಬೇಕು. ಮತ್ತು ಪ್ರಸಾದದಲ್ಲಿ ರುಚಿ- ಅರುಚಿಗಳನ್ನು ಅರಸಬಾರದು. ಅನ್ನ ಲಿಂಗರೂಪವನ್ನು ತೈತ್ತರೀಯೋಪನಿಷತ್ತಿನಲ್ಲಿ ಈ ರೀತಿ ಹೇಳಲಾಗಿದೆ-

ಅನ್ನಂ ನ ನಿಂದ್ಯಾತ್ ತದ್ ವ್ರತಮ್।
ಅನ್ನಂ ನ ಪರಿಚಕ್ಷೀತ ॥ತದ್ ವ್ರತಮ್॥

ಅಂಗನು ತನ್ನನ್ನೇ ಅನ್ನರೂಪವನ್ನಾಗಿಸಿ ಶಿವನಿಗೆ ಸಮರ್ಪಿಸಿದಾಗ ಆತನ ಅಂಗವೆಲ್ಲವೂ ಪ್ರಸಾದಲಿಂಗವಾಗುತ್ತದೆ. ಇದಕ್ಕೆ ಉಪನಿಷತ್ತಿನಲ್ಲಿ ಹೀಗೆ ಉಕ್ತವಾಗಿದೆ.

ಹಾಽವು ಹಾಽವು ಹಾಽವು। ಅಹಮನ್ನ-ಮಹಮನ್ನ-ಮಹಮನ್ನಮ್। ಅಹಮನ್ನಾದೋ ೨ ಽಹಮನ್ನಾದೋ ೨ ಽಹಮನ್ನಾದಃ। ಅ ಹಗ್ಂ ಶ್ಲೋಕ ಕೃ-ದಹಗ್ಂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ಲೋಕ ಕೃ-ದಹಗ್ಗ್ ಶ್ಲೋಕಕೃತ್। ಅಹ-ಮಸ್ಮಿ ಪ್ರಥಮಜಾಋತಾ೩ಸ್ಯ। ಪೂರ್ವಂ ದೇವೇಭ್ಯೋ ಅಮೃತಸ್ಯನಾ೩ ಭಾ ಯಿ। ಯೋ ಮಾ ದದಾತಿ ಸ ಇದೇವ ಮಾ೩ ವಾ:। ಅಹ-ಮನ್ನಮನ್ನ-ಮದಂತಮಾ ೩ ದ್ಮಿ।

ಹೀಗೆ ಶ್ರದ್ಧಾಭಕ್ತಿಯಿಂದಾಗಿ ಭಕ್ತನಾಗುತ್ತಾನೆ. ನಿಷ್ಠಾಭಕ್ತಿಯುಕ್ತನಾಗಿ ಆ ಮಾರ್ಗದಲ್ಲಿ ಮುಂದುವರಿದವನು ಮಾಹೇಶ್ವರಸ್ಥಲಾಪನ್ನ ಸಾಧಕನಾಗುತ್ತಾನೆ. ಅವಧಾನ ಭಕ್ತಿಯುಕ್ತನಾದ ಮಾಹೇಶ್ವರನೇ ಪ್ರಸಾದಿಸ್ಥಲಸಾಧಕನಾಗಿ, ನಾನು ನನ್ನದೆಂಬ ಭಾವವಳಿದು ಜೀವನದಲ್ಲಿ ಹೊಸ ದರ್ಶನವನ್ನು ಆತನಿಗೆ ತಂದುಕೊಡುತ್ತದೆ. ಆಧ್ಯಾತ್ಮಿಕ ಅನುಭವದ ಸಂಪತ್ತಿನಿಂದ ಆತನ ಹೃದಯ ಶ್ರೀಮಂತವಾಗುತ್ತದೆ. ಇಲ್ಲಿ ಭಕ್ತನ ತಳಮಳವೆಲ್ಲವೂ ಸಂಪೂರ್ಣವಾಗಿ ಭಗ್ನವಾಗಿ 'ನಾನು' ಎಂಬುದು ಇಲ್ಲವಾಗಿ, ದಾಸೋಹಂ ಭಾವದಿಂದ ಕ್ರಿಯೆಗಳನ್ನು ಮಾಡುತ್ತಾ ಆ ಕ್ರಿಯೆಯಲ್ಲಿ 'ಫಲ ಪದದ' ಆಶೆಯನ್ನು ಮಾಡದೆ ಎಲ್ಲವೂ ಈಶ್ವರ ಪ್ರಸಾದವೆಂಬ ಭಾವದಿಂದ ವರ್ತಿಸುತ್ತಾ ಯಾವಾಗಲೂ ಶಾಂತಮನೋಭಾವದಿಂದ ಕೂಡಿರುತ್ತಾನೆ. ಇದೇ ಮಾಹೇಶ್ವರ ಮತ್ತು ಪ್ರಸಾದಿ ಸ್ಥಲದ ಸಾಧಕನ ಮುಖ್ಯ ಲಕ್ಷಣ-

ಶಿವ ಪ್ರಸಾದೇ ಸತಿ ಯೋಗಭಾಜಃ
ಸರ್ವಂ ಶಿವೈಕಾತ್ಮತಯಾ ವಿಭಾತಿ।
ಸ್ವಕರ್ಮಮುಕ್ತಃ ಶಿವಭಾವಿತಾತ್ಮಾ
ಸ ಪ್ರಾಣಲಿಂಗೀತಿ ನಿಗದ್ಯತೇಽಸೌ

ಶಿವಪ್ರಸಾದ ಒಂದಿದ್ದರೆ ಯೋಗ ಭಾಜನನಾಗುತ್ತಾನೆ, ಸರ್ವವೂ ಶಿವನಿಗೆ ಅಭಿನ್ನವಾಗಿರುವುದರಿಂದ ಶಿವನೇ ನಾನು ಎಂಬ ಅಭೇದ ಬುದ್ಧಿಯುಳ್ಳವನಾದ ಪ್ರಸಾದಿ ಎನಿಸುತ್ತಾನೆ. ಇಂತಹ ಸಾಧಕನು ತಾನು ಮಾಡುವ ಸಕಲ ಕರ್ಮಗಳನ್ನು ಶಿವಸ್ವರೂಪವಾಗಿ ತಿಳಿಯುವುದರಿಂದ ಕರ್ಮ ಬಂಧನವಾಗುವುದಿಲ್ಲ. ಆದುದರಿಂದ ಸಕಲಕರ್ಮ ಬಂಧನದಿಂದ ಮುಕ್ತನಾದವನೇ ಪ್ರಾಣಲಿಂಗಿ ಸ್ಥಲಕ್ಕೆ ಅಧಿಕಾರಿಯಾಗುತ್ತಾನೆ.

❑

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೬. ಪ್ರಾಣಲಿಂಗಿಸ್ಥಲ ಮತ್ತು ಶಿವಯೋಗ

-ವಿದ್ವಾನ್ ಜಿ.ವಿ. ಶಿವಸ್ವಾಮಿ, ಎಂ.ಎ.

ಅಷ್ಟಾವರಣ- ಪಂಚಾಚಾರಯುಕ್ತ ಷಟ್ಸ್ಥಲ ಮಾರ್ಗದ ಅನುಷ್ಠಾನದಿಂದ ಜೀವನು ಶಿವನಲ್ಲಿ ಒಂದಾಗುವುದೇ ವೀರಶೈವ ಮತದ ಗುರಿಯಾಗಿದೆ. ಈ ಮತದಲ್ಲಿ ಭಕ್ತಿಗೆ ಪ್ರಾಧಾನ್ಯ. ಶಿವನ ಸ್ವಪ್ರಕಾಶರೂಪವಾದ ಶಕ್ತಿಯೇ ಅಂಗಗತವಾದ ಭಕ್ತಿ ಎನಿಸಿಕೊಳ್ಳುವುದು. ಈ ಭಕ್ತಿಯು ಶ್ರದ್ಧಾ, ನಿಷ್ಠಾ, ಅವಧಾನ, ಅನುಭಾವ, ಆನಂದ, ಸಮರಸ ಎಂದು ಆರು ವಿಧವಾಗಿದೆ. ಅಹಂಗ್ರಹೋಪಾಸನ, ಶಿವೋಹಂ- ಅಥವಾ ತಾನೇ ಶಿವನೆಂದು ತಿಳಿದು ಪೂಜಿಸುವ ವಿಧಾನವೇ ಈ ಭಕ್ತಿಮಾರ್ಗ. ಇದನ್ನು ಅನುಸರಿಸುತ್ತಾ ಹೋದರೆ ಕ್ರಮವಾಗಿ ಜೀವನು ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಆರು ಆಧ್ಯಾತ್ಮಿಕ ಸ್ಥಾನಗಳನ್ನು ಹೊಂದುತ್ತಾನೆ. ಈ ಸಂಪ್ರದಾಯದಲ್ಲಿ ಅನುಸರಿಸುವ ಭಕ್ತಿಯೋಗದಲ್ಲಿ ಜ್ಞಾನಕ್ರಿಯೆಗಳೆರಡೂ ಸಮನ್ವಿತವಾಗಿವೆ. ಭಕ್ತಿ-ಜ್ಞಾನ-ಕ್ರಿಯೆಗಳ ಸಮುಚ್ಚಯವೇ ವೀರಶೈವರ ಸಾಧನಮಾರ್ಗ. ಭಕ್ತಸ್ಥಲದಲ್ಲಿ ಜ್ಞಾನ- ಕ್ರಿಯೆಗಳೆರಡೂ ಸಮಪ್ರಧಾನವಾಗಿವೆ.

ಸದ್ಗುರುವು ವೇದಾದೀಕ್ಷೆಯಿಂದ ತನ್ನ ಹಸ್ತವನ್ನು ಶಿಷ್ಯನ ಮಸ್ತಕದ ಮೇಲೆ ಇಟ್ಟು ಅವನ ಕಾರಣ ತನುವಿನಲ್ಲಿ ಭಾವಲಿಂಗ ಸಂಬಂಧವನ್ನು ಉಂಟುಮಾಡುವನು. ಮಂತ್ರದೀಕ್ಷೆಯಿಂದ ತನ್ನ ಶಿಷ್ಯನ ಬಲಗಿವಿಯಲ್ಲಿ ಪ್ರಣವ ಪಂಚಾಕ್ಷರೀ ಮಂತ್ರವನ್ನು ಉಪದೇಶಿಸಿ, ಅವನ ಸೂಕ್ಷ್ಮತನುವಿನಲ್ಲಿ ಪ್ರಾಣಲಿಂಗ ಸಂಬಂಧ ಮಾಡುವನು ಮತ್ತು ಕ್ರಿಯಾದೀಕ್ಷೆಯಿಂದ ಶ್ರೀಗುರುವು ತನ್ನ ಶಿಷ್ಯನ ಕರಸ್ಥಲದಲ್ಲಿ ಆ ಮಂತ್ರ ಸ್ವರೂಪವನ್ನೇ ಇಷ್ಟಲಿಂಗ ಸ್ವರೂಪವ ಮಾಡಿ ಅವನ ಸ್ಥೂಲ ತನುವಿನಲ್ಲಿ ಇಷ್ಟಲಿಂಗ ಸಂಬಂಧವನ್ನು ಉಂಟುಮಾಡುವನು. ಹೀಗೆ ಶಿಷ್ಯನ ತನುತ್ರಯದಲ್ಲಿರುವ ಮಲತ್ರಯಗಳನ್ನು ಪರಿಹರಿಸಿ ಭಾವಲಿಂಗ, ಪ್ರಾಣಲಿಂಗ, ಇಷ್ಟಲಿಂಗವೆಂಬ ಲಿಂಗತ್ರಯವನ್ನು ಭಾವ, ಪ್ರಾಣ, ಕರಸ್ಥಲಗಳಲ್ಲಿ ಸ್ಥಾಪಿಸುವನು. ಇಲ್ಲಿಂದಲೇ ಸಾಧಕನ ಸಾಧನೆ ಆರಂಭವಾಗುತ್ತದೆ. ಭಕ್ತ, ಮಾಹೇಶ್ವರ ಮತ್ತು ಪ್ರಸಾದಿ ಸ್ಥಲಗಳಲ್ಲಿ ಶ್ರದ್ಧಾ, ನಿಷ್ಠಾ, ಅವಧಾನ ಸ್ವರೂಪದಲ್ಲಿ ಭಕ್ತಿಯು ವಿಕಾಸವನ್ನು ಹೊಂದುತ್ತದೆ. ಶಿವಯೋಗವೆಂಬುದೂ ಇಲ್ಲಿಂದ ಹಂತ ಹಂತವಾಗಿ ವಿಕಾಸವನ್ನು ಹೊಂದುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜ್ಞಾನಂ ಶಿವಮಯಂ ಭಕ್ತಿಃ ಶೈವೀ ಧ್ಯಾನಂ ಶಿವಾತ್ಮಕಮ್।
ಶೈವವ್ರತಂ ಶಿವಾರ್ಚೇತಿ ಶಿವಯೋಗೋ ಹಿ ಪಂಚಧಾ॥

ಶಿವಯೋಗವು ಶಿವಮಯವಾದ ಜ್ಞಾನ, ಶಿವಭಕ್ತಿ, ಶಿವಾತ್ಮಕವಾದ ಧ್ಯಾನ, ಶಿವವ್ರತ, ಶಿವಪೂಜೆ ಎಂದು ಐದು ಬಗೆಯಾಗಿರುತ್ತದೆ. ಶೈವೀ ಭಕ್ತಿ ಪ್ರೇರಿತವಾದ ಶಿವಪೂಜೆಯು ಶಿವಜ್ಞಾನಾದಿಗಳನ್ನು ಅಳವಡಿಸಿಕೊಂಡಿರುವುದರಿಂದ ಶಿವಪೂಜೆಯೇ ಶಿವಯೋಗವೆನಿಸುವುದು. ಶೈವವ್ರತ ಮುಂತಾದವು ಇದಕ್ಕೆ ಪೋಷಕವಾದ ಪ್ರವೃತ್ತಿಯನ್ನು ಉಂಟುಮಾಡುತ್ತವೆ. ಶಿವಮಯವಾದ ಜ್ಞಾನವು ಇದರಿಂದ ಅಳವಟ್ಟು ಶಿವಾತ್ಮಕ ಧ್ಯಾನದಲ್ಲಿ ಪರ್ಯವಸಾನವಾಗುತ್ತದೆ. ಶಿವಾತ್ಮಕ ಧ್ಯಾನವೆಂದರೆ ಶಿವನೇ ನಾನು ಎಂಬ ಸಾಮರಸ್ಯಜ್ಞಾನ. ಇದು ಅಂತಿಮವಾಗಿ ಶಿವಯೋಗ. ಇದನ್ನೇ ಶಿವಜೀವೈಕ್ಯ, ಲಿಂಗಾಂಗ ಸಾಮರಸ್ಯ, ಶಿವಾದ್ವೈತ ಎಂದು ಕರೆಯುತ್ತಾರೆ. ಹೀಗೆ ವೀರಶೈವನ ಸಾಧನಮಾರ್ಗವು ಭಕ್ತಿ-ಜ್ಞಾನ- ಕ್ರಿಯಾಸಮುಚ್ಚಯದಿಂದ ಒಂದು ಅನುಸ್ಯೂತವಾದ ಶಿವಯೋಗ. ಈ ಯೋಗವು ಬಹಿರ್ಯೋಗ ಮತ್ತು ಅಂತರ್ಯೋಗವೆಂದು ಎರಡು ವಿಧ. ಮೊದಲ ಮೂರು ಸ್ಥಲಗಳಲ್ಲಿ, ಅಂದರೆ ಭಕ್ತ, ಮಾಹೇಶ್ವರ ಮತ್ತು ಪ್ರಸಾದಿ ಸ್ಥಲಗಳಲ್ಲಿ ಬರುವ ಶ್ರದ್ಧಾದಿಭಕ್ತಿ ಪೂರ್ವಕವಾದ ಅರಿವಿನಿಂದ ಕೂಡಿದ ಶಿವಪೂಜೆಯು ಬಹಿರ್ಯೋಗ. ಅಲ್ಲಿಂದ ಮುಂದೆ ಪ್ರಾಣಲಿಂಗ ಸ್ಥಲದ ಪ್ರಾಪ್ತಿ. ಈ ಸ್ಥಲದಲ್ಲಿ ಅಂತರ್ಲಿಂಗಾನುಸಂಧಾನವು ಅಳವಡುವುದರಿಂದ ಇದು ಅಂತರ್ಯೋಗವಾಗುತ್ತದೆ. ಈ ಹಂತದಲ್ಲಿ ಪ್ರಾಣಲಿಂಗದ ಆಂತರಿಕ ಪೂಜೆಯೇ ಪ್ರಧಾನವಾದುದು. ಪ್ರಸ್ತುತದಲ್ಲಿ ಪ್ರಾಣಲಿಂಗಿಸ್ಥಲದ ಸ್ವರೂಪವನ್ನು ಮೊದಲು ತಿಳಿಯಬೇಕು.

ಪ್ರಾಣಲಿಂಗಿ ಸ್ಥಲ:

ಪ್ರಾಣಲಿಂಗಿ ಸ್ಥಲದಿಂದ ಜ್ಞಾನಯೋಗದ ಪ್ರಕ್ರಿಯೆ ಪ್ರಾಧಾನ್ಯವನ್ನು ಪಡೆಯುತ್ತದೆ. ಮೊದಲ ಮೂರು ಸ್ಥಲಗಳಲ್ಲಿ ಕರ್ಮಕ್ಕೆ ಪ್ರಧಾನ್ಯ. ಜ್ಞಾನವು ಅದಕ್ಕೆ ಪ್ರೇರಕವಾದ ಭಾವನೆಯ ರೂಪದಲ್ಲಿ ಅಂಗವಾಗಿತ್ತು. ಪ್ರಸಾದಿಸ್ಥಲದಲ್ಲಿ ಶಿವಪ್ರಸಾದದಿಂದ ಪ್ರಸಾದಿಯು ಶಿವಯೋಗಿಯಾಗಿ ಪರಿಣಮಿಸುತ್ತಾನೆ. ಯೋಗವು ಸಾಧ್ಯತಾಸ್ಥಿತಿಯಲ್ಲಿರುವವರೆಗೆ ಪ್ರಸಾದಿ, ಸಿದ್ಧಸ್ಥಿತಿಗೆ ಮುಟ್ಟಿದಾಗ ಪ್ರಾಣಲಿಂಗಿ ಇದನ್ನು ಸಿದ್ಧಾಂತ ಶಿಖಾಮಣಿ ಪ್ರಸಾದಿಸ್ಥಲದ ಉಪಸಂಹಾರ ಶ್ಲೋಕದಲ್ಲಿ ಮಾರ್ಮಿಕವಾಗಿ ತಿಳಿಸುತ್ತದೆ.

ಶಿವಪ್ರಸಾದೇ ಸತಿ ಯೋಗಭಾಜಿ ಸರ್ವಂ ಶಿವೈಕಾತ್ಮತಯಾ ವಿಭಾತಿ।
ಸ್ವಕರ್ಮಮುಕ್ತಃ ಶಿವಭಾವಿತಾತ್ಮಾ ಸ ಪ್ರಾಣಲಿಂಗೀತಿ ನಿಗದ್ಯತೇಽಸೌ॥

ಸಜಾತೀಯ ಸಮರಸ ಶಿವಯೋಗ ರೂಪದಲ್ಲಿರುವ ಶಿವಪ್ರಸಾದವು ಸಿದ್ಧವಾದಾಗ ಎಲ್ಲವೂ (ಅಂದರೆ ಜಗತ್ತು) ಶಿವನೊಂದಿಗೆ ತಾದಾತ್ಮ್ಯದಿಂದ ಪ್ರಕಾಶಿಸುತ್ತದೆ. ಆದ್ದರಿಂದ ಶಿವನೇ ನಾನೆಂಬ ತಾದಾತ್ಮ್ಯ ಭಾವವನ್ನು ತಾಳಿದ ಪ್ರಸಾದಿಯು ಪ್ರಾಣಲಿಂಗಿಯಾಗಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಿಣಮಿಸುತ್ತಾನೆ. ಸಾಧಕನ ಮಾರ್ಗದಲ್ಲಿ ಅತ್ಯಂತ ಮುಖ್ಯವಾದ ಅಭಿಸಂಧಿಯನ್ನು ಅಂದರೆ ತಿರುವನ್ನು ಪ್ರತಿಪಾದಿಸುವ ಪ್ರಾಣಲಿಂಗಿ ಸ್ಥಲದ ನಿರೂಪಣೆಯ ಆರಂಭದಲ್ಲಿ ಅಗಸ್ತ್ಯರ ಮೂಲಕ ಅರ್ಥಗರ್ಭಿತವಾದ ಒಂದು ಪ್ರಶ್ನೆಯನ್ನು ಎತ್ತಲಾಗಿದೆ.

ಭಕ್ತೋ ಮಾಹೇಶ್ವರಶ್ಚೇತಿ ಪ್ರಸಾದೇತಿ ನಿಬೋಧಿತಃ।
ಏಕ ಏವ ಕಥಂ ಚೈಷ ಪ್ರಾಣಲಿಂಗೀತಿ ಕಥ್ಯತೇ॥

ಒಬ್ಬನೇ ವ್ಯಕ್ತಿಯು ಈವರೆಗೆ ಭಕ್ತ, ಮಾಹೇಶ್ವರ, ಪ್ರಸಾದಿಯೆಂದು ಕರೆಯಲ್ಪಟ್ಟಿದ್ದಾನೆ. ಅವನೇ ಹೇಗೆ ಪ್ರಾಣಲಿಂಗಿಯೆಂದು ಹೇಳಲ್ಪಡುತ್ತಾನೆ? ಈ ಪ್ರಶ್ನೆಗೆ ಉತ್ತರಿಸುತ್ತಾರೆ ರೇಣುಕ ಭಗವತ್ಪಾದರು. ಮೊದಲ ಮೂರುಸ್ಥಲಗಳಿಗೂ ಪ್ರಾಣಲಿಂಗಿ ಸ್ಥಲಕ್ಕೂ ಇರುವ ಸ್ವರೂಪ ಭೇದವನ್ನು ಹೇಳುವ ಮೂಲಕ ಸಾಧಕನು ತಲುಪಿದ ಮಾರ್ಗದ ತಿರುವನ್ನು ಸೂಚಿಸಿದ್ದಾರೆ-

ಭಕ್ತೋ ಮಹೇಶ್ವರಶ್ಚೈಷ ಪ್ರಸಾದೀತಿ ಚ ಕೀರ್ತಿತಃ।
ಕರ್ಮಪ್ರಧಾನ್ಯಯೋಗೇನ ಜ್ಞಾನಯೋಗೋಽಸ್ಯ ಕಥ್ಯತೇ॥

ಶಿವದೀಕ್ಷಾಸಂಪನ್ನವಾದ ಇವನು ಕರ್ಮಪ್ರಾಧಾನ್ಯ ಸಂಬಂಧದಿಂದ ಭಕ್ತ, ಮಾಹೇಶ್ವರ, ಪ್ರಸಾದಿ ಎಂದು ಕರೆಯಲ್ಪಟ್ಟನು. ಇಲ್ಲಿ ಅವನ ಜ್ಞಾನಯೋಗವನ್ನು ಹೇಳುತ್ತೇವೆ. ಈ ಮಾತಿನಿಂದ ಮೂರು ಸ್ಥಲಗಳಲ್ಲಿ ಕರ್ಮಯೋಗಕ್ಕೆ ಪ್ರಾಧಾನ್ಯ. ಪ್ರಾಣಲಿಂಗಿ ಸ್ಥಲದಿಂದ ಮುಂದೆ ಜ್ಞಾನಯೋಗಕ್ಕೆ ಪ್ರಾಧಾನ್ಯವೆಂದು ಸ್ಪಷ್ಟವಾಗಿದೆ.

ಪ್ರಾಣಲಿಂಗಿಯೆಂದರೆ ಲಿಂಗವಿಜ್ಞಾನಿ :

ಲಿಂಗಂ ಚಿದಾತ್ಮಕಂ ಬ್ರಹ್ಮ ತಚ್ಛಕ್ತಿಃ ಪ್ರಾಣರೂಪಿಣೀ।
ತದ್ರೂಪಲಿಂಗವಿಜ್ಞಾನೀ ಪ್ರಾಣಲಿಂಗೀತಿ ಕಥ್ಯತೇ॥

ಜ್ಞಾನಸ್ವರೂಪವಾದ ಬ್ರಹ್ಮವೇ ಶಿವಲಿಂಗ. ಅದರ ಪೀಠ ಶಕ್ತಿಯು ಪ್ರಣವಾತ್ಮಕಪ್ರಾಣ ಸ್ವರೂಪ. ಈ ರೂಪಲಿಂಗವನ್ನು ಸಾಕ್ಷಾತ್ಕರಿಸಿಕೊಂಡವನೇ ಪ್ರಾಣಲಿಂಗಿ. ಪ್ರಾಣಲಿಂಗವೆಂದರೆ ಯಾವುದು?

ಪ್ರಾಣೋ ಯತ್ರ ಲಯಂ ಯಾತಿ ಭಾಸ್ಕರೇ ತುಹಿನಂ ಯಥಾ।
ತತ್ಪ್ರಾಣಲಿಂಗಮುದ್ದಿಷ್ಟಂ ತದ್ಧಾರೀ ಸ್ಯಾತ್ತದಾಕೃತಿಃ॥

ಸೂರ್ಯನಲ್ಲಿ ಹಿಮವು ಕರಗಿದಂತೆ ಯಾವ ಲಿಂಗದಲ್ಲಿ ಪ್ರಾಣವು ಲಯವನ್ನು ಹೊಂದುತ್ತದೋ ಅದು ಪ್ರಾಣಲಿಂಗ. ಅದನ್ನು ಧರಿಸಿದವನು ಅಂದರೆ ಸಾಕ್ಷಾತ್ಕರಿಸಿ-ಕೊಂಡವನು ಅದರ ಸ್ವರೂಪವನ್ನೇ ತಾಳುತ್ತಾನೆ. ಅದರ ಸ್ವರೂಪವೇನು? ಅದು ಯಾರಿಗೆ ಸ್ಫುರಿಸುತ್ತದೆ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜ್ಞಾನಿನಾಂ ಯೋಗಯುಕ್ತಾನಾಮಂತಃ ಸ್ಫುರತಿ ದೀಪವತ್।
ಚಿದಾಕಾರಂ ಪರಂ ಬ್ರಹ್ಮಲಿಂಗಮ್ ಅಜ್ಞೈರ್ನ ಭಾವ್ಯತೇ॥

ಯೋಗಸಾಧನೆ ಮಾಡಿದ ಜ್ಞಾನಿಗಳಿಗೆ ಜ್ಞಾನಸ್ವರೂಪದ ಪರಬ್ರಹ್ಮಲಿಂಗವು ಅಂತರ್ಯದಲ್ಲಿ ದೀಪದಂತೆ ಸ್ಫುರಿಸುತ್ತದೆ. ಇತರ ಸಾಮಾನ್ಯರಿಗೆ ಅದು ಗೋಚರವಾಗುವುದಿಲ್ಲ. ಹೀಗೆ ಪ್ರಾಣಲಿಂಗವು ಜ್ಯೋತಿಯ ಸ್ವರೂಪವುಳ್ಳದ್ದು. ಅದು ಯೋಗ ಸಾಧನೆಯಿಂದ ಪ್ರಾಣ- ಅಪಾನ ಸಂಘಟ್ಟನದಿಂದ ನಾಭಿಮಧ್ಯದ ಭಾಗದಲ್ಲಿ ಎದ್ದ ಜ್ಯೋತಿಯ ರೂಪದಲ್ಲಿ ಯೋಗಿಗಳಿಗೆ ಕಾಣುತ್ತದೆ.

ಪ್ರಾಣಲಿಂಗಿ ಸ್ಥಲದ ವೈಶಿಷ್ಟ್ಯವೆಂದರೆ ಯೋಗಸಾಧನೆಯ ಮೂಲಕ ಪ್ರಾಣಲಿಂಗವನ್ನು ಭಾವಪುಷ್ಪಗಳಿಂದ ಅಂದರೆ ಅಂತಃಕರಣ ವೃತ್ತಿವಿಶೇಷಗಳೆಂಬ ಪುಷ್ಪಗಳಿಂದ ಪೂಜಿಸುವುದು. ಅದನ್ನು ಸಿದ್ಧಾಂತ ಶಿಖಾಮಣಿಯು ಪ್ರಾಣಲಿಂಗಾರ್ಚನ ಸ್ಥಲದಲ್ಲಿ ನಿರೂಪಿಸುತ್ತದೆ.

ಬದ್ಧೇಂದ್ರಿಯನವದ್ವಾರೇ ಬೋಧದೀಪೇ ಹೃದಾಲಯೇ।
ಪದ್ಮಪೀಠೇ ಸಮಾಲೀನಂ ಚಿಲ್ಲಿಂಗಂ ಶಿವವಿಗ್ರಹಮ್॥
ಭಾವಯಿತ್ವಾ ಸದಾಕಾಲಂ ಪೂಜಯೇದ್ಭಾವವಸ್ತುಭಿಃ॥

ಇಂದ್ರಿಯಗಳನ್ನು ಪ್ರತಿಬಂಧಿಸಿ ಶಿವಜ್ಞಾನದಿಂದ ಬೆಳಗುವ ಹೃದಯ ಮಂದಿರದಲ್ಲಿ (ಯೋಗಿಗಳು ಗುರುತಿಸುವ) ದ್ವಾದಶದಲ ಕಮಲದ ಪೀಠದಲ್ಲಿ ವಿರಾಜಮಾನವಾದಂತೆ ಮಂಗಲಮೂರ್ತಿಯಾದ ಜ್ಞಾನರೂಪಲಿಂಗವನ್ನು ಭಾಪಿಸಿಕೊಂಡು ಸರ್ವದಾ ಭಾವನಾಮಯವಾದ ಪೂಜಾ ವಸ್ತುಗಳಿಂದ ಪೂಜಿಸಬೇಕು. ಅಂತಹ ಭಾವವಸ್ತುಗಳು ಇವು:

ಕ್ಷಮಾಭಿಷೇಕಸಲಿಲಂ ವಿವೇಕೋ ವಸ್ತ್ರಮುಚ್ಯತೇ।
ಸತ್ಯಮಾಭರಣಂ ಪ್ರೋಕ್ತಂ ವೈರಾಗ್ಯಂ ಪುಷ್ಪಮಾಲಿಕಾ॥
ಗಂಧಃ ಸಮಾಧಿಸಂಪತ್ತಿರಕ್ಷತಾ ನಿರಹಂಕೃತಿಃ।
ಶ್ರದ್ಧಾ ಧೂಪೋ ಮಹಾಜ್ಞಾನಂ ಜಗದ್ಭಾಸಿ ಪ್ರದೀಪಿಕಾ॥
ಭ್ರಾಂತಿಮೂಲಪ್ರಪಂಚಸ್ಯ ನಿವೇದ್ಯಂ ತನ್ನಿವೇದನಮ್।
ಮೌನಂ ಘಂಟಾಪರಿಸ್ಪಂದಸ್ತಾಂಬೂಲಂ ವಿಷಯಾರ್ಪಣಮ್॥
ವಿಷಯಭ್ರಾಂತಿರಾಹಿತ್ಯಂ ತತ್ಪ್ರದಕ್ಷಿಣಕಲ್ಪನಾ।
ಬುದ್ಧೇಸ್ತದಾತ್ಮಿಕಾ ಶಕ್ತಿರ್ನಮಸ್ಕಾರಕ್ರಿಯಾ ಮತಾ॥

ಕ್ಷಮೆಯೇ ಅಭಿಷೇಕಕ್ಕೆ ನೀರು. ವಿವೇಕವೇ ವಸ್ತ್ರ, ಸತ್ಯವೇ ಅಲಂಕಾರ, ವೈರಾಗ್ಯವೇ ಪುಷ್ಪಮಾಲಿಕೆ, ಮನಸ್ಸಿನ ಏಕಾಗ್ರತೆಯೇ ಗಂಧ, ನಿರಹಂಕಾರವೇ ಅಕ್ಷತೆ, ಶ್ರದ್ಧೆಯೇ ಧೂಪ, ವಿಶ್ವಪ್ರಕಾಶಕವಾದ ಮಹಾಜ್ಞಾನವೇ ದೀಪಾರತಿ, ಭ್ರಾಂತಿ ಮೂಲವಾದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಪಂಚದ ಅರ್ಪಣೆಯೇ ನೈವೇದ್ಯ. ಮೌನವೇ ಘಂಟಾನಾದ, ವಿಷಯಗಳ ಅರ್ಪಣೆಯೇ ತಾಂಬೂಲ, ವಿಷಯಗಳಲ್ಲಿ ಭ್ರಾಂತಿಯಿಲ್ಲದಿರುವುದೇ ಪ್ರದಕ್ಷಿಣೆ, ಬುದ್ಧಿಯು ಶಿವಾತ್ಮಕವಾಗುವ ಸಾಮರ್ಥ್ಯವೇ ನಮಸ್ಕಾರ -ಇವು ಪ್ರಾಣಲಿಂಗ ಪೂಜೆಯಲ್ಲಿ ಬರುವ ಪೂಜಾವಸ್ತುಗಳು.

ಈ ಪ್ರಾಣಲಿಂಗಾರ್ಚನೆಯ ಕ್ರಮದಲ್ಲಿ ತೊಡಗಿದ ಪ್ರಾಣಲಿಂಗಿಗೆ ಶಿವನೇ ತಾನು ಎಂಬ ಧ್ಯಾನಯೋಗವು ಶಿವಯೋಗ ಸಮಾಧಿ. ಸೂಕ್ಷ್ಮ ಶರೀರದಲ್ಲಿ ಆರು ಚಕ್ರಗಳಲ್ಲಿ ಉತ್ಪನ್ನವಾದ ಅಂದರೆ ಮೂಲಾಧಾರದಿಂದ ಭ್ರೂಮಧ್ಯದ ಆಜ್ಞಾಚಕ್ರದವರೆಗೆ ಇರುವ ಆರು ಚಕ್ರಗಳಲ್ಲಿ ಮೂಡಿರುವ ಆರು ಕಮಲಗಳನ್ನು ಭಾವಿಸಬೇಕು. ಭ್ರೂಮಧ್ಯದಿಂದ ಮೇಲೆ ಸಹಸ್ರದಲ ಕಮಲಗಳಲ್ಲಿ ನಿರ್ಮಲವಾದ ಚಂದ್ರಬಿಂಬವನ್ನು ಭಾವಿಸಬೇಕು. ಅದರ ಮಧ್ಯದಲ್ಲಿ ಸೂಕ್ಷ್ಮವಾದ ರಂಧ್ರವನ್ನು ಅರಿಯಬೇಕು. ಅದು ಕೈಲಾಸಸ್ಥಾನ. ಸರ್ವಕ್ಕೂ ಕಾರಣನಾದ ಶಂಭುವನ್ನು ಅವರಲ್ಲಿ ಇರುವಂತೆ ಭಾವಿಸಬೇಕು. ಇದು ಶಿವಯೋಗ ಸಮಾಧಿ. ಇಷ್ಟಲಿಂಗದಲ್ಲಿ ದೃಷ್ಟಿಯೋಗ, ಅದರಿಂದ ಪ್ರಾಣಲಿಂಗಾನುಸಂಧಾನ ಮತ್ತು ಭಾವ ಪುಷ್ಪಗಳಿಂದ ಪೂಜೆ, ಇವುಗಳ ಮೂಲಕ ಸಾಧಿಸಬೇಕಾದುದು ಶಿವಯೋಗ ಸಮಾಧಿಯ ವೈಶಿಷ್ಟ್ಯ. ಹೀಗೆ ಶಿವಯೋಗ ಸಮಾಧಿಯ ಮೂಲಕ ಪ್ರಾಣಲಿಂಗಿಗೆ "ನಾನು" ಎಂಬ ರೀತಿಯಲ್ಲಿ ತನ್ನಲ್ಲಿ ತಾದಾತ್ಮ್ಯಭಾವದಿಂದಿರುವ ಶಿವಲಿಂಗ ಪ್ರತ್ಯಕ್ಷಾನುಭವ ಸ್ಥಿತಿಯು ನಿಜಲಿಂಗಸ್ಥಿತಿ. ನಿಜಲಿಂಗವೆನಿಸಿದ ಪ್ರಾಣಲಿಂಗಿಯು 'ಶಿವಜ್ಞಾನವುಳ್ಳ ಜೀವನೇ ಅಂಗ, ಜ್ಞೇಯವಾದದ್ದೇ ಲಿಂಗ' ಎಂಬ ಅರಿವಿನಿಂದ ಅಂಗ-ಲಿಂಗ ಒಂದರೊಡನೊಂದು ಸಾಮರಸ್ಯದಿಂದ ಇದೆ ಎಂಬ ಭಾವವು ಇರುವುದರಿಂದ ಅಂಗ- ಲಿಂಗಿಯೆನಿಸುವನು.

ಹೀಗೆ ಭಾವಪೂರ್ವಕವಾದ ಪೂಜಾವಸ್ತುಗಳಿಂದ ಪ್ರಾಣಲಿಂಗ ಪೂಜೆಯನ್ನು ಆಚರಿಸಿ ಶಿವಯೋಗ ಸಮಾಧಿಯನ್ನು ಹೊಂದುವನು.

ಈ ಶಿವಯೋಗವನ್ನು ಶಿವಾಚಾರ್ಯರು ಮಾನವನ ಜೀವನ್ಮುಕ್ತಿಗೆ ಅವಶ್ಯಕವೆಂದು ವಿವರಿಸಿರುವರು.

ಶಿವಯೋಗ :

ಯೋಗಶಾಸ್ತ್ರದ ಪ್ರವರ್ತಕರೂ, ಪ್ರಾಜ್ಞರೂ ಆದ ಪತಂಜಲ ಮಹರ್ಷಿಗಳು "ಯೋಗಃ ಚಿತ್ತವೃತ್ತಿ ನಿರೋಧಃ" ಎಂದು ಹೇಳಿದ್ದಾರೆ. ಅಂದರೆ ಮನಸ್ಸು, ಬುದ್ಧಿ, ಮುಂತಾದ ಅಂತಃಕರಣಗಳನ್ನು ಹಿಡಿತದಲ್ಲಿಟ್ಟುಕೊಳ್ಳುವುದೇ ಯೋಗ. "ಸಂಯೋಗೋ ಯೋಗ ಇತ್ಯುಕ್ತೋ ಜೀವಾತ್ಮ- ಪರಮಾತ್ಮನೋಃ" ಜೀವಾತ್ಮ ಪರಮಾತ್ಮರ ಮಿಲನವೇ ಯೋಗ ಎಂದಿರುವರು ಯಾಜ್ಞವಲ್ಕ್ಯರು. "ಯೋಗಹೀನಂ ಕಥಂ ಜ್ಞಾನಂ ಮೋಕ್ಷದಂ ಭುವನೇಶ್ವರಿ" ಎಂದು ಆಗಮದಲ್ಲಿ ಮಹಾದೇವನು ದೇವಿಯನ್ನು ಕುರಿತು ಯೋಗಜ್ಞಾನವಿಲ್ಲದೆ ಮೋಕ್ಷ ದೊರಕುವುದಿಲ್ಲವೆಂದು ನಿರೂಪಿಸಿರುತ್ತಾನೆ. ಎಲ್ಲಾ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಚಾರ್ಯರೂ ತಮ್ಮ ತಮ್ಮ ಸಿದ್ಧಾಂತ ಸ್ಥಾಪನೆಗೆ ಪ್ರಮಾಣವಾಗಿ ಸ್ವೀಕರಿಸಿರುವ ಉಪನಿಷತ್, ಬ್ರಹ್ಮಸೂತ್ರ, ಗೀತೆ ಮುಂತಾದ ಗ್ರಂಥಗಳಲ್ಲಿ ಯೋಗದ ವಿಷಯವನ್ನು ಪ್ರತಿಪಾದಿಸಿದ್ದಾರೆ. ವೀರಶೈವ ಸಿದ್ಧಾಂತ ಪ್ರತಿಪಾದಿಸುವ ಸಿದ್ಧಾಂತ ಶಿಖಾಮಣಿ, ಶ್ರೀಕರಭಾಷ್ಯ, ಮುಂತಾದುವುಗಳಲ್ಲಿ ಆ ಯೋಗದ ಪರಿಷ್ಕಾರ ರೂಪದಲ್ಲಿ ಶಿವಯೋಗವನ್ನು ಪ್ರತಿಪಾದಿಸಿದ್ದಾರೆ.

ಯೋಗ ಶಬ್ದವು 'ಯುಜ್' ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. 'ಯುಜ್' ಎಂದರೆ ಕೂಡು, ಒಂದಾಗು, ಬೆರೆ ಎಂದರ್ಥ. ಯಾರು ಯಾರನ್ನು ಬೆರೆಯುವುದು? ಅಂದರೆ ಭಕ್ತನು ಭಗವಂತನೊಡನೆ ಬೆರೆಯುವುದೇ 'ಯೋಗವು'. ವೀರಶೈವರ ಪರಿಭಾಷೆಯಲ್ಲಿ ಶಿವ-ಜೀವರ ಐಕ್ಯವೇ ಯೋಗವು. ಅಂಗ-ಲಿಂಗ ಸಾಮರಸ್ಯವೇ ಯೋಗವು ಎಂದು ಶಿವಯೋಗಿ ಶಿವಾಚಾರ್ಯರ ಅಭಿಪ್ರಾಯವಾಗಿದೆ. ಯೋಗವು ಮಂತ್ರಯೋಗ, ಲಯಯೋಗ, ಹಠಯೋಗ, ರಾಜಯೋಗ, ಶಿವಯೋಗವೆಂದು ಐದು ಪ್ರಕಾರವಾಗಿರುವುದು. ಈ ಯೋಗಗಳ ವಿಷಯವನ್ನು ಸರಳವಾಗಿ ಇಲ್ಲಿ ವಿವೇಚಿಸಲಾಗಿದೆ.

೧. ಮಂತ್ರಯೋಗ :

ಏಕಾಕ್ಷರಂ ದ್ವ್ಯಕ್ಷರಂ ವಾ ಷಡಕ್ಷರಮಥಾಽಪಿ ವಾ।
ಅಷ್ಟಾಕ್ಷರಂ ವಾ ಮೋಕ್ಷಾಯ ಮಂತ್ರಯೋಗೀ ಜಪೇತ್ಸದಾ॥

ಏಕಾಕ್ಷರಾತ್ಮಕವಾದ 'ಓಂ' ಎಂಬ ಮಂತ್ರವನ್ನಾಗಲಿ, ದ್ವ್ಯಕ್ಷರಾತ್ಮಕವಾದ 'ಹಂಸ' ಅಥವಾ 'ಸೋಹಂ' ಎಂಬ ಮಂತ್ರವನ್ನಾಗಲಿ, ಷಡಾಕ್ಷರಾತ್ಮಕವಾದ 'ಓಂ ನಮಃ ಶಿವಾಯ' ಎಂಬ ಮಂತ್ರವನ್ನಾಗಲಿ ಮಂತ್ರದ ಕ್ರಮವರಿತು ವಿಧಿವತ್ತಾಗಿ ಮುಕ್ತಿಗೋಸುಗ ಜಪಿಸುವುದೇ "ಮಂತ್ರಯೋಗ"ವೆನಿಸುವುದು.

೨. ಲಯಯೋಗಃ

ಯಸ್ಯ ಚಿತ್ತಂ ನಿಜಧ್ಯೇಯೇ ಮನಸಾ ಮರುತಾ ಸಹ।
ಲೀನಂ ಭವತಿ ನಾದೇ ವಾ ಲಯಯೋಗೀ ಸ ಏವ ಹಿ॥

ಚಿತ್ತವು ತನ್ನ ಧ್ಯಾನಕ್ಕೆ ಯೋಗ್ಯವಾದ ಮೂರ್ತಿಯಲ್ಲಾಗಲಿ, ಅಥವಾ ಪ್ರಾಣಾಯಾಮದಿಂದ ಅಭಿವ್ಯಕ್ತವಾದ ನಾದದಲ್ಲಿಯಾಗಲಿ, ಮನೋಮಾರುತಗಳೊಡನೆ ಕೂಡಿ ಲಯವಾಗುವುದೇ "ಲಯಯೋಗ"ವೆನಿಸುವುದು.

೩. ಹಠಯೋಗಃ

ಭವೇದಷ್ಟಾಂಗಮಾರ್ಗೇಣ ಮುದ್ರಾಕರಣಬಂಧನೈಃ।
ತಥಾ ಕೇವಲಕುಂಭೇ ವಾ ಹಠಯೋಗೀ ವಶಾನಿಲಃ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿಗಳೆಂಬ ಅಷ್ಟಾಂಗಗಳಿಂದಾಗಲಿ ಅಥವಾ ರೇಚಕಪೂರಕ ಪ್ರಾಣಾಯಾಮಗಳಿಲ್ಲದೆ ಕೇವಲ ಕುಂಭಕ ಪ್ರಾಣಾಯಾಮದಿಂದಾಗಲಿ, ವಾಯುವನ್ನು ವಶಪಡಿಸಿಕೊಳ್ಳುವುದು 'ಹಠಯೋಗ'ವೆನಿಸಿಕೊಳ್ಳುವುದು.

೪. ರಾಜಯೋಗಃ

ತ್ರಿಷು ಲಕ್ಷ್ಯೇಷು ಯೋ ಬ್ರಹ್ಮಸಾಕ್ಷಾತ್ಕಾರಂ ಗಮಿಷ್ಯತಿ।
ಜ್ಞಾನೇ ವಾಽಥ ಮನೋವೃತ್ತಿರಹಿತೋ ರಾಜಯೋಗವಿತ್॥

ಬಾಹ್ಯಲಕ್ಷ್ಯ, ಮಧ್ಯಲಕ್ಷ್ಯ, ಆಂತರ್ಲಕ್ಷ್ಯಗಳಿಂದಾಗಲಿ ಅಥವಾ ಮನಸ್ಕಜ್ಞಾನ (ಅಂತರ್ಮುದ್ರಾಜ್ಞಾನ)ದಿಂದಾಗಲಿ ಪರಬ್ರಹ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವುದೇ ಮನೋವ್ಯಾಪಾರ ಶೂನ್ಯವಾದ ರಾಜಯೋಗವೆನಿಸುವುದು. ಈ ನಾಲ್ಕು ವಿಧವಾದ ಯೋಗಗಳಲ್ಲಿ ಇರುವ ಕ್ಲೇಶಗಳನ್ನು ಪರಿಹರಿಸಿ ಪರಿಷ್ಕಾರಗೊಳಿಸಲ್ಪಟ್ಟ ಶ್ರೇಷ್ಠಯೋಗವೇ ಶಿವಯೋಗ. ಇಲ್ಲಿ ಒಂದು ವಿಷಯವನ್ನು ಪರ್ಯಾಲೋಚಿಸಬೇಕು. ಅದು ಈ ಶ್ಲೋಕದಲ್ಲಿ ಪ್ರಸ್ತುತವಾಗಿದೆ:

ನ ಭೇದಃ ಶಿವಯೋಗಸ್ಯ ರಾಜಯೋಗಸ್ಯ ತತ್ತ್ವತಃ।
ಶಿವಾರ್ಥಿನಾಂ ತಥಾಪ್ಯೇವಂ ಉಕ್ತೇ ಬುದ್ಧೇಃ ಪ್ರವೃದ್ಧಯೇ॥

ರಾಜಯೋಗಕ್ಕೂ, ಶಿವಯೋಗಕ್ಕೂ ತಾತ್ತ್ವಿಕವಾದ ಭೇದವು ಇರುವುದಿಲ್ಲ. ಆದರೂ ಪರಶಿವಬ್ರಹ್ಮ ಸಾಕ್ಷಾತ್ಕಾರಾಪೇಕ್ಷಿಗಳಾದ ಮುಮುಕ್ಷುಗಳ ಜ್ಞಾನಾಭಿವೃದ್ಧಿಗೋಸ್ಕರ ಶಿವಯೋಗವು ಬೇರೆಯಾಗಿ ವಿವರಿಸಲ್ಪಟ್ಟಿದೆ ಎಂದು ಹೇಳಿದ್ದಾರೆ.

ಪ್ರತಿಪಾದ್ಯಃ ತಯೋರ್ಭೇದಃ ತಥಾ ಶಿವರತಾತ್ಮನಾಮ್।
ತಸ್ಮಾನ್ಮನೀಷಿಭಿಃ ಗ್ರಾಹ್ಯಃ ಶಿವಯೋಗಸ್ತು ಕೇವಲಃ॥

ಶಿವಪ್ರೀತಾತ್ಮರಿಗೆ ರಾಜಯೋಗ ಶಿವಯೋಗಗಳಲ್ಲಿ ಭೇದವು ಹೇಳಲ್ಪಡಬೇಕಾಗಿದೆ. ಆದುದರಿಂದ ಮೋಕ್ಷಾರ್ಥಿಗಳು ಶಿವಯೋಗವನ್ನೇ ಆಚರಿಸಬೇಕು. ರಾಜಯೋಗಕ್ಕೂ ಶಿವಯೋಗಕ್ಕೂ ಇರುವ ಭೇದವೇನೆಂದರೆ- ಪಾತಂಜಲಯೋಗ ಶಾಸ್ತ್ರದಲ್ಲಿ ಗುಣತ್ರಯ ಸಾಕ್ಷಾತ್ಕಾರವೇ ಅಮನಸ್ಕವೆಂದು ತಿಳಿದು ಪುರುಷ ಸಾಕ್ಷಾತ್ಕಾರವನ್ನು ಮಾಡಿಕೊಳ್ಳುವುದೇ 'ರಾಜಯೋಗ'ವೆಂದು ಹೇಳಲ್ಪಡುವುದು; ಆದರೆ ಶಿವಾಗಮಗಳಲ್ಲಿ ಅವುಗಳನ್ನು ಅನುಸರಿಸುವ ಸಿದ್ಧಾಂತ ಶಿಖಾಮಣಿಯಲ್ಲಿ ಶಿವಭಕ್ತಿಗೆ ಸಾಧನವಾದ ಮಹಾಕುಂಡಲಿನೀ ಜನಿತವಾದ ತಾರಕತ್ರಯ ಸಾಕ್ಷಾತ್ಕಾರದ ಮೂಲಕ ಶಕ್ತಿಯಲ್ಲಿ ವ್ಯಕ್ತಿಜ್ಞಾನವನ್ನು ಲಯಗೊಳಿಸಲು, ಸರ್ವತೋಮುಖವಾಗಿ ವ್ಯಾಪ್ತವಾಗುವ ಶಿವತ್ವಾಭಿವ್ಯಕ್ತಿಯೇ "ಶಿವಯೋಗ"ವೆಂದು ಕರೆಯಲ್ಪಡುವುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೫. ಇಷ್ಟಲಿಂಗ ಮೂಲಕ ಶಿವಯೋಗ

ಹಿಂದೆ ನಿರೂಪಿಸಿದಂತೆ ವೀರಶೈವಾಚಾರ್ಯರು ಹಾಗೂ ಶಿವಶರಣರು ಅನುಸರಿಸಿದ ಶಿವಯೋಗವು ಲಿಂಗಾಂಗ ಸಾಮರಸ್ಯಾತ್ಮಕವಾಗಿರುವುದು. ಇಷ್ಟಲಿಂಗವನ್ನು ಧರಿಸಿದ ಪ್ರತಿಯೊಬ್ಬರಿಗೂ ಶಿವಯೋಗವನ್ನು ಸಾಧಿಸುವ ಅರ್ಹತೆ ಪ್ರಾಪ್ತವಾಗುವುದು. ಈ ಯೋಗವನ್ನನುಸರಿಸುವಾಗ ಕಾಯಕ್ಲೇಶ, ಮನಃಕ್ಲೇಶ ಮೊದಲಾದುವುಗಳಿಗೆ ಒಳಗಾಗುವ ಪ್ರಸಂಗವಿರುವುದಿಲ್ಲ. ಈ ಕ್ಲೇಶಗಳ ಮೂಲವನ್ನೇ ನಾಶಪಡಿಸುವ ಯೋಗ್ಯತೆಯು ಶಿವಯೋಗದಲ್ಲಿರುವುದು. ಶಿವಯೋಗವನ್ನು ಪೂರ್ಣಯೋಗವೆಂದು ಕರೆಯಬಹುದು. ಶಿವಪೂಜೆಯ ಸಂಸ್ಕಾರದಿಂದ ಪರಿಪಕ್ವತೆಯನ್ನು ಗಳಿಸಿದ ಸಾಧಕನು ಇಷ್ಟಲಿಂಗದಲ್ಲಿ ದೃಷ್ಟಿಯೋಗವನ್ನು ಗಳಿಸಿ, ಆಂತರಿಕವಾಗಿ ಜ್ಯೋತಿಸ್ವರೂಪವುಳ್ಳ ಪ್ರಾಣಲಿಂಗಾನುಸಂಧಾನವನ್ನು ಮಾಡಿ, ಅದರ ಮೂಲಕ ಭಾವವೆಲ್ಲ ಲಿಂಗವಾಗಿ ಬೆರೆದು ಒಂದಾಗುವ ಪರಿಯೇ ಶಿವಯೋಗದ ವೈಶಿಷ್ಟ್ಯ. ಸಾಕಾರದ ನೆಲೆಯಿಂದ ನಿರಾಕಾರದಲ್ಲಿ ಒಂದಾಗಿ ಎರಡಿಲ್ಲದಿರುವ ಪರಿಯೇ ಶಿವಯೋಗ. ಕೀಟ-ಭ್ರಮರ ನ್ಯಾಯದಂತೆ ನಾನು ಶಿವನೆಂಬ ಭಾವದಲ್ಲಿ ನಿಲ್ಲುವುದೇ ಶಿವಯೋಗ:

> ಕೀಟೋ ಭ್ರಮರಯೋಗೇನ ಭ್ರಮರೋ ಭವತಿ ಧ್ರುವಮ್।
> ಮಾನವಃ ಶಿವಯೋಗೇನ ಶಿವೋ ಭವತಿ ಕೇವಲಮ್॥

ಕೀಟವು ಭ್ರಮರ ಯೋಗದಿಂದ ಸಾಕ್ಷಾತ್ ಭ್ರಮರವಾಗುವಂತೆ, ಮಾನವನು ಶಿವಯೋಗದಿಂದ ಕೇವಲ ಶಿವನೇ ತಾನಾಗುವನು ಎಂಬುದಾಗಿ ರೇಣುಕಾಚಾರ್ಯರು ಉಪದೇಶಿಸಿರುತ್ತಾರೆ. ಆದ್ದರಿಂದ ಪ್ರತಿಯೊಬ್ಬ ವೀರಶೈವನು ಶಿವಯೋಗವನ್ನು ತಿಳಿದು ಆಚರಿಸಿದ್ದೇ ಆದರೆ ಶಿವನೇ ಆಗುವನು. ಇದೇ ಶಿವಯೋಗದ ಅಮೂಲ್ಯ ರಹಸ್ಯವಾಗಿದೆ. □

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೭. ಸಿದ್ಧಾಂತ ಶಿಖಾಮಣಿಯಲ್ಲಿ ಶರಣ ಮತ್ತು ಐಕ್ಯಸ್ಥಲಗಳು

–ಡಾ|| ಸಿ. ಶಿವಕುಮಾರಸ್ವಾಮಿ

ಷಟ್‌ಸ್ಥಲದಲ್ಲಿ ಬರುವ 'ಸ್ಥಲ' ಎಂಬ ಶಬ್ದಕ್ಕೆ ಸಾಮಾನ್ಯವಾಗಿ ಹಂತ, ಮೆಟ್ಟಿಲು ಎಂಬ ಅರ್ಥಗಳಿವೆ. ಆದರೆ ವಿಶೇಷವಾಗಿ ಧಾರ್ಮಿಕ ಪರಿಭಾಷೆಯಲ್ಲಿ ಇಡೀ ವಿಶ್ವವನ್ನೇ ನಿರ್ದೇಶಿಸುವ ಪರಾತ್ಪರ ಕಲ್ಪನೆಯನ್ನೇ ಹೇಳುವಂತೆ ಕಾಣುತ್ತದೆ. ಷಟ್‌ಸ್ಥಲ ಸಿದ್ಧಾಂತದ ಕಲ್ಪನೆಯಲ್ಲಿ ಸಾಧಕನ ಆಧ್ಯಾತ್ಮಿಕ ಅನುಭವದ ವಿಕಾಸಕ್ರಮವನ್ನೂ, ವಿವಿಧ ಹಂತಗಳನ್ನೂ ಗಮನಿಸಲು ಸಾಧ್ಯವಿರುವುದರಿಂದ ವೀರಶೈವ ಧರ್ಮದ ಸಾರಸರ್ವಸ್ವವನ್ನೂ ಈ ಕಲ್ಪನೆ ಒಳಗೊಂಡಂತೆ ಕಂಡುಬರುತ್ತಿದೆ. ಷಟ್‌ಸ್ಥಲ ಸಿದ್ಧಾಂತದ ಬೇರುಗಳನ್ನು ಕಾಮಿಕಾದಿ ವಾತುಲಾಂತ ೨೮ ಶಿವಾಗಮಗಳಲ್ಲಿ ಗುರುತಿಸಬಹುವಾಗಿದೆ. ಈ ಆಗಮಗಳಲ್ಲಿ ದೊರೆಯುವ ವಿಷಯದ ಜಾಡನ್ನು ಹಿಡಿದು ಸಿದ್ಧಾಂತ ಶಿಖಾಮಣಿಯೇ ಮುಂತಾದ ವೀರಶೈವ ಸಿದ್ಧಾಂತ ಗ್ರಂಥಗಳು ವಿಸ್ತರಿಸಿದ್ದರೆ, ಬಸವಣ್ಣ. ಚೆನ್ನಬಸವಣ್ಣ ಮೊದಲಾದ ಶಿವಶರಣರ ವಚನಗಳಲ್ಲಿ ಮಹಾ ವಟವೃಕ್ಷವಾಗಿ ಬೆಳೆದು ನಿಂತಿದೆ. "ಲೀಲೆಗೆಂದು ಎರಡಾದ ಲಿಂಗವು ಅಂಗನಿಗಾಗಿಯೇ ಮತ್ತೆ ಲಿಂಗವಾಗಿ ಬಂದಿತು. ಬಂದು ಅಂಗದ ಸ್ಥೂಲ, ಸೂಕ್ಷ್ಮ, ಕಾರಣತನುವಿಡಿದು ಇಷ್ಟ, ಪ್ರಾಣ, ಭಾವವೆಂದು ಮೂರಾಯಿತು. ಷಡಿಂದ್ರಿಯಗಳ ಅನುವಿಡಿದು ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ ಎಂದು ಆರು ಬಗೆಯಾಗಿ ನಾಸಿಕ, ಜಿಹ್ವೆ, ನೇತ್ರ, ತ್ವಕ್ಕು, ಶ್ರೋತ್ರ, ಆತ್ಮ ಈ ಷಡಿಂದ್ರಿಯಗಳಲ್ಲಿ ನೆಲೆಗೊಂಡಿತು. ಅಂಗದ ಕ್ರಿಯೆಗಳು ಲಿಂಗದ ಕ್ರಿಯೆಗಳಾಗಬೇಕು; ಪದಾರ್ಥ ಪ್ರಸಾದವಾಗಬೇಕು. ಎಂಬುದೇ ಷಟ್‌ಸ್ಥಲದ ಉದ್ದೇಶ."[೧]

ಜೀವನು ತನ್ನ ಜೀವಭಾವವನ್ನು ತೊಡೆದುಕೊಂಡು ಶಿವಭಾವವನ್ನು ಹೊಂದುವ, ಸಮರಸಾತ್ಮಕವಾದ ಶಿವೈಕ್ಯವನ್ನು ಗುರಿಯಾಗಿಟ್ಟುಕೊಂಡ ವೀರಶೈವ ಧರ್ಮವು ಅದಕ್ಕಾಗಿ ಷಟ್‌ಸ್ಥಲಗಳ ವ್ಯವಸ್ಥೆಯನ್ನು ಅಂಗೀಕರಿಸಿದೆಯೆಂದು ಸಿದ್ಧಾಂತ ಶಿಖಾಮಣಿಯ ಷಟ್‌ಸ್ಥಲ ವ್ಯವಸ್ಥೆಯ ನಿರೂಪಣೆಯಿಂದ ಸ್ಪಷ್ಟವಾಗುತ್ತದೆ. ಷಟ್‌ಸ್ಥಲಗಳ ವ್ಯವಸ್ಥೆ ವೀರಶೈವ ಧರ್ಮದ ವೈಶಿಷ್ಟ್ಯ. ಸ್ಥಲಭೇದದ ಆಧಾರದ ಮೇಲೆ ವೀರಶೈವ ತತ್ವಶಾಸ್ತ್ರವು ಆರು ವಿಧವಾಗಿದೆ. ಆಯಾಯ ಸ್ಥಲಗಳಲ್ಲಿ ಉಕ್ತವಾದ ಸದಾಚಾರದ ಭೇದ ಮತ್ತು ಆಯಾಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸ್ಥಲನಿಷ್ಠರಾದ ಭಕ್ತ ಮುಂತಾದ ಅಧಿಕಾರಿಗಳ ಭೇದ ಇದಕ್ಕೆ ಆಧಾರ.[೨] ಭಕ್ತಸ್ಥಲ, ಮಾಹೇಶ್ವರಸ್ಥಲ, ಪ್ರಸಾದಿಸ್ಥಲ, ಪ್ರಾಣಲಿಂಗಿಸ್ಥಲ, ಶರಣಸ್ಥಲ ಮತ್ತು ಐಕ್ಯಸ್ಥಲ[೩] -ಈ ಆರು ಮೂಲಭೂತವಾದ ಸ್ಥಲಗಳು. ಆಗಮೋಕ್ತವಾದ ಈ ವ್ಯವಸ್ಥೆಯನ್ನು ಸಿದ್ಧಾಂತ ಶಿಖಾಮಣಿಯು ಅಳವಡಿಸಿಕೊಂಡು ಅದರ ಅಂಗವಾಗಿ ನೂರೊಂದು ಸ್ಥಲಗಳ ನಿರೂಪಣೆಯನ್ನು ಕೊಟ್ಟಿದೆ.

ಷಟ್‌ಸ್ಥಲ ಕ್ರಮವನ್ನು ಅನುಸರಿಸಿ ಭಕ್ತ, ಮಹೇಶ, ಪ್ರಸಾದಿ ಇವು ಕ್ರಿಯಾತ್ಮಕವೆಂದೂ, ಪ್ರಾಣಲಿಂಗಿ, ಶರಣ ಮತ್ತು ಐಕ್ಯಸ್ಥಲಗಳು ಜ್ಞಾನಾತ್ಮಕವೆಂದೂ ವಿಭಾಗಿಸಲಾಗಿದೆ. ಅವುಗಳ ಸಂಬಂಧ ಅನ್ಯೋನ್ಯವಾದುದು. ಪ್ರಸ್ತುತ ಪ್ರಬಂಧದ ಮುಖ್ಯಉದ್ದೇಶ "ಸಿದ್ಧಾಂತ ಶಿಖಾಮಣಿಯಲ್ಲಿ ಶರಣಸ್ಥಲ ಮತ್ತು ಐಕ್ಯಸ್ಥಲ"ಗಳ ನಿರೂಪಣೆ.

ಭಕ್ತಸ್ಥಲದಲ್ಲಿ ಸಾಧಕನು ಗುರುವಿನಿಂದ ಇಷ್ಟಲಿಂಗವನ್ನು ಪಡೆದ ನಂತರ ಆತನ ಆಧ್ಯಾತ್ಮಿಕ ಯಾತ್ರೆ ಆರಂಭವಾಗುತ್ತದೆ. ಸದಾ ಲಿಂಗಾರ್ಚನೆಯ ಕೈಂಕರ್ಯದಲ್ಲಿ ನಿರತನಾದವನೇ ಭಕ್ತ. ಈ ಸ್ಥಲದಲ್ಲಿ ಭಕ್ತನ ಶ್ರದ್ಧಾಭಕ್ತಿ ಜಾಗ್ರತಗೊಂಡು ಆಚಾರಲಿಂಗದ ಆರಾಧನೆಯನ್ನು ಕೈಗೊಳ್ಳುತ್ತದೆ. ಗುರು- ಲಿಂಗ- ಜಂಗಮ ಒಂದೇ ಎಂದು ಪರಿಭಾವಿಸುವ ನಿಲುವು ದೃಢವಾಗುತ್ತಾನೆ. ಈ ಹಂತದಿಂದ ಮುಂದಿನ ಹಂತಕ್ಕೆ ಸಾಧಕ ಬೆಳೆಯುತ್ತಾನೆ. ಸಾಧಕನು ಭಕ್ತಸ್ಥಲದಲ್ಲಿ ಹೇಳಲಾದ ಸದಾಚಾರಗಳ ಆಚರಣೆಯಿಂದ ಪಕ್ವವಾದ ಅನುಭವವುಳ್ಳವನಾಗಿ ಮುಂದಿನ ಮೆಟ್ಟಿಲಾದ ಮಾಹೇಶ್ವರಸ್ಥಲವನ್ನು ಮುಟ್ಟುತ್ತಾನೆ.

ಮಾಹೇಶ್ವರಸ್ಥಲದಲ್ಲಿ ಮಾಹೇಶ್ವರನ ನಿಷ್ಠಾ ಭಕ್ತಿಯೂ, ಶಿವಸ್ವರೂಪದ ತಾತ್ವಿಕ ಭಾವನೆಯೂ ನಿರೂಪಿತವಾಗಿದ್ದು, ಅವನು ಅನುಭವದ ಪರಿಪಾಕದಿಂದ ಮುಂದಿನ ಸ್ಥಲವಾದ ಪ್ರಸಾದಿಸ್ಥಲಕ್ಕೆ ಏರಲು ಯೋಗ್ಯವೆಂದು ಸೂಚಿಸುತ್ತದೆ. ಲಿಂಗನಿಷ್ಠೆ ಮತ್ತು ಶಿವಸ್ವರೂಪ ಜ್ಞಾನಗಳ ಸಮನ್ವಯದಿಂದ ನಿರ್ಮಲತ್ವವನ್ನು ಹೊಂದಿ ಮಾಹೇಶ್ವರನು ಪ್ರಸಾದಿಯಾಗುತ್ತಾನೆ.

ಪ್ರಸಾದಿಯ ವೈಶಿಷ್ಟ್ಯವೆಂದರೆ ಇದೇ, ಎಲ್ಲವನ್ನೂ ಶಿವನಿಗರ್ಪಿಸಿ ಸ್ವೀಕರಿಸುವುದು. ಶಿವನ ಪ್ರಸಾದದಂತೆ ಗುರು ಮತ್ತು ಜಂಗಮರ ಪ್ರಸಾದವನ್ನು ಸ್ವೀಕರಿಸಬೇಕೆಂದು ಸಿದ್ಧಾಂತ ಶಿಖಾಮಣಿಯು ನಿರೂಪಿಸುತ್ತದೆ. ಪ್ರಸಾದಿಸ್ಥಲದ ಅವಧಾನ ಭಕ್ತಿಯಿಂದ ಅನುಭಾವ ಭಕ್ತಿಯ ಕಡೆ ಪರಿವರ್ತಿತನಾಗಿರುತ್ತಾನೆ. ಈ ಪರಿವರ್ತನೆಯಲ್ಲಿ ಸಾಧಕ ಹೆಚ್ಚು ಹೆಚ್ಚು ಅಂತರ್ಮುಖಿಯಾಗುತ್ತಾ ನಡೆಯುತ್ತಾನೆ. ಪ್ರಸಾದಿ ಸ್ಥಲದಲ್ಲಿ ಶಿವಪ್ರಸಾದದಿಂದ ಪ್ರಸಾದಿಯು ಶಿವಯೋಗಿಯಾಗಿ ಪರಿಣಮಿಸುತ್ತಾನೆ. ಯೋಗವು ಸಾಧ್ಯತಾ ಸ್ಥಿತಿಯಲ್ಲಿರುವವರೆಗೆ ಪ್ರಸಾದಿ, ಸಿದ್ಧ ಸ್ಥಿತಿಗೆ ಮುಟ್ಟಿದಾಗ ಪ್ರಾಣಲಿಂಗಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶರಣಸ್ಥಲ

ಭಾವಪೂರ್ವಕವಾದ ಪೂಜಾವಸ್ತುಗಳಿಂದ ಪ್ರಾಣಲಿಂಗ ಪೂಜೆಯನ್ನು ಆಚರಿಸಿ, ಶಿವಯೋಗ ಸಮಾಧಿ, ನಿಜಲಿಂಗಸ್ಥಿತಿ ಮತ್ತು ಅಂಗಲಿಂಗಸ್ಥಿತಿಯನ್ನು ಸಾಧಿಸಿದ ಪ್ರಾಣಲಿಂಗಿಯು ಪರಿಪಕ್ವವಾದ ಅನುಭವದಿಂದ ಶರಣನಾಗಿ ಪರಿಣಮಿಸುತ್ತಾನೆ. ಪ್ರಾಣಲಿಂಗಿಯ ಭಕ್ತಿಯನ್ನು ಅನುಭಾವ ಭಕ್ತಿಯೆಂದು ಕರೆಯುತ್ತಾರೆ. ಅನುಭಾವ ಭಕ್ತಿಯ ಪರಿಪಾಕವು ಆನಂದಭಕ್ತಿಯಾಗಿ ಪರಿಣಮಿಸುತ್ತದೆ. ಇದು ಶರಣನ ಭಕ್ತಿಯ ಸ್ವರೂಪ. ಶರಣಸ್ಥಲದ ಹಂತದಲ್ಲಿ ಸಾಧಕ ಪೂರ್ಣ ಜ್ಞಾನಿಯಾಗಿರುತ್ತಾನೆ. ಹಿಂದಿನ ಮತ್ತು ಹೊರಗಿನ ಯಾವುದೇ ತೊಂದರೆಗಳು ಅವನನ್ನು ಕಾಡುವುದಿಲ್ಲ. ದೇಹ, ಸಂಸಾರಾದಿ ಗುಣಗಳಿಂದ ಬಿಡುಗಡೆಯಾಗಿರುತ್ತದೆ. ತನು-ಮನಗಳ ಗುಣಗಳಿಂದಲೂ ಬಾಧಿತನಲ್ಲ.

ಒಬ್ಬನೇ ಭಕ್ತ-ಮಾಹೇಶ್ವರ -ಪ್ರಸಾದಿಯೆನಿಸಿಕೊಂಡಿದ್ದು, ಅನಂತರ ಪ್ರಾಣಲಿಂಗಿ-ಯಾದವನೇ ಮುಂದೇ ಶರಣ ಎಂದು ಕರೆಯಿಸಿಕೊಳ್ಳುವುದು ಹೇಗೆ? ಎಂಬ ಅಗಸ್ತ್ಯರ ಪ್ರಶ್ನೆಗೆ[೪] ಉತ್ತರವಾಗಿ ಶ್ರೀರೇಣುಕರು ಶರಣನ ಲಕ್ಷಣವನ್ನು ನಿರೂಪಿಸುತ್ತಾರೆ:

ಅಂಗಲಿಂಗೀ ಜ್ಞಾನರೂಪಃ ಸತೀ ಜ್ಞೇಯಃ ಶಿವಃ ಪತಿಃ।
ಯತ್ಸೌಖ್ಯಂ ತತ್ಸಮಾವೇಶೇ ತದ್ವಾನ್ ಶರಣನಾಮವಾನ್॥[೫]

ಜ್ಞಾನಸ್ವರೂಪನಾದ ಶಿವನೇ ನನ್ನ ಸ್ವರೂಪ ಎಂದು ತಿಳಿದ ಅಂಗಲಿಂಗಿಯಾದ ಪ್ರಾಣಲಿಂಗಿಯು ಸತಿ, ಇವನು ಪತಿ. ಅವರಿಬ್ಬರ ಸಮಾವೇಶದಿಂದ ಯಾವ ಆನಂದವುಂಟಾಗುತ್ತದೆ ಅಂತಹ ಆನಂದವನ್ನು ಅನುಭವಿಸುವವನೇ ಶರಣನು. ಅಂದರೆ "ಯಥಾ ಸ್ತ್ರಿಯಾ ಸಂಪರಿಷ್ವಕ್ತೋ ನ ಬಾಹ್ಯಂ ಕಿಂಚನ ವೇದನಾಂತರಮ್। ಏವಮೇವಾಯಂ ಪುರುಷಃ ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತೋ ನ ಬಾಹ್ಯಂ ಕಿಂಚನ ವೇದನಾಂತರಮ್॥"[೬] ಹೇಗೆ ಪ್ರಿಯತಮೆಯನ್ನು ಆಲಿಂಗಿಸಿ ಕೊಂಡವನಿಗೆ ಒಳ-ಹೊರಗಿನ ಬೇರೆ ವಿಷಯಗಳಾವುವೂ ಅನುಭವಕ್ಕೆ ಬರುವುದಿಲ್ಲವೋ ಹಾಗೆಯೇ ಜೀವನು ಪ್ರಾಜ್ಞನಾದ ಅಂತರಾತ್ಮನೊಂದಿಗೆ ಬೆರೆತಾಗ ಬಾಹ್ಯ ಹಾಗೂ ಮಾನಸಿಕ ವಿಷಯಗಳಾವುವೂ ಅರಿವಿಗೆ ಬರುವುದಿಲ್ಲ ಎಂಬ ಬೃಹದಾರಣ್ಯಕೋಪನಿಷತ್ತಿನ ವಾಕ್ಯದಂತೆ ಶಿವನೊಂದಿಗೆ ಸಮರಸದ ಆನಂದವನ್ನು ಅನ್ಯವಿಷಯಗಳ ಪರಿವೆಯಿಲ್ಲದೆ ಅನುಭವಿಸುವ ಶಿವಯೋಗಿಯೇ ಶರಣನು.

ಈ ಶರಣಸ್ಥಲವು ಆಚಾರ ಭೇದದಿಂದ ನಾಲ್ಕು ಪ್ರಕಾರವಾದ ಒಳಭೇದಗಳನ್ನು ಹೊಂದಿದೆ. ಅವುಗಳು ಯಾವುವೆಂದರೆ- ಶರಣಸ್ಥಲ, ತಾಮಸನಿರಸ್ಥನಸ್ಥಲ, ನಿರ್ದೇಶ ಸ್ಥಲ ಮತ್ತು ಶೀಲಸಂಪಾದನ ಸ್ಥಲ[೭] ಎಂದು. ಸಿದ್ಧಾಂತ ಶಿಖಾಮಣಿಯು ಈ ನಾಲ್ಕು ಅವಾಂತರ ಭೇದಗಳ ಲಕ್ಷಣವನ್ನು ಈ ರೀತಿಯಾಗಿ ನಿರೂಪಿಸಿದೆ:

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧. ಶರಣಸ್ಥಲ:

ಸತೀವ ರಮಣೇ ಯಸ್ತು ಶಿವೇ ರಕ್ತಿಂ ವಿಭಾವಯನ್।
ತದನ್ಯವಿಮುಖಸ್ಸೋಽಯಂ ಜ್ಞಾತಃ ಶರಣನಾಮವಾನ್॥
ಪರಿಜ್ಞಾತೇ ಶಿವೇ ಸಾಕ್ಷಾತ್ಕೋ ವಾನ್ಯಮಭಿಕಾಂಕ್ಷತಿ।[೮]

ಪತಿವ್ರತಾ ಸ್ತ್ರೀಯು ಅನ್ಯಪುರುಷ ವಿಮುಖಳಾಗಿ, ತನ್ನ ಪತಿಯಲ್ಲೇ ಹೇಗೆ ಅನುರಕ್ತಳಾಗಿರುವಳೋ ಹಾಗೆ, ಯಾರು ತನ್ನ ಶಿವಲಿಂಗದ ವಿಷಯದಲ್ಲಿ ತನ್ನನ್ನು ಪತ್ನಿಯನ್ನಾಗಿ ಭಾವಿಸಿ, ಅದರಲ್ಲಿ ಯೋಗಗೊಂಡು, ಆ ಲಿಂಗದ ಹೊರತು ಉಳಿದ ದೇವತೆಗಳ ವಿಷಯದಲ್ಲಿ ವಿಮುಖನಾಗಿರುವನೋ ಅವನೇ ಶರಣ ಎಂಬ ಹೆಸರುಳ್ಳವನು. ಈ ರೀತಿಯಾಗಿ ಶರಣನ ಲಕ್ಷಣವನ್ನು ಹೇಳಿ, ಕೆಳಕಂಡ ಲಕ್ಷ್ಯಗಳಿಂದ ಈ ಲಕ್ಷಣವನ್ನು ಸಿದ್ಧಾಂತ ಶಿಖಾಮಣಿಯು ಸಮರ್ಥಿಸುತ್ತದೆ. "ಮಹತ್ತಾದ ನಿಧಿಯು ದೊರೆತವನು ಮತ್ತೊಬ್ಬರಲ್ಲಿ ಗಾಜಿನಮಣಿಯನ್ನು ಬೇಡದಿರುವಂತೆ",[೯] "ಗಂಗಾಮೃತವೇ ದೊರೆತವನು ಬಿಸಿಲ್ಗುದುರೆಯನ್ನು ಬಯಸದಿರುವಂತೆ"[೧೦], "ಬಾಯಾರಿದ ಚಕೋರ ಪಕ್ಷಿಯು ಚಂದ್ರನೊಬ್ಬನನ್ನು ಬಿಟ್ಟು ನಕ್ಷತ್ರಗಳನ್ನು ಕುರಿತು ಹಾತೊರೆಯದಿರುವಂತೆ"[೧೧] ಶರಣನು ಇತರ ದೇವತೆಗಳನ್ನು ನಿರಾಕರಿಸಿ ಶಿವನೊಬ್ಬನನ್ನೇ ಆಶ್ರಯಿಸಬೇಕು. ಶಿವವಿಷಯಕವಾದ ಮಹಿಮೆಯ ಜ್ಞಾನವು ತನಗೆ ಉಂಟಾಗಲು, ಅದರಿಂದ ಪರಮಾನಂದವುಂಟಾಗಿ, ಸ್ಥಿರವಾದ ಆಸಕ್ತಿಯು ಹುಟ್ಟಿ, ಶಿವಲಿಂಗದಲ್ಲೇ ನೆಟ್ಟ ಮನಸ್ಸುಳ್ಳವನಾದ ಶಿವಯೋಗಿಯು ಬೇರೆ ಯಾವ ದೇವತೆಯ ವಿಷಯದಲ್ಲಿ ಲೇಶಮಾತ್ರವಾದ ಆಸಕ್ತಿಯನ್ನು ಹೊಂದಲಾರನು.[೧೨] ಆದ್ದರಿಂದ ಶರಣನು ಎಲ್ಲ ವಿಧದಿಂದಲೂ ಶಿವನೊಬ್ಬನಿಗೇ ಮೊರೆಹೋಗಬೇಕು. ಶಿವನಲ್ಲಿ ಬೆರೆತು, ಅಪಾರ ಸುಖವನ್ನು ಪಡೆದು ಸಂತೋಷಿಸುತ್ತಿರುವನೇ ಹೊರತು ಇತರ ದೇವತೆಗಳ ಧ್ಯಾನದಿಂದಲ್ಲ.[೧೩]

೨. ತಾಮಸನಿರಸನಸ್ಥಲ: ಲಿಂಗಾಂಗ ಸಾಮರಸ್ಯವನ್ನು ಹೊಂದಿ ಪರಮ ಸುಖವನ್ನು ಅನುಭವಿಸುತ್ತಿರುವ ಶರಣನಿಗೆ ಉಂಟಾಗುವ ತಾಮಸ ನಿರಾಕರಣವನ್ನು ಸಿದ್ಧಾಂತ ಶಿಖಾಮಣಿಯು ಹೀಗೆ ನಿರೂಪಿಸುತ್ತದೆ:

ಶಿವಾಸಕ್ತಪರಾನಂದಮೋ ನಾ ಗುರುಣಾಯತಃ।
ನಿರಸ್ಯಂತೇ ತಮೋಭಾವಾಃ ಸ ತಾಮಸನಿರಾಸಕಃ॥[೧೪]

ಶಿವನಲ್ಲಿ ಮಾತ್ರ ಆಸಕ್ತನಾಗಿ ಶಿವಾನಂದಾಮೋದದಲ್ಲಿ ಮುಳುಗಿದ ಕಾರಣದಿಂದ ಶ್ರೇಷ್ಠನಾದ ಶರಣನು ತಮೋಗುಣ ವಿಕಾರಗಳೆಲ್ಲವನ್ನೂ ನಿರಾಕರಿಸುತ್ತಾನೆ. ಆದ್ದರಿಂದ ಅವನು ತಾಮಸನಿರಾಸಕ. ಯಾವ ಜ್ಞಾನವು ನಿರ್ಮಲವಾಗಿರದೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಮೋಮಿಶ್ರವಾಗಿರುತ್ತದೆಯೋ ಅಂತಹ ಶರಣನಿಗೆ ಮೋಕ್ಷವುಂಟಾಗುವುದಿಲ್ಲ. ಸತ್ವಗುಣವೇ ಜ್ಞಾನಯೋಗಕ್ಕೆ ನಿರ್ಮಲವಾದ ಸಾಧನವೆಂದು ಸತ್ಪುರುಷರು ತಿಳಿದಿದ್ದಾರೆ.[15] ಆದ್ದರಿಂದ ಶರಣನು ತಮೋಭಾವವನ್ನು ನಿರಾಕರಿಸಬೇಕು ಎಂದು ತಾಮಸ ನಿರಾಕರಣಕ್ಕೆ ಕಾರಣವನ್ನು ಸ್ಪಷ್ಟಪಡಿಸಿ, ಮುಂದೆ ಸತ್ವ, ರಜಸ್ ಮತ್ತು ತಮಸ್ ಎಂಬ ಗುಣತ್ರಯದಿಂದ ಕೂಡಿರುವವರ ಲಕ್ಷಣವನ್ನು ನಿರೂಪಿಸಲಾಗಿದೆ:

ಶಮೋ ದಮೋ ವಿವೇಕಶ್ಚ ವೈರಾಗ್ಯಂ ಪೂರ್ಣಭಾವನಾ।
ಕ್ಷಾಂತಿಃ ಕಾರುಣ್ಯಸಂಪತ್ತಿಃ ಶ್ರದ್ಧಾಃ ಸತ್ಯಸಮುದ್ಭವಾ॥

ಶಿವಭಕ್ತಿಃ ಪರೋ ಧರ್ಮಃ ಶಿವಜ್ಞಾನಸ್ಯ ಬಾಂಧವಾಃ।
ಏತೈರ್ಯುಕ್ತೋ ಮಹಾಯೋಗೀ ಸಾತ್ವಿಕಃ ಪರಿಕೀರ್ತಿತಃ॥[16]

ಅಂತಃಕರಣ ನಿಗ್ರಹ, ಇಂದ್ರಿಯ ನಿಗ್ರಹ, ನಿತ್ಯಾನಿತ್ಯ ವಿವೇಕ, ವಿರಕ್ತಿ, ಅಖಂಡಾನುಸಂಧಾನ, ಕ್ಷಮೆ, ಭೂತದಯೆ, ಯಥಾರ್ಥವಸ್ತು ಭಾವನೆಯಿಂದುಂಟಾದ ಶ್ರದ್ಧೆ, ಶಿವಭಕ್ತಿ, ಉತ್ಕೃಷ್ಟವಾದ ಶಿವಾಚಾರ- ಇವೆಲ್ಲವೂ ಶಿವಜ್ಞಾನಕ್ಕೆ ಬಂಧುಗಳು ಈ ಹತ್ತು ಉತ್ತಮಗುಣಗಳಿಂದ ಕೂಡಿರುವ ಮಹಾಯೋಗಿಯೇ ಸಾತ್ವಿಕನು (ಸತ್ವಗುಣಯುಕ್ತನು). ಅಂಥ ಶರಣನಿಗೆ ಕಾಮಕ್ರೋದಾದಿ ಅರಿಷಡ್ವರ್ಗಗಳ ವಿಕಾರಗಳು ಎಂದಿಗೂ ಉಂಟಾಗುವುದಿಲ್ಲ.[17]

ಪ್ರಪಂಚವನ್ನೆಲ್ಲಾ ಶಿವನ ಸ್ವರೂಪವನ್ನಾಗಿ ಕಾಣಬೇಕಾದವನಾಗಿದ್ದರೂ, ಕಾಮಕ್ರೋದಾದಿ ವಿಕಾರಗಳಿಂದ ಕೂಡಿರುವುದರಿಂದ, ಪ್ರಪಂಚದಲ್ಲಿ ಎಲ್ಲಿಯಾದರೂ ಶಿವ ವಿಷಯಕ ದ್ವೇಷವನ್ನು ತೋರಿಸುವಂತಹವನು ಶಿವದ್ವೇಷಿಯಾಗುತ್ತಾನೆ. ಅವನೇ ರಾಜಸ (ರಜೋಗುಣಯುಕ್ತ ಮನಸ್ಸುಳ್ಳವನು)[18]. ಯಾರು ಎಲ್ಲ ಜನರನ್ನು ದ್ವೇಷಿಸುವನೋ, ಯಾರು ಯಾವಾಗಲೂ ಅಹಂಕಾರದಿಂದಿರುವನೋ, ಯಾರು ಅಸತ್ಯ ವಸ್ತು ಧ್ಯಾನದಿಂದ ಕೂಡಿರುವನೋ ಅವನು ತಾಮಸ (ತಮೋ ಗುಣಯುಕ್ತ).[19] ಇಂತಹ ತಮೋಗುಣವು ಶರಣನಿಗೆ ಇರುವುದಿಲ್ಲವೆಂದು ಸಿದ್ಧಾಂತ ಶಿಖಾಮಣಿಯು ಈ ರೀತಿಯಲ್ಲಿ ಸ್ಪಷ್ಟಪಡಿಸುತ್ತದೆ:

ಶಿವಜ್ಞಾನೇ ಸಮುತ್ಪನ್ನೇ ಸಹಸ್ರಾದಿತ್ಯಸಂನಿಭೇ।
ಕುತಸ್ತಮೋವಿಕಾರಾಃ ಸ್ಯುರ್ಮಹತಾಂ ಶಿವಯೋಗಿನಾಮ್॥[20]

ಸಹಸ್ರಾರು ಸೂರ್ಯರಂತೆ ಪ್ರಕಾಶವುಳ್ಳ ಜ್ಞಾನವು ಉತ್ಪನ್ನವಾದಾಗ ಮಹಾತ್ಮರಾದ ಶಿವಯೋಗಿಗಳಲ್ಲಿ ತಮಸ್ಸಿನ ವಿಕಾರಗಳು ಹೇಗೆ ತಾನೆ ಉಂಟಾಗುತ್ತವೆ? ಶರಣನಲ್ಲಿ ಶಿವಜ್ಞಾನದಿಂದ ವಿಕಾರಗಳಿಗೆ ಮೂಲ ಕಾರಣವಾದ ತಮೋಗುಣವೇ ನಾಶವಾಗಿರುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೩. ನಿರ್ದೇಶಸ್ಥಲ: ತಮೋಗುಣ ನಿರಾಕರಣದಿಂದುಂಟಾಗುವ ಫಲವೇನೆಂಬುದನ್ನು ಹೇಳುವುದೇ ನಿರ್ದೇಶಸ್ಥಲ:

ನಿರಾಕೃತ್ಯ ತಮೋಭಾಗಂ ಸಂಸಾರಸ್ಯ ಪ್ರವರ್ತಕಮ್
ನಿರ್ದಿಶ್ಯತೇ ತು ಯದ್‌ಜ್ಞಾನಂ ಸ ನಿರ್ದೇಶ ಇತಿ ಸ್ಮೃತಃ॥[೨೨]

ಸಂಸಾರ ಪ್ರವೃತ್ತಿಗೆ ಮೂಲ ಕಾರಣವಾದ ತಮೋಗುಣಗಳನ್ನು ನಿರಾಕರಿಸಿ, ಮೋಕ್ಷಸಾಧಕವಾದ ಶಿವಜ್ಞಾನವನ್ನು ನಿರ್ದೇಶಿಸುತ್ತಿರುವುದರಿಂದ, ಇದು 'ನಿರ್ದೇಶಸ್ಥಲ' ಎನಿಸುತ್ತದೆ. ಅಂತಹ ಜ್ಞಾನವು ಸದ್ಗುರುವಿನ ನಿರ್ದೇಶದಿಂದ ಸಿದ್ಧಿಸುತ್ತದೆ. ಆ ಗುರುವು ಶಿವಜ್ಞಾನ ಸಿದ್ಧಿಯುಳ್ಳವನಾಗಿದ್ದು, ಅಜ್ಞಾನವೆಂಬ ತಮಸ್ಸನ್ನು ನಿವಾರಣೆ ಮಾಡುವುದರ ಮೂಲಕ ಪರತತ್ತ್ವವನ್ನು ತೋರಿಸಿಕೊಡುತ್ತಾನೆ. ಶಿವಾದ್ವೈತತತ್ಪರನಾದ ಗುರುವು ಉತ್ತಮೋತ್ತಮ[೨೩] ಎಂದು ಸಿದ್ಧಾಂತ ಶಿಖಾಮಣಿಯು ನಿರೂಪಿಸುತ್ತದೆ. ಶರಣಸ್ಥಲ ಸಂಪನ್ನನು ಸದ್ಗುರುವಿನಿಂದ ನಿರ್ದೇಶಿಸಲ್ಪಟ್ಟ ಜ್ಞಾನವನ್ನು ಸಾಕ್ಷಾತ್ಕರಿಸಿಕೊಂಡು, ಪರಮಾತ್ಮನಾದ ಶಂಕರನಲ್ಲಿ ತನ್ನ ಭಾವವನ್ನು ನೆಲೆಗೊಳಿಸಿ ಶೀಲಸಂಪನ್ನನಾಗುತ್ತಾನೆ.

೪. ಶೀಲಸಂಪಾದನಸ್ಥಲ: ಹಿಂದಿನ ಸ್ಥಲದಲ್ಲಿ ಹೇಳಿದ ಲಕ್ಷಣಗಳಿಂದ ಕೂಡಿದ ಸದ್ಗುರುವಿನ ಜ್ಞಾನ ನಿರ್ದೇಶನದಿಂದ ಶಿವತತ್ತ್ವವನ್ನು ತಿಳಿಯಬೇಕೆಂದು ಉಂಟಾಗುವ ಇಚ್ಛೆಯೇ ಶೀಲ. ಮತ್ತು ನೀನೇ ನನಗೆ ರಕ್ಷಕನೆಂದು ಶರಣು ಹೋದವರ ಮನಸ್ಸಿನ ದುಃಖವನ್ನು ನಿವಾರಿಸುವ ಪರಬ್ರಹ್ಮಸ್ವರೂಪ ಶಿವನಲ್ಲಿ ಮನಸ್ಸನ್ನು ನಿಶ್ಚಲವಾಗಿರಿಸುವುದೂ ಕೂಡ ಶೀಲ. ಅಂತಹ ಶೀಲವುಳ್ಳವನೇ ಶೀಲಿ:[೨೪]

ಶೀಲಂ ಶಿವೈಕ್ಯವಿಜ್ಞಾನಂ ಶಿವಧ್ಯಾನೈಕತಾನತಾ।
ಶಿವಪ್ರಾಪ್ತಿಸಮುತ್ಕಂಠಾತ್ತದ್ಯೋಗೀ ಶೀಲವಾನ್ ಸ್ಮೃತಃ॥
ಶಿವಾದನ್ಯತ್ರ ವಿಜ್ಞಾನೇ ವೈಮುಖ್ಯಂ ಯಸ್ಯ ಸುಸ್ಥಿರಮ್।
ತದಾಸಕ್ತಾ ಮನೋವೃತ್ತಿಸ್ತಮಾಹುಃ ಶೀಲಭಾಜನಮ್॥[೨೫]

ಶೀಲವೆಂದರೆ ಶಿವೈಕ್ಯ ವಿಜ್ಞಾನ, ಶಿವಧ್ಯಾನದಲ್ಲೇ ಅನನ್ಯ ಭಾವನೆಯಿಂದಿರುವುದು, ಶಿವನಲ್ಲಿ ಸಾಮರಸ್ಯಸೌಖ್ಯಕ್ಕಾಗಿ ತೀವ್ರ ಬಯಕೆ, ಶಿವನ ಹೊರತು ಬೇರೆ ದೇವತೆಗಳ ವಿಷಯದಲ್ಲಿ ವಿಮುಖತ್ವ, ಶಿವಲಿಂಗವೊಂದರಲ್ಲೇ ಆಸಕ್ತವಾದ ಮನಸ್ಸು- ಇಂತಹ ಶೀಲವುಳ್ಳವನೇ ಶೀಲಸಂಪನ್ನನಾದ ಶರಣನು. ಅವನೇ ಶಿವೈಕ್ಯ ಭಾವದ ಗಾಢತೆಯಿಂದ ಐಕ್ಯನೆನಿಸುವನು:

ಶಿವಾತ್ಮಬೋಧೈಕರತಃ ಸ್ಥಿರಾಶಯಃ
ಶಿವಂ ಪ್ರಪನ್ನೋ ಜಗತಾಮಧೀಶಮ್।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವೈಕನಿಷ್ಠಾಹಿತಶೀಲಭೂಷಣಃ
ಶಿವೈಕ್ಯವಾನೇಷ ಹಿ ಕಥ್ಯತೇ ಬುಧೈಃ॥[೨೫]

ಶಿವನೇ ತಾನೆಂಬ ಅರಿವಿನಲ್ಲಿ ಸ್ಥಿರವಾದ ನಿಷ್ಠೆಯುಳ್ಳ, ಜಗತ್ತಿಗೆಲ್ಲ ಒಡೆಯನಾದ ಶಿವನಲ್ಲಿ ಸರ್ವಾರ್ಪಣಭಾವದಿಂದ ಶರಣು ಹೋದವನಾದ, ಶಿವೈಕನಿಷ್ಠೆಯಿಂದ ಸಾಧಿಸಿದ ಶೀಲದಿಂದ ಭೂಷಿತನಾದ ಶರಣನೇ ಶಿವನೊಂದಿಗೆ ಸಾಮರಸ್ಯವನ್ನು ಪಡೆದು ಐಕ್ಯನೆನಿಸುತ್ತಾನೆ. ಆ ಅರಿವು ಸರ್ವಾರ್ಪಣಭಾವ, ಅನನ್ಯ ಶರಣತ್ವಗಳಿಂದ ಬಾಹ್ಯದ ಅರಿವಳಿದ ಪರಮಾನಂದವನ್ನು ಅನುಭವಿಸುವ ಶರಣನು ಕಡೆಗೆ ಸಮರಸಭಾವದ ದೃಢತೆಯಿಂದ ಸಮರಸರೂಪ ಐಕ್ಯದಲ್ಲಿ ನೆಲೆಗೊಳ್ಳುತ್ತಾನೆ.

ಭಕ್ತಿ-ಜ್ಞಾನ-ಕ್ರಿಯಾ ಸಮನ್ವಯ ವಿಶಿಷ್ಟವಾದ ಷಟ್‌ಸ್ಥಲಗಳಲ್ಲಿ ಭಕ್ತ-ಮಾಹೇಶ್ವರ ಮತ್ತು ಪ್ರಸಾದಿ ಸ್ಥಲಗಳು ಕ್ರಿಯಾ ಪ್ರಧಾನವೂ ದ್ವೈತಯುಕ್ತವೂ ಆಗಿವೆ. ಪ್ರಾಣ-ಲಿಂಗಿ-ಶರಣ ಮತ್ತು ಐಕ್ಯಸ್ಥಲಗಳು ಜ್ಞಾನ ಪ್ರಧಾನವೂ ಅದ್ವೈತಭಾವ ಪೋಷಕವೂ ಆಗಿವೆ. ಈ ಷಟ್‌ಸ್ಥಲಗಳಲ್ಲಿ ಸಾಧಕನು ಭಕ್ತ-ಮಾಹೇಶ್ವರ- ಪ್ರಸಾದಿ-ಪ್ರಾಣಲಿಂಗಿ-ಶರಣ ಸ್ಥಲಗಳಲ್ಲಿ ಬರುವ ಸದಾಚಾರಗಳ ಆಚರಣೆಯಿಂದ ಚಿದಾಕಾಶಸ್ವರೂಪನಾದ ಪರಮಾದ್ಭುತನಾದ ಶಿವನೊಂದಿಗೆ ಸಾಮರಸ್ಯಭಾವವನ್ನು ಹೊಂದಲು ಮೋಕ್ಷಪ್ರಾಪ್ತಿಗೆ ಸಾಕ್ಷಾತ್ ಆಶ್ರಯವಾದ ಐಕ್ಯಸ್ಥಲವನ್ನು ತಲುಪುತ್ತಾನೆ. ಇದೇ ವೀರಶೈವರ ಪರಮಗುರಿ.

ಐಕ್ಯಸ್ಥಲ:

"ಶಿವೇನೈಕ್ಯಭಾವನಾದ್ ಐಕ್ಯವಾನ್ ಭವೇತ್"[೨೬]- ಶಿವನೊಂದಿಗೆ ಸಾಮರಸ್ಯ ಸ್ಥಿತಿಯನ್ನು ಹೊಂದಿದವನೇ ಐಕ್ಯನು. ಅವನು ಶಿವಾನಂದ ಸಮುದ್ರದಲ್ಲಿ ಬೆರೆತು ಒಂದಾದವನು. ಅವನಿಗೆ ಮಾಯಾಕಲ್ಪಿತ ವೈಭವವುಳ್ಳ ಜಗತ್ತಿನ ಪರಿವೆಯೇ ಇರುವುದಿಲ್ಲ. ಈ ಶಿವಾದ್ವೈತಾನಂದವೇ ಮುಕ್ತಿ:

ಅದ್ವೈತಭಾವನಾಜಾತಂ ಕ್ಷಣಮಾತ್ರೇಽಪಿ ಯತ್ಸುಖಮ್।
ತತ್ಸುಖಂ ಕೋಟಿವರ್ಷೇಣ ಪ್ರಾಪ್ಯತೇ ನೈವ ಭೋಗಿಭಿಃ॥
ಚಿತ್ತವೃತ್ತಿಸಮಾಲೀನಜಗತಃ ಶಿವಯೋಗಿನಃ।
ಶಿವಾನಂದ-ಪರಿಸ್ಫೂರ್ತಿಃ ಮುಕ್ತಿರಿತ್ಯಭಿಧೀಯತೇ॥[೨೭]

ಶಿವಾದ್ವೈತದ ನೈಜ ಭಾವನೆಯಿಂದ ಒಂದು ಕ್ಷಣಮಾತ್ರ ಲಭಿಸುವ ಯಾವ ಆನಂದವುಂಟೋ ಅದಕ್ಕೆ ಭೋಗಲಾಲಸರು ಕೋಟಿವರ್ಷ ಅನುಭವಿಸುವ ಸುಖವು ಸಾಟಿಯಾಗಲಾರದು. ಪ್ರಪಂಚ ವಿಷಯದ ಅರಿವನ್ನೆಲ್ಲ ತನ್ನಲ್ಲಿ ವಿಲೀನಗೊಳಿಸಿಕೊಂಡ ಶಿವಯೋಗಿಗೆ ದೊರೆಯುವ ಶಿವಾನಂದಸ್ಫೂರ್ತಿಯೇ ಮುಕ್ತಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಐಕ್ಯನ ಆಚಾರಸಂಪತ್ತಿಯೇ ವಿಶಿಷ್ಟವಾದುದು. ಶಿವೈಕ್ಯಬೋಧಾನಂದವೇ ಬಾಹ್ಯಾಡಂಬರವಿಲ್ಲದ ಆಚಾರ. ದೇಹವಿದ್ದರೂ ದೈಹಿಕ ಆಚರಣೆಗಳ ಲೇಪವಿಲ್ಲ. ಕ್ರಿಯೆಗಳ ಆಚರಣೆಯಿದ್ದರೂ ಅವುಗಳ ಪುಣ್ಯ-ಪಾಪರೂಪವಾದ ಫಲದ ಸಂಬಂಧ ಅವನಿಗಿಲ್ಲ. ಹೀಗೆ ಅವನ ದೈಹಿಕ ವ್ಯವಹಾರಗಳು ನಡೆಯುತ್ತಿದ್ದರೂ ಅವನಿಗೆ ಅವುಗಳಲ್ಲಿ ಅಭಿನಿವೇಶವಾಗಲಿ ಅವುಗಳ ಫಲಸಂಪರ್ಕವಾಗಲಿ ಇಲ್ಲವೇ ಇಲ್ಲ. ಶಿವೈಕ್ಯನಿಗೆ ಶಿವನಿಂದ ಭಿನ್ನವಾದ ತನ್ನತನವೂ ಇಲ್ಲ ಜಗತ್ತೂ ಇಲ್ಲ. ಅವನ ಸಂಕಲ್ಪವೆಲ್ಲ ಶಿವಧ್ಯಾನ, ಅವನ ಮಾತೆಲ್ಲ ಶಿವಸ್ತೋತ್ರ, ಅವನ ಕಾಯದ ಕ್ರಿಯೆಯೆಲ್ಲ ಶಿವಪೂಜೆ:

> ಯದ್ಯಚ್ಚಿಂತಯತೇ ಯೋಗೀ ಮನಸಾ ಶುದ್ಧಭಾವನಃ।
> ತತ್ತಚ್ಛಿವಮಯತ್ವೇನ ಶಿವಧ್ಯಾನಮುದಾಹೃತಮ್॥
> ಯತ್ಕಿಂಚಿದ್ಭಾಷಿತಂ ಲೋಕೇ ಸ್ವೇಚ್ಛಯಾ ಶಿವಯೋಗಿನಾ।
> ಶಿವಸ್ತೋತ್ರಮಿದಂ ಸರ್ವಂ ಯಸ್ಮಾತ್ಸರ್ವಾತ್ಮಕಃ ಶಿವಾಃ ॥
> ಯಾ ಯಾ ಚೇಷ್ಟಾ ಸಮುತ್ಪನ್ನಾ ಜಾಯತೇ ಶಿವಯೋಗಿನಾಮ್।
> ಸಾ ಸಾ ಪೂಜಾ ಮಹೇಶಸ್ಯ ಸರ್ವದಾ ತದ್ಗತಾತ್ಮನಾ॥[೨೮]

ಶಿವೈಕ್ಯಸ್ಥಿತಿಯಲ್ಲಿರುವ ಯೋಗಿಯು ನಿರ್ಮಲಭಾವನೆಯುಳ್ಳವನಾಗಿ ಏನೇನನ್ನು ಮನಸ್ಸಿನಿಂದ ಸಂಕಲ್ಪಿಸುತ್ತಾನೋ ಅದೆಲ್ಲ ಶಿವಮಯವಾದ್ದರಿಂದ ಅದೇ ಶಿವಧ್ಯಾನ. ಅವನ ಮುಖದಿಂದ ತಾನಾಗಿಯೇ ಹೊಮ್ಮಿದ ಮಾತು, ಶಿವನು ಸರ್ವಾತ್ಮಕನಾದ್ದರಿಂದ ಶಿವಸ್ತೋತ್ರವೇ ಆಗಿರುತ್ತದೆ. ಹೀಗೆ ಶಿವೈಕ್ಯನ ಪಾರ್ಥಿವ ಶರೀರದಿಂದ ಯಾವ ಯಾವ ಕ್ರಿಯೆಗಳು ನಡೆಯುತ್ತವೆಯೋ ಅವೆಲ್ಲ ಶಿವಪೂಜೆಯೇ ಆಗಿರುತ್ತವೆ. ಹೀಗೆ ಶಿವೈಕ್ಯನ ಮನೋವಾಕ್ಕಾಯಜವಾದ ಕ್ರಿಯೆಗಳೆಲ್ಲಾ ಶಿವಾತ್ಮಕವೇ ಆಗಿರುತ್ತವೆ. ತನಗೆ ಶಿವನಿಗೆ ಜಗತ್ತಿಗೆ ಭೇದವನ್ನು ಕಾಣದ ಐಕ್ಯನು ಏಕ ಭಾಜನನೆನಿಸುತ್ತಾನೆ.[೨೯] ತಾನು ಜಗತ್ತು ಗುರುವು ಶಿವನು ಚಿತ್‌ಸ್ವರೂಪದಿಂದ ಒಂದೇ ಎಂಬ ಸ್ವಸ್ವರೂಪಸ್ಥಿತಿಯಲ್ಲಿರುವುದರಿಂದ ಐಕ್ಯನು ಸಹಭೋಜನನೂ ಹೌದು. 'ಪರಾಹಂತಾ' ಎಂಬ ಸ್ಥಿತಿಯೂ ಇದೇ:

> ಅಹಂ ಶಿವೋ ಗುರುಶ್ಚಾಹಂ ಅಹಂ ವಿಶ್ವಂ ಚರಾಚರಮ್।
> ಯಯಾ ವಿಜ್ಞಾಯತೇ ಸಮ್ಯಕ್ಪೂರ್ಣಾಹಂತೇತಿ ಸಾ ಸ್ಮೃತಾ॥[೩೦]

ಶಿವನೇ ನಾನು, ಗುರುವಾಗಿ ತೋರುವವನೂ ನಾನು, ಚರಾಚರಾತ್ಮಕವಾದ ಜಗತ್ತೂ ನಾನು, ಎಂದು ಯಾವುದರಿಂದ ಅರಿವಿಗೆ ಬರುತ್ತದೆಯೋ ಅದೇ 'ಪೂರ್ಣಾಹಂತಾ.'

ಹೀಗೆ ಷಟ್‌ಸ್ಥಲಗಳ ನಿರೂಪಣೆಯ ಮೂಲಕ ಸಾಧಕನ ಭಕ್ತಿ-ಜ್ಞಾನ-ಕ್ರಿಯಾಸಮನ್ವಯ ವಿಶಿಷ್ಟವಾದ ಆತ್ಮೋನ್ನತಿಯ ಮಾರ್ಗವನ್ನು, ಕ್ರಿಯಾ ಪ್ರಧಾನವೂ ದ್ವೈತಭಾವಯುಕ್ತವೂ ಆದ ಭಕ್ತ-ಮಾಹೇಶ್ವರ-ಪ್ರಸಾದಿಗಳ ನೆಲೆಯಿಂದ ಹಿಡಿದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜ್ಞಾನಪ್ರಧಾನವೂ ಅದ್ವೈತಭಾವ ಪೋಷಕವೂ ಆದ ಪ್ರಾಣಲಿಂಗ-ಶರಣ ನೆಲೆಯ ಮೂಲಕ ಸಮರಸ ರೂಪದ ಅದ್ವೈತವೇ ಆದ ಐಕ್ಯನ ನೆಲೆಯವರೆಗೆ ನಿರೂಪಿಸುವ ಸಿದ್ಧಾಂತ ಶಿಖಾಮಣಿಯು ಅದನ್ನು ಹೀಗೆ ಸಂಗ್ರಹಿಸಿ ಹೇಳುತ್ತದೆ:

ಭಕ್ತಾದಿಧಾಮಾರ್ಪಿತಧರ್ಮಯೋಗಾತ್
ಪ್ರಾಪ್ತೈಕಭಾವಃ ಪರಮಾದ್ಭುತೇನ।
ಶಿವೇನ ಚಿದ್ವ್ಯೋಮಮಯೇನ ಸಾಕ್ಷಾನ್
ಮೋಕ್ಷಶ್ರಿಯೋಭಾಜನತಾಮುಪೈತಿ॥[೨೧]

"ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ ಮತ್ತು ಶರಣಸ್ಥಲಗಳಲ್ಲಿ ಬರುವ ಸದಾಚಾರಗಳ ಆಚರಣೆಯಿಂದ ಚಿದಾಕಾಶಸ್ವರೂಪನಾದ ಪರಮಾದ್ಭುತನಾದ ಶಿವನೊಂದಿಗೆ ಸಾಮರಸ್ಯಭಾವವನ್ನು ಹೊಂದಿದ ಶಿವೈಕ್ಯನು ಮೋಕ್ಷಸಂಪತ್ತಿಗೆ ಸಾಕ್ಷಾತ್ ಆಶ್ರಯನಾಗುತ್ತಾನೆ. ಇದೇ ವೀರಶೈವದ ಪರಮಗುರಿ. ಷಟ್‌ಸ್ಥಲ ಕ್ರಮದಲ್ಲಿ ಹೇಳಿದ ವೀರಶೈವ ಧರ್ಮಾಚರಣೆಯು ಅದಕ್ಕೆ ಸಾಧನ. ತಾತ್ತ್ವಿಕ ದೃಷ್ಟಿಯಿಂದ ಒಂದೇ ಆಗಿದ್ದ ಪರಶಿವಬ್ರಹ್ಮವು ತನ್ನ ಲೀಲೆಗಾಗಿ ತನ್ನಲ್ಲಿ ಅವಿನಾಭಾವದಿಂದಿರುವ ವಿಮರ್ಶಶಕ್ತಿಯ ಸ್ಪಂದನದಿಂದ ಅಂಗ-ಲಿಂಗವಾಗಿ ವಿಭಾಗವನ್ನು ಹೊಂದಿ, ತಾನೇ ಅಂಗದಲ್ಲಿ ಶಕ್ತಿಪಾತದಿಂದ ಅನುಗ್ರಹಿಸಿದ ಭಕ್ತಿಯನ್ನು ಶ್ರದ್ಧೆ, ನಿಷ್ಠೆ, ಅವಧಾನ, ಅನುಭಾವ, ಆನಂದ ಮತ್ತು ಸಮರಸ ರೂಪದಲ್ಲಿ ಪರಿಣಮಿಸುವಂತೆ ಮಾಡಿ ಕ್ರಿಯೆಯಲ್ಲಿ ಜ್ಞಾನದಲ್ಲಿ ತೊಡಗಿಸಿ ತನ್ನೆಡೆಗೆ ಸೆಳೆದುಕೊಂಡು ಒಂದೇ ಆಗುವುದು."[೨]

ವೀರಶೈವ ಶಬ್ದದ ನಿರ್ವಚನವನ್ನು ಕೊಡುವಾಗ ವಿದ್ಯೆಯೆಂದರೆ ಶಿವ-ಜೀವೈಕ್ಯಜ್ಞಾನ, ಅದರಲ್ಲಿ ಯಾರು ಆನಂದವನ್ನು ಪಡೆಯುತ್ತಾರೋ ಅವರು ವೀರಶೈವರು ಎಂದು ಹೇಳಿದೆ. ಅದನ್ನಾಗಲೇ ಗಮನಿಸಿದ್ದೇವೆ. ಈ ಮಾತಿನಲ್ಲಿ ವೀರಶೈವರ ಮುಕ್ತಿಯ ಸ್ವರೂಪವು ಸೂಚಿತವಾಗಿದೆ. ಶಿವೈಕ್ಯವೇ ಮುಕ್ತಿಯೆಂದು ಹೇಳಿ ಸಿದ್ಧಾಂತಶಿಖಾಮಣಿಯು ಅದ್ವೈತ, ಪರಮಾದ್ವೈತವೆಂದು ವರ್ಣಿಸುತ್ತದೆ.

ಮಾಯಾಶಕ್ತಿತಿರೋಧಾನಾಚ್ಛಿವೇ ಭೇದವಿಕಲ್ಪನಾ।
ಆತ್ಮನಸ್ತದ್ವಿನಾಶೇ ತು ನಾದ್ವೈತಾತ್ ಕಿಂಚಿದಿಷ್ಯತೇ॥[೨೩]

ಶಿವನಲ್ಲಿ ಮಾಯಾಶಕ್ತಿಯ ಪರದೆಯಿಂದ ಭೇದವು ಉಂಟಾಗುತ್ತದೆ. ಆ ಮಾಯಾ ಪರದೆಯು ಹರಿದಾಗ ಆತ್ಮನಿಗೆ ಅದ್ವೈತವನ್ನು ಬಿಟ್ಟು ಬೇರೇನೂ ಉಳಿಯುವುದಿಲ್ಲ.

ಭೇದಬುದ್ಧಿಸಮುತ್ಪನ್ನಮಹಾಸಂಸಾರಸಾಗರಮ್।
ಅದ್ವೈತಬುದ್ಧಿಪೋತೇನ ಸಮುತ್ತರತಿ ದೇಶಿಕಃ॥[೨೪]

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭೇದಬುದ್ಧಿಯಿಂದ ಉಂಟಾದ ಸಂಸಾರವೆಂಬ ಮಹಾಸಾಗರವನ್ನು ಶಿವಯೋಗಿಯು ಅದ್ವೈತಜ್ಞಾನವೆಂಬ ನಾವೆಯ ಮೂಲಕ ಸುಲಭವಾಗಿ ದಾಟುತ್ತಾನೆ. ಈ ರೀತಿಯಲ್ಲಿ ಬಳಸಿದ ಅದ್ವೈತಪದಕ್ಕೆ ವೀರಶೈವ ಸಿದ್ಧಾಂತದಲ್ಲಿ ಶಿವಾದ್ವೈತವೆಂದು ಅರ್ಥ. ಇದು ಸಿದ್ಧಾಂತ ಶಿಖಾಮಣಿಯು ಅನೇಕ ಸಂದರ್ಭದಲ್ಲಿ ಪ್ರಯೋಗಿಸಿದ ಉಕ್ತಿಗಳಿಂದ ಸಿದ್ಧವಾಗುತ್ತದೆ. ಸಮರಸರೂಪದ ಶಿವೈಕ್ಯವೇ ಶಿವಾದ್ವೈತ; ಇದು ಶಿವಯೋಗಿಗೆ ಸಿದ್ಧಿಸುತ್ತದೆ:

ನಿರ್ಧೂತಮಲಸಂಬಂಧೋ ನಿಷ್ಕಲಂಕಮನೋಗತಃ।
ಶಿವೋಽಹಮಿತಿ ಭಾವೇನ ನಿರೂಢೋ ಹಿ ಶಿವೈಕ್ಯತಾ॥[೩೯]

ಆಣವಾದಿ ಮಲಸಂಬಂಧವನ್ನು ತೊಡೆದುಕೊಂಡ, ಕಲಂಕವಿಲ್ಲದ ಮನೋವ್ಯಾಪಾರವುಳ್ಳ ಶಿವಯೋಗಿಗೆ "ನಾನು ಶಿವನು" ಎಂಬ ನಿರಂತರ ಭಾವದಿಂದ ಶಿವೈಕ್ಯವು ನಿರೂಢವಾಗುತ್ತದೆ.

ಶಿವೇನೈಕ್ಯಂ ಸಮಾಪನ್ನಶ್ಚಿದಾನಂದಸ್ವರೂಪಿಣಾ।
ನ ಪಶ್ಯತಿ ಜಗಜ್ಜಾಲಂ ಮಾಯಾಕಲ್ಪಿತ ವೈಭವಮ್॥[೩೬]

ಜ್ಞಾನ-ಆನಂದ ಸ್ವರೂಪನಾದ ಪರಶಿವನೊಂದಿಗೆ ಐಕ್ಯವನ್ನು ಪಡೆದಿರುವ ಶಿವಯೋಗಿಯು ಮಾಯಾಶಕ್ತಿಯಿಂದ ಪರಿಕಲ್ಪಿತವಾದ ಜಗಜ್ಜಾಲವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.

ಈ ಹಿನ್ನೆಲೆಯಲ್ಲಿ ನಿರೂಪಿತವಾದ ಮುಕ್ತಿಯ ಸ್ವರೂಪವು ಹೀಗಿದೆ:

ಚಿತ್ತವೃತ್ತಿಸಮಾಲೀನ ಜಗತಃ ಶಿವಯೋಗಿನಃ।
ಶಿವಾನಂದಪರಿಸ್ಫೂರ್ತಿಃ ಮುಕ್ತಿರಿತ್ಯ ಭಿಧೀಯತೇ॥[೩೭]

ನಿರಸ್ತವಿಶ್ವಸಂಬಾಧೇ ನಿಷ್ಕಲಂಕೇ ಚಿದಂಬರೇ।
ಭಾವಯೇಲ್ಲೀನಮಾತ್ಮಾನಂ ಸಾಮರಸ್ಯಸ್ವಭಾವತಃ॥
ಸೈಷಾ ವಿದ್ಯಾ ಪರಾ ಜ್ಞೇಯಾ ಸತ್ತಾನಂದಪ್ರಕಾಶಿನೀ।
ಮುಕ್ತಿರಿತ್ಯುಚ್ಯತೇ ಸದ್ಭಿರ್ಜಗನ್ಮೋಹನಿವರ್ತಿನೀ॥[೩೮]

ಪ್ರಪಂಚ ವಿಷಯದ ಅರಿವನ್ನೆಲ್ಲಾ ತನ್ನೊಳಗೆ ಲಯಗೊಳಿಸಿಕೊಂಡ ಶಿವಯೋಗಿಗೆ ಯಾವ ಶಿವಾನಂದದ ಸ್ಫೂರ್ತಿ ಬರುವುದೋ ಅದೇ ಮುಕ್ತಿ. ಜನನ, ಮರಣ ಮುಂತಾದ ಕ್ಲೇಶಗಳಿಲ್ಲದ, ನಿಷ್ಕಲಂಕವಾದ, ಚಿದಾಕಾಶಸ್ವರೂಪದ ಮಹಾಲಿಂಗದಲ್ಲಿ 'ಅಂಗ' ಶಬ್ದವಾಚ್ಯನಾದ ಆತ್ಮನನ್ನು ಸಮರಸಭಾವದಿಂದ ಲೀನವಾಗಿರುವಂತೆ ಭಾವಿಸಬೇಕು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದೇ ಪರಾ ವಿದ್ಯಾ. ಸಚ್ಚಿದಾನಂದ ಸ್ವರೂಪಿಣಿ, ಜಗನ್ಮೋಹನಿವರ್ತಿನಿಯಾದ ಈ ಪರಾವಿದ್ಯೆಯೇ ಮುಕ್ತಿ. ಹೀಗೆ ಸಾಮರಸ್ಯಾತ್ಮಕವಾದ ಶಿವಾದ್ವೈತವನ್ನು ಹೊಂದಿ ಸಚ್ಚಿದಾನಂದಭಾವದಲ್ಲಿ ನೆಲೆಗೊಳ್ಳುವುದೇ ಮುಕ್ತಿಯೆಂದು ಸ್ಪಷ್ಟವಾಗುತ್ತದೆ. ಅದನ್ನು ಸಿದ್ಧಾಂತಶಿಖಾಮಣಿಯು ಅತ್ಯಂತ ಮನೋಹರವಾಗಿ ವರ್ಣಿಸುತ್ತದೆ:

ಜಲೇ ಜಲಮಿವ ನ್ಯಸ್ತಂ ವಹ್ನೌ ವಹ್ನಿರಿವಾರ್ಪಿತಮ್।
ಪರೇ ಬ್ರಹ್ಮಣಿ ಲೀನಾತ್ಮಾ ವಿಭಾಗೇನ ನ ದೃಶ್ಯತೇ॥
ಸರ್ವಾತ್ಮನಿ ಪರೇ ತತ್ತ್ವೇ ಭೇದಶಂಕಾವಿವರ್ಜಿತೇ।
ಜ್ಞಾತೃತ್ವಾದಿವ್ಯವಹಾರೋತ್ಥಂ ಕುತೋ ಜ್ಞಾನಂ ವಿಭಾವ್ಯತೇ॥[೯]

ನೀರಿನೊಂದಿಗೆ ನೀರು ಬೆರೆತಂತೆ, ಬೆಂಕಿಯಲ್ಲಿ ಬೆಂಕಿ ಕಲೆತಂತೆ, ಪರಬ್ರಹ್ಮನಲ್ಲಿ ಲೀನನಾದ ಆತ್ಮನು ಬೇರೆಯಾಗಿ ಗೋಚರಿಸುವುದಿಲ್ಲ. ಸರ್ವಾತ್ಮಕವಾದ ಭೇದ ಶಂಕೆಯೇ ಇಲ್ಲದ ಪರತತ್ತ್ವದಲ್ಲಿ ಜ್ಞಾತೃ-ಜ್ಞೇಯ ವ್ಯವಹಾರದಿಂದ ಉಂಟಾಗುವ ಭೇದಜ್ಞಾನವು ಹೇಗೆ ತಾನೆ ಗೋಚರಿಸುತ್ತದೆ? ಈ ತ್ರಿಪುಟೀಜ್ಞಾನ ಶೂನ್ಯತ್ವವೇ ಜ್ಞಾನಶೂನ್ಯಸ್ಥಲ. ಇದೇ ಪರಮ ಸ್ಥಲ. ಇದೇ ಪರಮ ಮುಕ್ತಿ.

ಭೇದಜ್ಞಾನಕ್ಕೆ ಎಡೆಯಿಲ್ಲದ ಶಿವಾದ್ವೈತದಲ್ಲಿ, ನೀರು ಮತ್ತು ಬೆಂಕಿಗಳ ದೃಷ್ಟಾಂತಗಳು ಧ್ವನಿಸುವಂತೆ ಶಿವೈಕ್ಯಭಾವವು ಸಮಾನ - ಸಮರಸ ರೂಪ ವಾಧುದು, ಸ್ವರೂಪದ ವೃದ್ಧಿ-ಕ್ಷಯನಿಮಿತ್ತವಾದ ಏಕಭಾವವಲ್ಲ, ಸಮುದ್ರ ಜಲಗಳು ಹೇಗೆ ಬೇರೆ ಬೇರೆಯಾಗಿರುವುದಿಲ್ಲವೋ ಹಾಗೆ. ಜ್ಞಾನಶೂನ್ಯಸ್ಥಿತಿಯೆಂದರೆ ಭೇದ ಜ್ಞಾನಶೂನ್ಯ ಸ್ಥಿತಿಯೆಂದರ್ಥ. ಅದು-

ಕೇವಲಂ ಸಚ್ಚಿದಾನಂದ-ಪ್ರಕಾಶಾದ್ವಯಲಕ್ಷಣಮ್।
ಶೂನ್ಯಕಲ್ಪಂ ಪರಾಕಾಶಂ ಪರಂ ಬ್ರಹ್ಮ ಪ್ರಕಾಶತೇ॥[೧೦]

ಕೇವಲ ಎಂದರೆ ಮತ್ತೊಂದು ವಸ್ತುವಿನೊಂದಿಗೆ ಒಡಗೂಡದ ಸಚ್ಚಿದಾನಂದ ಪ್ರಕಾಶವುಳ್ಳ ಅದ್ವಿತೀಯವಾದ ವಸ್ತುವೇ ಜ್ಞೇಯಾಭಾವದ ಕಾರಣ ಶೂನ್ಯಕಲ್ಪವಾದ ಪರಬ್ರಹ್ಮ-ಮಹಾಕಾಶಸ್ವರೂಪದಲ್ಲಿ ಪ್ರಕಾಶಿಸುತ್ತದೆ.

ಗ್ರಂಥಋಣ:

೧. ಶಿವಯೋಗಿ ಶಿವಾಚಾರ್ಯ ವೀರಶೈವ ಸಿದ್ಧಾಂತ ಶಿಖಾಮಣಿಸಂಪಾದಕರು: ಪ್ರೊ. ಸಂ.ಶಿ. ಭೂಸನೂರಮಠ ಮತ್ತು ಡಾ. ಎಸ್.ಜಿ. ಘಿವಾರಿ, ಶ್ರೀ ಮದ್ವೀರಶೈವ ಶಿವಯೋಗ ಮಂದಿರ, ನಾಗನೂರು, ೧೯೬೨.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೨. ಡಾ|| ಎಂ. ಶಿವಕುಮಾರಸ್ವಾಮಿ: ಸಿದ್ಧಾಂತ ಶಿಖಾಮಣಿ -ಒಂದು ಅಧ್ಯಯನ.

೩. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ -ಸಂಪುಟ.೩ -ಬೆಂಗಳೂರು ವಿಶ್ವವಿದ್ಯಾಲಯ

೪. ಡಾ|| ಆರ್.ಸಿ. ಹಿರೇಮಠ, ಷಟ್‌ಸ್ಥಲ ಪ್ರಭೆ

೫. ಎಂ.ಆರ್. ಶ್ರೀನಿವಾಸಮೂರ್ತಿ: ವಚನಧರ್ಮಸಾರ

೬. ಡಾ|| ಎಚ್. ತಿಪ್ಪೇರುದ್ರಸ್ವಾಮಿ: ಶರಣರ ಅನುಭಾವ ಸಾಹಿತ್ಯ

೭. ಹಿರೇಮಲ್ಲೂರು ಈಶ್ವರನ್: ಲಿಂಗಾಯತ ಧರ್ಮ: ಒಂದು ಅಧ್ಯಯನ

೮. ಡಾ|| ಜ.ಚ.ನಿ, ಶ್ರೀರೇಣುಕಗೀತೆ, ಮಹಂತರದ ಮಠದ ಟ್ರಸ್ಟ್, ಬೆಂಗಳೂರು ೧೯೮೭.

೯. ಡಾ|| ಎಂ. ಶಿವಕುಮಾರಸ್ವಾಮಿ : ಸಿದ್ಧಾಂತ ಶಿಖಾಮಣಿ: ಮೂರು ಉಪನ್ಯಾಸಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೭.

ಅಡಿಟಿಪ್ಪಣಿ

೧. ಡಾ|| ಆರ್.ಸಿ. ಹಿರೇಮಠ, ಷಟ್‌ಸ್ಥಲಪ್ರಭೆ, ಪು. ೧೨೦-೧೨೧.

೨. ಸಿದ್ಧಾಂತ ಶಿಖಾಮಣಿ, V. ೨೨-೨೩

೩. ಅದೇ. V. ೨೪-೨೫

೪. ಅದೇ XIII, ೧.

೫. ಅದೇ. XIII, ೨.

೬. ಬೃಹದಾರಣ್ಯಕ, IV, ೩.೨೧.

೭. ಸಿದ್ಧಾಂತ ಶಿಖಾಮಣಿ, XIII. ೩-೪.

೮. ಅದೇ. XIII. ೫-೬

೯. ನಿಧಾನೇ ಮಹತಿ ಪ್ರಾಪ್ತೇ ಕಃ ಕಾಚಂ ಯಾಚತೇನ್ಯತಃ||- ಅದೇ. XIII. ೬.

೧೦. ಗಂಗಾಮೃತಂ ಪರಿತ್ಯಜ್ಯ ಕಃ ಕಾಂಕ್ಷೇನ್ಮೃಗತೃಷ್ಣಿಕಾಮ್||- ಅದೇ. XIII. ೭.

೧೧. ಚಕೋರಸ್ತೃಷಿತಂ ಪಶ್ಯೇಚ್ಚಂದ್ರಂ ಕಿಂ ತಾರಕಾ ಅಪಿ||- ಅದೇ. XIII. ೯.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧೨. ಶಿವಜ್ಞಾನೇ ಸಮುತ್ಪನ್ನೇ ಪರಾನಂದಃ ಪ್ರಕಾಶತೇ।
ತದಾಸಕ್ತಮನಾ ಯೋಗೀ ನಾನ್ಯತ್ರ ರಮತೇ ಸುಧೀಃ॥ -ಅದೇ. XIII. ೧೧.

೧೩. ತಸ್ಮಾತ್ಸರ್ವಪ್ರಯತ್ನೇನ ಶಂಕರಂ ಶರಣಂ ಗತಃ।
ತದನಂತಸುಖಂ ಪ್ರಾಪ್ಯ ಮೋದತೇ ನಾನ್ಯಚಿಂತಯಾ॥ -ಅದೇ. XIII. ೧೨.

೧೪. ಅದೇ. XIII. ೧೩.

೧೫. ಯಸ್ಯ ಜ್ಞಾನಂ ತಮೋಮಿಶ್ರಂ ನ ತಸ್ಯ ಗತಿರಿಷ್ಯತೇ।
ಸತ್ವಂ ಹಿ ಜ್ಞಾನಯೋಗಸ್ಯ ನೈರ್ಮಲ್ಯಂ ವಿದುರುತ್ತಮಾಃ॥ -ಅದೇ. XII. ೧೪.

೧೬. ಅದೇ. XIII. ೧೫-೧೬.

೧೭. ಅದೇ. XIII. ೧೭.

೧೮. ಅದೇ. XIII. ೧೮.

೧೯. ಅದೇ. XIII. ೧೯.

೨೦. ಅದೇ. XIII. ೨೧.

೨೧. ಅದೇ. XIII. ೨೨.

೨೨. ಅದೇ. XIII. ೨೩-೨೯.

೨೩. ಅದೇ. XIII. ೩೦-೩೧.

೨೪. ಅದೇ. XIII. ೩೨-೩೩.

೨೫. ಅದೇ. XIII. ೩೭

೨೬. ಅದೇ, XIV. ೨.

೨೭. ಅದೇ, XIV. ೧೪-೧೫.

೨೮. ಅದೇ, XIV. ೨೫-೨೭.

೨೯. ಅದೇ, XIV. ೨೯.

೩೦. ಅದೇ, XIV. ೩೯.

೩೧. ಅದೇ, XIV. ೪೪.

೩೨. ಸಿದ್ಧಾಂತ ಶಿಖಾಮಣಿ: ಮೂರು ಉಪನ್ಯಾಸಗಳು: ಡಾ॥ ಎಂ. ಶಿವಕುಮಾರಸ್ವಾಮಿ, ಕರ್ನಾಟಕ ವಿಶ್ವವಿದ್ಯಾಲಯ, ೧೯೮೭, ಪು. ೬೦.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೩೩. ಸಿ.ಶಿ, XIV. ೮.

೩೪. ಅದೇ, XIV. ೧೧.

೩೫. ಅದೇ, XIV. ೫.

೩೬. ಅದೇ, XIV. ೬.

೩೭. ಅದೇ, XIV. ೧೫.

೩೮. ಅದೇ, XIV. ೪೨-೪೩.

೩೯. ಅದೇ, XX. ೫೯-೬೦.

೪೦. ಅದೇ, XX. ೬೬.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೮. ಸಿದ್ಧಾಂತ ಶಿಖಾಮಣಿಯ ದಾರ್ಶನಿಕ ತತ್ತ್ವಗಳು

- ಡಾ॥ ಎಂ.ಆರ್. ವೀರಭದ್ರಸ್ವಾಮಿ

ಆಚಾರ ಪ್ರಧಾನವಾದುದು ಧರ್ಮ, ವಿಚಾರ ಪ್ರಧಾನವಾದುದು ತತ್ತ್ವಶಾಸ್ತ್ರ ಎಂಬುದು ಒಂದು ಅಭಿಪ್ರಾಯ. ಇಂತಹ ಅಭಿಪ್ರಾಯ ಸಿದ್ಧಾಂತ ಶಿಖಾಮಣಿಯು ನಿರೂಪಿಸಿರುವ ವೀರಶೈವ ಶಾಸ್ತ್ರಕ್ಕೆ ಸಂಗತವಾಗುವುದಿಲ್ಲ. ಸಿದ್ಧಾಂತ ಶಿಖಾಮಣಿಯು ಪ್ರತಿಪಾದಿಸುವ ಕ್ರಿಯಾ-ಜ್ಞಾನ ಸಮುಚ್ಚಯಾತ್ಮಕವಾದ ಸಿದ್ಧಾಂತದಲ್ಲಿ ಸದಾಚಾರ ಮತ್ತು ತತ್ತ್ವವಿಚಾರಗಳ ಸಮನ್ವಯವನ್ನೂ ಸ್ಪಷ್ಟವಾಗಿ ಗುರುತಿಸಬಹುದು. ಆಚರಣೆಯ ಮೂಲಕ ಜ್ಞಾನವನ್ನು, ಶಿವರೂಪಜ್ಞಾನವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾ ಹೋಗಬೇಕು. ಇಲ್ಲಿ ಪ್ರತಿಪಾದಿಸಿರುವ ಅಂಶಗಳಾದ ಶಿವ, ಶಕ್ತಿ, ಜೀವ, ಜಗತ್ತು ಇತ್ಯಾದಿ ತತ್ತ್ವಗಳ ವಿಚಾರವನ್ನು ಇಲ್ಲಿ ಚರ್ಚಿಸುತ್ತಿದ್ದೇನೆ.

ಶಿವಃ ವೀರಶೈವ ಸಿದ್ಧಾಂತದಲ್ಲಿ ಶಿವನೇ ಸರ್ವೋತ್ಕೃಷ್ಟವಾದ ತತ್ತ್ವ. ಅವನು ಬ್ರಹ್ಮಪದವಾಚ್ಯನು ಎಂಬುದು ಸಿದ್ಧಾಂತ ಶಿಖಾಮಣಿಯ ಸ್ಪಷ್ಟ ನಿಲುವು:

ಬ್ರಹ್ಮೇತಿ ವ್ಯಪದೇಶಸ್ಯ ವಿಷಯಂ ಯಂ ಪ್ರಚಕ್ಷತೇ।
ವೇದಾಂತಿನೋ ಜಗನ್ಮೂಲಂ ತನ್ನಮಾಮಿ ಪರಂ ಶಿವಮ್॥

(ಸಿದ್ಧಾಂತ ಶಿಖಾಮಣಿ, ೧-೨)

ವೇದಾಂತಿಗಳು ಅಂದರೆ ಉಪನಿಷತ್ತುಗಳ ಸಿದ್ಧಾಂತ ಪ್ರತಿಪಾದಕರು ಬ್ರಹ್ಮಶಬ್ದಕ್ಕೆ ಯಾವುದು ವಿಷಯವೆಂದು ಹೇಳುತ್ತಾರೋ ಅಂತಹ ಸಕಲ ಜಗತ್ತಿಗೂ ಮೂಲಕಾರಣನಾದ ಪರಶಿವನನ್ನು ವಂದಿಸುತ್ತೇವೆ ಎಂಬ ಶಿವಸ್ತುತಿಯಲ್ಲಿ ಪರಶಿವನೇ ಬ್ರಹ್ಮ ಎಂಬುದು ಪ್ರತಿಪಾದಿಸಲ್ಪಟ್ಟರೆ ಅವನು ಮೂಲತಃ ಅದ್ವಿತೀಯನು. "ಏಕ ಏವ ರುದ್ರೋ ನ ದ್ವಿತೀಯಾಯ ತಸ್ಥೇ" "ಏಕಮೇವಾದ್ವಿತೀಯಂ ಬ್ರಹ್ಮ" ಎಂಬ ಶ್ರುತಿ ಪ್ರಮಾಣಗಳೇ ಇದಕ್ಕೆ ಆಧಾರ. ಸಿದ್ಧಾಂತ ಶಿಖಾಮಣಿಯು ಶ್ರುತಿಸಿದ್ಧವಾದ ಈ ವಿಷಯವನ್ನು ಹೀಗೆ ಹೇಳುತ್ತದೆ:

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಏಕ ಏವ ಶಿವಃ ಸಾಕ್ಷಾಚ್ಚಿದಾನಂದಮಯೋ ವಿಭುಃ।
ನಿರ್ವಿಕಲ್ಪೋ ನಿರಾಕಾರೋ ನಿರ್ಗುಣೋ ನಿಷ್ಪ್ರಪಂಚಕಃ॥

(ಸಿ.ಶಿ. ೫.೩೪)

ಪರಶಿವನು ಅದ್ವಿತೀಯನು, ಚಿದಾನಂದಸ್ವರೂಪನು, ಭೇದರಹಿತನು ಆಕಾರರಹಿತನು, ಸತ್ತ್ವ, ರಜಸ್, ತಮಸ್ಸೆಂಬ ಮೂರು ಗುಣಗಳಿಲ್ಲದವನು, ಪ್ರಪಂಚಾತೀತನೂ ಆಗಿರುವನು. ಇಲ್ಲಿ ಮೂಲತಃ ಶಿವತತ್ತ್ವವು ಒಂದೇ ಇರುವುದು. ಅದರ ಸ್ವರೂಪವು ಚಿದಾನಂದತ್ವ, ಭೇದರಹಿತತ್ವ, ತ್ರಿಗುಣಶೂನ್ಯತ್ವ ಮತ್ತು ನಿಷ್ಪಪಂಚತ್ವ. ಸಚ್ಚಿದಾನಂದತ್ವವು ಶಿವನ ಸ್ವರೂಪ. ಅಂದರೆ 'ಸತ್', ಇರುವುದು. 'ಚಿತ್' ಅರಿವು, ಜ್ಞಾನ, ಮತ್ತು ಆನಂದ ಇವುಗಳೇ ಪರಶಿವಬ್ರಹ್ಮದ ಸ್ವರೂಪವೆಂದು ಸಿದ್ಧಾಂತ ಶಿಖಾಮಣಿಯ ಮೇಲಿಂದ ಮೇಲೆ ಅನೇಕ ಸಂದರ್ಭಗಳಲ್ಲಿ ಹೇಳುತ್ತದೆ.

"ಸಚ್ಚಿದಾನಂದರೂಪಾಯ ಶಿವಾಯ ಬ್ರಹ್ಮಣೇ ನಮಃ"

ಇದು ಪರಶಿವಬ್ರಹ್ಮನ ನಿತ್ಯಸ್ವರೂಪ. ಅವನ ಮೂಲಸ್ವರೂಪವನ್ನು ಹೀಗೆ ಹೇಳಬಹುದು :

"ಅಸ್ತಿ ಸಚ್ಚಿತ್‌ಸುಖಾಕಾರಮ್ ಅಲಕ್ಷಣಪದಾಶ್ರಯಮ್।
ನಿರ್ವಿಕಲ್ಪಂ ನಿರಾಕರಂ ನಿರಸ್ತಾಶೇಷ ವಿಪ್ಲವಮ್॥"

ಸಚ್ಚಿದಾನಂದ ಸ್ವರೂಪವೂ, ಭೇದರಹಿತವೂ, ನಿರ್ವಿಕಲ್ಪವೂ, ಸಕಲ ಉಪದ್ರವಗಳಿಂದ ದೂರವೂ, ಅಪರಿಚ್ಛಿನ್ನವೂ, ಪ್ರಪಂಚಾತೀತವೈಭವಯುಕ್ತವೂ, ಪ್ರತ್ಯಕ್ಷಾದಿಪ್ರಮಾಣಗಳಿಗೆ ಅಗೋಚರವೂ, ಸ್ವಪ್ರಕಾಶದಿಂದ ವಿರಾಜಿಸುವುದೂ ಜನ್ಮಾದಿದೋಷರಹಿತವೂ, ಉಪಮಾನಾತೀತವೂ, ಸರ್ವಜ್ಞವೂ, ಸರ್ವವ್ಯಾಪಕವೂ, ರಾಗದ್ವೇಷರಹಿತವೂ, ಸರ್ವಸಾಮರ್ಥ್ಯಯುಕ್ತವೂ, ನಿರಂಕುಶವೂ, ಶಿವ, ರುದ್ರ, ಮಹಾದೇವ, ಭವ ಇತ್ಯಾದಿ ಹೆಸರುಳ್ಳದ್ದೂ, ಅದ್ವಿತೀಯವೂ, ವಚನಕ್ಕೆ ದೂರವೂ ಆದದ್ದು ಪರಶಿವ ಬ್ರಹ್ಮನೆಂಬ ಸನಾತನ ತತ್ತ್ವವು. ಪರಬ್ರಹ್ಮನಲ್ಲಿ ಸೃಷ್ಟಿಗೆ ಮೊದಲು ಚೇತನಾಚೇತನಾತ್ಮಕವಾದ ಜಗತ್ತು ಲೀನವಾಗಿತ್ತು. ಹಾಗೆ ಅವನಲ್ಲಿ ಅದ್ಭುತವಾಗಿ ಅಡಗಿಕೊಂಡಿದ್ದ ಜಗತ್ತು ಕಾರ್ಯರೂಪವಾಗಿ ಅವನಿಂದಲೇ ಪ್ರಕಾಶಿಸಲ್ಪಡಲು ಯೋಗ್ಯವಾಗಿತ್ತು.

ಶಕ್ತಿ :

ಶಕ್ತಿತತ್ತ್ವವು ಪರಶಿವಬ್ರಹ್ಮನೊಂದಿಗೆ ಅವಿನಾಭಾವ ರೂಪ ಸಂಬಂಧದಿಂದ ಅವನೊಂದಿಗೆ ತಾದಾತ್ಮ್ಯ ಸಂಬಂಧದಿಂದಿರುವ ತತ್ತ್ವ . ತಾದಾತ್ಮ್ಯ ಸಂಬಂಧದಿಂದ ಎಂದರೆ, ಪರಶಿವನಂತೆ ಸಚ್ಚಿದಾನಂದಸ್ವರೂಪಳೇ ಆಗಿರುವಳು ಎಂದರ್ಥ. ಪರಶಿವನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಕ್ತಿಯು ಎಲ್ಲ ಲೋಕಗಳ ಮೂಲಪ್ರಕೃತಿ. ಇಚ್ಛಾದಿ ರೂಪದಿಂದ ಶಿವನು ವಿಶ್ವಭಾವವನ್ನು ಹೊಂದುವಂತೆ ಮಾಡುವವಳು. ಸಮಸ್ತ ಲೋಕನಿರ್ಮಾಣಕ್ಕೆ ಸಮವಾಯ ಕಾರಣವಾಗಿರುವವಳು.

"ಅಮೃತಾರ್ಥಂ ಪ್ರಪನ್ನಾನಾಂ ಯಾ ಸುವಿದ್ಯಾಪ್ರದಾಯಿನೀ।
ಅಹರ್ನಿಶಮಹಂ ವಂದೇ ತಾಮೀಶಾನಮನೋರಮಾಮ್॥"

ಈ ಶಕ್ತಿಸ್ತುತಿಯಲ್ಲಿ ವ್ಯಕ್ತವಾದಂತೆ ಮುಕ್ತಿಕಾಂಕ್ಷಿಗಳಾಗಿ ಶರಣಾಗತರಾದವರಿಗೆ ಆ ಶಿವಸಮೇತಳಾದ ಶಕ್ತಿಯನ್ನು, ಸುವಿದ್ಯೆಯನ್ನು ಅರಿತುಕೊಳ್ಳುವಂತೆ ಮಾಡುತ್ತಾಳೆ.

ಜೀವ :

ಸಿದ್ಧಾಂತ ಶಿಖಾಮಣಿಯು ಜೀವನ ಅಂದರೆ ಜೀವಾತ್ಮನ ಸ್ವರೂಪವನ್ನು ವೀರಶೈವನ ಪ್ರಥಮಸೋಪಾನವಾದ ಪಿಂಡಸ್ಥಲದಲ್ಲಿ ಹೀಗೆ ನಿರೂಪಿಸುತ್ತದೆ :

"ಏಕ ಏವ ಶಿವಃ ಚಿದಾನಂದಮಯೋ ವಿಭುಃ।
ನಿರ್ವಿಕಲ್ಪೋ ನಿರಾಕಾರೋ ನಿರ್ಗುಣೋ ನಿಷ್ಪ್ರಪಂಚಕಃ॥"

ಪ್ರೇರಕನಾದ ಶಿವನು ಜೀವನಲ್ಲಿ ಯಾವ ಸಂಬಂಧದಿಂದ ಹೇಗೆ ಇದ್ದಾನೆ ಎಂಬುದನ್ನು ಸಿದ್ಧಾಂತ ಶಿಖಾಮಣಿಯು ಹೃದಯಂಗಮವಾಗಿ ತಿಳಿಸುತ್ತದೆ :

"ಚಂದ್ರಕಾಂತೇ ಯಥಾ ತೋಯಂ ಸೂರ್ಯಕಾಂತೇ ಯಥಾನಲಃ।
ಬೀಜೇ ಯಥಾಂಕುರಃ ಸಿದ್ಧಸ್ತಥಾತ್ಮನಿ ಶಿವಃ ಸ್ಥಿತಃ॥"

ಚಂದ್ರಕಾಂತಶಿಲೆಯಲ್ಲಿ ನೀರು, ಸೂರ್ಯಕಾಂತಮಣಿಯಲ್ಲಿ ಬೆಂಕಿ, ಬೀಜದಲ್ಲಿ ಮೊಳಕೆ ಹೇಗೆ ಅಡಗಿವೆಯೋ ಹಾಗೆ ಶಿವನು ತನ್ನ ಅಂಶನಾದ ಜೀವನಲ್ಲಿ ಇದ್ದಾನೆ ಎಂಬ ದೃಷ್ಟಾಂತಗಳಿಂದ ವ್ಯಕ್ತವಾಗುವಂತೆ ಶಿವನು ಜೀವನಲ್ಲಿ ತಾದಾತ್ಮ್ಯ ಸಂಬಂಧದಿಂದ ಇದ್ದಾನೆ ಎಂದು ಸ್ಪಷ್ಟವಾಗುತ್ತದೆ.

ದುಃಖತ್ರಯಪೀಡಿತರು ಜೀವರು

ಅವಿದ್ಯಾಸ್ಪಂದದಿಂದ ಪರಶಿವನ ಅಂಶಗಳಾಗಿ ಬೇರ್ಪಟ್ಟ ಜೀವರು ಅವಿದ್ಯಾಮೋಹಿತರಾಗಿ ಜನನ -ಮರಣರೂಪ ಸಂಸಾರ ಚಕ್ರದಲ್ಲಿ ಸಿಲುಕಿದ್ದಾರೆ ಎಂದು ಸಿದ್ಧಾಂತ ಶಿಖಾಮಣಿಯು ವಿವರಿಸುತ್ತದೆ:

"ಶುದ್ಧಾಂತಃಕರಣೇ ಜೀವೇ ಶುದ್ಧಕರ್ಮವಿಪಾಕತಃ।
ಜಾಯತೇ ಶಿವಕಾರುಣ್ಯಾತ್ ಪ್ರಸ್ಫುಟಾ ಭಕ್ತಿರೈಶ್ವರೀ॥"

ಈ ಭಕ್ತಿಯೇ ತಾರಕವೆಂದು ವೀರಶೈವ ಸಿದ್ಧಾಂತದಲ್ಲಿ ಅದಕ್ಕೆ ಪ್ರಾಶಸ್ತ್ಯ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜಗತ್ತು :

ಜಗತ್ತು ಚರಾಚರಾತ್ಮಕವಾದುದು. ಚರಜಗತ್ತು ಎಂದರೆ ಚೈತನ್ಯಾತ್ಮಕವಾದ ಜೀವಿಗಳ ಸಮುದಾಯ. ಅಚರ ಎಂದರೆ ಅತ್ಯಂತ ಗೂಢಚೈತನ್ಯಾತ್ಮಕವಾದ ಪದಾರ್ಥವೈವಿಧ್ಯ. ಚರಾಚರಾತ್ಮಕವಾದ ಜಗತ್ತು ಸೃಷ್ಟಿಗೆ ಪೂರ್ವದಲ್ಲಿ ಪರಶಿವಬ್ರಹ್ಮನಲ್ಲಿ ಲೀನವಾಗಿತ್ತು ಎಂದು ಸಿದ್ಧಾಂತ ಶಿಖಾಮಣಿ ಹೇಳಿದೆ:

"ತತ್ರ ಲೀನಮಭೂತ್ ಸರ್ವಂ ಚೇತನಾಚೇತನಂ ಜಗತ್।"

ಜಗತ್ತಿನ ಆವಿರ್ಭಾವಕ್ಕೂ ಪರಶಿವಬ್ರಹ್ಮನಲ್ಲಿ ಅವನದೇ ಆದ ವಿಮರ್ಶಶಕ್ತಿಯ ಇಚ್ಛಾದಿರೂಪದಲ್ಲಿ ಪರಿಸ್ಪಂದವೇ ಕಾರಣ; ಶಕ್ತಿಯೇ ಲೋಕಸೃಷ್ಟಿಗೆ ಸಮವಾಯ ಕಾರಣ. ಶಂಭುವು ವಿಶ್ವರೂಪದಲ್ಲಿ ಪ್ರಕಾಶಿತನಾಗಲು ಶಕ್ತಿಯೇ ಕಾರಣ.

"ಇಚ್ಛಾಜ್ಞಾನಾದಿ ರೂಪೇಣ ಯಾ ಶಂಭೋರ್ವಿಶ್ವಭಾವಿನೀ।"

ಜಗತ್ತು ಶಿವನಿಗಿಂತ ಭಿನ್ನವಲ್ಲ :

ಪರಶಿವಬ್ರಹ್ಮನು ತನ್ನ ಶಕ್ತಿಯ ವಿಕಸನದಿಂದ ಪ್ರಪಂಚದ ರೂಪದಲ್ಲಿ ತೋರಿ ಅದನ್ನು ವ್ಯಾಪಿಸಿದ್ದಾನೆ, ಜಗನ್ಮಯನಾಗಿದ್ದಾನೆ ಎಂದು ಸಿದ್ಧಾಂತ ಶಿಖಾಮಣಿಯು ಮತ್ತೆ ಮತ್ತೆ ಪ್ರತಿಪಾದಿಸುತ್ತದೆ. ಈ ಕೆಳಗಿನ ಶ್ಲೋಕದಲ್ಲಂತೂ ಅದು ಸ್ಪಷ್ಟವಾಗಿದೆ-

"ಆತ್ಮಶಕ್ತಿವಿಕಾಸೇನ ಶಿವೋ ವಿಶ್ವಾತ್ಮನಾ ಸ್ಥಿತಃ।
ಕುಟೀಭಾವಾದ್ ಯಥಾ ಭಾತಿ ಪಟಃ ಸ್ವಸ್ಯ ಪ್ರಸಾರಣಾತ್॥"

(ಸಿ.ಶಿ. ೧೦. ೬೮)

ಇಲ್ಲಿ ಶಿವನು ತನ್ನ ಶಕ್ತಿವಿಕಾಸದಿಂದ ಹೇಗೆ ವಿಶ್ವರೂಪದಲ್ಲಿ ಹರಡಿದ್ದಾನೆ ಎಂಬುದಕ್ಕೆ ಒಂದು ಅರ್ಥವತ್ತಾದ ದೃಷ್ಟಾಂತವು ಬಂದಿದೆ. ಬಟ್ಟೆಯು ತನ್ನಲ್ಲಿರುವ ಹರಡುವ ಶಕ್ತಿಯಿಂದ ಡೇರಾ ರೂಪದಲ್ಲಿ ಹೇಗೆ ಹರಡಿಕೊಳ್ಳುತ್ತದೆಯೋ ಹಾಗೇ ಪರಶಿವನು ತನ್ನ ಶಕ್ತಿಯಿಂದ ಜಗದ್ರೂಪದಲ್ಲಿ ವ್ಯಾಪಿಸಿದ್ದಾನೆ. ಇದರಿಂದ ಜಗತ್ತು ಶಿವನಿಗಿಂತ ಭಿನ್ನವಲ್ಲ ಎಂದು ಧ್ವನಿತವಾಗುತ್ತದೆ.

"ಯಸ್ಮಾದೇತತ್ ಸಮುತ್ಪನ್ನಂ ಮಹಾದೇವಾಚ್ಚರಾಚರಮ್।
ತಸ್ಮಾದೇತನ್ನ ಭಿದ್ಯೇತ ಯಥಾ ಕುಂಭಾದಿಕಂ ಮೃದಃ॥
ಶಿವತತ್ತ್ವಾತ್ಸಮುತ್ಪನ್ನಂ ಜಗದೇತನ್ನ ಭಿದ್ಯತೇ।
ಫೇನೋರ್ಮಿಬುದ್‌ಬುದಾಕಾರಂ ಯಥಾ ಸಿಂಧೋರ್ನ ಭಿದ್ಯತೇ॥
ಯಥಾ ತಂತುಭಿರುತ್ಪನ್ನಃ ಪಟಸ್ತಂತುಮಯಃ ಸ್ಮೃತಃ।
ತಥಾ ಶಿವಾತ್ಸಮುತ್ಪನ್ನಂ ಶಿವ ಏವ ಚರಾಚರಮ್॥"

(ಸಿ.ಶಿ. ೧೦. ೬೫-೬೭)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೀಗೆ ಸಿದ್ಧಾಂತ ಶಿಖಾಮಣಿಯು ಜಗತ್ತಿನ ಸ್ವರೂಪ ಮತ್ತು ಶಿವಜಗತ್ತುಗಳ ತಾದಾತ್ಮ್ಯ ಸಂಬಂಧವನ್ನು ಪ್ರತಿಪಾದಿಸುತ್ತದೆ. 'ಸರ್ವಂ ಖಲ್ವಿದಂ ಬ್ರಹ್ಮ' ಎಂಬ ಉಪನಿಷದ್ವಾಕ್ಯದ ಭಾವವೇ ಇಲ್ಲಿ ವಿಸ್ತರಿಸಲ್ಪಟ್ಟಿದೆ. ಇದರಿಂದ ಸಿದ್ಧಾಂತ ಶಿಖಾಮಣಿಯು ಜಗತ್ಸತ್ಯತ್ವವನ್ನು ಪ್ರತಿಪಾದಿಸುತ್ತದೆ ಎಂಬುದು ಸ್ಪಷ್ಟವಾಗುತ್ತದೆ.

ಮುಕ್ತಿ :

ಎಲ್ಲ ದರ್ಶನಗಳೂ, ಧರ್ಮಗಳೂ ಮುಕ್ತಿಯೇ ಮಾನವನ ಪರಮಗುರಿಯೆಂದು ಪ್ರತಿಪಾದಿಸುತ್ತವೆ. ವೇದಾಂತದರ್ಶನವನ್ನು ಒಟ್ಟು ಉಳಿದೆಲ್ಲ ದರ್ಶನಗಳು ಆತ್ಯಂತಿಕವಾದ ದುಃಖನಿವೃತ್ತಿಯೇ ಮುಕ್ತಿಯೆಂದು ಹೇಳಿ ಮುಕ್ತಿಯನ್ನು ಒಂದು ಅಭಾವಸ್ಥಿತಿಯೆಂದು ಕಾಣುವಂತೆ ಮಾಡಿವೆ. ವೇದಾಂತ ದರ್ಶನಗಳು ಅದನ್ನು ತಮ್ಮ ತಮ್ಮ ರೀತಿಯಲ್ಲಿ ಒಂದು ಆನಂತರ ಸ್ಥಿತಿಯೆಂದು ಹೇಳಿ ಅದಕ್ಕೆ ಭಾವಸ್ಥಿತಿಯ ಸ್ವರೂಪವನ್ನು ಕೊಟ್ಟಿವೆ. ವೀರಶೈವ ದರ್ಶನವೂ ಕೂಡ ಇದನ್ನು ಸಾಮರಸ್ಯಾತ್ಮಕವೆಂದು ಹೇಳಿ 'ಸಚ್ಚಿದಾನಂದ' ಸ್ವರೂಪದಲ್ಲಿ ಅದನ್ನು ನಿರೂಪಿಸಿದೆ. ಇದು ಸಿದ್ಧಾಂತ ಶಿಖಾಮಣಿಯಲ್ಲಿ ನಮಗೆ ಸ್ಪಷ್ಟವಾಗುತ್ತದೆ.

ಸಿದ್ಧಾಂತ ಶಿಖಾಮಣಿಯಲ್ಲಿ ವೀರಶೈವ ಶಬ್ದ ನಿರ್ವಚನವನ್ನು ಕೊಡುವಾಗ ವಿದ್ಯೆಯೆಂದರೆ ಶಿವ-ಜೀವೈಕ್ಯವನ್ನು ಬೋಧಿಸುವಂಥಾದ್ದು. ಅದರಲ್ಲಿ ಯಾರು ಆನಂದವನ್ನು ಪಡೆಯುತ್ತಾರೋ ಅವರು ವೀರಶೈವರೆಂದು ಹೇಳಿದೆ. ಈ ಮಾತಿನಲ್ಲಿ ವೀರಶೈವರ ಮುಕ್ತಿಯ ಸ್ವರೂಪವು ಸೂಚಿತವಾಗಿದೆ. ಶಿವೈಕ್ಯವೇ ಮುಕ್ತಿಯೆಂದು ಹೇಳುವಾಗ ಸಿದ್ಧಾಂತ ಶಿಖಾಮಣಿಯು ಅದ್ವೈತ, ಪರಮಾದ್ವೈತ ಎಂಬ ಶಬ್ದವನ್ನು ಪ್ರಯೋಗಿಸುತ್ತದೆ.

"ಮಾಯಾಶಕ್ತಿತಿರೋಧಾನಾಚ್ಛಿವೇ ಭೇದವಿಕಲ್ಪನಾ।
ಆತ್ಮನಸ್ತದ್ವಿನಾಶೇ ತು ನಾದ್ವೈತಾತ್ಕಿಂಚಿದಿಷ್ಯತೇ॥"

(ಸಿ.ಶಿ. ೧೪. ೮)

ಶಿವನಲ್ಲಿ ಮಾಯಾಶಕ್ತಿಯ ಪರದೆಯಿಂದ ಭೇದವು ಉಂಟಾಗಿತ್ತು. ಆ ಮಾಯಾ ಪರದೆಯು ಸರಿದಾಗ ಆತ್ಮನಿಗೆ ಅದ್ವೈತವನ್ನು ಒಟ್ಟು ಬೇರೇನೂ ಉಳಿಯುವುದಿಲ್ಲ. ಭೇದಬುದ್ಧಿಯಿಂದ ಉಂಟಾದ ಸಂಸಾರವೆಂಬ ಮಹಾಸಾಗರವನ್ನೂ ಶಿವಯೋಗಿಯು ಅದ್ವೈತವೆಂಬ ನಾವೆಯ ಮೂಲಕ ಸುಲಭವಾಗಿ ದಾಟುತ್ತಾನೆ. ಈ ರೀತಿಯಲ್ಲಿ ಬಳಸಿದ ಅದ್ವೈತಕ್ಕೆ ವೀರಶೈವ ಸಿದ್ಧಾಂತದಲ್ಲಿ ಶಿವಾದ್ವೈತವೆಂದು ಅರ್ಥ. ಇದು ಸಿದ್ಧಾಂತ ಶಿಖಾಮಣಿಯ ಅನೇಕ ಸಂದರ್ಭಗಳಲ್ಲಿ ಹೇಳಿದ ಉಕ್ತಿಗಳಿಂದ ಸಿದ್ಧವಾಗುತ್ತದೆ. ಸಮರಸರೂಪದ ಶಿವೈಕ್ಯವೇ ಶಿವಾದ್ವೈತ.

"ಚಿತ್ತವೃತ್ತಿಸಮಾಲೀನಜಗತಃ ಶಿವಯೋಗಿನಃ।
ಶಿವಾನಂದಪರಿಸ್ಫೂರ್ತಿರ್ಮುಕ್ತಿರಿತ್ಯಭಿಧೀಯತೇ॥"

(ಸಿ.ಶಿ. ೧೪. ೧೫)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಪಂಚ ವಿಷಯದ ಅರಿವನ್ನೆಲ್ಲ ತನ್ನೊಳಗೆ ಲಯಗೊಳಿಸಿಕೊಂಡ ಶಿವಯೋಗಿಗೆ ಯಾವ ಶಿವಾನಂದದ ಸ್ಫೂರ್ತಿಯಿರುವುದೋ ಅದೇ ಮುಕ್ತಿ. ಜನನ ಮರಣ ಮುಂತಾದ ಕ್ಲೇಶಗಳಿಲ್ಲದ, ನಿಷ್ಕಲಂಕವಾದ, ಚಿದಾಕಾಶಸ್ವರೂಪದ ಮಹಾಲಿಂಗದಲ್ಲಿ ಅಂಗಶಬ್ದ ವಾಚ್ಯನಾದ ಆತ್ಮನನ್ನು ಸಮರಸಭಾವದಿಂದ ಲೀನವಾಗಿರುವಂತೆ ಭಾವಿಸಬೇಕು. ಇದೇ ಪರಾ ವಿದ್ಯಾ, ಸಚ್ಚಿದಾನಂದಸ್ವರೂಪಿಣಿ; ಜಗನ್ಮೋಹನಿವರ್ತಿನಿಯಾದ ಈ ವಿದ್ಯೆಯೇ ಮುಕ್ತಿ. ಇದರಿಂದ ವೀರಶೈವರ ಮುಕ್ತಿಯು ಸಾಮರಸ್ಯಾತ್ಮಕವಾದ ಶಿವಾದ್ವೈತವನ್ನು ಹೊಂದಿ ಸಚ್ಚಿದಾನಂದಭಾವದಲ್ಲಿ ನಿಲ್ಲುವುದೇ ಎಂದು ಸ್ಪಷ್ಟವಾಗುತ್ತದೆ.

"ಜಲೇ ಜಲಮಿವನ್ಯಸ್ತಂ ವಹ್ನೌ ವಹ್ನಿವಾರ್ಪಿತಮ್।
ಪರೇ ಬ್ರಹ್ಮಣಿ ಲೀನಾತ್ಮಾ ವಿಭಾಗೇನ ನ ದೃಶ್ಯತೇ॥"

ನೀರಿನೊಂದಿಗೆ ನೀರು ಬೆರತಂತೆ, ಬೆಂಕಿಯಲ್ಲಿ ಬೆಂಕಿ ಕಲೆತಂತೆ, ಪರಬ್ರಹ್ಮನಲ್ಲಿ ಲೀನನಾದ ಆತ್ಮನು ಬೇರೆಯಾಗಿ ಗೋಚರಿಸುವುದಿಲ್ಲ.

"ಕೇವಲಂ ಸಚ್ಚಿದಾನಂದಪ್ರಕಾಶಾದ್ವಯಲಕ್ಷಣಮ್।
ಶೂನ್ಯಕಲ್ಪಂ ಪರಾಕಾಶಂ ಪರಬ್ರಹ್ಮ ಪ್ರಕಾಶತೇ॥"

❑

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೯. ಸಿದ್ಧಾಂತ ಶಿಖಾಮಣಿ ಮತ್ತು ಪ್ರಸ್ಥಾನತ್ರಯ

- ಲಿಂ. ಶ್ರೀ ಡಿ. ರೇಣುಕಾಚಾರ್ಯ

ಸಿದ್ಧಾಂತಶಿಖಾಮಣಿಯು ಶಿವಾದ್ವೈತರೂಪವಾದ ಷಟ್ಸ್ಥಲ ಸಿದ್ಧಾಂತವನ್ನು ಪ್ರತಿಪಾದಿಸತಕ್ಕ ಗ್ರಂಥಗಳಲ್ಲೆಲ್ಲಾ ಅತ್ಯಂತ ಪ್ರಾಚೀನವಾದುದು. ಇದರ ತರುವಾಯ ರಚಿತವಾದ ವೀರಶೈವ ಧಾರ್ಮಿಕ ಗ್ರಂಥಗಳ ಮೇಲೆ ಇದು ವಿಶೇಷ ಬೆಳಕನ್ನು ಚೆಲ್ಲಿದೆ. ಆದಿಜಗದ್ಗುರು ಶ್ರೀ ರೇಣುಕ ಭಗವತ್ಪಾದರು ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ಶಿವಸಿದ್ಧಾಂತವನ್ನೊಳಗೊಂಡಿದೆ. ಇದು ಸೃಷ್ಟಿಯಲ್ಲಿ ಕಾಣುವ ವಿವಿಧ ವಸ್ತುಗಳ ಮೂಲಕಾರಣವಾದ ಸದ್ವಸ್ತುವಿನ (ಪರಶಿವತತ್ವದ) ನಿರೂಪಣೆಯ ಶಾಸ್ತ್ರವಾಗಿದೆ. ಮುಮುಕ್ಷುಗಳು ಪಡೆದುಕೊಳ್ಳಬೇಕಾದ ಪರಶಿವತತ್ತ್ವದ ಸ್ವರೂಪವನ್ನ ಅದನ್ನೂ, ಪಡೆದುಕೊಳ್ಳಲು ಮಾಡಬೇಕಾದ ಸಾಧನೆಗಳನ್ನೂ ಸ್ಫುಟವಾಗಿ ಬಿತ್ತರಿಸುತ್ತದೆ. ಈ ಗ್ರಂಥದಲ್ಲಿ ಅಡಕವಾಗಿರುವ ಅನೇಕ ವಿಚಾರಗಳು, ಅವುಗಳ ಮೌಲ್ಯವನ್ನು ಕಟ್ಟುವುದಕ್ಕೂ ಆಗದಷ್ಟು ಮಹತ್ವವುಳ್ಳವುಗಳಾಗಿವೆ. ಇದೊಂದು ಶಿವತತ್ತ್ವ ಭಂಡಾರ. ದಿವ್ಯಭವ್ಯ ಮಹಾಚಾರ್ಯ ಪರಂಪರೆಯುಳ್ಳ ಶಿವಯೋಗಿ ಶಿವಾಚಾರ್ಯನು ಎಷ್ಟು ಮಹಿಮಾನ್ವಿತನೋ ಅವನ ಕೃತಿಯಾದ ಸಿದ್ಧಾಂತಶಿಖಾಮಣಿಯೂ ಅಷ್ಟೇ ಮಹೋನ್ನತವಾಗಿದೆ.

ಯಾರು ಸಂಸಾರದಿಂದ ಪಾರಾಗಿ ಕೃತಕೃತ್ಯರಾಗಬೇಕೆಂದು ಹಂಬಲಿಸುತ್ತಾರೆಯೋ ಅಂಥವರಿಗೆ ಸಿದ್ಧಾಂತ ಶಿಖಾಮಣಿಯು ದಾರಿದೀಪವಾಗಿದೆ. ಅದರಲ್ಲಿ ನಿರೂಪಿಸಲ್ಪಟ್ಟಿರುವ ಷಟ್ಸ್ಥಲಗಳನ್ನು ಸಾಧಿಸುವ ಸಾಧನೆಯ ಬಲಬೇಕಲ್ಲವೇ? ಷಟ್ಸ್ಥಲಾಚರಣೆಯು ಕತ್ತಿಯ ಅಲಗಿನ ಮೇಲೆ ನಡೆದಂತೆ. ಆದ್ದರಿಂದ ಅದು ಧೀರರಿಗೆ ಮಾತ್ರ ಸಾಧ್ಯವೇ ಹೊರತು ಹೇಡಿಗಳಿಗಲ್ಲ.

ಪ್ರಾಚಾರ್ಯನಾದ ಶಿವಯೋಗಿ ಶಿವಾಚಾರ್ಯನು ಈ ಅಮೂಲ್ಯ ತತ್ತ್ವವನ್ನು ತಿಳಿಯಾದ, ಮೃದುಮಧುರವಾದ ಸರಳ ಸುಂದರ ಸ್ವಾಭಾವಿಕ ಭಾಷೆಯಲ್ಲಿ ರಸಜ್ಞರು ಮೆಚ್ಚಿ ತಲೆದೂಗುವಂತೆ ಬರೆದು ಮಕುಟ ಪ್ರಾಯವಾದ ಈ ಗ್ರಂಥವನ್ನು ವೀರಶೈವ ಜಗತ್ತಿಗೆ ಕೊಡುಗೆಯಾಗಿ ನೀಡಿ ಧನ್ಯತೆಯನ್ನು ಪಡೆದಿದ್ದಾನೆ. ಈ ಗ್ರಂಥವನ್ನು ಎಷ್ಟು ಕೊಂಡಾಡಿದರೂ ಅದು ಅಲ್ಪವೇ. ಸಂಸ್ಕೃತ ಭಾಷಾ ಭಂಡಾರಕ್ಕೆ ಇದೊಂದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಪೂರ್ವವಾದ ಗ್ರಂಥ. ಇದರ ಮೇಲೆ ಪ್ರಸ್ಥಾನತ್ರಯದ ಪ್ರಭಾವವನ್ನು ಗುರುತಿಸುವುದು ಪ್ರಸ್ತುತ ಪ್ರಬಂಧದ ಉದ್ದೇಶ. ಪ್ರಸ್ಥಾನತ್ರಯವೆಂದರೇನು? ಆ ಮೂರು ಪ್ರಸ್ಥಾನಗಳ ವಿಷಯವೇನು? ಈ ವಿಚಾರವನ್ನು ಪರಿಶೀಲಿಸೋಣ.

ಪ್ರಸ್ಥಾನತ್ರಯ: (೧) ಉಪನಿಷತ್ (ಶ್ರುತಿ) ಪ್ರಸ್ಥಾನ :

'ಪ್ರಸ್ಥಾನ' ಎಂಬ ಪದಕ್ಕೆ ಹೊರಡುವುದು ಎಂಬ ಅರ್ಥವನ್ನು ಇಟ್ಟುಕೊಳ್ಳಬಹುದು. ಗೀತೆ, ಉಪನಿಷತ್ತುಗಳು ಮತ್ತು ಬ್ರಹ್ಮಸೂತ್ರಗಳು- ಇವು ಮೂರೂ ವೇದಾಂತದ ಪ್ರಮುಖ ತತ್ತ್ವವನ್ನು ಬೇರೆ ಬೇರೆ ದೃಷ್ಟಿಗಳಿಂದ ಪ್ರತಿಪಾದಿಸಲು ಹೊರಟಿವೆ. ಇವು ಮೂರೂ ತ್ರಿವೇಣಿ ಸಂಗಮದಂತೆ. ಉಪನಿಷತ್ತುಗಳು ಬ್ರಹ್ಮವಿದ್ಯೆಗೆ ತಳಹದಿಯಾಗಿರುವುದರಿಂದ ಅದಕ್ಕೆ ಶ್ರುತಿಪ್ರಸ್ಥಾನವೆಂದೂ, ಸಾಧ್ಯವಾದ ಪರಮಾರ್ಥತತ್ತ್ವವನ್ನು ತಿಳಿಸುವುದರಿಂದ ಸಾಧ್ಯಪ್ರಸ್ಥಾನವೆಂದೂ, 'ಇದಮಿತ್ಥಂ' ಎಂಬುದಾಗಿ ತತ್ತ್ವವನ್ನು ನಿರ್ಣಾಯಕವಾಗಿ ತಿಳಿಸುವುದರಿಂದ ಸಿದ್ಧಾಂತಪ್ರಸ್ಥಾನವೆಂದೂ ಕರೆಯಲಾಗಿದೆ. ಗೀತೆಯು ಸಾಧ್ಯಸಾಧನಗಳ ಪೈಕಿ ಸಾಧನಗಳಿಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟಿರುವುದರಿಂದ ಅದನ್ನು ಸಾಧನಪ್ರಸ್ಥಾನವೆಂದೂ, ಅದು ಶ್ರುತಿಗಳಿಗೆ ಅತಿಸಮೀಪವಾಗಿರುವುದರಿಂದ ಸ್ಮೃತಿ ಪ್ರಸ್ಥಾನವೆಂದೂ ಕರೆಯಲಾಗಿದೆ. ಬ್ರಹ್ಮಸೂತ್ರಗಳು, ಉಪನಿಷತ್ತುಗಳಲ್ಲಿ ಪ್ರತಿಪಾದಿತವಾಗಿರುವ ಅರ್ಥವನ್ನು ನ್ಯಾಯದಿಂದ ನಿರ್ಣಯಿಸುವುದಲ್ಲದೆ, ವೇದಾಂತವಾಕ್ಯಗಳಲ್ಲಿ ವಿರೋಧವೇನಾದರೂ ಕಂಡುಬಂದರೆ ಅದನ್ನು ಯುಕ್ತಿಯಿಂದಲೂ ಅನುಭವದಿಂದಲೂ ಸಮನ್ವಯಗೊಳಿಸುತ್ತವೆ. ಈ ಕಾರಣದಿಂದ ಬ್ರಹ್ಮಸೂತ್ರಗಳಿಗೆ ನ್ಯಾಯಪ್ರಸ್ಥಾನವೆಂದು ಹೆಸರು. ಈ ಮೂರರ ಪೈಕಿ, ಸ್ಮೃತಿಪ್ರಸ್ಥಾನ ಹಾಗೂ ನ್ಯಾಯಪ್ರಸ್ಥಾನಗಳಿಗೆ ಶ್ರುತಿಪ್ರಸ್ಥಾನವೇ ಆಕರ ಮತ್ತು ಅಡಿಗಲ್ಲು.

ಉಪನಿಷತ್ತುಗಳು ನಮ್ಮ ಪರಮಾರ್ಥ ಸ್ವರೂಪವನ್ನು ಪರಮಾತ್ಮನ ಸ್ವರೂಪಕ್ಕಿಂತ ಬೇರೆಯಲ್ಲವೆಂದು ತಿಳಿಸುತ್ತವೆ. ಜೀವನವನ್ನು ಸಕಲ ಸಂಸಾರಧರ್ಮಗಳಿಂದ ಬಿಡಿಸಿ ತನಗೆ ಅಭಿನ್ನವಾದ ಪರಮಾತ್ಮನ ಆನಂದದ ಬುಗ್ಗೆಯಲ್ಲಿ ಮುಳುಗಿಸಿ ಅಲ್ಲಿಯೇ ಅವನನ್ನು ನೆಲೆನಿಲ್ಲಿಸುವುದು ಉಪನಿಷತ್ತುಗಳ ಗುರಿ. ಉಪನಿಷತ್ತುಗಳಲ್ಲಿ ಜೀವನಕೃತಾರ್ಥತೆಗಾಗಿ, ಪರಬ್ರಹ್ಮಕ್ಕೆ ಸಂಬಂಧಪಟ್ಟಂತೆ ಅನೇಕ ವಿವರಗಳನ್ನು ಕೊಟ್ಟಿದೆ. ಕರ್ಮ, ಉಪಾಸನೆ, ಧ್ಯಾನ, ಜ್ಞಾನ ಹಾಗೂ ಅವುಗಳಿಗಿರುವ ಪರಸ್ಪರ ಸಂಬಂಧ- ಈ ವಿಷಯದಲ್ಲಿ ನಿಷ್ಕೃಷ್ಟವಾದ ಅಭಿಪ್ರಾಯಗಳು ವ್ಯಕ್ತವಾಗಿವೆ. ಜಗತ್ತಿನ ಸ್ಥಿತಿ, ಜೀವಾತ್ಮನಿಗೂ ಪರಮಾತ್ಮನಿಗೂ ಹಾಗೂ ಜೀವಾತ್ಮನಿಗೂ ಜಗತ್ತಿಗೂ ಇರುವ ಸಂಬಂಧ, ಜೀವಾತ್ಮನ ಗುರಿ, ಅವನು ತನ್ನ ಗುರಿಯನ್ನು ಮುಟ್ಟಲು ಮಾಡಬೇಕಾದ ಸಾಧನೆ- ಇವೆಲ್ಲವೂ ಉಪನಿಷತ್ತುಗಳ ವ್ಯಾಪ್ತಿಗೆ ಒಳಪಟ್ಟಿವೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉಪನಿಷತ್ತುಗಳು ವೇದಗಳ ಕೊನೆಯಲ್ಲಿ ಬರುವುದರಿಂದ ಅವಕ್ಕೆ 'ವೇದಾಂತ' ಎಂಬ ಹೆಸರು ಬಂದಿದೆ. ವೇದಾಂತವೆಂದರೆ ಬ್ರಹ್ಮವಿದ್ಯೆ. ಇದು ಎಲ್ಲ ವಿದ್ಯೆಗಳಿಗೂ ರಾಜ. ಇದು ಚರಿತ್ರೆ, ಭೂಗೋಳ ಮೊದಲಾದ ವಿದ್ಯೆಗಳಂತೆ ತಾವೇ ಓದಿ ತಿಳಿದುಕೊಳ್ಳತಕ್ಕ ಎಂದರೆ ಪುಸ್ತಕದಿಂದ ಮಸ್ತಕಕ್ಕೆ ಬರುವ ವಿದ್ಯೆಯಲ್ಲ; ಮಸ್ತಕದಿಂದ ಮಸ್ತಕಕ್ಕೆ ಬರುವ ವಿದ್ಯೆಯೂ ಅಲ್ಲ; ಇದು ಹೃದಯದಿಂದ ಹೃದಯಕ್ಕೆ ಬರತಕ್ಕ ವಿದ್ಯೆ. ಇದನ್ನು ಶಾಸ್ತ್ರಾಚಾರ್ಯರ ಉಪದೇಶದಂತೆ ನಡೆದು ನೇರವಾಗಿ ಅನುಭವದಿಂದ ಕಂಡುಕೊಳ್ಳಬೇಕಾಗಿದೆ. ಇದು ಸಾಧಕನ ಅಂತಃಕರಣವೆಂಬ ಗರಡಿಯಲ್ಲಿ ಪಡೆಯುವ ಕಾರ್ಯಾಚರಣೆಯಾದ್ದರಿಂದ ಮಾಡಿತೋರಿಸುವ ಒಂದು ವಿದ್ಯೆಯಲ್ಲ. ಉಪನಿಷತ್ತುಗಳದು ರಹಸ್ಯವಿದ್ಯೆ; ಅವುಗಳಲ್ಲಿ ಪ್ರತಿಪಾದಿತವಾಗಿರುವ ತತ್ತ್ವವು ಅತೀಂದ್ರಿಯವಾದುದರಿಂದ ಇದು ಹೀಗೆ, ಅದು ಹಾಗೆ ಎಂಬ ತರ್ಕಬುದ್ಧಿಯಿಂದ ಅದನ್ನು ನಿಷ್ಕರ್ಷೆ ಮಾಡುವುದಕ್ಕಾಗುವುದಿಲ್ಲ. "ನೈಷಾ ತರ್ಕೇಣ ಮತಿರಾಪನೇಯಾ" ಎಂಬುದಾಗಿ ಕಠೋಪನಿಷತ್ತು ಘಂಟಾಘೋಷವಾಗಿ ತಿಳಿಸುತ್ತದೆ. ಪರಮಾರ್ಥತತ್ತ್ವವು ಎಷ್ಟು ಸೂಕ್ಷ್ಮವೆಂಬುದನ್ನು ಕೇನೋಪನಿಷತ್ತು ಈ ರೀತಿ ತಿಳಿಸುತ್ತದೆ.

"ನ ತತ್ರ ಚಕ್ಷುರ್ಗಚ್ಛತಿ ನವಾಗ್ಗಚ್ಛತಿ ನೋ ಮನಃ।
ನ ವಿದ್ಮೋ ನ ವಿಜಾನೀಮೋ ಯಥೈತದನುಶಿಷ್ಯಾತ್॥

ಅದನ್ನು ಕಣ್ಣು ಮುಟ್ಟಲಾರದು, ವಾಕ್ಕು ತಿಳಿಸಲಾರದು, ಮನವು ಹಿಡಿಯಲಾರದು, ಅದನ್ನು ಹೇಗೆ ತಿಳಿಸಿಕೊಡಬೇಕೋ ನಮಗೆ ತಿಳಿಯದು, ನಾವರಿಯೆವು. ಆದ್ದರಿಂದ ಇಂತಹ ಅತೀಂದ್ರಿಯ ತತ್ತ್ವವನ್ನು ಗುರುಮುಖದಿಂದಲೇ ತಿಳಿಯಬೇಕು. "ತದ್ವಿಜ್ಞಾನಾರ್ಥಂ ಸಗುರು ಮೇವಾಭಿಗಚ್ಛೇತ್. ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಮ್ " ಎಂಬ ಮುಂಡಕಶ್ರುತಿಯ ಪ್ರಕಾರ ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆದ ಸದ್ಗುರುವನ್ನು ಆಶ್ರಯಿಸಬೇಕು. ಆ ಸದ್ಗುರುವಿನ ಉಪದೇಶದಂತೆ ನಡೆದು ಕೃತಾರ್ಥನಾಗಬೇಕು. ಈ ಪರಮಾರ್ಥ ತತ್ತ್ವವನ್ನು ತಿಳಿದುಕೊಂಡರೆ ಮಹತ್ಪ್ರಯೋಜನವಾಗುತ್ತದೆ.

"ಬ್ರಹ್ಮವಿದ್ ಬ್ರಹ್ಮೈವ ಭವತಿ, ತರತಿ ಶೋಕಂ, ತರತಿ ಪಾಪ್ಮಾನಮ್।
ಗುಹಾಗ್ರಂಥಿಭ್ಯೋವಿಮುಕ್ತೋಽಮಾತೋಭವತಿ"॥

ಯಾವನು ಈ ಬ್ರಹ್ಮವನ್ನು ತಿಳಿದುಕೊಳ್ಳುವನೋ ಅವನು ಬ್ರಹ್ಮವೇ ಆಗುವನು. ಅವನು ಶೋಕಪಾಪಗಳಿಂದ ಬಿಡುಗಡೆಯನ್ನು ಹೊಂದುತ್ತಾನೆ. ಅವಿದ್ಯೆಯಿಂದ ಉಂಟಾಗಿರುವ ಬಿಚ್ಚದ ಗ್ರಂಥಿಯು ನಾಶವಾಗುತ್ತದೆ ಎಂಬುದಾಗಿ ಶ್ರುತಿಯು ಸಾರುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

(೨) ಬ್ರಹ್ಮಸೂತ್ರ ಪ್ರಸ್ಥಾನ (ನ್ಯಾಯಪ್ರಸ್ಥಾನ)

ಉಪನಿಷದ್ವಾಕ್ಯಗಳನ್ನು ಮಾಲೆಮಾಡಿ ಕಟ್ಟಿರುವುದೇ ಬ್ರಹ್ಮಸೂತ್ರಗಳು. ಈ ಬ್ರಹ್ಮಸೂತ್ರಗಳನ್ನು ಅಥವಾ ವೇದಾಂತಸೂತ್ರಗಳನ್ನು ಶಾರೀರಿಕ ಮೀಮಾಂಸಾಸೂತ್ರಗಳೆಂದೂ ಕರೆಯುತ್ತಾರೆ. ಶರೀರವೆಂದರೆ ದೇಹ; ಶರೀರದಲ್ಲಿರುವವನಿಗೆ (ಜೀವಾತ್ಮನಿಗೆ) ಶಾರೀರವೆಂದು ಹೆಸರು. ಈ ಶಾರೀರದ (ಜೀವನ) ಬ್ರಹ್ಮತ್ವವನ್ನು ಕುರಿತು ವಿಚಾರಮಾಡುವುದರಿಂದ ಇವುಗಳಿಗೆ ಶಾರೀರಿಕ ಮೀಮಾಂಸಾಸೂತ್ರಗಳೆಂದು ಹೇಳುವುದು ಸಮಂಜಸವಾಗಿದೆ. ಒಟ್ಟಿನಲ್ಲಿ ಬ್ರಹ್ಮಸೂತ್ರಗಳು ಉತ್ತರಮೀಮಾಂಸಾದರ್ಶನದ ಕೈಪಿಡಿ ಇದ್ದಂತೆ.

ಬಾದರಾಯಣರು ತಾವು ಬ್ರಹ್ಮಸೂತ್ರಗಳನ್ನು ರಚಿಸುವ ಕಾಲಕ್ಕೆ ಪ್ರಚಲಿತವಾಗಿದ್ದ ಪೂರ್ವಾಚಾರ್ಯರ ಅಭಿಪ್ರಾಯಗಳನ್ನು ಪರಾಮರ್ಶಿಸಿದ್ದಾರೆ. ಜೀವಬ್ರಹ್ಮರ ಸಂಬಂಧಧ ವಿಷಯದಲ್ಲಿ ಆಶ್ಮರಥ್ಯನು "ಪ್ರತಿಸಿದ್ಧೇರ್ಲಿಂಗಮಾಶ್ಮರಥ್ಯಃ" ೧-೪-೨೦ ಎಂಬುದಾಗಿ) ಭೇದಾಭೇದ ಸಿದ್ಧಾಂತವನ್ನು ಒಪ್ಪಿಕೊಂಡಿದ್ದಾನೆ. ಔಡುಲೋಮಿಯ ("ಉತ್ಕ್ರಮಿಷ್ಯತಏವಂ ಭಾವಾದಿತ್ಯಾಡುಲೋಮಿಃ" ೧-೪-೨೦ ಎಂಬುದಾಗಿ) ಮೋಕ್ಷವಾಗುವವರೆಗೂ ಜೀವನು ಬ್ರಹ್ಮಕ್ಕಿಂತ ಬೇರೆಯಾಗಿಯೇ ಇರುತ್ತಾನೆಂದು ಅಭಿಪ್ರಾಯಪಡುತ್ತಾನೆ. ಕಾಶಕೃತ್ಸ್ನನು ("ಅವಸ್ಥಿತೇರಿತಿ ಕಾಶಕೃತ್ಸ್ನಃ" ೧-೪-೨೨' ಎಂಬುದಾಗಿ) ಜೀವ-ಬ್ರಹ್ಮರಿಗೆ ಅಭೇದವನ್ನೇ ಒಪ್ಪಿಕೊಂಡಿದ್ದಾನೆ. ಬಾದರಾಯಣರು ಈ ಅಭಿಪ್ರಾಯಗಳನ್ನು ಬದಿಗಿರಿಸಿ ಉಪನಿಷತ್ತುಗಳಿಂದ ಪ್ರಮಾಣಭೂತವಾಗಿ ತಿಳಿದುಬರುವ ಅಭಿಪ್ರಾಯಗಳನ್ನೇ ತಮ್ಮ ಸೂತ್ರಗಳಲ್ಲಿ ಸೂಚಿಸಿದ್ದಾರೆ.

ಶ್ರುತಿಗಳಲ್ಲಿ ದ್ವೈತಬೋಧಕ ಶ್ರುತಿಗಳು, ಅದ್ವೈತ ಬೋಧಕ ಶ್ರುತಿಗಳು- ಇವೆರಡೂ ಇವೆ. ಯಾವೊಂದು ಶ್ರುತಿಯನ್ನು ಗಣನೆಗೆ ತೆಗೆದುಕೊಳ್ಳದೆ ಬಿಟ್ಟರೂ ಅದಕ್ಕೆ ಅಪಚಾರಮಾಡಿದಂತೆ. ಆದ್ದರಿಂದ ಈ ಎರಡೂ ಬಗೆಯ ಶ್ರುತಿಗಳನ್ನು ವಿಚಾರಮಾಡಿ ಅದಕ್ಕೆ ಸಾಮರಸ್ಯವನ್ನು ಕಂಡುಕೊಳ್ಳಬೇಕಾಗಿದೆ. ಈಗ ಮುಂಡಕೋಪಾನಿಷತ್ತಿನಲ್ಲಿ ಬರುವ ದ್ವೈತಬೋಧಕ ಶ್ರುತಿಯೊಂದನ್ನು ವಿಚಾರಮಾಡೋಣ-

"ದ್ವಾಸುಪರ್ಣಾ ಸಯುಜಾ ಸಖಾಯಾ
ಸಮಾನಂ ವೃಕ್ಷಂ ಪರಿಷಸ್ವಜಾತೇ।
ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯ-
ನಶ್ನನ್ನನ್ಯೋ ಅಭಿಚಾಕಶೀತಿ॥ (ಮು-೩-೩-೧)

ಇದರ ಅರ್ಥವೇನೆಂದರೆ-

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯಾವಾಗಲೂ ಪರಸ್ಪರ ಸಖ್ಯದಿಂದ ಜೊತೆಯಲ್ಲಿರುವ ಎರಡು ಪಕ್ಷಿಗಳು ಒಂದೇ ವೃಕ್ಷವನ್ನು ಆಶ್ರಯಿಸಿಕೊಂಡಿವೆ. ಅವುಗಳಲ್ಲಿ ಒಂದು ಸವಿಯಾದ ಹಣ್ಣನ್ನು ತಿನ್ನುತ್ತದೆ; ಇನ್ನೊಂದು ತಿನ್ನದೆ ನೋಡುತ್ತದೆ. ಈ ಮಂತ್ರದ ಅರ್ಥವನ್ನು ಸ್ವಲ್ಪ ಹಿಗ್ಗಲಿಸಿ ನೋಡೋಣ. ಅವಿದ್ಯಾಕಾಮಕರ್ಮವಾಸನೆಗಳಿಗೆ ಆಶ್ರಯವಾದ ಸೂಕ್ಷ್ಮಶರೀರವು ಉಪಾಧಿಯಾಗುಳ್ಳ ಜೀವಾತ್ಮನೂ ಕೂಟಸ್ಥ ಸಾಕ್ಷೀಭೂತನಾಗಿರುವ ಪರಮಾತ್ಮನೂ ಒಂದೇ ಶರೀರದಲ್ಲಿ ವಾಸಿಸುತ್ತಾರೆ. ಜೀವಾತ್ಮನು ತಮ್ಮ ಕರ್ಮಫಲಗಳನ್ನು ಭೋಗಿಸುತ್ತಾನೆ. ಈ ಶರೀರವಾದರೋ ಸರ್ವ ಪ್ರಾಣಿಗಳ ಕರ್ಮಫಲಕ್ಕೆ ಆಶ್ರಯವಾದ ಕ್ಷೇತ್ರ. ಈ ವೃಕ್ಷವನ್ನೇ ಕಠೋಪನಿಷತ್ತು "ಊರ್ಧ್ವಮೂಲಃ, ಅವಾಕ್ ಶಾಖಃ, ಅಶ್ವತ್ಥಃ" ಎಂದು ಕರೆದಿದೆ.

ಈಗ ಅಭೇದಶ್ರುತಿಯೊಂದನ್ನು ವಿಚಾರಮಾಡೋಣ. ಅದೇ ಮುಂಡಕೋಪನಿಷತ್ತಿನಲ್ಲಿ ಬರುವ-

> "ಯಥಾ ನದ್ಯಃ ಸ್ಯಂದಮಾನಾ ಸಮುದ್ರೇ-
> ಽಸ್ತಂ ಗಚ್ಛಂತಿ ನಾಮರೂಪೇ ವಿಹಾಯ।
> ತಥಾವಿದ್ಯಾನ್ನಾಮರೂಪಾದ್ವಿಮುಕ್ತಃ
> ಪರಾತ್ಪರಂ ಪುರುಷಮುಪೈತಿ ದಿವ್ಯಮ್" (ಮುಂ-೩-೨-೮)

ಎಂಬ ಮಂತ್ರದ ಅರ್ಥವೇನೆಂದರೆ-"ಹೇಗೆ ಹರಿಯುತ್ತಿರುವ ನದಿಗಳು ತಮ್ಮ ನಾಮರೂಪಗಳನ್ನು ಕಳೆದುಕೊಂಡು ಸಮುದ್ರದಲ್ಲಿ ಐಕ್ಯವಾಗಿ ಸಮುದ್ರಸ್ವರೂಪವೇ ಆಗುತ್ತವೆಯೋ, ಎಂದರೆ ನದಿಗಳು ಸಮುದ್ರವನ್ನು ಸೇರಿದ ಮೇಲೆ ಇದು ಗಂಗಾನದಿಯ ನೀರು, ಇದು ಯಮುನಾನದಿಯ ನೀರು, ಇದು ಕಾವೇರಿ ನೀರು ಎಂಬುದಾಗಿ ವಿಭಾಗಮಾಡುವುದಕ್ಕಾಗುವುದಿಲ್ಲವೋ, ಹಾಗೆಯೇ ಜ್ಞಾನಿಯು ತನ್ನ ನಾಮರೂಪಗಳನ್ನು ಕಳೆದುಕೊಂಡು ಶಿವನಲ್ಲಿ ಬೆರೆತು ಶಿವಸ್ವರೂಪನೇ ಆಗುತ್ತಾನೆ. ಈ ಶ್ರುತಿಯಲ್ಲಿ ಜೀವ ಬ್ರಹ್ಮರಿಗೆ ಸ್ವರೂಪೈಕ್ಯವನ್ನು ಹೇಳಿರುವುದರಿಂದ ಅಭೇದವನ್ನೇ ಸ್ವೀಕರಿಸಬೇಕು.

ಅದ್ವೈತಬೋಧಕಶ್ರುತಿಗಳಾದ 'ತತ್ತ್ವಮಸಿ', 'ಅಹಂ ಬ್ರಹ್ಮಾಸ್ಮಿ', 'ಅಯಮಾತ್ಮಾ ಬ್ರಹ್ಮ' ಎಂಬ ಅಭೇದಶ್ರುತಿಗಳನ್ನು ಎಲ್ಲ ಜೀವರುಗಳಿಗೂ ಅನ್ವಯಿಸುವುದಕ್ಕಾಗುವುದಿಲ್ಲ. ಈ ಶ್ರುತಿಗಳು ಪಾರಮಾರ್ಥಿಕ ಜೀವನವನ್ನು ಅಥವಾ ತುರೀಯವನ್ನು ಕುರಿತು ಹೇಳಿದವುಗಳೇ ಹೊರತು ಅನ್ಯಥಾ ಅಲ್ಲ. ಎಂದರೆ, ಜೀವನು ಶಿವನಾಗುವವವರೆಗೆ ಅವನಿಗೆ ಜೀವಭಾವವೇ ಇರುತ್ತದೆಯಾದ್ದರಿಂದ ಸಂಸಾರವು ತಪ್ಪಿದ್ದಲ್ಲ. ಜೀವನು ಪರಮಾರ್ಥದಲಿ ಉನ್ನತಸ್ಥಾನವನ್ನೇರಿದಾಗ ಈ ಶ್ರುತಿಗಳು ಅನ್ವಯವಾಗತಕ್ಕವುಗಳಾದ್ದರಿಂದ ಆ ಒಂದು ಸ್ಥಿತಿಯಲ್ಲಿ ಈ ಶ್ರುತಿಗಳು ಸಮಂಜಸವೇ ಆಗಿವೆ. ಆದ್ದರಿಂದ, ಭೇದಶ್ರುತಿಗಳಿಗೂ ಅಭೇದಶ್ರುತಿಗಳಿಗೂ ಯಾವ ವಿರೋಧವೂ ಇಲ್ಲ. ಇದರ ಮಥಿತಾರ್ಥವೇನೆಂದರೆ- ಸಂಸಾರದೆಶೆಯಲ್ಲಿ ದ್ವೈತವನ್ನೂ, ಮೋಕ್ಷ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸ್ಥಿತಿಯಲ್ಲಿ ಅದ್ವೈತವನ್ನೂ ಒಪ್ಪಿದರೆ ಸರ್ವಶ್ರುತಿಸಮನ್ವಯವಾಗುತ್ತದೆ. ಭಾಷ್ಯಕಾರರಾದ ಶ್ರೀಪತಿಪಂಡಿತಾರಾಧ್ಯರು ಈ ವಿಚಾರಗಳನ್ನು ಜಿಜ್ಞಾಸಾಧಿಕರಣದಲ್ಲಿ ವಿಶದವಾಗಿ ಪ್ರಸ್ತಾಪಿಸಿರುತ್ತಾರೆ.

ಭಾಷ್ಯೋಕ್ತವಾದ ಇತರ ವಿಚಾರಗಳನ್ನು ಸಿದ್ಧಾಂತ ಶಿಖಾಮಣಿಯ ವಿಷಯಗಳನ್ನು ನಿರೂಪಿಸುವಾಗ ಸಂದರ್ಭೋಚಿತವಾಗಿ ಪ್ರಸ್ತಾಪಿಸಲಾಗುವುದು.

(೩) ಭಗವದ್ಗೀತೆ

ಸಿದ್ಧಾಂತ ಶಿಖಾಮಣಿ ಹಾಗೂ ಭಗವದ್ಗೀತೆ - ಇವುಗಳಿಗೆ ಹಲವು ವಿಚಾರಗಳಲ್ಲಿ ಹೋಲಿಕೆಯು ಕಂಡುಬರುತ್ತದೆ. ಅದನ್ನು ಸಂಕ್ಷಿಪ್ತವಾಗಿ ಇಲ್ಲಿ ಪ್ರಸ್ತಾಪಿಸಲಾಗುವುದು. ಅಗಸ್ತ್ಯನ ಕಾಲದಲ್ಲಿ ಪರಮಾರ್ಥತತ್ತ್ವದ ವಿಚಾರದಲ್ಲಿ ಭೇದವಾದಿಗಳು, ಅಭೇದವಾದಿಗಳು, ಭೇದಾಭೇದವಾದಿಗಳು, ಪ್ರಸಂಖ್ಯಾನವಾದಿಗಳು, ಮನೋನಾಶವಾದಿಗಳು-ಹೀಗೆ ಹಲವಾರು ಮತಗಳವರು ಹಲವಾರು ಅಭಿಪ್ರಾಯಗಳನ್ನು ಹೊಂದಿದ್ದರು. ಅಗಸ್ತ್ಯನು ವೇದಾಗಮಪುರಾಣೇತಿಹಾಸಗಳಲ್ಲಿ ಕೋವಿದನಾಗಿದ್ದರೂ, "ನಾನಾಗಮಶ್ರವಣವರ್ತಿತಸಂಶಯಂ ಮಾಂ" ಎಂಬಂತೆ ಅವುಗಳಲ್ಲಿ ಯಾವುದು ಗ್ರಾಹ್ಯ, ಯಾವುದು ಅಗ್ರಾಹ್ಯ ಎಂಬ ವಿಚಾರದಲ್ಲಿ ಸಂದೇಹಕ್ಕೊಳಗಾಗಿದ್ದನು. ಎಂದರೆ ಅಗಸ್ತ್ಯನ ಸಂದೇಹವು ಪರಮಾರ್ಥತತ್ತ್ವನಿಷ್ಠವಾದುದು. ಅರ್ಜುನನ ಸಂದೇಹವಾದರೋ ವ್ಯಾವಹಾರಿಕ ತತ್ತ್ವನಿಷ್ಠವಾದದ್ದು (ಮುಂದೆ ಅದು ಪರಮಾರ್ಥಕ್ಕೆ ತಿರುಗುತ್ತದೆ). ಅಣ್ಣ-ತಮ್ಮಂದಿರು, ಬಂಧು- ಬಾಂಧವರು, ಗುರು-ಹಿರಿಯರು - ಇವರನ್ನು ಹೇಗೆ ಕೊಲ್ಲುವುದು ಎಂಬ ಸ್ವಜನರ ಮೋಹ, ಕುಲಕ್ಷಯ ಭೀತಿ- ಹೀಗೆ ಏಕಕಾಲದಲ್ಲಿಯೇ ಅವನಿಗೆ ಶೋಕ ಮೋಹಗಳುಂಟಾದುವು. ಅಗಸ್ತ್ಯನ ಸಂದೇಹವನ್ನು ಶ್ರೀರೇಣುಕಭಗವತ್ಪಾದರೂ ಅರ್ಜುನನ ಸಂದೇಹವನ್ನು ಶ್ರೀಕೃಷ್ಣನೂ ಕಳೆಯಬೇಕಾಯಿತು.

ಅಗಸ್ತ್ಯನಾಗಲಿ, ಅರ್ಜುನನಾಗಲಿ ಅವರು ತಮ್ಮ ಗುರುಗಳಿಗೆ ಹಾಕತಕ್ಕ ಪ್ರಶ್ನೆಗಳು ಮತ್ತು ಅವಕ್ಕೆ ಅವರು ಪಡೆದುಕೊಳ್ಳುವ ಉತ್ತರಗಳು ಅಗಸ್ತ್ಯನಿಗೆ ಅಥವಾ ಅರ್ಜುನನಿಗೆ ಮಾತ್ರವೇ ಮೀಸಲಾಗಿಲ್ಲ, ಭವದಲ್ಲಿ ಸಿಕ್ಕಿಕೊಂಡು ನರಳುತ್ತಿರುವ ಎಲ್ಲ ಮುಮುಕ್ಷುಗಳಿಗೂ ಅನ್ವಯವಾಗುತ್ತದೆ. ಭಗವದ್ಗೀತೆಯು ಕೃಷ್ಣಾರ್ಜುನರ ಸಂವಾದವಾಗಿದ್ದರೆ ಸಿದ್ಧಾಂತ ಶಿಖಾಮಣಿಯು (ರೇಣುಕಗೀತೆಯು) ರೇಣುಕಾಗಸ್ತ್ಯ ಸಂವಾದವಾಗಿದೆ. ಇವೆರಡು ಶಾಸ್ತ್ರಗ್ರಂಥಗಳಲ್ಲಿಯೂ ಸಾಧ್ಯ-ಸಾಧನಗಳು ಸ್ಪಷ್ಟವಾಗಿ ಹಾಗೂ ಸುದೀರ್ಘವಾಗಿ ಪ್ರತಿಪಾದಿಸಲ್ಪಟ್ಟಿವೆ. ಭಗವದ್ಗೀತೆಯು ಉಪನಿಷತ್ತುಗಳ ಸಾರಸಂಗ್ರಹವಾದರೆ, ಸಿದ್ಧಾಂತ ಶಿಖಾಮಣಿಯು ಶಿವಾಗಮಗಳ ಸಾರಸಂಗ್ರಹವಾಗಿವೆ. ಇನ್ನೂ ಅನೇಕ ವಿಚಾರಗಳಲ್ಲಿ ಹೋಲಿಕೆಯೂ ಕಂಡುಬರುತ್ತದೆ. ಅವುಗಳನ್ನು ಸಿದ್ಧಾಂತ ಶಿಖಾಮಣಿಯ ವಿಷಯನಿರೂಪಣೆಯ ಸಂಬಂಧದಲ್ಲಿ ಪ್ರಸ್ತಾಪಿಸಲಾಗುವುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಿದ್ಧಾಂತ ಶಿಖಾಮಣಿ

ಇನ್ನು ಸಿದ್ಧಾಂತ ಶಿಖಾಮಣಿಯಲ್ಲಿ ಪ್ರತಿಪಾದಿತವಾಗಿರುವ ವಿಷಯಗಳ ಮೇಲೆ ಉಪನಿಷತ್ತುಗಳ ಹಾಗೂ ಬ್ರಹ್ಮಸೂತ್ರಗಳ ಪ್ರಭಾವವೂ ಎಷ್ಟರಮಟ್ಟಿಗಿದೆ ಎಂಬ ವಿಚಾರವನ್ನು ಸ್ಥೂಲವಾಗಿ ವಿವೇಚಿಸಲಾಗುವುದು. ಸೂತ್ರಗಳ ಪ್ರಭಾವವನ್ನು ಗಮನಿಸುವಾಗ ಶ್ರೀಕರಭಾಷ್ಯೋಕ್ತವಾದ ರೀತಿಯಲ್ಲಿ ವಿವೇಚಿಸುವುದು ಅನಿವಾರ್ಯ.

೧. ವೀರಶೈವ ಸಿದ್ಧಾಂತದಲ್ಲಿ ಶಿವನೇ ಸರ್ವೋತ್ಕೃಷ್ಟವಾದ ತತ್ತ್ವ. ಅವನೇ ಬ್ರಹ್ಮಪದ ವಾಚ್ಯನು; ಸಿದ್ಧಾಂತ ಶಿಖಾಮಣಿಯು ಹೀಗೆ ಹೇಳುತ್ತದೆ:

"ಬ್ರಹ್ಮೇತಿ ವ್ಯಪದೇಶಸ್ಯ ವಿಷಯಂ ಯಂ ಪ್ರಚಕ್ಷತೇ।
ವೇದಾಂತಿನೋ ಜಗನ್ಮೂಲಂ ತನ್ನಮಾಮಿ ಪರಂ ಶಿವಮ್॥"

ಇದರಿಂದ, ಉಪನಿಷತ್ತುಗಳು ಹೇಳುವುದು ಪರಶಿವ ಬ್ರಹ್ಮನ ಸ್ವರೂಪವನ್ನು ಎಂದು ಸಿದ್ಧಾಂತ ಶಿಖಾಮಣಿಯು ಅಂಗೀಕರಿಸಿದೆ. "ಏಕ ಏವ ರುದ್ರೋ ನ ದ್ವಿತೀಯಾಯ ತಸ್ಥೇ." 'ಏಕಮೇವಾದ್ವಿತೀಯಂ ಬ್ರಹ್ಮ' ಎಂಬ ಶ್ರುತಿಪ್ರಮಾಣಗಳನ್ನು ಪ್ರಮಾಣೀಕರಿಸಿ ಸಿದ್ಧಾಂತ ಶಿಖಾಮಣಿಯು ಹೀಗೆ ಹೇಳುತ್ತದೆ:

ಏಕ ಏವ ಶಿವಃ ಸಾಕ್ಷಾತ್ ಚಿದಾನಂದಮಯೋ ವಿಭುಃ।
ನಿರ್ವಿಕಲ್ಪೋ ನಿರಾಕಾರೋ ನಿರ್ಗುಣೋ ನಿಷ್ಪ್ರಪಂಚಕಃ॥

ಹೀಗೆಯೇ ಪರಶಿವನ ಸ್ವರೂಪವನ್ನು ವರ್ಣಿಸುವಾಗ ಸಿದ್ಧಾಂತ ಶಿಖಾಮಣಿಯು ಶ್ರುತಿ ಪ್ರಸ್ಥಾನವನ್ನು ಸಂಪೂರ್ಣವಾಗಿ ಅವಲಂಬಿಸಿದೆ. "ಅಥಾತೋ ಬ್ರಹ್ಮಜಿಜ್ಞಾಸಾ" ಎಂಬ ಬ್ರಹ್ಮಸೂತ್ರಾಂತರ್ಗತವಾಗಿ "ಬ್ರಹ್ಮ" ಸ್ವರೂಪವು ಹೇಳಲ್ಪಟ್ಟಿದೆ. ಅದರ ಪ್ರಭಾವವೂ ಇಲ್ಲಿ ಕಂಡುಬರುತ್ತದೆ.

೨. ಸಿದ್ಧಾಂತ ಶಿಖಾಮಣಿಯು ನಿರೂಪಿಸಿರುವ ಪರಶಿವಬ್ರಹ್ಮನ ಮೊದಲ ವೈಶಿಷ್ಟ್ಯವಿರುವುದು ಶಕ್ತಿವಿಶಿಷ್ಟತ್ವದಲ್ಲಿ. ಅವನ ಶಕ್ತಿಯ ವಿಕಾಸರೂಪದಿಂದ ಈ ವಿಶ್ವವು ಅವನ ಪ್ರಕಾಶದಿಂದಲೇ ಪ್ರಕಾಶಿಸುತ್ತದೆ. ಸಿದ್ಧಾಂತ ಶಿಖಾಮಣಿಯ-

"ಯದ್ಭಾಸಾ ಭಾಸತೇ ವಿಶ್ವಂ ಯತ್ಸುಖೇನಾನುಮೋದತೇ।
ನಮಸ್ತಸ್ಮೈ ಗುಣಾತೀತವಿಭವಾಯ ಪರಾತ್ಮನೇ॥"

ಎಂಬ ಉಕ್ತಿಯಲ್ಲಿ "ತಸ್ಯ ಭಾಸಾ ಸರ್ವಮಿದಂ ವಿಭಾತಿ" ಮತ್ತು "ಅಸ್ಯೈವಾನಂದಸ್ಯ ಅನ್ಯಾನಿ ಭೂತಾನಿ ಮಾತ್ರಾಮುಪಜೀವಂತೇ" ಎಂಬ ಉಪನಿಷದ್ವಾಕ್ಯಗಳ ಮರುಧ್ವನಿಯಿದೆ. ಆದ್ದರಿಂದಲೇ ಪರಶಿವನು ಸಾಂಬ, ಸೋಮ ಎಂದು ಕರೆಯಲ್ಪಡುತ್ತಾನೆ. "ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾಂ ಚ", "ಯದಾ ತಮಸ್ತನ್ನ ದಿವಾ ನ ರಾತ್ರಿರ್ನ ಸನ್ನಚಾಸಚ್ಛಿವ ಏವ ಕೇವಲಃ। ತದಕ್ಷರಂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತತ್ಸವಿತುರ್ವರೇಣ್ಯಂ ಪ್ರಜ್ಞಾ ಚ ತಸ್ಮಾತ್ ಪ್ರಸೃತಾ ಪುರಾಣೀ।। ಮತ್ತು "ಮಾಯಾಂತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಂ" ಮುಂತಾಗಿ ಶ್ವೇತಾಶ್ವತ್ರರೋಪನಿಷತ್ತಿನ ವಾಕ್ಯಗಳ ತಾತ್ಪರ್ಯವನ್ನೇ ಸಂಗ್ರಹಿಸಿ, ವಿವರಿಸಿ, ಶಕ್ತಿತತ್ತ್ವದ ನಿರೂಪಣೆಯನ್ನು ಮಾಡಿದೆ ಸಿದ್ಧಾಂತ ಶಿಖಾಮಣಿಯು.

ಸಿದ್ಧಾಂತ ಶಿಖಾಮಣಿಯ ಪಿಂಡಸ್ಥಲದಲ್ಲಿ "ಅನಾದ್ಯವಿದ್ಯಾಸಂಬಂಧಾತ್ತದಂಶೋ ಜೀವನಾಮಕಃ" ಎಂದು ಹೇಳಿರುವುದರಿಂದ ಜೀವನು ಶಿವನ ಅಂಶವೆಂಬುದು ಸ್ಪಷ್ಟವಾಗಿದೆ. ಈ ವಿಷಯದಲ್ಲಿ ಮುಂಡಕೋಪನಿಷತ್ತು ಈ ರೀತಿ ತಿಳಿಸುತ್ತದೆ:

"ಯಥಾ ಸುದೀಪ್ತಾತ್ ಪಾವಕಾದ್ವಿಸ್ಫುಲಿಂಗಾಃ
ಸಹಸ್ರಶಃ ಪ್ರಭವಂತೇ ಸರೂಪಾಃ।
ತಥಾಕ್ಷರಾದ್ವಿವಿಧಾಃ ಸೋಮ್ಯ ಭಾವಾಃ
ಪ್ರಜಾಯಂತೇ ತತ್ರ ಚೈವಾಪಿ ಯಂತಿ।। (೨-೧-೨)

ಬೆಂಕಿಯಿಂದ ಸಮಾನಾಕಾರವಾದ ಕಿಡಿಗಳು ಹೇಗೆ ಆವಿರ್ಭವಿಸುತ್ತವೆಯೋ ಹಾಗೆಯೇ ಪರಬ್ರಹ್ಮದಿಂದ ಅದರ ಅಂಶಗಳಾಗಿ ಅನೇಕಾನೇಕ ಜೀವರು ಆವಿರ್ಭವಿಸುತ್ತಾರೆ. ಇಲ್ಲಿ ಶ್ರುತಿಯು ಭೇದಾಭೇದ ಸಿದ್ಧಾಂತವನ್ನು ಪ್ರತಿಪಾದಿಸಿದೆ. ಶಿವನಿಗೂ ಶಿವಾಂಶ ಸಂಭೂತರಾದ ಜೀವರಿಗೂ ಅತ್ಯಂತಾಭೇದವನ್ನು ಹೇಳೋಣವೆಂದರೆ ಶಿವನಲ್ಲಿರುವ ಸರ್ವಜ್ಞತ್ವ, ಸರ್ವಕರ್ತೃತ್ವತ್ವಾದಿಗಳನ್ನೂ ಜೀವನಿಗೂ ಹೇಳಬೇಕಾದೀತು. ಅತ್ಯಂತ ಭೇದವನ್ನೂ ಹೇಳೋಣವೆಂದರೆ ಜೀವನು ಚೇತನದ ಅಂಶವಾಗಿದ್ದರೂ ಯಾವ ಕಾರ್ಯವನ್ನೂ ಮಾಡದೆ ಜಡದಂತೆ ಸುಮ್ಮನಿರಬೇಕಾದೀತು. ಆದ್ದರಿಂದಲೇ ಶಿವಜೀವರಿಗೆ ಅಂಶಾಂಶಿಭೇದವನ್ನು ಒಪ್ಪಬೇಕಾಗುತ್ತದೆ. "ಮಮೈವಾಂಶೋ ಜೀವಲೋಕೇ ಜೀವಭೂತಸ್ಸನಾತನಃ" ಎಂಬ ಭಗವದ್ಗೀತೆಯ ವಾಕ್ಯವು ಈ ಅಭಿಪ್ರಾಯವನ್ನು ಪುಷ್ಟೀಕರಿಸುತ್ತದೆ.

ಈ ವಿಚಾರವು "ಅಂಶೋ ನಾನಾವ್ಯಪದೇಶಾತ್" ಮತ್ತು "ಮಂತ್ರಮರ್ಹಾಚ್ಚ" ಎಂಬ ಎರಡು ಬ್ರಹ್ಮಸೂತ್ರಗಳಲ್ಲಿ ಚರ್ಚಿಸಲ್ಪಟದೆ. ಪುರುಷಸೂಕ್ತದಲ್ಲಿ ಬರುವ "ಪಾದೋಸ್ಯ ವಿಶ್ವಾಭೂತಾನಿ ತ್ರಿಪಾದಸ್ಯಾಮೃತಂ ದಿವಿ" ಎಂಬ ಮಂತ್ರಕ್ಕೆ ಭೂತಗಳೆಲ್ಲಾ ಪರಶಿವನ ಒಂದು ಪಾದವಾಗಿದೆ; ಉಳಿದ ಅಮೃತವಾದ ಮೂರು ಪಾದಗಳು ದ್ಯುಲೋಕದಲ್ಲಿವೆ ಎಂದು ಅರ್ಥ. ಇಲ್ಲಿ ಪಾದ, ಅಂಶ, ಭಾಗ ಎಂಬ ಶಬ್ದಗಳು ಒಂದೇ ಅರ್ಥವನ್ನು ಕೊಡುತ್ತವೆ. ಆದ್ದರಿಂದ ಮಂತ್ರವರ್ಣದಿಂದಲೂ ಜೀವನು ಬ್ರಹ್ಮಾಂಶವೆಂಬುದು ಸಿದ್ಧವಾಗುತ್ತದೆ.

ಸಿದ್ಧಾಂತ ಶಿಖಾಮಣಿಯು ಅದೇ ಪಿಂಡಸ್ಥಲದಲ್ಲಿ-

"ಅವಿದ್ಯಾಮೋಹಿತಾ ಜೀವಾಃ ಬ್ರಹ್ಮೈಕ್ಯಜ್ಞಾನವರ್ಜಿತಾಃ।
ಪರಿಭ್ರಮಂತಿ ಸಂಸಾರೇ ನಿಜಕರ್ಮಾನುಸಾರತಃ।।"

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂದು ಹೇಳಿರುವುದರಿಂದ ಜೀವನು ತಾನು ಹಿಂದಿನ ಜನ್ಮಗಳಲ್ಲಿ ಮಾಡಿರುವ ಕರ್ಮಗಳಿಗನುಸಾರವಾಗಿ ಸುಖದುಃಖಗಳನ್ನು ಅನುಭವಿಸುತ್ತಾನೆಂಬುದು ನಿರ್ವಿವಾದವಾಗಿದೆ. ಇದರಿಂದ, ಕರ್ಮಗಳನ್ನು ಮಾಡುವುದಕ್ಕೂ ಅದರ ಫಲಗಳನ್ನು ಅನುಭವಿಸುವುದಕ್ಕೂ ಅವನಿಗೆ ಸ್ವಾತಂತ್ರ್ಯವಿದೆಯೆಂದು ಅರ್ಥವಾಗುತ್ತದೆ. "ಕಿಂಚಿತ್ಸತ್ವರಜೋರೂಪೋಂ ಭೋಕ್ತೃಸಂಜ್ಞಕ ಉಚ್ಯತೇ" ಎಂದು ಹೇಳಿರುವುದರಿಂದ ಜೀವನು ಭೋಕ್ತೃವೆಂದು ಸಿದ್ಧವಾಗುತ್ತದೆ. "ಆತ್ಮೇಂದ್ರಿಯಮನೋಯುಕ್ತೋ ಭೋಕ್ತೇತ್ಯಾಹುರ್ಮನೀಷಿಣಃ" ಎಂಬುದಾಗಿ ಶ್ರುತಿಯೂ ಇದೇ ಅರ್ಥವನ್ನು ತಿಳಿಸುತ್ತದೆ. ಭೋಕ್ತೃವಾದವನೇ ಕರ್ತೃವಾಗಬೇಕು; ಕರ್ತೃವಾದವನೇ ಭೋಕ್ತೃವಾಗಬೇಕು ಎಂಬುದೇ ಇದರ ಸಿದ್ಧಾಂತ. ಆದರೆ ಪಿಂಡಸ್ಥಲದಲ್ಲಿ "ಮಾಯೀ ಮಹೇಶ್ವರಸ್ತೇಷಾಂ ಪ್ರೇರಕೋ ಹೃದಿ ಸಂಸ್ಥಿತಃ" ಎಂಬ ವಾಕ್ಯವಿರುವುದರಿಂದ ಜೀವನ ಎಲ್ಲ ಕೆಲಸಗಳಿಗೂ ಈಶ್ವರನು ಪ್ರೇರಕನಾಗಿದ್ದಾನೆಂದು, ಎಂದರೆ ಅವನೇ ಮಾಡಿಸುತ್ತಾನೆಂದು ಅರ್ಥವಾಗುತ್ತದೆ. "ಏಷ ಏವ ಸಾಧು ಕರ್ಮ ಕಾರಯತಿ" ಎಂಬ ಕೌಷೀತಕೀ ಶ್ರುತಿಯ ಉಪದೇಶವೂ ಇದೇ ರೀತಿಯಲ್ಲಿದೆ. ಎಂದರೆ ಈಶ್ವರನೇ ಜೀವನಿಂದ ಒಳ್ಳೆಯ ಕೆಲಸಗಳನ್ನೂ ಕೆಟ್ಟ ಕೆಲಸಗಳನ್ನೂ ಮಾಡಿಸುತ್ತಾನೆಂಬುದು ಸುಸ್ಪಷ್ಟ.

"ಈಶ್ವರಸ್ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ।
ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾಗಿ ಮಾಯಯಾ॥"

ಎಂಬ ಭಗವದ್ಗೀತೆಯ ಶ್ಲೋಕದಿಂದಲೂ ಇದೇ ಅರ್ಥವು ವ್ಯಕ್ತಪಟ್ಟಿದೆ.

ಎಲ್ಲವನ್ನೂ ಈಶ್ವರನೇ ಮಂಡಿಸುವುದಾದರೆ ಜೀವನಿಗೆ ಕರ್ತೃತ್ವವಿಲ್ಲದೆ ಅವನು ಪರಾಧೀನನಾಗುತ್ತಾನೆ. ಅವನಿಗೆ ಕರ್ತೃತ್ವವಿಲ್ಲದಿದ್ದರೆ, 'ಸತ್ಯಂ ವದ, ಧರ್ಮಂ ಚರ, 'ಸ್ವರ್ಗಕಾಮೊ ಯಜೇತ, " ಆತ್ಮಾವಾ ಅರೇ ದ್ರಷ್ಟವ್ಯಃ" (ಸತ್ಯವನ್ನು ನುಡಿ, ಧರ್ಮವನ್ನು ಆಚರಿಸು, ಸ್ವರ್ಗ ಅಪೇಕ್ಷೆಯುಳ್ಳವನು ಯಜ್ಞಮಾಡಬೇಕು, ಆತ್ಮನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲೇಬೇಕು ಈ ಮೊದಲಾದ ಉಪದೇಶಗಳು ಯಾರಿಗಾಗಿ ಹೇಳಿದವುಗಳು, ಜೀವನಿಗೆ ಹೇಳಿಲ್ಲವೆಂದರೆ ಶಾಸ್ತ್ರವು ಅರ್ಥಹೀನವಾಗುತ್ತದೆ. ಆಗ ಪುಣ್ಯಪಾಪಗಳು, ಧರ್ಮಾಧರ್ಮಗಳು, ಸ್ವರ್ಗನರಕಗಳು, ಬಂಧಮೋಕ್ಷಗಳು- ಇವೆಲ್ಲವನ್ನೂ ಪರಮೇಶ್ವರನ ತಲೆಗೇ ಕಟ್ಟಬೇಕಾಗುತ್ತದೆ. ಆಗ ಪರಮೇಶ್ವರನು ಸಂಸಾರಿಯಾಗುತ್ತಾನೆ. ಅಪಹತಪಾಪ್ಮನೂ, ಸರ್ವಕಲ್ಯಾಣಗುಣಪರಿಪೂರ್ಣನೂ ಆದ ಪರಮೇಶ್ವರನನ್ನು ಸಂಸಾರಿಯನ್ನಾಗಿ ಮಾಡುವುದು ಉಚಿತವೇ? ಹಾಗಾದರೆ ಇದಕ್ಕೆ ಪರಿಹಾರವೇನು? ಜೀವನಿಗೆ ಕರ್ತೃತ್ವವನ್ನು ಒಪ್ಪಿಕೊಳ್ಳುವುದೇ ಪರಿಹಾರ. ಆಗ 'ಕಾರಯತಿ', 'ಪ್ರೇರಕಃ' ಎಂಬ ಶಬ್ದಗಳಿಗೆ ಬೇರೆ ರೀತಿಯಲ್ಲಿ ಅರ್ಥಮಾಡಬೇಕಾಗುತ್ತದೆ. ಜೀವನ ಒಲವನ್ನನುಸರಿಸಿ ಈಶ್ವರನು ಪ್ರೇರಕನಾಗುತ್ತಾನೆ. ಎಂದರೆ ಧರ್ಮಮಾರ್ಗದಲ್ಲಿ ನಡೆಯುವ ಒಲವಿದ್ದವನಿಗೆ ಧರ್ಮಮಾರ್ಗದಲ್ಲಿ ನಡೆಯುವಂತೆಯೂ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಧರ್ಮಮಾರ್ಗದಲ್ಲಿ ನಡೆಯುವ ಒಲವಿದ್ದವನಿಗೆ ಅಧರ್ಮಮಾರ್ಗದಲ್ಲಿ ನಡೆಯುವಂತೆಯೂ ಪ್ರೇರೇಪಿಸುತ್ತಾನೆ ಎಂದು ಇಟ್ಟುಕೊಂಡರೆ ಎಲ್ಲವೂ ಸರಿಹೋಗುತ್ತದೆ. ಛಾಂದೋಗ್ಯ ಶ್ರುತಿಯು ಕೂಡ ಜೀವನು ಕರ್ತಾ, ಭೋಕ್ತಾ, ಮಂತಾ, ವಿಜ್ಞಾತಾ ಎಂದು ಹೇಳಿರುವುದರಿಂದ ಜೀವನ ಕರ್ತೃತ್ವವನ್ನು ಒಪ್ಪಿಕೊಳ್ಳಬೇಕು.

ಜೀವನ ಕರ್ತೃತ್ವ ವಿಚಾರವು ಶ್ರೀಕರಭಾಷ್ಯದಲ್ಲಿ ತೋರಿಸಿದಂತೆ 'ಕರ್ತಾ ಶಾಸ್ತ್ರಾರ್ಥವತ್ತ್ವಾತ್' ಎಂಬ ಬ್ರಹ್ಮಸೂತ್ರದಲ್ಲಿ ಚರ್ಚಿಸಲ್ಪಟ್ಟಿದೆ. ಶಾಸ್ತ್ರಕ್ಕೆ ಅರ್ಥವಾಗಬೇಕಾಗಿರುವುದರಿಂದಲೂ, ಸಮಾಧಿಯ ಅಭಾವವಾಗುವುದರಿಂದಲೂ ಜೀವನ ಕರ್ತೃತ್ವವನ್ನು ಒಪ್ಪಿಕೊಳ್ಳಬೇಕೆಂಬುದೇ ಭಾಷ್ಯಕಾರರ ಹಾಗೂ ಸೂತ್ರಕಾರರ ಅಭಿಪ್ರಾಯ.

ಅದೇ ಪಿಂಡ ಸ್ಥಲದಲ್ಲಿ -

"ದೇಹಿನಾಂ ಪ್ರೇರಕಃ ಶಂಭುರ್ಹಿತಮಾರ್ಗೋಪದೇಶಕಃ।
ಪುನರಾವೃತ್ತಿರಹಿತಮೋಕ್ಷಮಾರ್ಗೋಪದೇಶಕಃ॥"

ಎಂದು ಹೇಳಿದೆ. ಎಂದರೆ ಯಾರು ಪರಮೇಶ್ವರನಲ್ಲಿ ಅನನ್ಯ ಭಕ್ತಿಯಿಂದ ತಮ್ಮ ಚಿತ್ತವೃತ್ತಿಯನ್ನು ಅವನ ಕಡೆಗೆ ಹರಿಸುತ್ತಾರೆಯೋ ಅಂತಹವರಿಗೆ ಪರಮೇಶ್ವರನು ಪುನರಾವೃತ್ತಿರಹಿತವಾದ ಮೋಕ್ಷಮಾರ್ಗವನ್ನು ಉಪದೇಶಮಾಡುತ್ತಾನೆ, ಎಂದರೆ ಮೋಕ್ಷಕ್ಕೆ ಬೇಕಾದ ಜ್ಞಾನವನ್ನು ಅನುಗ್ರಹಿಸುತ್ತಾನೆಂದು ಅರ್ಥ. ಭಗವದ್ಗೀತೆಯಲ್ಲಿಯೂ ಇದೇ ರೀತಿಯ ಅಭಿಪ್ರಾಯವು ವ್ಯಕ್ತಪಟ್ಟಿರುವುದನ್ನು ಈ ಕೆಳಗಿನ ಶ್ಲೋಕಗಳಿಂದ ಮನಗಾಣಬಹುದು:

ಮಚ್ಚಿತ್ತಾ ಮದ್ಗತಪ್ರಾಣಾ ಬೋಧಯಂತಃ ಪರಸ್ಪರಮ್।
ಕಥಯಂತಶ್ಚ ಮಾಂ ನಿತ್ಯಂ ತುಷ್ಯಂತಿ ಚ ರಮಂತಿ ಚ॥
ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಮ್ ।
ದದಾಮಿ ಬುದ್ಧಿಯೋಗಂ ತಂ ಏನ ಮಾಂ ಉಪಯಾಂತಿ ತೇ॥
ತೇಷಾಮೇವಾನುತಂ ಪಾರ್ಥ ಮೋಹಮಜ್ಞಾನಜಂ ತಮಃ।
ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ॥

ಜ್ಞಾನಯಜ್ಞವನ್ನು ಯಾವ ರೀತಿ ಮಾಡಬೇಕೆಂಬುದನ್ನು ಶಿವಯೋಗ ಸಮಾಧಿ ಸ್ಥಲದಲ್ಲಿ ಹೇಳಿರುವ-

"ಆತ್ಮಾರಣಿಸಮುತ್ಥೇನ ಪ್ರಮೋದಮಥನಾತ್ಸುಧೀಃ।
ಜ್ಞಾನಾಗ್ನಿನಾ ದಹೇತ್ ಸರ್ವಂ ಪಾಶಜಾಲಂ ಜಗನ್ಮಯಮ್॥"

ಎಂಬ ಶ್ಲೋಕದಿಂದ ಮನಗಾಣಬಹುದು. ಇದಕ್ಕೆ ಆಕರವು ಕೈವಲ್ಯೋಪನಿಷತ್ತಿನಲ್ಲಿ ಬರುವ-

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಆತ್ಮಾನಮರಣಿಂ ಕೃತ್ವಾ ಪ್ರಣವಂ ಚೋತ್ತರಾರಣೀಮ್।
ಜ್ಞಾನನಿರ್ಮಥನಾಭ್ಯಾಸಾತ್ ಪಾಶಂ ದಹತಿ ಪಂಡಿತಃ॥

ಎಂಬ ಮಂತ್ರವು. ಇದರ ಅರ್ಥವೇನೆಂದರೆ-

"ಆತ್ಮನನ್ನೇ (ಮನಸ್ಸನ್ನೇ) ಕೆಳಗಿನ ಕಟ್ಟಿಗೆಯಾಗಿ ಮಾಡಿಕೊಂಡು ಪರಶಿವನನ್ನೇ ಮೇಲಿನ ಕಟ್ಟಿಗೆಯಾಗಿ ಮಾಡಿಕೊಂಡು ನಿರಂತರವಾದ ಧ್ಯಾನಾಭ್ಯಾಸದಿಂದ ಎಂದರೆ ಧ್ಯಾನವೆಂಬ ಕಡಗೋಲಿನಿಂದ ಕಡೆದುದೇ ಆದರೆ ಆ ಕಟ್ಟಿಗೆಯ ಒಳಭಾಗದಲ್ಲಿರುವ ಅಗ್ನಿಯು ಹೊರಹೊಮ್ಮುತ್ತದೆ. ಎಂದರೆ ಅಗ್ನಿ ಸ್ವರೂಪದಿಂದ ಜ್ಞಾನವು ಉತ್ಪನ್ನವಾಗುತ್ತದೆ. ಇದರಿಂದ ಜಗದ್ರೂಪವಾದ ಪಾಶವು ಹರಿದುಹೋಗುತ್ತದೆ.

ಷಟ್ಸ್ಥಲ ಸಿದ್ಧಾಂತದಲ್ಲಿ ಮೋಕ್ಷಕ್ಕೆ ಕರ್ಮ ಮತ್ತು ಜ್ಞಾನ - ಇವೆರಡೂ ಮುಖ್ಯವೆಂದು ಸಿದ್ಧಾಂತ ಶಿಖಾಮಣಿಯು ಪ್ರತಿಪಾದಿಸುತ್ತದೆ.

"ಪ್ರಕಾಶತೇ ಯಥಾ ನಾಗ್ನಿರರಣ್ಯಾಂ ಮಥನಂ ವಿನಾ।
ಕ್ರಿಯಾಂ ವಿನಾ ತಥಾಽಂತಸ್ಥೋ ನ ಪ್ರಕಾಶೋ ಭವೇಚ್ಛಿವಃ॥

ಎರಡು ಕಟ್ಟಿಗೆಗಳನ್ನು ಚೆನ್ನಾಗಿ ಮಥನ ಮಾಡದ ಹೊರತು ಅವುಗಳಲ್ಲಿರುವ ಬೆಂಕಿಯು ಹೇಗೆ ಪ್ರಕಟವಾಗುವುದಿಲ್ಲವೋ ಅದರಂತೆಯೇ ಕ್ರಿಯೆಯಿಲ್ಲದೆ ನಮ್ಮೊಳಗಿರುವ ಶಿವನು ಪ್ರಕಟವಾಗುವುದಿಲ್ಲ. ಜ್ಞಾನಿಯಾದರೂ ವಿಧ್ಯುಕ್ತ ಕರ್ಮಗಳನ್ನು ಆಚರಿಸಬೇಕೆಂಬ ವಿಷಯದಲ್ಲಿ ಸಿದ್ಧಾಂತ ಶಿಖಾಮಣಿಯು-

"ಜ್ಞಾನೇ ಸಿದ್ಧೇಪಿ ವಿದುಷಾಂ ಕರ್ಮಾಪಿ ವಿನಿಯುಜ್ಯತೇ।
ಫಲಾಭಿಸಂಧಿರಹಿತಂ ತಸ್ಮಾತ್‌ಕರ್ಮ ನ ಸಂತ್ಯಜೇತ್ ॥

ಎಂಬುದಾಗಿ ಉಪದೇಶ ಮಾಡುತ್ತದೆ. ಕರ್ಮಗಳು ಬಂಧನಕಾರಿ, ಯಾವುದೇ ಕರ್ಮವನ್ನು ಮಾಡಲಿ, ಅದಕ್ಕೊಂದು ಫಲ ಸಿಕ್ಕುತ್ತದೆ. ಅದನ್ನು ಅನುಭವಿಸುವುದಕ್ಕೆ ಜನ್ಮವೆತ್ತಲೇ ಬೇಕು. ಆದ್ದರಿಂದ ಫಲಾಪೇಕ್ಷೆಯಿಲ್ಲದೆ ಕರ್ತವ್ಯಬುದ್ಧಿಯಿಂದ ಮಾಡಿದ ಕರ್ಮವು ಬಂಧನಕಾರಿಯಲ್ಲ. ಗೀತೆಯಲ್ಲೂ ಕೂಡ 'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ" ಎಂಬುದಾಗಿ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ. ಕರ್ಮವು ದುಃಖಹೇತುವೆಂದು ಅದನ್ನು ಬಿಡಲೂಬಾರದು. ಈಶ್ವರಾರ್ಪಣ ಬುದ್ಧಿಯಿಂದ ಕರ್ಮಮಾಡಿದರೆ ಸಮ್ಯಜ್‌ಜ್ಞಾನವು ಲಭಿಸುತ್ತದೆ. ಈಶಾವಾಸ್ಯೋಪನಿಷತ್ತಿನಲ್ಲಿ-

"ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ।
ಏವಂ ತ್ವಯಿ ನಾನ್ಯಥೇತೋಽಸ್ತಿ ನ ಕರ್ಮ ಲಿಪ್ಯತೇ ನರೇ॥"

ಮನುಷ್ಯನು ಸಾಯುವವರೆಗೂ ಕರ್ಮ ಮಾಡಬೇಕೆಂದು ಈ ಶ್ರುತಿಯು ವಿಧಾಯಕ ಮಾಡುತ್ತದೆ. ದೇಹಧಾರಿಯಾದವನಿಗೆ ಕರ್ಮಯೋಗವಿಲ್ಲದೆ ಬೇರೆ ಮಾರ್ಗವೇ ಇಲ್ಲ. ಅವನು ಕರ್ಮಮಾಡದಿದ್ದರೆ ಅವನಿಗೆ ಜೀವಿಸುವುದಕ್ಕೆ ಅಧಿಕಾರವೇ ಇಲ್ಲ. "ನಾ-

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಶೇಷಾತ್" ಎಂಬ ಬ್ರಹ್ಮಸೂತ್ರದಲ್ಲಿ ಈ ವಿಚಾರವು ಪ್ರಸ್ತಾಪಿಸಲ್ಪಟ್ಟಿದೆ. ಬ್ರಹ್ಮ ಜ್ಞಾನಿಯಾದ ಮೇಲೂ ಅವನು ಲೋಕಸಂಗ್ರಹಕ್ಕಾಗಿ ಕರ್ಮಮಾಡಬಹುದೆಂದು ತಿಳಿಸಿದೆ.

ಸಿದ್ಧಾಂತ ಶಿಖಾಮಣಿಯು ಜಗತ್ತು ಸತ್ಯವೆಂಬುದನ್ನು ನಾಲ್ಕು ಶ್ಲೋಕಗಳಲ್ಲಿ ಪ್ರತಿಪಾದಿಸಿದೆ. ಅದರಲ್ಲಿ ಒಂದು ಶ್ಲೋಕವನ್ನು ಗಮನಿಸೋಣ:

"ಶಿವತತ್ತ್ವಾತ್ಸಮುತ್ಪನ್ನಂ ಜಗದಸ್ಮಾನ್ನಭಿದ್ಯತೇ।
ಫೇನೋರ್ಮಿಬುದ್ಬುದಾಕಾರೋ ಯಥಾ ಸಿಂಧೋರ್ನಭಿದ್ಯತೇ॥"

ಸಮುದ್ರದಲ್ಲಿ ಹುಟ್ಟುವ ನೊರೆ, ತೆರೆ, ಗುಳ್ಳೆಗಳು ಹೇಗೆ ಸಮುದ್ರಕ್ಕಿಂತ ಬೇರೆಯಲ್ಲವೋ ಹಾಗೆಯೇ ಶಿವನಿಂದ ಉತ್ಪನ್ನವಾದ ಜಗತ್ತು ಅವನ ಸ್ವರೂಪವೇ ಹೊರತು ಬೇರೆಯಲ್ಲ. ಈ ವಿಷಯದಲ್ಲಿ ಈಶೋಪನಿಷತ್ತಿನ ಶಾಂತಿಮಂತ್ರವನ್ನು ಗಮನಿಸೋಣ. ಅದು ಈ ರೀತಿ ಇದೆ.

"ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೇ।
ಪೂರ್ಣಸ್ಯ ಪೂರ್ಣಮದಾಯ ಪೂರ್ಣಮೇವಾವಶಿಷ್ಯತೇ॥"

ಇದರ ಅರ್ಥವೇನೆಂದರೆ- ಪರಶಿವನು ಪೂರ್ಣನು, ಜಗತ್ತೂ ಪೂರ್ಣವು. ಪೂರ್ಣದಿಂದ ಪೂರ್ಣವನ್ನು ತೆಗೆದ ಮೇಲೂ ಅದು ಪೂರ್ಣವಾಗಿಯೇ ಉಳಿಯುತ್ತದೆ. ಇಲ್ಲಿ ಎಲ್ಲಿಯೂ ಅಪೂರ್ಣತ್ವವೆಂಬುದು ಇಲ್ಲವೇ ಇಲ್ಲ. ಪರಶಿವನು ಎಷ್ಟು ಸತ್ಯವೋ ಅವನಿಂದ ಹೊರಬಂದ ಜಗತ್ತೂ ಅಷ್ಟೇ ಸತ್ಯ. ಈ ವಿಚಾರವು "ತದನನ್ಯತ್ವಮಾರಂಭಣ-ಶಬ್ದಾದಿಭ್ಯಃ" ಎಂಬ ಬ್ರಹ್ಮಸೂತ್ರದಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ಭಾಷ್ಯಕಾರರು ಪರಶಿವನಿಗೂ ಜಗತ್ತಿಗೂ ತಾದಾತ್ಮ್ಯ ಸಂಬಂಧವೇ ಹೊರತು ಮಿಥ್ಯಾತ್ವ ಸಂಬಂಧವಿಲ್ಲೆಂದು ದೃಢಪಡಿಸುತ್ತಾರೆ.

ಮೋಕ್ಷದ ವಿಚಾರದಲ್ಲಿ ಸಿದ್ಧಾಂತ ಶಿಖಾಮಣಿಯು ಶಿವ ಜೀವರಿಗೆ ಸ್ವರೂಪೈಕ್ಯವನ್ನು ಪ್ರತಿಪಾದಿಸುತ್ತದೆ.

ಜಲೇಜಲಮಿವನ್ಯಸ್ತಂ ವಹ್ನೌ ವಹ್ನಿರಿವಾರ್ಪಿತಮ್।
ಪರೇಬ್ರಹ್ಮಣಿ ಲೀನಾತ್ಮಾ ವಿಭಾಗೇನ ನ ದೃಶ್ಯತೆ॥

ನೀರಿನಲ್ಲಿ ನೀರೂ, ಬೆಂಕಿಯಲ್ಲಿ ಬೆಂಕಿಯೂ ಬೆರೆತ ಮೇಲೆ ಇದಾವ ಕಟ್ಟಿಗೆಯ ಬೆಂಕಿ ಇದಾವ ಬಾವಿಯ ನೀರು ಎಂಬುದನ್ನು ವಿಭಾಗ ಮಾಡಿ ತೋರಿಸುವುದಕ್ಕಾಗುವುದಿಲ್ಲ. ಇದರಂತೆಯೇ ಪರಶಿವನಲ್ಲಿ ಐಕ್ಯನಾದ ಜ್ಞಾನಿಯ ಸ್ವರೂಪವು ಪರಶಿವನ ಸ್ವರೂಪಕ್ಕಿಂತ ಬೇರೆಯಿಲ್ಲ. ಈ ಹಿಂದೆಯೇ ಈ ವಿಚಾರದಲ್ಲಿ ನದೀ ಸಮುದ್ರದ ದೃಷ್ಟಾಂತವನ್ನು ಕೊಟ್ಟು ವಿವರಿಸಲಾಗಿದೆ. ಈ ವಿಚಾರವು ಬ್ರಹ್ಮಸೂತ್ರಗಳ ಅವಿಭಾಗಾಧಿಕರಣದ 'ಅವಿಭಾಗೇನ ದೃಷ್ಟತ್ವಾತ್' ಎಂಬ ಸೂತ್ರದಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ಭಾಷ್ಯಕಾರರು ಇದೇ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಇದು ಸೂತ್ರಕಾರರ ಅಭಿಪ್ರಾಯವೂ ಹೌದು. ❑

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧೦. ಸಿದ್ಧಾಂತ ಶಿಖಾಮಣಿ ಹಾಗೂ ಷಡ್‌ದರ್ಶನಗಳು

-ಶ್ರೀಮತ್ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ
೧೦೦೮ ಜಗದ್ಗುರು ಡಾ|| ಚಂದ್ರಶೇಖರ
ಶಿವಾಚಾರ್ಯ ಮಹಾಸ್ವಾಮಿಗಳು

ಸನಾತನವಾದ ವೀರಶೈವ ಧರ್ಮದ ತತ್ತ್ವಗಳು ವೇದ, ಆಗಮ, ಉಪನಿಷತ್, ಪುರಾಣ ಮತ್ತು ಇತಿಹಾಸಾದಿ ಗ್ರಂಥಗಳಲ್ಲಿ ನಿರೂಪಿತವಾದದ್ದು ಪಂಡಿತವೇದ್ಯವೇ ಸರಿ. ವೀರಶೈವ ಧರ್ಮ-ದರ್ಶನಗಳ ಸಮಗ್ರ ತತ್ತ್ವಗಳನ್ನು ಒಂದೇ ಗ್ರಂಥದಲ್ಲಿ ಅವಲೋಕಿಸಬೇಕಾದರೆ "ಸಿದ್ಧಾಂತ ಶಿಖಾಮಣಿ"ಯ ಹೊರತು ಬೇರೊಂದು ಸಂಸ್ಕೃತ ಗ್ರಂಥವಿಲ್ಲ. ಅಂತೆಯೇ ಅತಿ ಪ್ರಾಚೀನವೂ ಪ್ರಾಮಾಣಿಕವೂ ಆದ ಇದು ವೀರಶೈವಧರ್ಮಗ್ರಂಥವೆಂಬ ಪ್ರಸಿದ್ಧಿಯನ್ನು ಪಡೆದಿದೆ.

ವೇದಾಂತಶಾಸ್ತ್ರದ ಪ್ರಸ್ಥಾನತ್ರಯದಲ್ಲಿ ಪ್ರಸಿದ್ಧವಾಗಿರುವ ಶ್ರೀಮದ್ಭಗವದ್ಗೀತೆಯು ಸಕಲ ಉಪನಿಷತ್ತುಗಳ ಸಾರಸರ್ವಸ್ವವಾಗಿದ್ದರೆ "ಸಿದ್ಧಾಂತ ಶಿಖಾಮಣಿ" ಯ ಕಾಮಿಕಾದಿ ವಾತುಲಾಂತಗಳಾದ ಇಪ್ಪತ್ತೆಂಟು ಶಿವಾಗಮಗಳ ಸಾರಸ್ವರೂಪವಾಗಿದೆ. ಶ್ರೀಕೃಷ್ಣಪರಮಾತ್ಮನಿಂದ ಅರ್ಜುನನಿಗೆ ಉಪದೇಶಿಸಿದ ಉಪದೇಶವೇ ಶ್ರೀ ವ್ಯಾಸಮಹರ್ಷಿಗಳಿಂದ ಸಂಗ್ರಹಿಸಲ್ಪಟ್ಟು "ಭಗವದ್ಗೀತೆ" ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವಂತೆ, ಶ್ರೀಜಗದ್ಗುರು ರೇಣುಕಭಗವತ್ಪಾದರಿಂದ ಶ್ರೀ ಅಗಸ್ತ್ಯ ಮಹರ್ಷಿಗಳಿಗೆ ಮಾಡಲ್ಪಟ್ಟ ಉಪದೇಶವೇ ಶ್ರೀ ಶಿವಯೋಗಿ ಶಿವಾಚಾರ್ಯರಿಂದ ಸಂಗ್ರಹಿಸಲ್ಪಟ್ಟು "ಸಿದ್ಧಾಂತಶಿಖಾಮಣಿ" ಎಂಬ ನಾಮದಿಂದ ಪ್ರಸಿದ್ಧಿಯನ್ನು ಪಡೆದಿದ. ಅಂತೆಯೇ ಶ್ರೀ ಮರಿತೊಂಟದಾರ್ಯರು-

ರೇಣುಕಾಗಸ್ತ್ಯಸಂವಾದಂ ನಿಗಮಾಗಮವಿಶ್ರುತಮ್।
ಪ್ರದೀಪಯತಿ ಗುಪ್ತಾರ್ಥಮುದ್ಧೃತ್ಯ ಶಿವಯೋಗಿರಾಟ್॥"

ಎಂಬುದಾಗಿ ಈ ಮಾತನ್ನೇ ಸಮರ್ಥಿಸಿದ್ದಾರೆ. ಇದಕ್ಕೆ 'ಶ್ರೀರೇಣುಕಗೀತಾ" ಎಂತಲೂ ಕರೆಯುವುದುಂಟು; ಆದರೆ ಸಿದ್ಧಾಂತ ಶಿಖಾಮಣಿ ಎಂಬುದೇ ಇದರ ಪ್ರಸಿದ್ಧವಾದ ನಾಮವಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗ್ರಂಥನಾಮರಹಸ್ಯ :

ರೇಣುಕಾಗಸ್ತ್ಯಸಂವಾದಾತ್ಮಕವಾದ ಈ ಗ್ರಂಥಕ್ಕೆ ಶ್ರೀ ಶಿವಯೋಗಿಶಿವಾಚಾರ್ಯರು ಸಿದ್ಧಾಂತಶಿಖಾಮಣಿ ಎಂದು ನಾಮಕರಣ ಮಾಡಿದ ರಹಸ್ಯವೇನೆಂದರೆ- "ಸಿದ್ಧಾಂತಶಬ್ದಃ ಪಂಕಜಾದಿಶಬ್ದವದ್ಯೋಗರೂಢ್ಯಾ ಶಿವಪ್ರಣೀತೇಷು ಕಾಮಿಕಾದಿಷು ದಶಾಷ್ಟಾದಶತಂತ್ರೇಷು ಪ್ರಸಿದ್ಧಃ"[೨] ಎನ್ನುವ ಅಘೋರಶಿವಾಚಾರ್ಯರ ವಚನದಂತೆ ಶಿವನಿಂದ ಉಪದೇಶಿಸಲ್ಪಟ್ಟ ಕಾಮಿಕಾದಿ ವಾತುಲಾಂತಗಳಾದ ಇಪ್ಪತ್ತೆಂಟು ಶಿವಾಗಮಗಳನ್ನು "ಸಿದ್ಧಾಂತ"ವೆಂದು ಕರೆಯುತ್ತಾರೆ. ಈ ಆಗಮಗಳ ಉತ್ತರಭಾಗದಲ್ಲಿ ಅಂದರೆ ಕೊನೆಯಲ್ಲಿ ವೀರಶೈವ ಮತವು ನಿರೂಪಿತವಾಗಿದೆ.[೩] ಹೀಗೆ ಆಗಮಗಳ ಕೊನೆಯಲ್ಲಿರುವ ಸಿದ್ಧಾಂತವೇ ಈ ಗ್ರಂಥದಲ್ಲಿ ಪ್ರತಿಪಾದಿತವಾಗಿರುವುದರಿಂದ ಈ ಗ್ರಂಥವನ್ನು "ಸಿದ್ಧಾಂತಶಿಖಾಮಣಿ" ಎಂಬ ಅನ್ವರ್ಥಕ ನಾಮದಿಂದ ವ್ಯವಹರಿಸಿದ್ದಾರೆ. ಇದೇ ಅಭಿಪ್ರಾಯವನ್ನೇ ಶ್ರೀ ಶಿವಯೋಗಿ ಶಿವಾಚಾರ್ಯರು-

> ಸರ್ವೇಷಾಂ ಶೈವತಂತ್ರಾಣಾಮುತ್ತರತ್ವಾನ್ನಿರುತ್ತರಮ್।
> ನಾಮ್ನಾ ಪ್ರತೀಯತೇ ಲೋಕೇ ಯತ್ಸಿದ್ಧಾಂತಶಿಖಾಮಣಿಃ।[೪]

ಎಂಬುದಾಗಿ ಸಮರ್ಥಿಸಿದ್ದಾರೆ. ಇದೂ ಅಲ್ಲದೇ-

> ಸಾಂಖ್ಯಂ ಯೋಗಃ ಪಾಂಚರಾತ್ರಂ ವೇದಾಃ ಪಾಶುಪತಂ ತಥಾ।
> ಏತಾನಿ ಮಾನಭೂತಾನಿ ನ ಹಂತವ್ಯಾನಿ ಯುಕ್ತಿಭಿಃ॥[೫]

ಸಾಂಖ್ಯ, ಯೋಗ, ಪಾಂಚರಾತ್ರ ಮತ್ತು ಪಾಶುಪತ ಮುಂತಾದ ಎಲ್ಲ ಮತಗಳೂ ವೇದಾಗಮಗಳನ್ನೇ ಆಧಾರವಾಗಿ ಇಟ್ಟುಕೊಂಡು ಪ್ರತಿಪಾದಿಸಲ್ಪಟ್ಟಿರುವುದರಿಂದ ಯುಕ್ತಿ -ಪ್ರಯುಕ್ತಿಗಳಿಂದ ಯಾವ ದರ್ಶನವನ್ನು ಖಂಡಿಸಬಾರದೆಂಬ ಉದಾತ್ತ ಮನೋಭಾವನೆಯನ್ನು ಹೊಂದಿ ದ್ವೈತ ಅದ್ವೈತಾದಿ ಮತಗಳ ಸಮನ್ವಯಾತ್ಮಕವಾದ ಸಿದ್ಧಾಂತವು ಈ ಗ್ರಂಥದಲ್ಲಿ ಉಪದೇಶಿಸಲ್ಪಟ್ಟಿರುವುದರಿಂದ, ಸರ್ವಗ್ರಾಹ್ಯವಾದ ಈ ಸಿದ್ಧಾಂತವು ಸಕಲಸಿದ್ಧಾಂತಗಳ ಶಿಖಾಮಣಿ ಎಂದರೆ ಅತಿಶಯೋಕ್ತಿಯಾಗಲಾರದು.

ಭಾರತೀಯ ದರ್ಶನಗಳ ಬಗ್ಗೆ ಶ್ರೀ ಶಿವಯೋಗಿಶಿವಾಚಾರ್ಯರ ಅಭಿಪ್ರಾಯ

"ದೃಶ್ಯತೇ ಸಾಕ್ಷಾತ್‌ಕ್ರಿಯತೇ ಪರಮತತ್ತ್ವಂ ಯೇನ ತದ್ ದರ್ಶನಮ್' ಎನ್ನುವ ವ್ಯುತ್ಪತ್ತಿಯ ಮೇರೆಗೆ ತತ್ತ್ವಸಾಕ್ಷಾತ್ಕಾರಕ್ಕೆ ಸಾಧನೀಭೂತವಾದ ಶಾಸ್ತ್ರಕ್ಕೆ ದರ್ಶನವೆಂದು ಕರೆಯುತ್ತಾರೆ. "ಋಚೀನಾಂ ವೈಚಿತ್ರ್ಯಾದೃಜುಕುಟಿಲನಾನಾಪಥಜುಷಾಂ"[೬] ಎಂಬ ಪುಷ್ಪದಂತ ಕವಿಯ ವಚನಾನುಸಾರವಾಗಿ ಭಾರತೀಯ ದರ್ಶನಗಳು ಅನೇಕ ವಿಧಗಳಾಗಿವೆ. ಈ ಎಲ್ಲ ದರ್ಶನಗಳನ್ನು ಆಸ್ತಿಕ ಮತ್ತು ನಾಸ್ತಿಕ ವೆಂಬುದಾಗಿ ಎರಡು ವಿಧದಲ್ಲಿ ವಿಂಗಡಿಸಿದ್ದಾರೆ. "ನಾಸ್ತಿಕೋ ವೇದನಿಂದಕಃ"[೭] ಎಂಬ ಮನುಮಹರ್ಷಿಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಾಕ್ಯದಂತೆ ವೇದಪ್ರಾಮಾಣ್ಯವನ್ನು ಅನಂಗೀಕರಿಸುವ ಚಾರ್ವಾಕ, ಜೈನ ಮತ್ತು ಬೌದ್ಧ ದರ್ಶನಗಳು ನಾಸ್ತಿಕಗಳೆಂದು; ವೇದ ಪ್ರಾಮಾಣ್ಯವನ್ನು ಸ್ವೀಕರಿಸುವ ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಪೂರ್ವಮೀಮಾಂಸೆ ಮತ್ತು ಉತ್ತರ ಮೀಮಾಂಸೆಗಳೆಂಬ ಆರು ದರ್ಶನಗಳು ಆಸ್ತಿಕಗಳೆಂದು ಪರಿಗಣಿಸಲ್ಪಟ್ಟಿರುತ್ತವೆ.

ಶ್ರೀ ಶಿವಯೋಗಿಶಿವಾಚಾರ್ಯರ ಕಾಲದಲ್ಲಿ ಪೂರ್ವೋಕ್ತವುಗಳಾದ ಆಸ್ತಿಕ-ನಾಸ್ತಿಕ ದರ್ಶನಗಳು ಸಾಕಷ್ಟು ವಿಕಾಸಗೊಂಡವುಗಳಾಗಿ ಕಂಡುಬರುತ್ತದೆ. ವೀರಶೈವಾಚಾರ್ಯರು ಪರಮಾತ್ಮನ ಶ್ವಾಸೋಚ್ಛ್ವಾಸಗಳಿಂದ ನಿರ್ಗತಗಳಾದ ವೇದಗಳಿಗೆ ಹಾಗೂ ಅವನ ವಾಗ್ವ್ಯವಹಾರರೂಪಗಳಾದ ಆಗಮಗಳಿಗೆ ಸಾಮ್ಯತೆಯನ್ನು ಒಪ್ಪಿದ್ದಾರೆ. ಅಂತೆಯೇ ಶ್ರೀ ಶಿವಯೋಗಿ ಶಿವಾಚಾರ್ಯರು-

ವೇದಸಿದ್ಧಾಂತಯೋರೈಕ್ಯಮೇಕಾರ್ಥಪ್ರತಿಪಾದನಾತ್।
ಪ್ರಾಮಾಣ್ಯಂ ಸದೃಶಂ ಜ್ಞೇಯಂ ಪಂಡಿತೈರೇತಯೋಃ ಸದಾ॥[೮]

ಹೀಗೆ ವೇದ ಮತ್ತು ಆಗಮಗಳ ಪ್ರತಿಪಾದ್ಯವಾದ ವಸ್ತುವು ಒಂದೇ ಆಗಿರುವುದರಿಂದ ಎರಡನ್ನು ಪ್ರಾಮಾಣಿಕಗಳನ್ನಾಗಿ ಸ್ವೀಕರಿಸಬೇಕೆಂದು ತಿಳಿಯಪಡಿಸಿದ್ದಾರೆ. ತಮ್ಮ ಅಮೂಲ್ಯ ಕೃತಿಯಾದ ಸಿದ್ಧಾಂತಶಿಖಾಮಣಿಯಲ್ಲಿ ಇವರು ವೇದವಿರೋಧಿಗಳಾದ ಚಾರ್ವಾಕ-ಬೌದ್ಧಾದಿದರ್ಶನಗಳನ್ನು ಖಂಡಿಸಿ;[೯] ವೇದಸಮ್ಮತಗಳಾದ ಸಾಂಖ್ಯಾದಿದರ್ಶನಗಳು ವೇದೈಕದೇಶಿಗಳಾಗಿದ್ದರೂ ಅವುಗಳು ಖಂಡನಾರ್ಹಗಳಲ್ಲ ಎಂಬ ತಮ್ಮ ಸ್ಪಷ್ಟವಾದ ಅಭಿಪ್ರಾಯವನ್ನು ತಿಳಿಯಪಡಿಸಿ, ವೀರಶೈವದರ್ಶನವು ಸಂಪೂರ್ಣವೇದಸಮ್ಮತವಾಗಿದೆ ಎಂಬುದನ್ನು-

ಸಾಂಖ್ಯಂ ಯೋಗಃ ಪಾಂಚರಾತ್ರಂ ವೇದಾಃ ಪಾಶುಪತಂ ತಥಾ।
ಏತಾನಿ ಮಾನಭೂತಾನಿ ನ ಹಂತವ್ಯಾನಿ ಯುಕ್ತಿಭಿಃ॥
ವೇದಃ ಪ್ರಧಾನಂ ಸರ್ವೇಷಾಂ ಸಾಂಖ್ಯಾದೀನಾಂ ಮಹಾಮುನೇ।
ವೇದಾನುಸರಣಾದೇಷಾಂ ಪ್ರಾಮಾಣ್ಯಮಿತಿ ನಿಶ್ಚಿತಂ॥
ಪಾಂಚರಾತ್ರಸ್ಯ ಸಾಂಖ್ಯಸ್ಯ ಯೋಗಸ್ಯ ಚ ತಥಾ ಮುನೇ।
ವೇದೈಕದೇಶವರ್ತಿತ್ವಂ ಶೈವಂ ವೇದಮಯಂ ಮತಮ್॥
ವೇದೈಕದೇಶವರ್ತಿಭ್ಯಃ ಸಾಂಖ್ಯಾದಿಭ್ಯೋಮಹಾಮುನೇ।
ಸರ್ವವೇದಾನುಸಾರಿತ್ವಾಚ್ಛೈವತಂತ್ರಂ ವಿಶಿಷ್ಯತೇ॥
ಶೈವತಂತ್ರಮಿತಿ ಪ್ರೋಕ್ತಂ ಸಿದ್ಧಾಂತಾಖ್ಯಂ ಶಿವೋದಿತಮ್।
ಸರ್ವವೇದಾರ್ಥರೂಪತ್ವಾತ್ ಪ್ರಮಾಣಂ ವೇದವತ್ಸದಾ॥

....
ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ।
ನಿರ್ದಿಷ್ಟಮುತ್ತರೇ ಭಾಗೇ ವೀರಶೈವಮತಂ ಪರಮ್॥[೧೦]

ಈ ರೀತಿಯಾಗಿ ವಿಶದಪಡಿಸಿದ್ದಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಸ್ತುತವಾದ ಈ ಲಘು ನಿಬಂಧದಲ್ಲಿ ವೇದೈಕದೇಶಿಗಳಾದ ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಪೂರ್ವಮೀಮಾಂಸೆ ಮತ್ತು ವೇದಾಂತಗಳೆಂಬ ಭಾರತೀಯ ಆಸ್ತಿಕ ಷಡ್‌ದರ್ಶನಗಳ ದಾರ್ಶನಿಕ ಸಿದ್ಧಾಂತಕ್ಕೂ ಮತ್ತು ಸಂಪೂರ್ಣ ವೇದಸಮ್ಮತವಾದ ವೀರಶೈವದರ್ಶನದ ಪ್ರಾಮಾಣಿಕ ಗ್ರಂಥವಾದ ಸಿದ್ಧಾಂತಶಿಖಾಮಣಿಯಲ್ಲಿ ಪ್ರತಿಪಾದಿಸಲ್ಪಟ್ಟ ವೀರಶೈವ ದಾರ್ಶನಿಕ ಸಿದ್ಧಾಂತಕ್ಕೂ ಇರುವ ಸಾಮ್ಯ, ವೈಷಮ್ಯ ಹಾಗೂ ವೈಶಿಷ್ಟ್ಯಗಳ ಬಗ್ಗೆ ಸಂಕ್ಷೇಪವಾಗಿ ವಿವರಿಸಲಾಗುವುದು.

ದಾರ್ಶನಿಕ ತತ್ತ್ವಸಮೀಕ್ಷೆ :

ಭಾರತೀಯ ದಾರ್ಶನಿಕರು ತಮ್ಮ ತಮ್ಮ ದಾರ್ಶನಿಕ ಗ್ರಂಥಗಳಲ್ಲಿ ಈಶ್ವರ, ಜೀವ, ಜಗತ್ತು, ಜೀವನಬಂಧ ಮತ್ತು ಮೋಕ್ಷಗಳೆಂಬ ಪ್ರಮುಖಗಳಾದ ವಿಷಯಗಳ ಮೇಲೆ ಕೂಲಂಕಷವಾಗಿ ವಿಚಾರಿಸಿದ್ದಾರೆ. ಈ ದಾರ್ಶನಿಕ ವಿಷಯಗಳ ಬಗ್ಗೆ ಸಿದ್ಧಾಂತಶಿಖಾಮಣಿಯ ಆಧಾರದಿಂದ ವೀರಶೈವರ ನಿಲುವು ಏನಿದೆ? ಎಂಬುದನ್ನು ವಿಚಾರಿಸಿ ಉಳಿದ ದರ್ಶನಗಳ ಜೊತೆಗೆ ತೌಲನಿಕವಾಗಿ ಪರಮಾರ್ಶಿಸುವೆವು.

ಶಿವ (ಈಶ್ವರ) :

ಭಾರತೀಯ ದಾರ್ಶನಿಕ ಜಗತ್ತಿನಲ್ಲಿ ಈಶ್ವರನ ಪಾತ್ರವು ಪ್ರಮುಖವಾದುದು. ವಿಚಿತ್ರವಾದ ಈ ವಿಶ್ವದ ಉತ್ಪತ್ತಿ, ಸ್ಥಿತಿ, ಸಂಹಾರಾದಿ ಕ್ರಿಯೆಗಳ ವ್ಯವಸ್ಥೆಗಾಗಿ, ಪ್ರಾಣಿಗಳ ಅದೃಷ್ಟಾನುರೂಪವಾದ ಸುಖ-ದುಃಖ ಫಲಗಳನ್ನು ಕೊಡುವುದಕ್ಕಾಗಿ, ವೇದಗಳ ಪ್ರಾಮಾಣ್ಯವನ್ನು ವ್ಯವಸ್ಥಾಪಿಸುವುದಕ್ಕಾಗಿ ನಮ್ಮೆಲ್ಲರಿಗಿಂತಲೂ ವಿಲಕ್ಷಣನಾದ ಸರ್ವಜ್ಞತ್ವ-ಸರ್ವಕರ್ತೃತ್ವಾದಿ ಅನೇಕ ಕಲ್ಯಾಣಗುಣಗಣ- ಸಮನ್ವಿತನಾದ ಈಶ್ವರನು ಆವಶ್ಯಕನೆಂದು ತಿಳಿದ ದಾರ್ಶನಿಕರು ಅನುಮಾನ- ಆಗಮಾದಿ ಪ್ರಮಾಣಗಳಿಂದ ಆತನ ಸಿದ್ಧಿಯನ್ನು ಮಾಡುತ್ತಾರೆ.

ವೀರಶೈವ ದರ್ಶನದಲ್ಲಿಯಾದರೂ ಪೂರ್ವೋಕ್ತಗಳಾದ ಸಮಸ್ಯೆಗಳ ಸಮಾಧಾನಕ್ಕಾಗಿಯೇ ಈಶ್ವರನನ್ನು ಸ್ವೀಕರಿಸಿದ್ದಾರೆ. ಶ್ರೀ ಶಿವಯೋಗಿ ಶಿವಾಚಾರ್ಯರು ಸಿದ್ಧಾಂತಶಿಖಾಮಣಿಯಲ್ಲಿ-

ತ್ರೈಲೋಕ್ಯಸಂಪದಾಲೇಖ್ಯಸಮುಲ್ಲೇಖನಭಿತ್ತಯೇ।
ಸಚ್ಚಿದಾನಂದರೂಪಾಯ ಶಿವಾಯ ಬ್ರಹ್ಮಣೇ ನಮಃ॥
ಬ್ರಹ್ಮೇತಿ ವ್ಯಪದೇಶಸ್ಯ ವಿಷಯಂ ಯಂ ಪ್ರಚಕ್ಷತೇ।
ವೇದಾಂತಿನೋ ಜಗನ್ಮೂಲಂ ತನ್ನಮಾಮಿ ಪರಂ ಶಿವಮ್॥[೧೯]
ಲಯಂ ಗಚ್ಛತಿ ಯತ್ರೈವ ಜಗದೇತಚ್ಚರಾಚರಮ್।
ಪುನಃ ಪುನಃ ಸಮುತ್ಪತ್ತಿಂ ತಲ್ಲಿಂಗಂ ಬ್ರಹ್ಮ ಶಾಶ್ವತಮ್॥[೨೦]

ಈ ವಿಭಿನ್ನಸ್ಥಾನಗಳಲ್ಲಿ ವೀರಶೈವ ಸಿದ್ಧಾಂತಾನುಸಾರವಾಗಿ ಆ ಪರಮ ತತ್ತ್ವಕ್ಕೆ ಶಿವ, ಪರಶಿವ, ಲಿಂಗ ಮತ್ತು ಬ್ರಹ್ಮವೆಂಬ ಪಾರಿಭಾಷಿಕ ಶಬ್ದಗಳನ್ನು ಪ್ರಯೋಗಿಸಿದ್ದಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವನ ಸಗುಣ- ನಿರ್ಗುಣ ಸ್ವರೂಪ :

ಈ ಪರಶಿವ ತತ್ತ್ವವು ಸಗುಣ- ನಿರ್ಗುಣೋಭಯರೂಪವಾಗಿದೆ. ತನ್ನ ಶಕ್ತಿಯ ಸಂಕೋಚವಾದಾಗ ನಿರ್ಗುಣವೆಂತಲೂ, ಶಕ್ತಿಯ ವಿಕಾಸವಾದಾಗ ಸಗುಣವೆಂತಲೂ ಕರೆಯಲ್ಪಡುತ್ತದೆ.[೧೩] ಅಂತೆಯೇ "ಅಶಬ್ದಮಸ್ಪರ್ಶಮರೂಪಮವ್ಯಯಂ....."[೧೪] "ಅಸ್ಥೂಲಮಣನ್ವಹ್ರಸ್ವಮದೀರ್ಘಮಲೋಹಿತಂ...."[೧೫] ಇತ್ಯಾದಿ ನಿರ್ಗುಣಶ್ರುತಿಗಳು ಪರಶಿವನ ಶಕ್ತಿ ಸಂಕೋಚಾವಸ್ಥೆಯನ್ನು "ಸ ಈಕ್ಷಾಂಚಕ್ರೇ"[೧೬] "ತದೈಕ್ಷತ ಬಹು ಸ್ಯಾಂ ಪ್ರಜಾಯೇಯ"[೧೭] ಇತ್ಯಾದಿ ಸಗುಣಶ್ರುತಿಗಳು ಪರಶಿವನ ಶಕ್ತಿವಿಕಾಸಾವಸ್ಥೆಯನ್ನು ಪ್ರತಿಪಾದಿಸುವಲ್ಲಿ ಸಾರ್ಥಕತೆಯನ್ನು ಪಡೆಯುವುದಾಗಿ ವ್ಯವಸ್ಥೆಮಾಡಲಾಗುವುದು. ಇಲ್ಲಿ ಲಕ್ಷಿಸಬೇಕಾದ ಇನ್ನೊಂದು ವಿಷಯವೇನೆಂದರೆ- ಅದ್ವೈತವೇದಾಂತದಲ್ಲಿ ಅಂಗೀಕರಿಸಲ್ಪಡುವ ನಿರ್ಗುಣಬ್ರಹ್ಮವು ನಿರ್ವಿಶೇಷವೆಂತಲೂ ಪ್ರತಿಪಾದಿಸಲ್ಪಡುತ್ತದೆ; ಆದರೆ ವೀರಶೈವಾಭಿಮತ ನಿರ್ಗುಣನಾದ ಪರಶಿವನು ನಿರ್ವಿಶೇಷನಲ್ಲ ಕಿಂತು ಸವಿಶೇಷನು. ಪರಶಿವನಿಷ್ಠವಾದ ಶಕ್ತಿಯು ಸಂಕೋಚಗೊಂಡಾಗ ಜ್ಞಾನಾದಿಗುಣಗಳ ವಿಕಾಸವಿಲ್ಲದಿರುವುದರಿಂದ ಪರಶಿವನು ನಿರ್ಗುಣನೆಂದು ಕರೆಯಲ್ಪಟ್ಟರೂ ಸೂಕ್ಷ್ಮವಾದ ಶಕ್ತಿಯಿಂದ ಯುಕ್ತನಾಗಿರುವುದರಿಂದ ಸವಿಶೇಷನೆಂತಲೇ ಸ್ವೀಕರಿಸಬೇಕು. ಆದ್ದರಿಂದ ಶ್ರೀ ಶಿವಯೋಗಿಶಿವಾಚಾರ್ಯರು-

ಪರಿಚ್ಛೇದಕಥಾಶೂನ್ಯಂ ಪ್ರಪಂಚಾತೀತವೈಭವಮ್।
ಪ್ರತ್ಯಕ್ಷಾದಿಪ್ರಮಾಣಾನಾಮಗೋಚರಪದೇ ಸ್ಥಿತಮ್।
ಸ್ವಪ್ರಕಾಶಂ ಪರಾಕಾಶಮನೌಪಮ್ಯಮನಾಮಯಮ್।
ಸರ್ವಜ್ಞಂ ಸರ್ವಗಂ ಶಾಂತಂ ಸರ್ವಶಕ್ತಿನಿರಂಕುಶಮ್॥[೧೮]

ಹೀಗೆ ನಿರ್ಗುಣಪರಶಿವನ ಸ್ವರೂಪವನ್ನು ಪ್ರತಿಪಾದಿಸುವಾಗ ಶಕ್ತಿಯುಕ್ತನನ್ನಾಗಿಯೇ ತಿಳಿಯಪಡಿಸಿದ್ದಾರೆ.

ಶಕ್ತಿವಿಶಿಷ್ಟ ಶಿವ :

ಪ್ರಪಂಚದ ಪ್ರತಿಯೊಂದು ವಸ್ತುಗಳಲ್ಲಿ ನಾವು ಒಂದಿಲ್ಲೊಂದು ಶಕ್ತಿಯನ್ನು ಕಾಣುತ್ತೇವೆ. ಹೀಗಿರುವಾಗ ಈ ಜಗತ್ತಿಗೆ ಕಾರಣೀಭೂತನಾದ ಶಿವನಾದರೂ ಶಕ್ತಿವಿಶಿಷ್ಟನಾಗಿರಲಿಕ್ಕೇ ಬೇಕು. ಹಾಗಾದರೆ ಶಿವನ ಆ ಶಕ್ತಿಯ ಸ್ವರೂಪವೇನು ಎಂಬ ಜಿಜ್ಞಾಸೆಯುಂಟಾದಾಗ "ತದೀಯಾ ಪರಮಾ ಶಕ್ತಿಃ ಸಚ್ಚಿದಾನಂದಲಕ್ಷಣಾ"[೧೯], "ಗುಣ ತ್ರಯಾತ್ಮಿಕಾ ಶಕ್ತಿರ್ಬ್ರಹ್ಮನಿಷ್ಠಾ ಸನಾತನೀ"[೨೦] ಎಂದು ಶಿವಯೋಗಿಶಿವಾಚಾರ್ಯರು ಶಕ್ತಿಯ ದ್ವಿವಿಧಸ್ವರೂಪವನ್ನು ಪ್ರತಿಪಾದಿಸಿದ್ದಾರೆ. ಇದರ ರಹಸ್ಯಾರ್ಥವೇನೆಂದರೆ- ಪರಶಿವನಿಷ್ಠವಾದ ಶಕ್ತಿಗೆ 'ಅವಿಭಾಗಪರಾಮರ್ಶೆ' ಮತ್ತು 'ವಿಭಾಗಪರಾಮರ್ಶೆ' ಎಂಬ ಎರಡು ಅವಸ್ಥೆಗಳುಂಟು. ಜಗದ್ವ್ಯಾಪಾರ ಇಲ್ಲದಿರುವ ಅವಸ್ಥೆಯೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವಿಭಾಗಪರಾಮರ್ಶಾವಸ್ಥೆ. ಈ ಅವಸ್ಥೆಯಲ್ಲಿ ಶಕ್ತಿಯು ಪರಶಿವನಂತೆ ಸಚ್ಚಿದಾನಂದಸ್ವರೂಪಿಣಿಯಾಗಿರುತ್ತಾಳೆ. ಇದಕ್ಕೆ ವಿಮರ್ಶಶಕ್ತಿ ಎಂತಲೂ ಕರೆಯುವರು. ಈ ಶಕ್ತಿಯ ಯೋಗದಿಂದಲೇ ಪರಶಿವನಿಗೆ ತನ್ನ ಸತ್-ಚಿತ್-ಆನಂದಸ್ವರೂಪದ ಬೋಧ ಉಂಟಾಗುತ್ತದೆ. ಆದ್ದರಿಂದ "ವಂದೇ ತಾಂ ಪರಮಾನಂದಪ್ರಬೋಧಲಹರಿಂ ಶಿವಾಂ"[೨೧] ಎಂದು ಆಚಾರ್ಯರು ಸ್ತುತಿಸಿದ್ದಾರೆ.

ಈ ವಿಮರ್ಶಶಕ್ತಿಯೇ ಜಗದುತ್ಪತ್ತಿ ಸಮಯದಲ್ಲಿ ಇಚ್ಛಾ, ಜ್ಞಾನ ಮತ್ತು ಕ್ರಿಯಾಶಕ್ತಿಗಳ ರೂಪದಲ್ಲಿ ವಿಭಕ್ತವಾಗಿ ಸತ್ವಾದಿ ತ್ರಿಗುಣಗಳಿಂದ ಕೂಡಿ 'ಮಾಯಾ' ಎಂದು ಕರೆಯಲ್ಪಡುತ್ತದೆ.

ಯಥಾ ಚಂದ್ರೇ ಸ್ಥಿರಾ ಜ್ಯೋತ್ಸ್ನಾ ವಿಶ್ವವಸ್ತುಪ್ರಕಾಶಿನೀ।
ತಥಾ ಶಕ್ತಿರ್ವಿಮರ್ಶಾಖ್ಯಾ ಪ್ರಕಾರೇ ಬ್ರಹ್ಮಣಿ ಸ್ಥಿರಾ॥[೨೨]

ಚಂದ್ರ ಹಾಗೂ ಚಂದ್ರಿಕೆಗಳಲ್ಲಿ ಅವಿನಾಭಾವದ ಸಂಬಂಧವಿರುವಂತೆ ಪರಶಿವ ಮತ್ತು ವಿಮರ್ಶಶಕ್ತಿಯರಲ್ಲಿ ಅವಿನಾಭಾವ ಸಂಬಂಧವಿದೆ. ಅದನ್ನೇ ಶ್ರೀ ಮರಿತೋಂಟದಾರ್ಯರು-

ನ ಶಿವೇನ ವಿನಾ ಶಕ್ತಿರ್ನ ಶಕ್ತಿರಹಿತಃ ಶಿವಃ।
ಪುಷ್ಪಗಂಧವದನ್ಯೋನ್ಯಂ ಮಾರುತಾಂಬರಯೋರಿವ॥[೨೩]

ಈ ರೀತಿಯಾಗಿ ಪುಷ್ಪಗಂಧಗಳ ಉದಾಹರಣೆಯಿಂದ ತಿಳಿಯಪಡಿಸಿದ್ದಾರೆ. ಶಿವ-ಶಕ್ತಿಯರ ಈ ಅವಿನಾಭಾವ ಸಂಬಂಧಕ್ಕೆ ಭೇದಾಭೇದ ಸಂಬಂಧವೆಂತಲೂ ಕರೆಯುತ್ತಾರೆ. ಸಚ್ಚಿದಾನಂದರೂಪಿಣಿಯಾದ ವಿಮರ್ಶಶಕ್ತಿಯು ಜಗದುತ್ಪತ್ತಿ ಸಮಯದಲ್ಲಿ ಸತ್ವಾದಿ ತ್ರಿಗುಣಗಳಿಂದ ಯುಕ್ತಳಾಗಿ ಮಹಾಮಾಯಾ, ಪರಾಮಾಯಾ ಮತ್ತು ಉರ್ಧ್ವಮಾಯಾ ಮುಂತಾದ ಹೆಸರುಗಳನ್ನು ಪಡೆಯುವಳು. ಈ ಮಾಯಾಶಕ್ತಿಯಿಂದ ಕೂಡಿದಾಗ ಪರಶಿವನು 'ಮಹೇಶ್ವರ' ನೆನಿಸಿಕೊಳ್ಳುವನು. ಪರಶಿವ ಸಂಬಂಧಿನಿಯಾದ ಈ ಮಾಯೆಯು ಶುದ್ಧಸತ್ವಗುಣಪ್ರಧಾನವಾಗಿರುವುದರಿಂದ ಮಹೇಶ್ವರನಲ್ಲಿ ಸ್ವರೂಪದ ಬಗ್ಗೆ ಮೋಹಾದಿಗಳನ್ನುಂಟುಮಾಡದೇ ಸರ್ವಜ್ಞತ್ವಾದಿ ಉತ್ಕೃಷ್ಟಗುಣಗಳನ್ನೇ ಸಂಪಾದಿಸುತ್ತದೆ. ಅಂತೆಯೇ ಶಿವಯೋಗಿ ಶಿವಾಚಾರ್ಯರು-

ಉಪಾಧಿಃ ಪುನರಾಖ್ಯಾತಃ ಶುದ್ಧಾಶುದ್ಧವಿಭೇದತಃ।
ಶುದ್ಧೋಪಾಧಿಃ ಪರಾಮಾಯಾ ಸ್ವಾಶ್ರಯಾಽಮೋಹಕಾರಿಣೀ॥
ಮಯಾಽಶಕ್ತಿವಶಾದೀಶೋ ನಾನಾಮೂರ್ತಿಧರಃ ಪ್ರಭುಃ॥
ಸರ್ವಜ್ಞಃ ಸರ್ವಕರ್ತಾ ಚ ನಿತ್ಯಮುಕ್ತೋ ಮಹೇಶ್ವರಃ॥[೨೪]

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ರೀತಿಯಾಗಿ ಶುದ್ಧೋಪಾಧಿಯಾದ ಮಾಯೆಯ ಸ್ವರೂಪವನ್ನು ತಿಳಿಸಿ, ಮಾಯಾಶಕ್ತಿಯುಕ್ತನಾದ ಮಹೇಶ್ವರನೇ ಸರ್ವಜ್ಞತ್ವ- ಸರ್ವಕರ್ತೃತ್ವಾದಿ ಉತ್ಕೃಷ್ಟಗುಣಗಳುಳ್ಳವನಾಗಿ ಜಗತ್ತಿನ ಸೃಷ್ಟಿ-ಸಂಹಾರಾದಿ ಪಂಚಕೃತ್ಯಗಳನ್ನು ನಿರ್ವಹಿಸುವನೆಂಬುವುದನ್ನೂ-

ಶಿವಾಭಿದಂ ಪರ ಬ್ರಹ್ಮ ಜಗನ್ನಿರ್ಮಾತುಮಿಚ್ಛಯಾ।
ಸ್ವರೂಪಮಾದಧೇ ಕಿಂಚಿತ್ಸುಖಸ್ಫೂರ್ತಿವಿಜೃಂಭಿತಮ್॥
ವಿಶುದ್ಧಜ್ಞಾನಕರಣಂ ವಿಷಯಂ ಸರ್ವಯೋಗಿನಾಮ್।
ಕೋಟಿಸೂರ್ಯಪ್ರತೀಕಾಶಂ ಚಂದ್ರಕೋಟಿಸಮಪ್ರಭಮ್॥
ಅಪ್ರಾಕೃತಗುಣಾಧಾರಮನಂತಮಹಿಮಾಸ್ಪದಂ।[39]

ಹೀಗೆ ಸ್ಪಷ್ಟಪಡಿಸಿದ್ದಾರೆ. ಸೃಷ್ಟಿಯ ವೈಚಿತ್ರ್ಯದ ವ್ಯವಸ್ಥೆಗಾಗಿ ಪ್ರಾಣಿಗಳ ಅದೃಷ್ಟವನ್ನು ಅವಶ್ಯವಾಗಿ ಸ್ವೀಕರಿಸಬೇಕಾದ್ದರಿಂದ, ಆ ಅದೃಷ್ಟದಿಂದಲೇ ಸೃಷ್ಟಿಯಾಗಲಿ ಈಶ್ವರನ ಆವಶ್ಯಕತೆ ಏನು? ಎಂಬ ಜಿಜ್ಞಾಸೆಯುಂಟಾಗಬಹುದು. ಆದರೆ ಪ್ರಾಣಿಗಳ ಅದೃಷ್ಟಗಳು ಜಡಗಳಾದ್ದರಿಂದ ಅವುಗಳಲ್ಲಿ ಸ್ವತಃ ಕ್ರಿಯೆ ಸಂಭವಿಸಲಾರದು. ಆ ಕರ್ಮಗಳಿಗೆ ಪ್ರೇರಣಾಶಕ್ತಿಯನ್ನು ಕೊಡುವುದಕ್ಕಾಗಿ ಪ್ರೇರಕನಾದ ಈಶ್ವರನನ್ನು ಸ್ವೀಕರಿಸಬೇಕಾಗುವುದು.

ಏತೇಷಾಂ ದೇಹಿನಾಂ ಸಾಕ್ಷೀ ಪ್ರೇರಕಃ ಪರಮೇಶ್ವರಃ।
ಏತೇಷಾಂ ಭ್ರಮತಾಂ ನಿತ್ಯಂ ಕರ್ಮಯಂತ್ರನಿಯಂತ್ರಣೇ।
ದೇಹಿನಾಂ ಪ್ರೇರಕಃ ಶಂಭುರ್ಹಿತಮಾರ್ಗೋಪದೇಶಕಃ।
ಪುನರಾವೃತ್ತಿರಹಿತಮೋಕ್ಷಮಾರ್ಗೋಪದೇಶಕಃ॥[3-]

ಸಿದ್ಧಾಂತಶಿಖಾಮಣಿಯ ಈ ವಚನಾನುಸಾರವಾಗಿ ಮಹೇಶ್ವರನು ಕರ್ಮಪ್ರೇರಕನಲ್ಲದೇ ಮೋಕ್ಷಮಾರ್ಗೋಪದೇಶಕನೂ ಆಗಿರುತ್ತಾನೆ.

ಸೃಷ್ಟಿಯು ಶಿವನಲೀಲೆಯು :

ತನ್ನ ಯಾವದಾದರೊಂದು ಪ್ರಯೋಜನಸಿದ್ಧಿಗಾಗಿ ಮಹೇಶ್ವರನು ಸೃಷ್ಟ್ಯಾದಿಯಲ್ಲಿ ಪ್ರವೃತ್ತನಾದದ್ದಾದರೆ ಆತನ ನಿತ್ಯತೃಪ್ತತ್ವಕ್ಕೆ ಭಂಗ ಬರುತ್ತದೆ. ಪ್ರಯೋಜನವಿಲ್ಲದೇ ಪ್ರವೃತ್ತನಾದದ್ದಾದರೆ ಆತನು ಉನ್ಮತ್ತನೆಂದು ಸಿದ್ಧವಾಗುತ್ತದೆ ಎಂಬ ಉಭಯಪಾಶಾರಜ್ಜು ದೋಷನಿವೃತ್ತಿಗಾಗಿ ಸೃಷ್ಟ್ಯಾದಿ ವ್ಯವಹಾರಗಳು ಶಿವನ ಲೀಲೆ ಎಂಬುದಾಗಿ ವೀರಶೈವಾಚಾರ್ಯರು ಪ್ರತಿಪಾದಿಸಿದ್ದಾರೆ. "ಅಲ್ಪಾಯಾಸಸಾಧ್ಯಾ ವಿಧೇಯನಿಷ್ಪತ್ತಿ ಮಾತ್ರಫಲಿಕಾ ಕರ್ತುರುದ್ದೇಶಸ್ಯಾಸಾಧಿಕಾ ಹಿ ಕ್ರಿಯಾ ಲೀಲಾಪದಾರ್ಥ" ಅಂದರೆ ಕರ್ತೃವಿನ ಯಾವುದೇ ಪ್ರಯೋಜನವಿಲ್ಲದಿರುವ, ಅಲ್ಪಾಯಾಸದಿಂದ ಸಾಧ್ಯವಾಗುವ ಕ್ರಿಯೆಗೆ "ಲೀಲೆ" ಎನ್ನುತ್ತಾರೆ. ಕಾರಣ-

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸ್ವೇಚ್ಛಾವಿಗ್ರಹಯುಕ್ತಾಯ ಸ್ವೇಚ್ಛಾವರ್ತನವರ್ತಿನೇ।
ಸ್ವೇಚ್ಛಾಕೃತತ್ರಿಲೋಕಾಯ ನಮಃ ಸಾಂಬಾಯ ಶಂಭವೇ॥[೨೭]
ನಾನಾಮಾರ್ಗಸಮಾರೂಢಾ ನಾನಾಸಂಕಲ್ಪಕಾರಿಣಃ।
ಅಸ್ವತಂತ್ರಾಶ್ಚ ಕಿಂಚಿಜ್‌ಜ್ಞಾಃ ಕಿಂಚಿತ್ ಕರ್ತೃತ್ವಹೇತವಃ॥
ಲೀಲಾಭಾಜನತಾಂ ಪ್ರಾಪ್ತಾಃ ಶಿವಸ್ಯ ಪರಮಾತ್ಮನಃ॥[೨೮]

ಎಂಬುದಾಗಿ ಶ್ರೀ ಶಿವಯೋಗಿ ಶಿವಾಚಾರ್ಯರು ಶಿವನ ಇಚ್ಛಾಮಾತ್ರದಿಂದ ಜಗನ್ನಿರ್ಮಾಣವನ್ನು ತಿಳಿಸಿ ಅದು ಶಿವನಲೀಲೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಈಶ್ವರನ ಸಗುಣತ್ವ – ನಿರ್ಗುಣತ್ವ ಸಮೀಕ್ಷೆ :

ನ್ಯಾಯ -ವೈಶೇಷಿಕ ದರ್ಶನಗಳಲ್ಲಿ ಈಶ್ವರನು ಒಂದು ದ್ರವ್ಯವೆಂಬುದಾಗಿ ಪರಿಗಣಿಸಲ್ಪಟ್ಟಿದ್ದಾನೆ.[೨೯] "ಗುಣ-ಕ್ರಿಯಾವತ್ವಂ ದ್ರವ್ಯಸಾಮಾನ್ಯಲಕ್ಷಣಂ" ಎಂಬ ವಚನಾನುಸಾರವಾಗಿ ದ್ರವ್ಯರೂಪನಾದ ಈಶ್ವರನಾದರೂ ಸರ್ವಜ್ಞತ್ವಾದಿ ನಿತ್ಯಗುಣಾಶ್ರಯನು. ಆದ್ದರಿಂದ ಈ ದರ್ಶನಗಳಲ್ಲಿ ಈಶ್ವರನು ಸದಾ ಸಗುಣನೇ.... ಯೋಗದರ್ಶನದಲ್ಲಿಯಾದರೂ "ಕ್ಲೇಶಕರ್ಮವಿಪಾಕಾಶಯೈರಪರಾಮೃಷ್ಟಪುರುಷವಿಶೇಷ ಈಶ್ವರಃ"[೩೦] ಅಂದರೆ ಅವಿದ್ಯಾದಿ ಪಂಚಕ್ಲೇಶರಹಿತನೂ, ಸರ್ವಜ್ಞತ್ವಾದಿ ಉತ್ಕೃಷ್ಟಗುಣವುಳ್ಳವನೂ ಆದ ಪುರುಷವಿಶೇಷನೇ ಈಶ್ವರನೆಂದು ಸ್ವೀಕರಿಸಿರೋಣದರಿಂದ ಈ ದರ್ಶನದಲ್ಲಿಯಾದರೂ ಈಶ್ವರನು ಸಗುಣಮಾತ್ರನು. ಅದ್ವೈತವೇದಾಂತದಲ್ಲಿ ಮಾಯಾಶಬಲಿತವಾದ ಬ್ರಹ್ಮಕ್ಕೆ ಸಗುಣನೆಂತಲೂ ಶುದ್ಧಬ್ರಹ್ಮಕ್ಕೆ ನಿರ್ಗುಣನೆಂತಲೂ ಸ್ವೀಕರಿಸಿದ್ದಾರೆ. ವೀರಶೈವ ದರ್ಶನದಲ್ಲಿ ಅವಿಭಾಗಪರಾಮರ್ಶದಶಾಪನ್ನ ಚಿಚ್ಛಕ್ತಿಯುಕ್ತನಾದ ಪರಶಿವನು ಸಗುಣನು, ವಿಭಾಗಪರಾಮರ್ಶದಶಾಪನ್ನ ಸತ್ವಾದಿತ್ರಿಗುಣಾತ್ಮಕ ಮಾಯಾಶಕ್ತಿಯುಕ್ತನಾದ ಪರಶಿವನು ಸಗುಣನೆಂದು ವ್ಯವಸ್ಥೆಗೊಳಿಸಲಾಗಿದೆ.

ಇಲ್ಲಿ ವಿಚಾರಿಸಲ್ಪಟ್ಟ ಎಲ್ಲ ದರ್ಶನಗಳಲ್ಲಿ ಈಶ್ವರನು ಸಗುಣನು ಎಂಬ ವಿಷಯದಲ್ಲಿ ಐಕ್ಯಮತ್ಯ ಕಂಡುಬಂದರೂ ಆತನು ದ್ರವ್ಯವಾದ್ದರಿಂದ ಸಗುಣನು ಎಂದು ಹೇಳುವ ನ್ಯಾಯ-ವೈಶೇಷಿಕ ದರ್ಶನಗಳಿಗಿಂತಲೂ ಸ್ವಾಭಾವಿಕ ವಿಲಕ್ಷಣಶಕ್ತಿಯುಕ್ತನಾದ್ದರಿಂದ ಸಗುಣನೆಂದು ಪ್ರತಿಪಾದಿಸುವ ಯೋಗ-ಅದ್ವೈತವೇದಾಂತ ಮತ್ತು ವೀರಶೈವದರ್ಶನಗಳು ಉತ್ಕೃಷ್ಟಗಳಾಗಿ ತೋರುತ್ತವೆ. ಯೋಗದರ್ಶನದಲ್ಲಿ ಯಾವದೊಂದು ಉಪಾಧಿಯಿಂದ ಈಶ್ವರನು ಸಗುಣನಲ್ಲ ಆತನು ಸ್ವಭಾವತಃ ಸಗುಣನು.

ಅದ್ವೈತವೇದಾಂತ ಮತ್ತು ವೀರಶೈವ ದರ್ಶನಗಳಲ್ಲಿ ಮಾಯಾಸಂಬಂಧದಿಂದ ಈಶ್ವರನು ಸಗುಣನೆಂದು ಸ್ವೀಕರಿಸಲ್ಪಟ್ಟಿದ್ದಾನೆ. ಆದರೆ ಅದ್ವೈತವೇದಾಂತಿಗಳು "ಯಾ ಮಾ ಸಾ ಮಾಯಾ" ಎಂಬ ವ್ಯುತ್ಪತ್ತಿಯ ಮೇರೆಗೆ ಈಶ್ವರೋಪಾಧಿಯಾದ ಮಾಯೆಯು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅನಿರ್ವಚನೀಯವೂ ಮಿಥ್ಯಾಸ್ವರೂಪವೂ ಆಗಿದೆ. ಇಂತಹ ಮಾಯೆಯೊಂದಿಗೆ ಬ್ರಹ್ಮನ ಆಧ್ಯಾಸಿಕ ಸಂಬಂಧವನ್ನು ಹೇಳಿ ಅವರು ಮಿಥ್ಯಾಮಾಯೋಪಾಧಿಯಿಂದ ಪ್ರಾಪ್ತವಾದ ಈಶ್ವರನ ಸಗುಣಸ್ವರೂಪವಾದರೂ ಮಿಥ್ಯಾ ಎಂದು ಪ್ರತಿಪಾದಿಸುತ್ತಾರೆ.

ವೀರಶೈವ ದರ್ಶನದಲ್ಲಿ-

ಮಂ ಶಿವಂ ಪರಮಂ ಬ್ರಹ್ಮ ಪ್ರಾಪ್ನೋತೀತಿ ಸ್ವಭಾವತಃ।
ಮಾಯೇತಿ ಪ್ರೋಚ್ಯತೇ ಲೋಕೇ ಬ್ರಹ್ಮನಿಷ್ಠಾ ಸನಾತನೀ॥

ಎನ್ನುವ ಸಿದ್ಧಾಂತಾಗಮದ ವಚನಾನುಸಾರವಾಗಿ "ಮಂ=ಶಿವಂ, ಅಯತಿ=ಸ್ವಭಾವತಃ ಪ್ರಾಪ್ನೋತೀತಿ ಮಾಯಾ" ಎಂಬ ವ್ಯುತ್ಪತ್ತಿಗನುಸಾರವಾಗಿ ಮಾಯೆಯ ನಿತ್ಯತ್ವವನ್ನು ಶಿವನೊಂದಿಗೆ ನಿತ್ಯಸಂಬಂಧವನ್ನು ಸ್ವೀಕರಿಸಿ ಮಾಯಾಶಕ್ತಿವಿಶಿಷ್ಟನಾದ ಸಗುಣ ಈಶ್ವರನನ್ನು ಸತ್ಯನನ್ನಾಗಿ ಅಂಗೀಕರಿಸಿದ್ದಾರೆ. ಅದ್ವೈತವೇದಾಂತದ ಪ್ರಕಾರ ನಿರ್ಗುಣಬ್ರಹ್ಮವೇ ಸತ್ಯ, ಸಗುಣಪರಮಾತ್ಮನು ಮಿಥ್ಯಾ ಎಂಬುದಾಗಿ ಸ್ವೀಕರಿಸಿದ್ದಾದರೆ "ತದೈಕ್ಷತ ಬಹುಸ್ಯಾಂ ಪ್ರಜಾಯೇಯ"[೨೧], "ಸ ಈಕ್ಷಾಂಚಕ್ರೇ"[೨೨] ಇತ್ಯಾದಿ ಈಶ್ವರನ ಸಗುಣತ್ವಪ್ರತಿಪಾದಕ ಶ್ರುತಿಗಳಿಗೆ ವೈಯರ್ಥ್ಯದೋಷ ಪ್ರಾಪ್ತವಾಗುತ್ತದೆ. ಇದೂ ಅಲ್ಲದೇ-

ಚಂದ್ರಾರ್ಧಶೇಖರಂ ಶುದ್ಧಂ ಶುದ್ಧಸ್ಫಟಿಕಸನ್ನಿಭಮ್।
ಶುದ್ಧಮುಕ್ತಾಫಲಾಭಾಸಮುಪಾಸ್ಯಂ ಗುಣಮೂರ್ತಿಭಿಃ॥[೨೩]

ಎಂಬ ಪ್ರಮಾಣದಂತೆ ಉಪಾಸಕರ ಅನುಗ್ರಹಕ್ಕಾಗಿ ಪರಮಾತ್ಮನು ಸಗುಣಸ್ವರೂಪವನ್ನು ಧರಿಸುತ್ತಾನೆಂಬುದು ತಿಳಿದುಬರುತ್ತದೆ. ಒಂದು ವೇಳೆ ಉಪಾಸ್ಯವಾದ ಸಗುಣಮೂರ್ತಿಯು ಮಿಥ್ಯಾ ಆದದ್ದಾದರೆ ಉಪಾಸಕರಲ್ಲಿ ಶ್ರದ್ಧೆಯೇ ಉತ್ಪನ್ನವಾಗಲಾರದು. ಕೊನೆಯಲ್ಲಿ ಭಕ್ತಿ ಸಿದ್ಧಾಂತವೇ ವ್ಯರ್ಥವಾಗುವ ಪ್ರಸಂಗ ಬಂದೊದಗುವುದು. ಆದ್ದರಿಂದ ಆಸ್ತಿಕ ದರ್ಶನಗಳಲ್ಲಿ ಅಂಗೀಕರಿಸಿದ ಈಶ್ವರನ ಸಗುಣಸ್ವರೂಪದ ವಿಷಯದಲ್ಲಿ ವೀರಶೈವ ಪಕ್ಷವೇ ಭಕ್ತ- ಮುಮುಕ್ಷುಗಳಿಂದ ಸ್ವೀಕಾರಾರ್ಹವೆಂಬುದು ನಿರ್ವಿವಾದವು.

ಈಶ್ವರನ ನಿತ್ಯಮುಕ್ತತ್ವಸಮೀಕ್ಷೆ :

ನ್ಯಾಯದರ್ಶನದಲ್ಲಿ ಇಪ್ಪತ್ತೊಂದು ದುಃಖಗಳ ನಿವೃತ್ತಿಯೇ ಮುಕ್ತಿ ಎಂದು ಸ್ವೀಕರಿಸಿದ್ದಾರೆ.[೨೪] ದುಃಖಗಳಿಗೆ ಕಾರಣವಾದದ್ದು ಮಿಥ್ಯಾಜ್ಞಾನವು. ಈಶ್ವರನಲ್ಲಿ ಮಿಥ್ಯಾಜ್ಞಾನವೇ ಇಲ್ಲದ ಕಾರಣ ದುಃಖಗಳ ಪ್ರಾಪ್ತಿಯೇ ಅವನಿಗಿಲ್ಲವಾದ್ದರಿಂದ ನ್ಯಾಯಶಾಸ್ತ್ರಾನುಸಾರವಾಗಿ ಈಶ್ವರನು ನಿತ್ಯಮುಕ್ತನು. ವೈಶೇಷಿಕ ದರ್ಶನದಲ್ಲಿ ಬುದ್ಧಿ-ಸುಖ-ದುಃಖ-ಇಚ್ಛಾ-ದ್ವೇಷ-ಪ್ರಯತ್ನ- ಧರ್ಮ-ಅಧರ್ಮ ಮತ್ತು ಸಂಸ್ಕಾರಗಳೆಂಬ ಒಂಬತ್ತು ವಿಶೇಷಗುಣಗಳ ನಿವೃತ್ತಿಯೇ ಮುಕ್ತಿ ಎಂದು ಸ್ವೀಕರಿಸಿದ್ದಾರೆ. ಈ ವಿಶೇಷಗುಣಗಳು ಈಶ್ವರನಲ್ಲಿ ಇಲ್ಲದ ಕಾರಣ ವೈಶೇಷಿಕ ವಿಚಾರದಂತೆಯೂ ಈಶ್ವರನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿತ್ಯಮುಕ್ತನು. ಯೋಗದರ್ಶನದಲ್ಲಿಯಾದರೂ ಮುಕ್ತಪುರುಷ, ಪ್ರಕೃತಿ ಲೀನಪುರುಷ ಮತ್ತು ಪುರುಷ ವಿಶೇಷ ಎಂದು ತ್ರಿವಿಧಪುರುಷರನ್ನಂಗೀಕರಿಸಿ ಮುಕ್ತಪುರುಷನಿಗೆ ಪೂರ್ವದ ಬಂಧನವನ್ನು ಪ್ರಕೃತಿಲೀನರಿಗೆ ಉತ್ತರಕಾಲಿಕ ಬಂಧನವನ್ನು ಒಪ್ಪಿದರೂ ಪುರುಷವಿಶೇಷನಿಗೆ ಬಂಧನವೇ ಇಲ್ಲವೆಂಬುದಾಗಿ ಪ್ರತಿಪಾದಿಸಿದ್ದಾರೆ. ಆದಕಾರಣ ಈದರ್ಶನದಲ್ಲಿಯೂ ಪುರುಷವಿಶೇಷನಾದ ಈಶ್ವರನು ನಿತ್ಯಮುಕ್ತನೇ ಆಗಿದ್ದಾನೆ.[೨೫]

ಅದ್ವೈತವೇದಾಂತದಲ್ಲಿ ಈಶ್ವರನಿಗೆ ಉಪಾಧಿಯಾದ ಮಾಯೆಯು ಶುದ್ಧ ಸತ್ವಗುಣ ಪ್ರಧಾನವಾಗಿರುವುದರಿಂದ ಈಶ್ವರನಿಗೆ ಸ್ವರೂಪಾವರಣ ಸಂಭವಿಸದ ಕಾರಣ ಈ ದರ್ಶನದಲ್ಲಿಯೂ ಈಶ್ವರನು ನಿತ್ಯಮುಕ್ತನೇ. ಅದರಂತೆ ವೀರಶೈವದರ್ಶನದಲ್ಲಿ-

ಉಪಾಧಿಃ ಪುನರಾಖ್ಯಾತಃ ಶುದ್ಧಾಽಶುದ್ಧವಿಭೇದತಃ।
ಶುದ್ಧೋಪಾಧಿಃ ಪರಾ ಮಾಯಾ ಸ್ವಾಶ್ರಯಾಽಮೋಹಕಾರಿಣೀ।
ಮಾಯಾಶಕ್ತಿವಶಾದೀಶೋ ನಾನಾಮೂರ್ತಿಧರಃ ಪ್ರಭುಃ।
ಸರ್ವಜ್ಞಃ ಸರ್ವಕರ್ತಾಚ ನಿತ್ಯಮುಕ್ತೋ ಮಹೇಶ್ವರಃ॥[೨೬]

ಎಂಬ ಸಿದ್ಧಾಂತಶಿಖಾಮಣಿಯ ಪ್ರಮಾಣಾನುಸಾರವಾಗಿ ಶುದ್ಧ ಮಾಯಾಶಕ್ತಿಯುಕ್ತನಾದ ಮಹೇಶ್ವರನು ನಿತ್ಯಮುಕ್ತನೆಂಬುದಾಗಿಯೇ ಸ್ವೀಕರಿಸಲಾಗಿದೆ. ಹೀಗೆ ಸಗುಣನಾದ ಈಶ್ವರನ ನಿತ್ಯಮುಕ್ತತ್ವ ವಿಷಯದಲ್ಲಿ ವೈದಿಕ ಷಡ್‌ದರ್ಶನಗಳ ಮತ್ತು ವೀರಶೈವ ದರ್ಶನದ ವಿಚಾರದಲ್ಲಿ ವೈಮತ್ಯವಿಲ್ಲವೆಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ.

ಈಶ್ವರನ ಸೃಷ್ಟಿಕಾರಣತ್ವಸಮೀಕ್ಷೆ :

ಯಾವದೊಂದು ಕಾರ್ಯದ ಉತ್ಪತ್ತಿಯಾಗಬೇಕಾದರೆ ಉಪಾದಾನ ಮತ್ತು ನಿಮಿತ್ತಕಾರಣಗಳೆಂದು ಉಭಯವಿಧ ಕಾರಣಗಳನ್ನು ದಾರ್ಶನಿಕರು ಸ್ವೀಕರಿಸುತ್ತಾರೆ. ಅದರಂತೆ ಜಗತ್ತಿನ ಉತ್ಪತ್ತಿವಿಷಯದಲ್ಲಿ ನೈಯಾಯಿಕ- ವೈಶೇಷಿಕರು ಈಶ್ವರನನ್ನು ನಿಮಿತ್ತನೆಂತಲೂ, ಪರಮಾಣುಗಳನ್ನು ಉಪಾದಾನವೆಂತಲೂ ಸ್ವೀಕರಿಸುತ್ತಾರೆ. ಅದರಂತೆ ಸೇಶ್ವರಸಾಂಖ್ಯ ಮತ್ತು ಯೋಗದಾರ್ಶನಿಕರಾದರೂ ಪ್ರಕೃತಿ-ಪುರುಷರ ಸಂಯೋಗಕ್ಕೆ ಈಶ್ವರನ ಸಂಕಲ್ಪವೇ ಕಾರಣವಾದ್ದರಿಂದ ಜಗದುತ್ಪತ್ತಿಯಲ್ಲಿ ಈಶ್ವರನು ನಿಮಿತ್ತಕಾರಣನೆಂತಲೇ ಸ್ವೀಕರಿಸಿದ್ದಾರೆ.[೨೭] ಆದರೆ ಅದ್ವೈತವೇದಾಂತ ಮತ್ತು ವೀರಶೈವದರ್ಶನದಲ್ಲಿ "ಯಥೋರ್ಣನಾಭಿಃ ಸೃಜತೇ ಗೃಹ್ಣತೇ ಚ"[೨೮] ಎಂಬ ಶ್ರುತಿ ಪ್ರಮಾಣಾನುಸಾರವಾಗಿ ಜಗದುತ್ಪತ್ತಿಯಲ್ಲಿ ಈಶ್ವರನು ಅಭಿನ್ನನಿಮಿತ್ತೋಪಾದಾನ ಕಾರಣನೆಂದು ಸ್ವೀಕರಿಸಲಾಗಿದೆ. ಹೀಗೆ ಜಗದುತ್ಪತ್ತಿಯಲ್ಲಿ ಈಶ್ವರನು ಅಭಿನ್ನನಿಮಿತ್ತೋ-ಪಾದಾನಕಾರಣನೆಂಬ ವಾದದಲ್ಲಿ ಅದ್ವೈತವೇದಾಂತಕ್ಕೂ ವೀರಶೈವ ದರ್ಶನಕ್ಕೂ ಆಪಾತತಃ ಸಾಮ್ಯತೆ ಕಂಡುಬಂದರೂ, ಅದ್ವೈತ ವೇದಾಂತದಲ್ಲಿ ಮಾಯೋಪಹಿತನಾದ ಈಶ್ವರನು ಮಿಥ್ಯಾರೂಪನಾದ್ದರಿಂದ ಅವನಿಂದ ಉತ್ಪನ್ನವಾದ ಜಗತ್ತಾದರೂ ಮಿಥ್ಯಾ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂಬುದಾಗಿಯೇ ಸ್ವೀಕರಿಸಲ್ಪಟ್ಟಿದೆ. ಆದರೆ ವೀರಶೈವದರ್ಶನದಲ್ಲಿ ಪರಶಿವನ ಸಗುಣಸ್ವರೂಪನಾದ ಮಹೇಶ್ವರನು ಸತ್ಯನೂ ಅವನಿಂದ ಉತ್ಪನ್ನವಾದ ಜಗತ್ತಾದರೂ-

ಪತ್ರಶಾಖಾದಿರೂಪೇಣ ಯಥಾ ತಿಷ್ಠತಿ ಪಾದಪಃ।
ತಥಾ ಭೂಮ್ಯಾದಿರೂಪೇಣ ಶಿವ ಏಕೋ ವಿರಾಜತೇ॥[೭೮]

ಎಂಬ ಪ್ರಮಾಣಾನುಸಾರವಾಗಿ ಶಿವಸ್ವರೂಪವಾದ್ದರಿಂದ ಶಿವನಂತೆ ಜಗತ್ತಾದರೂ ಸತ್ಯವೆಂಬುದಾಗಿ ಸ್ವೀಕರಿಸಲ್ಪಟ್ಟಿದೆ. ಇದೊಂದು ಈ ದರ್ಶನದ ವೈಶಿಷ್ಟ್ಯವು.

ವೈಷಮ್ಯ-ನೈರ್ಘೃಣ್ಯದೋಷಪರಿಹಾರಸಮೀಕ್ಷೆ :

ಈಶ್ವರ ನಿರ್ಮಿತವಾದ ಜಗತ್ತಿನ ವಿಷಮತೆಯನ್ನು ಕಂಡಾಗ ಈಶ್ವರನ ಮೇಲೆ ಪಕ್ಷಪಾತ ದೋಷವನ್ನು ಹೊರಿಸುವುದು ಸಹಜ. ಅನೇಕ ಕಲ್ಯಾಣ ಗುಣಗಣಸಮನ್ವಿತನಾದ ಈಶ್ವರನಲ್ಲಿ ಇಂತಹ ದೋಷಗಳು ಇರಲಾರವು. ಹಾಗಾದರೆ ವಿಶ್ವವೈಷಮ್ಯಕ್ಕೆ ಕಾರಣವೇನು ಎಂಬ ಜಿಜ್ಞಾಸೆಯುಂಟಾದಾಗ ಪ್ರಾಣಿಗಳ ಅದೃಷ್ಟವೇ ಕಾರಣವೆಂಬುದಾಗಿ ನ್ಯಾಯ-ವೈಶೇಷಿಕ, ಯೋಗ ಮತ್ತು ಅದ್ವೈತ ವೇದಾಂತಿಗಳು ಒಪ್ಪಿದ್ದಾರೆ.[೭೯] ಅದೇ ಪ್ರಕಾರ -

ಚಕ್ರನೇಮಿಕ್ರಮೇಣೈವ ಭ್ರಮಂತಿ ಹಿ ಶರೀರಿಣಃ।
ಜಾತ್ಯಾಯುರ್ಭೋಗವೈಷಮ್ಯಕಾರಣಂ ಕರ್ಮಕೇವಲಮ್।
ಏತೇಷಾಂ ದೇಹಿನಾಂ ಸಾಕ್ಷೀ ಪ್ರೇರಕಃ ಪರಮೇಶ್ವರಃ॥
ಏತೇಷಾಂ ಭ್ರಮತಾಂ ನಿತ್ಯಂ ಕರ್ಮಯಂತ್ರನಿಯಂತ್ರಣೇ॥[೮೦]

ಹೀಗೆ ಶಿವಯೋಗಿ ಶಿವಾಚಾರ್ಯರಾದರೂ ಆಕ್ಷೇಪಿಸುವ ವೈಷಮ್ಯ- ನೈರ್ಘೃಣ್ಯ ದೋಷಗಳನ್ನು ಪರಿಹರಿಸಿದ್ದಾರೆ. ಪ್ರಪಂಚದ ವಿಷಮತೆಗೆ ಪ್ರಾಣಿಗಳ ಅದೃಷ್ಟವೇ ಕಾರಣವೆಂದು ಹೇಳಿ ಈಶ್ವರನ ಮೇಲೆ ಈ ವಿಷಯದಲ್ಲಿ ನ್ಯಾಯ, ವೈಶೇಷಿಕ, ಯೋಗ, ಅದ್ವೈತವೇದಾಂತ ಮತ್ತು ವೀರಶೈವ ದರ್ಶನಗಳ ವಿಚಾರವು ಸಮಾನವಾಗಿದೆ. ನೀರಿಶ್ವರ ಸಾಂಖ್ಯರು ಮತ್ತು ಮೀಮಾಂಸಕರು ಜಗದುತ್ಪತ್ತಿಗೆ ಈಶ್ವರನನ್ನು ಒಪ್ಪಿದರೆ ಅವನು ಶರೀರಧಾರಿಯೋ ಅಶರೀರಿಯೋ? ವೈಷಮ್ಯಾದಿಗುಣ ಉಳ್ಳವನೋ ಇಲ್ಲದವನೋ? ಪ್ರಯೋಜನಕ್ಕಾಗಿ ಪ್ರವೃತ್ತಿಯೋ ನಿಷ್ಪ್ರಯೋಜನ ಪ್ರವೃತ್ತಿಯೋ? ಇತ್ಯಾದಿ ಹಲವು ಸಮಸ್ಯೆಗಳು ಪ್ರಾದುರ್ಭವಿಸುವ ಕಾರಣ ಈಶ್ವರನೇ ಬೇಡವೆಂಬ ತಮ್ಮ ಪಕ್ಷವನ್ನು ಪ್ರತಿಪಾದಿಸುತ್ತಾರೆ. ಭಿಕ್ಷುಕರು ಬರುವರೆಂಬ ಭಯದಿಂದ ಅಡಿಗೆಯನ್ನು ಮಾಡದೇ ಉಪವಾಸ ಇರುವವರ ವಿಚಾರದಂತೆ ಸಮಸ್ಯೆಗಳಿಗೆ ಅಂಜಿ ಈಶ್ವರನನ್ನೇ ಒಪ್ಪದಿರುವ ಇವರ ವಿಚಾರವು ತರ್ಕಸಮ್ಮತವಾದದ್ದಲ್ಲ.

ವೇದಾಗಮ ಪ್ರಾಮಾಣ್ಯಸಮೀಕ್ಷೆ :

ಭಾರತೀಯ ದಾರ್ಶನಿಕರು ವೇದಾಗಮಗಳ ಪ್ರಾಮಾಣ್ಯವನ್ನು ಪೌರುಷೇಯತ್ವ ಮತ್ತು ಅಪೌರುಷೇಯತ್ವ ವಾದಗಳಿಂದ ಸಿದ್ಧಮಾಡುತ್ತಾರೆ. ನ್ಯಾಯ, ವೈಶೇಷಿಕ ಮತ್ತು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯೋಗದರ್ಶನಗಳಲ್ಲಿ ಈಶ್ವರೋಚ್ಚರಿತವಾದ್ದರಿಂದ ವೇದಗಳು ಪೌರುಷೇಯಗಳು ಹಾಗೂ ಪ್ರಾಮಾಣಿಕಗಳೆಂದು ಸ್ವೀಕರಿಸುತ್ತಾರೆ.[೪೨] ವೀರಶೈವ ದರ್ಶನದಲ್ಲಿಯಾದರೂ-

> ಸದ್ಯೋಜಾತೇನ ಋಗ್ವೇದಂ ವಾಮದೇವೇನ ಯಾಜುಷಮ್।
> ಅಘೋರೇಣ ತಥಾ ಸಾಮ ಪುರುಷೇಣ ತ್ವಥರ್ವಣಮ್॥
> ಈಶಾನೇನ ಮುಖೇನೈವ ಕಾಮಿಕಾದ್ಯಾಗಮಾಂಸ್ತಥಾ।
> ಜನಯಾಮಾಸ ವಿಶ್ವೇಶಃ ಸರ್ವಸಿದ್ಧಿಪ್ರದಾಯಕಃ॥[೪೩]

ಎನ್ನುವ ಸ್ಮೃತಿ ಪ್ರಮಾಣವನ್ನು ಉದಾಹರಿಸುತ್ತ ಶ್ರೀಪತಿಪಂಡಿತಾರಾಧ್ಯರು ಶ್ರೀಕರಭಾಷ್ಯದಲ್ಲಿ ಈಶ್ವರೋಚ್ಚರಿತಗಳಾದ್ದರಿಂದ ವೇದಾಗಮಗಳು ಪ್ರಾಮಾಣಿಕಗಳೆಂದು ಸಿದ್ಧಮಾಡಿದ್ದಾರೆ. ಈಶ್ವರೋಚ್ಚರಿತತ್ವದಿಂದ ವೇದಾಗಮಗಳು ಪೌರುಷೇಯಗಳು ಹಾಗೂ ಪ್ರಾಮಾಣಿಕಗಳೆಂಬ ವಿಷಯದಲ್ಲಿ ನ್ಯಾಯ, ವೈಶೇಷಿಕ, ಯೋಗ ಮತ್ತು ವೀರಶೈವ ದರ್ಶನದ ಆಚಾರ್ಯರ ವಿಚಾರದಲ್ಲಿ ಸಾಮ್ಯತೆ ಕಂಡುಬರುತ್ತದೆ.

ಈಶ್ವರನನ್ನು ಒಪ್ಪದಿರುವ ಸಾಂಖ್ಯ[೪೪] -ಮೀಮಾಂಸಕರು[೪೫] ಸನಾತನಗಳಾದ ವೇದಗಳು ಅಪೌರುಷೇಯಗಳು ಆದ್ದರಿಂದಲೇ ಪ್ರಾಮಾಣಿಕಗಳೆಂಬ ವಾದವನ್ನು ಮಂಡಿಸುತ್ತಾರೆ. ಅದ್ವೈತ ವೇದಾಂತಿಗಳಾದರೂ 'ವ್ಯವಹಾರೇ ಭಾಟ್ಟನಯಃ' ಎಂಬ ಉಕ್ತಿಗನುಸಾರವಾಗಿ ಮೀಮಾಂಸಕರಂತೆ ವೇದಗಳಿಗೆ ಅಪೌರುಷೇಯತ್ವವನ್ನೇ ಸ್ವೀಕರಿಸುತ್ತಾರೆ. ಆದರೂ "ಅನಾಪ್ತಪುರುಷನಿಂದ ಅಪ್ರಣೀತತ್ವವೇ ಅಪೌರುಷೇಯತ್ವ"ವೆಂಬ ತಮ್ಮ ಸ್ವತಂತ್ರಲಕ್ಷಣವನ್ನು ಪ್ರಸ್ತುತಪಡಿಸುತ್ತಾರೆ. ವೈದಿಕ ಷಡ್‌ದರ್ಶನಗಳಲ್ಲಿ ವೇದಾಗಮಗಳ ಪೌರುಷೇಯತ್ವ ಮತ್ತು ಅಪೌರುಷೇಯತ್ವದ ಬಗ್ಗೆ ಭಿನ್ನಾಭಿಪ್ರಾಯಗಳಿದ್ದರೂ ಅವುಗಳ ಪ್ರಾಮಾಣ್ಯತೆಯ ಬಗ್ಗೆ ಸರ್ವರಲ್ಲಿ ಒಮ್ಮತವಿದೆ. ಅಂತೆಯೇ ಈ ದರ್ಶನಗಳು ಆಸ್ತಿಕ ದರ್ಶನಗಳೆಂದು ಕರೆಯಲ್ಪಡುತ್ತವೆ.

ಈಶ್ವರಾನುಗ್ರಹದಿಂದ ಮೋಕ್ಷಪ್ರಾಪ್ತಿ ಸಮೀಕ್ಷೆ :

ನ್ಯಾಯಶಾಸ್ತ್ರ ಪ್ರಣೇತೃವಾದ ಗೌತಮಋಷಿಯು ಯಮಾದ್ಯಷ್ಟಾಂಗಯುಕ್ತಗಳಾ ಶ್ರವಣಾದಿಗಳೇ ಮೋಕ್ಷಕಾರಣಗಳೆಂದು ಪ್ರತಿಪಾದಿಸಿದ್ದಾರೆ.[೪೬] ಆದರೆ ಭಾಸರ್ವಜ್ಞನು

> ಯದಾ ಚರ್ಮವದಾಕಾಶಂ ವೇಷ್ಟಯಿಷ್ಯಂತಿ ಮಾನವಾಃ।
> ತದಾ ಶಿವಮವಿಜ್ಞಾಯ ದುಃಖಸ್ಯಾಂತೋ ಭವಿಷ್ಯತಿ॥[೪೭]

ಎಂಬ ಶ್ರುತಿ ಪ್ರಮಾಣವನ್ನು ಉದಾಹರಿಸುತ್ತ ಶ್ರವಣಾದಿಗಳ ಜೊತೆಗೆ ಈಶ್ವರಾನುಗ್ರಹವೂ ಮೋಕ್ಷಕ್ಕೆ ಕಾರಣವೆಂಬುದನ್ನು ತಿಳಿಯಪಡಿಸಿದ್ದಾನೆ.[೪೮]

ವೈಶೇಷಿಕಾಚಾರ್ಯರಾದ ಕಣಾದ ಮಹರ್ಷಿಗಳು-"ಯತೋಽಭ್ಯುದಯನಿಃ-ಶ್ರೇಯಸಸಿದ್ಧಿಃ ಸ ಧರ್ಮಃ[೪೯]", "ಧರ್ಮ ವಿಶೇಷಪ್ರಸೂತಾದ್....

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತತ್ತ್ವಜ್ಞಾನಾನ್ನಿಃಶ್ರೇಯಸಮ್[೫೦]" ಇತ್ಯಾದಿ ಸೂತ್ರಗಳಲ್ಲಿ ಧರ್ಮವೇ ಮುಕ್ತಿಗೆ ಮೂಲವೆಂಬುದಾಗಿ ಪ್ರತಿಪಾದಿಸಿದ್ದರೂ ಭಾಷ್ಯಕಾರರಾದ ಪ್ರಶಸ್ತಪಾದಾಚಾರ್ಯರು- "ತಚ್ಚೇಶ್ವರಚೋದನಾಭಿವ್ಯಕ್ತಾದ್ಧರ್ಮಾದೇವ"[೫೧] ಮತ್ತು ನ್ಯಾಯಕಂದಲೀಕಾರರಾದ ಶ್ರೀಧರಭಟ್ಟರು- "ಧರ್ಮೋಽಪಿ ತಾವನ್ನ ನಿಃಶ್ರೇಯಸಂ ಕರೋತಿ ಯಾವದೀಶ್ವರೇಚ್ಛಯಾ ನಾಽನುಗೃಹ್ಯತೇ"[೫೨] ಹೀಗೆ ಈಶ್ವರಾನುಗೃಹೀತವಾದ ಧರ್ಮದಿಂದಲೇ ಮುಕ್ತಿ ಎಂಬುದಾಗಿ ಪ್ರತಿಪಾದಿಸಿದ್ದಾರೆ.

ಯೋಗದರ್ಶನದಲ್ಲಿ ಪತಂಜಲಮಹರ್ಷಿಗಳು- "ಸಮಾಧಿಸಿದ್ಧಿರೀಶ್ವರ-ಪ್ರಣಿಧಾನಾತ್"[೫೩] ಎಂಬ ಸೂತ್ರದಲ್ಲಿ ಸಮಾಧಿಫಲವಾದ ಕೈವಲ್ಯವು ಈಶ್ವರಾನುಗ್ರಹದಿಂದಲೇ ಪ್ರಾಪ್ತವಾಗುವುದೆಂದು ನಿರೂಪಿಸಿದ್ದಾರೆ.

ಮೀಮಾಂಸಾ ದರ್ಶನದ ಪ್ರಾಚೀನಾಚಾರ್ಯರು ಈಶ್ವರನನ್ನು ಸ್ವೀಕರಿಸದಿದ್ದರೂ ಅರ್ವಾಚೀನರಾದ ಆಪದೇವ ಮತ್ತು ಲೌಗಾಕ್ಷಿಭಾಸ್ಕರರು ಈಶ್ವರನನ್ನು ಯಜ್ಞಪತಿಯನ್ನಾಗಿ ಸ್ವೀಕರಿಸಿ, ಸ್ವರ್ಗಸಾಧನಗಳಾದ ದರ್ಶ-ಪೂರ್ಣಮಾಸಾದಿ ಯಜ್ಞಗಳನ್ನು ಈಶ್ವರಾರ್ಪಣ ಬುದ್ಧಿಯಿಂದ ಮಾಡಿದರೆ ಈಶ್ವರಾನುಗ್ರಹಬಲದಿಂದ ನಿಃಶ್ರೇಯಸಪ್ರಾಪ್ತಿಯಾಗುವುದೆಂಬ ವಿಷಯವನ್ನು ಸ್ಪಷ್ಟಪಡಿಸಿದ್ದಾರೆ.[೫೪] ಇದೇ ಪ್ರಕಾರ ವೀರಶೈವದರ್ಶನದಲ್ಲಿಯೂ-

ಶಂಭೋರೇವ ಪ್ರಸಾದೇನ ಸಂಸಾರಚ್ಛೇದಕಾರಿಣಾ।
ಮೋಹಗ್ರಂಥಿಂ ವಿನಿರ್ಭಿದ್ಯ ಮುಕ್ತಿಂ ಯಾಂತಿ ವಿವೇಕಿನಃ॥
ವಿನಾ ಪ್ರಸಾದಮೀಶಸ್ಯ ಸಂಸಾರೋ ನ ನಿವರ್ತತೇ।
ವಿನಾ ಸೂರ್ಯೋದಯಂ ಲೋಕೇ ಕುತಃ ಸ್ಯಾತ್ತಮಸೋ ಲಯಃ॥
ಸರ್ವಾನುಗ್ರಾಹಕಃ ಶಂಭುಃ ಕೇವಲಂ ಕೃಪಯಾ ಪ್ರಭುಃ।
ಮೋಚಯೇತ್ ಸಕಲಾನ್ ಜಂತೂನ್ ನ ಕಿಂಚಿದಿಹ
ಕಾರಣಮ್॥[೫೫]

ಸಿದ್ಧಾಂತ ಶಿಖಾಮಣಿಯ ಈ ಪ್ರಮಾಣಾನುಸಾರವಾಗಿ ಈಶ್ವರಾನುಗ್ರಹದಿಂದಲೇ ಮೋಕ್ಷಪ್ರಾಪ್ತಿ ಎಂಬುದನ್ನು ಸ್ವೀಕರಿಸುವ ಕಾರಣ ನ್ಯಾಯ, ವೈಶೇಷಿಕ, ಯೋಗ, ಅರ್ವಾಚೀನ ಪೂರ್ವಮೀಮಾಂಸಕರ ವಿಚಾರಕ್ಕೂ ವೀರಶೈವಾಚಾರ್ಯರ ವಿಚಾರಕ್ಕೂ ಸಾಮ್ಯವಾಗಿದೆ.

ಈಶ್ವರ ವಿಚಾರದ ನಿಷ್ಕರ್ಷ :

ಇಲ್ಲಿಯವರೆಗೆ ಸಿದ್ಧಾಂತಶಿಖಾಮಣಿಯ ಆಧಾರದಿಂದ ಈಶ್ವರ ವಿಷಯಕಗಳಾದ ವಿಚಾರಗಳನ್ನು ಹಾಗೂ ಅದೇ ವಿಷಯದ ಬಗ್ಗೆ ಉಳಿದ ದರ್ಶನಗಳ ವಿಚಾರಗಳನ್ನು ಕೂಲಂಕಷವಾಗಿ ತಿಳಿದುಕೊಂಡದ್ದಾಯಿತು. ಸದ್ಯಃ ಈ ಈಶ್ವರ ವಿಚಾರದ ನಿಷ್ಕರ್ಷದತ್ತ ದೃಷ್ಟಿಹರಿಸೋಣ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನ್ಯಾಯ-ವೈಶೇಷಿಕ ದರ್ಶನದಲ್ಲಿ ಈಶ್ವರನನ್ನು ಕೇವಲ ನಿಮಿತ್ತಕಾರಣನೆಂಬುದಾಗಿ ಸ್ವೀಕರಿಸಿದ್ದಾರೆ. ಈ ಶಾಸ್ತ್ರಗಳಲ್ಲಿ ಜಗತ್ತಿನ ಉಪಾದಾನ ಕಾರಣಗಳಾದ ಪರಮಾಣುಗಳು ಮತ್ತು ಜೀವಾತ್ಮರು ನಿತ್ಯರಾದ ಕಾರಣ ಇವರನ್ನು ಈಶ್ವರನು ಸೃಷ್ಟಿಸುವುದಿಲ್ಲ. ಆದ್ದರಿಂದ ಇವರ ಈಶ್ವರನು ಸರ್ವನಿಯಾಮಕನೇ ಹೊರತು ಸರ್ವಕರ್ತನಲ್ಲ.

ಸೇಶ್ವರ ಸಾಂಖ್ಯರಾದ ವಿಜ್ಞಾನಭಿಕ್ಷು ಮುಂತಾದವರು ಈಶ್ವರನನ್ನು ಜಗತ್ಕರ್ತನನ್ನಾಗಿ ಒಪ್ಪಿರುವುದಿಲ್ಲ, ಆದರೆ ಚುಂಬಕದ ಸನ್ನಿಧಾನದಿಂದ ಲೋಹದಲ್ಲಿ ಕ್ರಿಯೆ ಉಂಟಾಗುವಂತೆ ಈಶ್ವರನ ಸನ್ನಿಧಾನದಿಂದ ಪ್ರಕೃತಿಯಲ್ಲಿ ಕ್ರಿಯೆಯುಂಟಾಗಿ ಪುರುಷ ಸಂಯೋಗದಿಂದ ಸೃಷ್ಟಿಯಾಗುವುದೆಂಬುದಾಗಿ ಪ್ರತಿಪಾದಿಸುತ್ತಾರೆ. ಹೀಗೆ ಜಡವಾದ ಚುಂಬಕದೊಂದಿಗೆ ಈಶ್ವರನನ್ನು ಹೋಲಿಸಿರುವುದರಿಂದ ಇವರ ವಿಚಾರವೂ ಪೂರ್ಣೇಶ್ವರವಾದ ರೂಪವಾದದ್ದಲ್ಲ.

ಯೋಗದರ್ಶನದಲ್ಲಿ ಈಶ್ವರನು ಜೀವನ ಮೋಕ್ಷಪ್ರಾಪ್ತಿಯ ಪ್ರತಿಬಂಧಕಗಳನ್ನು ನಿವಾರಿಸಿ ಜೀವಾತ್ಮನ ಮುಕ್ತಿಯಲ್ಲಿ ಸಹಾಯಕನು ಮಾತ್ರನೆಂದು ಸ್ವೀಕರಿಸಿದ್ದಾರೆ. ತನ್ನ ಅನುಗ್ರಹ ಮಾತ್ರದಿಂದ ಜೀವಿಗಳಿಗೆ ಮುಕ್ತಿಯನ್ನು ದಯಪಾಲಿಸುವ ಸಾಮರ್ಥ್ಯವು ಇವನಿಗಿರುವುದಿಲ್ಲ. ಅರ್ವಾಚೀನ ಮೀಮಾಂಸಕರು ಸ್ವೀಕರಿಸಿದ ಈಶ್ವರನು ಜೀವಿಗಳ ಧರ್ಮಾನುಸಾರವಾಗಿ ಅನುಗ್ರಹಿಸುವವನೇ ವಿನಹ ಜಗತ್ಕರ್ತನಲ್ಲ. ಅದ್ವೈತವೇದಾಂತಿಗಳು ಅಂಗೀಕರಿಸಿದ ಈಶ್ವರನು ಸೃಷ್ಟಿಕರ್ತನು, ಪ್ರಾಣಿಗಳ ಅದೃಷ್ಟಾನುಸಾರವಾಗಿ ಫಲಪ್ರದಾಯಕನು ಎಂಬುದಾಗಿ ಸ್ವೀಕರಿಸಿದ್ದರೂ ಮಿಥ್ಯಾಮಾಯೋಪಾಧಿಯಿಂದ ಕೂಡಿರುವುದರಿಂದ ಈಶ್ವರನೂ ಮಿಥ್ಯಾ ಎಂದು ಹೇಳುವುದರಿಂದ ಇವರ ವಿಚಾರವಾದರೂ ಸರಿಯಲ್ಲ.

ವೀರಶೈವ ದರ್ಶನಾಭಿಮತ ಈಶ್ವರನು ಜಗದುತ್ಪತ್ತಿಯಲ್ಲಿ ಅಭಿನ್ನನಿಮಿತ್ತೋಪಾದಾನ ಕಾರಣನು. ಪ್ರಾಣಿಗಳ ಹೃದಯದಲ್ಲಿ ನಿವಾಸಿಸಿ ಅವರವರ ಕರ್ಮಾನುಸಾರವಾಗಿ ಶುಭಾಶುಭಕರ್ಮಗಳಲ್ಲಿ ಜೀವಿಗಳ ಪ್ರೇರಕನು, ಮಾಯಾಶಕ್ತಿ ವಿಶಿಷ್ಟನಾದರೂ ಮಿಥ್ಯಾಭೂತನಲ್ಲ, ಭಕ್ತ- ಮುಮುಕ್ಷುಗಳಿಂದ ಉಪಾಸಿಸಲ್ಪಡುವವನು, ಸಗುಣರೂಪದಿಂದ ಸರ್ವಾಂತರ್ಯಾಮಿಯಾಗಿ ಸರ್ವದರ ಸಂಚಾಲಕನಾಗಿ ನಿರ್ಗುಣರೂಪದಿಂದ ವಿಶ್ವೋತ್ತೀರ್ಣನೂ ಆಗಿದ್ದಾನೆ. ಆದ್ದರಿಂದ ವೀರಶೈವರ ಈ ವಿಚಾರ ಸರಣಿಯು ಪೂರ್ಣೇಶ್ವರವಾದ ರೂಪವಾದ್ದರಿಂದ ಉಳಿದ ದಾರ್ಶನಿಕ ಈಶ್ವರ ವಿಚಾರಕ್ಕಿಂತಲೂ ವೀರಶೈವರ ಈಶ್ವರ ವಿಚಾರವು ಭಕ್ತ, ಮುಮುಕ್ಷು ಮತ್ತು ಆಲೋಚಕರಿಗೆ ಆದರಣೀಯವೆಂಬಲ್ಲಿ ಯಾವ ಸಂದೇಹವೂ ಇರುವುದಿಲ್ಲ.

ಜೀವಸ್ವರೂಪ ವಿಮರ್ಶೆ

ಎಲ್ಲ ದಾರ್ಶನಿಕರು ಬಂಧ-ಮೋಕ್ಷಾದಿ ವ್ಯವಹಾರಗಳನ್ನು ಜೀವಾತ್ಮನಿಗಾಗಿಯೇ ಹೇಳಿದ್ದಾರೆ. ಹಾಗಾದರೆ ಜೀವನೆಂದರೆ ಯಾರು? ಅವನ ಸ್ವರೂಪವೇನು? ಎಂಬ ಜಿಜ್ಞಾಸೆಯುಂಟಾದಾಗ ಶಿವಯೋಗಿ ಶಿವಾಚಾರ್ಯರು-

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೇಂದ್ರಿಯಾಣಾಂ ನ ದೇಹಸ್ಯ ನ ಬುದ್ಧೇರಾತ್ಮತಾ ಭವೇತ್।
ಅಹಂಪ್ರತ್ಯಯ ವೇದ್ಯತ್ವಾದನುಭೂತಸ್ಮೃತೇರಪಿ॥
ಶರೀರೇಂದ್ರಿಯಬುದ್ಧಿಭ್ಯೋ ವ್ಯತಿರಿಕ್ತಃ ಸನಾತನಃ।[೯೬]

ಶರೀರ, ಇಂದ್ರಿಯ, ಮನಸ್ಸು, ಬುದ್ಧಿ ಮತ್ತು ಅಹಂಕಾರಗಳೆಂಬ ಅನಾತ್ಮ ತತ್ತ್ವಗಳಿಗಿಂತ ಭಿನ್ನವಾದ ಒಂದು ಸನಾತನ ತತ್ತ್ವವಿದೆ. ಅದೇ ಆತ್ಮ ಅಥವಾ ಜೀವಾತ್ಮನೆಂಬುದಾಗಿ ಜೀವನ ಸಾಮಾನ್ಯ ಸ್ವರೂಪವನ್ನು ತಿಳಿಯಪಡಿಸಿ, ಅವನ ವಿಶೇಷ ಸ್ವರೂಪದ ಜಿಜ್ಞಾಸೆಯುಂಟಾದಾಗ-

ಏಕ ಏವ ಶಿವಃ ಸಾಕ್ಷಾತ್ ಚಿದಾನಂದಮಯೋ ವಿಭುಃ।
ನಿರ್ವಿಕಲ್ಪೋ ನಿರಾಕಾರೋ ನಿರ್ಗುಣೋ ನಿಷ್ಪ್ರಪಂಚಕಃ॥
ಅನಾದ್ಯವಿದ್ಯಾಸಂಬಂಧಾತ್ ತದಂಶೋ ಜೀವನಾಮಕಃ।[೯೭]

ಎಂಬುದಾಗಿ ನಿರ್ಗುಣನೂ, ನಿರಾಕಾರನೂ, ಸಚ್ಚಿದಾನಂದಸ್ವರೂಪನೂ, ವ್ಯಾಪಕನೂ ಆದ ಪರಶಿವನು ಸ್ವವಿಮರ್ಶಶಕ್ತ್ಯಂಶಭೂತವಾದ ಅನಾದಿ ಅವಿದ್ಯಾಸಂಬಂಧದಿಂದ 'ಜೀವ' ನೆಂದು ಕರೆಯಲ್ಪಡುತ್ತಾನೆ. "ಅಂಶತ್ವಮನಾವಿಷ್ಕೃತಾಖಿಲಶಕ್ತಿಮತ್ತ್ವಂ" ಎಂಬ ಉಕ್ತಿಗನುಸಾರವಾಗಿ ಸರ್ವಕರ್ತೃತ್ವ, ಸರ್ವಜ್ಞತ್ವ, ಪರಿಪೂರ್ಣತ್ವ, ನಿತ್ಯತ್ವ ಮತ್ತು ವ್ಯಾಪಕತ್ವಗಳೆಂಬ ಪರಶಿವನ ಸ್ವರೂಪವನ್ನು ಸಂಕೋಚಗೊಳಿಸುವ ಕಲ್ಯಾ, ವಿದ್ಯಾ, ರಾಗ, ಕಾಲ ಮತ್ತು ನಿಯತಿಗಳೆಂಬ ಪಂಚಕಂಚುಕಗಳಿಂದ ಆವೃತನಾಗಿ ಕಿಂಚಿತ್‌ಕರ್ತೃತ್ವ, ಕಿಂಚಿಜ್ಞತ್ವ, ಅಪೂರ್ಣತ್ವ, ಅನಿತ್ಯತ್ವ ಮತ್ತು ಅವ್ಯಾಪಕತ್ವ ಧರ್ಮ ಉಳ್ಳವನಾಗಿ ಈ ಜೀವನು ಸ್ವಕೀಯ ಕರ್ಮಾನುಸಾರವಾಗಿ ದೇವ, ತಿರ್ಯಕ್, ಮನುಷ್ಯಾದಿ ಯೋನಿಗಳಲ್ಲಿ ತಿರುಗುತ್ತಿರುತ್ತಾನೆ. ಶ್ರೀ ಶಿವಯೋಗಿಶಿವಾಚಾರ್ಯರು-

ಕಿಂಚಿತ್ ಕರ್ತಾ ಚ ಕಿಂಚಿಜ್ಞೋ ಬದ್ಧೋಽನಾದಿಶರೀರವಾನ್।
ಅವಿದ್ಯಾಮೋಹಿತಾ ಜೀವಾಃ ಬ್ರಹ್ಮೈಕ್ಯಜ್ಞಾನವರ್ಜಿತಾಃ।
ಪರಿಭ್ರಮಂತಿ ಸಂಸಾರೇ ನಿಜಕರ್ಮಾನುಸಾರತಃ।
ದೇವತಿರ್ಯಙ್ಮನುಷ್ಯಾದಿನಾನಾಯೋನಿ ವಿಭೇದತಃ।[೯೮]

ಎಂಬುದಾಗಿ ಅದನ್ನೇ ಸ್ಪಷ್ಟಪಡಿಸಿದ್ದಾರೆ. ಇಲ್ಲಿ ಸೂಕ್ಷ್ಮವಾಗಿ ವಿಚಾರಿಸಬೇಕಾದ ವಿಷಯವೇನೆಂದರೆ ಪರಶಿವನಲ್ಲಿ ಅಂಶತ್ವಾಪಾದಕವಾದ ಅವಿದ್ಯೆ ಅಥವಾ ಅಜ್ಞಾನವು ಜ್ಞಾನವಿರೋಧಿಯಾದ ಭಾವರೂಪ ಅಜ್ಞಾನವಲ್ಲ; ಕಿಂತು 'ಈಷತ್ ಜ್ಞಾನಮಜ್ಞಾನಮ್' ಎಂಬ ವ್ಯುತ್ಪತ್ತಿಗನುಸಾರವಾಗಿ ಸಂಕುಚಿತ ಜ್ಞಾನವೇ ಇಲ್ಲಿ ಅವಿದ್ಯೆ ಅಥವಾ ಅಜ್ಞಾನ ಶಬ್ದದಿಂದ ವ್ಯವಹರಿಸಲ್ಪಡುತ್ತದೆ. ಜ್ಞಾನಾದಿಗಳ ಸಂಕೋಚಕ್ಕೆ ಕಾರಣೀಭೂತಗಳಾದ ಆಣವಾದಿ ಮಲತ್ರಯಗಳು ಜೀವನ ಮುಕ್ತಾವಸ್ಥೆಯಲ್ಲಿ ನಿವೃತ್ತಗಳಾಗುವುದರಿಂದ ಜ್ಞಾನಾದಿಶಕ್ತಿಗಳು ಪುನಃ ವಿಕಾಸಗೊಂಡು ಆತನು ಶಿವಸ್ವರೂಪನಾಗುತ್ತಾನೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜೀವತ್ವಂ ದುಃಖಸರ್ವಸ್ವಂ ತದಿದಂ ಮಲಕಲ್ಪಿತಮ್।
ನಿರಸ್ಯತೇ ಗುರೋರ್ಬೋಧಾತ್ ಜ್ಞಾನಶಕ್ತಿಃ ಪ್ರಕಾಶತೇ॥[೫೯]

ಆದ್ದರಿಂದ ಸಂಕುಚಿತ ಶಕ್ತಿಯುಳ್ಳವನೇ ಜೀವನೆಂತಲೂ, ಪುನಃ ಶಕ್ತಿಗಳ ವಿಕಾಸವಾದಾಗ ಅವನೇ ಶಿವನೆಂದು ಕರೆಯಲ್ಪಡುತ್ತಾನೆ.

ಜೀವನ ಅಣುಸ್ವರೂಪ:

ವಾಲಾಗ್ರಶತಭಾಗಸ್ಯ ಶತಧಾ ಕಲ್ಪಿತಸ್ಯ ಚ।
ಭಾಗೋ ಜೀವಃ ಸ ವಿಜ್ಞೇಯಃ ಸ ಚಾನಂತ್ಯಾಯ ಕಲ್ಪ್ಯತೇ॥[೬೦]

ಎಂಬ ಉಪನಿಷತ್ಪ್ರಮಾಣಾನುಸಾರವಾಗಿ ವೀರಶೈವ ಆಚಾರ್ಯರು ಜೀವನನ್ನು ಅಣುಪರಿಮಾಣನನ್ನಾಗಿ ಒಪ್ಪಿದ್ದಾರೆ. ಶ್ರೀ ಶಿವಯೋಗಿ ಶಿವಾಚಾರ್ಯರು-

ವಾಲಾಗ್ರಶತಭಾಗೇನ ಸದೃಶೋ ಹೃದಯಸ್ಥಿತಃ।
ಅಶ್ನನ್ ಕರ್ಮಫಲಂ ಸರ್ವಮಾತ್ಮಾ ಸ್ಫುರತಿ ದೀಪವತ್॥
ಆತ್ಮಾಪಿ ಸರ್ವಭೂತಾನಾಮಂತಃಕರಣಮಾಶ್ರಿತಃ।
ಅಣುಭೂತೋ ಮಲಾಸಂಗಾದಾದಿಕರ್ಮನಿಯಂತ್ರಿತಃ॥[೬೧]

ಈ ರೀತಿಯಾಗಿ ಜೀವನ ಅಣುರೂಪತ್ವವನ್ನು ಸ್ಪಷ್ಟಪಡಿಸಿದ್ದಾರೆ.

ಜೀವಾತ್ಮರು ಅನೇಕರು:

ಜೀವಾತ್ಮರನ್ನು ವಿಭುಪರಿಮಾಣದಲ್ಲಿ ಒಪ್ಪಿದರೆ ಭೋಗಸಾಂಕರ್ಯ ಪ್ರಾಪ್ತವಾಗುವುದೆಂಬ ಉದ್ದೇಶದಿಂದ ಅಣುಪರಿಮಾಣ ಹಾಗೂ ಪ್ರತಿಯೊಂದು ಶರೀರದಲ್ಲಿ ಭಿನ್ನ ಭಿನ್ನ ಜೀವಿಗಳನ್ನು ಅಂತೆಯೇ ಅವರು ಅನಂತರೆಂಬುದಾಗಿ "ಅವಿದ್ಯಾಶಕ್ತಿಭೇದೇನ ಜೀವಾ ಬಹುವಿಧಾಃ ಸ್ಮೃತಾಃ[೬೨]" ಎಂಬುದಾಗಿ ಪ್ರತಿಪಾದಿಸಿದ್ದಾರೆ. "ಸ ವೈ ನೈವ ರೇಮೇ ತಸ್ಮಾದೇಕಾಕೀ ನ ರಮತೇ ಸ ದ್ವಿತೀಯಮೈಚ್ಛತ್[೬೩]" ಎನ್ನುವ ಶ್ರುತಿಪ್ರಮಾಣಾನುಸಾರವಾಗಿ ಪರಶಿವನು ತನ್ನ ಲೀಲಾವಿನೋದಕ್ಕಾಗಿ ತನ್ನಲ್ಲಿಯೇ ಪೂಜ್ಯ-ಪೂಜಕ-ಭಾವದಿಂದ ಕ್ರೀಡಿಸಲೋಸುಗ ಸ್ವಸ್ವಾತಂತ್ರ್ಯಪರಿಕಲ್ಪಿತ ಆಣವಾದಿ ಮಲತ್ರಯ ಸಂಬಂಧದಿಂದ 'ಘೃತಕಾಠಿಣ್ಯ' ನ್ಯಾಯಾನುಸಾರವಾಗಿ ಅನೇಕ ಅಂಶಗಳ ರೂಪದಲ್ಲಿ ತಾನೇ ಜೀವಾತ್ಮನಾಗುತ್ತಾನೆ. ಅದನ್ನೇ ಸಿದ್ಧಾಂತ ಶಿಖಾಮಣಿಯು ಹೀಗೆ ನಿರೂಪಿಸಿದೆ-

ಅಸ್ವತಂತ್ರಾಶ್ಚ ಕಿಂಚಿಜ್ಞಾಃ ಕಿಂಚಿತ್‌ಕರ್ತೃತ್ವಹೇತವಃ।
ಲೀಲಾಭಾಜನತಾಂ ಪ್ರಾಪ್ತಾಃ ಶಿವಸ್ಯ ಪರಮಾತ್ಮನಃ॥
ನ ಚಾಸ್ತಿ ದೇಹಸಂಬಂಧೋ ನಿರ್ದೇಹಸ್ಯ ಸ್ವಭಾವತಃ।
ಅಜ್ಞಾನಕರ್ಮಯೋಗೇನ ದೇಹೀ ಭವತಿ ಭುಕ್ತಯೇ॥[೬೪]

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆದ್ದರಿಂದ ವೀರಶೈವ ಸಿದ್ಧಾಂತದಲ್ಲಿ ಜೀವಾತ್ಮರೆಲ್ಲರು ಪರಶಿವನ ಲೀಲಾಸ್ವರೂಪಗಳೆಂದೇ ಭಾವನೆ.

ಅಣುರೂಪನಾದ ಈ ಜೀವನು ಶರೀರದ ಯಾವದೊಂದು ಸ್ಥಾನದಲ್ಲಿ ನಿವಾಸಿಸುವನಾದ ಕಾರಣ ಶರೀರದ ಆಪಾದಮಸ್ತಕಪರ್ಯಂತ ಸಂಪೂರ್ಣಶರೀರದ ಜ್ಞಾನವಾಗುವುದಿಲ್ಲವಲ್ಲ ಎಂಬ ಶಂಕೆ ಉಂಟಾಗಬಹುದು; ಮನೆಯಲ್ಲಿ ಹಚ್ಚಿದ ದೀಪವು ಯಾವದೊಂದು ಸ್ಥಾನದಲ್ಲಿ ಇದ್ದರೂ ಅದರ ಪ್ರಕಾಶವು ಮನೆತುಂಬೆಲ್ಲ ವ್ಯಾಪಕವಾಗಿರುವಂತೆ ಆತ್ಮನು ಅಣುವಾಗಿದ್ದರೂ ಅವನ ಜ್ಞಾನಪ್ರಕಾಶವು ಶರೀರದ ತುಂಬೆಲ್ಲ ವ್ಯಾಪಕವಾಗಿರುವುದರಿಂದ ಯಾವ ತೊಂದರೆಯೂ ಆಗುವುದಿಲ್ಲ. ಆದ್ದರಿಂದ "ಆತ್ಮಾ ಸ್ಫುರತಿ ದೀಪವತ್"[೬೯] ಎಂದು ಶಿವಯೋಗಿ ಶಿವಾಚಾರ್ಯರು ದೀಪದ ದೃಷ್ಟಾಂತದಿಂದ ತಿಳಿಯಪಡಿಸಿದ್ದಾರೆ.

ಜೀವನಿಗೂ ಅವನ ಜ್ಞಾನಕ್ಕೂ ಗುಣ-ಗುಣಿ ಭಾವವಿರುವುದರಿಂದ 'ಶುಕ್ಲೋ ಪಟಃ' ಎಂಬಲ್ಲಿ ಶುಕ್ಲಗುಣವು ವಸ್ತ್ರವನ್ನು ಬಿಟ್ಟು ಬೇರೆ ಕಡೆಗೆ ಇರಲಾರದು. ಅದರಂತೆ ಜ್ಞಾನಗುಣವಾದರೂ ಜೀವನನ್ನು ಬಿಟ್ಟು ಬೇರೆ ಕಡೆಗೆ ಇರುವುದು ಹೇಗೆ ಸಂಭವ? ಎಂದರೆ ಚಂದ್ರ-ಪ್ರದೀಪಗಳ ಪ್ರಕಾಶಗಳು ಹೇಗೆ ಚಂದ್ರ-ಪ್ರದೀಪಗಳ ವ್ಯತಿರೇಕ ಸ್ಥಾನದಲ್ಲಿ ಇರುವುದು ಸಂಭವಿಸುವುದೋ ಅದರಂತೆ ಜೀವಾತ್ಮನ ಜ್ಞಾನಗುಣವಾದರೂ ಶರೀರದ ತುಂಬೆಲ್ಲ ವ್ಯಾಪಕವಾಗಿರುವುದು ಅಸಂಭವವೇನಲ್ಲ.

ಜೀವೇಶ್ವರರ ಭೇದಾಽಭೇದ:

ವೀರಶೈವ ಸಿದ್ಧಾಂತದಲ್ಲಿ ಜೀವೇಶ್ವರರ ಭೇದವು ಔಪಾಧಿಕವೂ ಮಿಥ್ಯಾಭೂತವೂ ಅಲ್ಲ ಕಿಂತು ವಾಸ್ತವಿಕವಾದದ್ದು. "ಜೀವೋ ಬ್ರಹ್ಮೈವ ನಾಪರಃ" ಎಂದು ಅದ್ವೈತಿಗಳು ಹೇಳುವಂತೆ ಜೀವೇಶ್ವರರಲ್ಲಿ ಸದಾ ಅಭೇದವನ್ನು ಸ್ವೀಕರಿಸಿದರೆ ಬದ್ಧಾವಸ್ಥೆಯಲ್ಲಿಯ ಪೂಜ್ಯ-ಪೂಜಕ ಭಾವವು ಸಂಭವಿಸಲಾರದು. ಅಂತೆಯೇ ಶ್ರೀ ಶಿವಯೋಗಿ ಶಿವಾಚಾರ್ಯರು-

ಪೂಜ್ಯ-ಪೂಜಕಯೋರ್ಲಿಂಗ ಜೀವಯೋರ್ಭೇದ ವರ್ಜನೇ।
ಪೂಜಾಕರ್ಮಾದ್ಯಸಂಪತ್ತೇರ್ಲಿಂಗನಿಷ್ಠಾವಿರೋಧತಃ॥

....

ಪ್ರೇಗಕಂ ಶಂಕರಂ ಬುದ್ಧ್ವಾ ಪ್ರೇರ್ಯಮಾತ್ಮಾನಮೇವ ಚ।
ಭೇದಾತ್ತಂ ಪೂಜಯೇನ್ನಿತ್ಯಂ ನ ಚಾದ್ವೈತಪರೋ ಭವೇತ್॥
ಪತಿಃ ಸಾಕ್ಷಾನ್ಮಹಾದೇವಃ ಪಶುರೇವ ತದಾಶ್ರಯಃ।
ಅನಯೋಃ ಸ್ವಾಮಿ-ಭೃತ್ಯತ್ವಮಭೇದೇ ಕಥಮಿಷ್ಯತೇ॥[೭೦]

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ರೀತಿಯಾಗಿ ಬದ್ಧಾವಸ್ಥೆಯಲ್ಲಿ ಜೀವ-ಶಿವರ ಭೇದವನ್ನು ಪಾರಮಾರ್ಥಿಕವಾಗಿ ಒಪ್ಪಿದಾಗ ಮಾತ್ರ ಪೂಜ್ಯ-ಪೂಜಕ ಭಾವವಾಗಲಿ, ಸ್ವಾಮಿ-ಭೃತ್ಯಭಾವವಾಗಲಿ ಸಂಭವಿಸುವುದೇ ವಿನಹ ಸರ್ವದಾ ಅಭೇದವನ್ನು ಸ್ವೀಕರಿಸಿದರೆ ಸಂಭವಿಸಲಾರದು ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಬದ್ಧನಾದ ಜೀವನು ಗುರುಗಳ ಅನುಗ್ರಹದಿಂದ ದೀಕ್ಷಿತನಾಗಿ ತನ್ನ ಮಲತ್ರಯಗಳನ್ನು ಕಳೆದುಕೊಂಡು ಪರಶಿವತತ್ತ್ವವನ್ನು ಸಾಕ್ಷಾತ್ಕಾರಮಾಡಿಕೊಂಡಾಗ ಅವನ ಸಂಕುಚಿತಶಕ್ತಿಗಳು ಪುನಃ ವಿಕಾಸಗೊಂಡು ಅವನು ಶಿವಸ್ವರೂಪನೇ ಆಗುತ್ತಾನೆ ಎಂಬುದನ್ನು-

ಸಾಕ್ಷಾತ್ಕೃತಂ ಪರಂ ತತ್ತ್ವಂ ಯದಾ ಭವತಿ ಬೋಧತಃ।
ತದಾಽದ್ವೈತಸಮಾಪತ್ತಿರ್ಜ್ಞಾನಹೀನಸ್ಯ ನ ಕ್ವಚಿತ್॥[೬೬]
ಜೀವತ್ವಂ ದುಃಖಸರ್ವಸ್ವಂ ತದಿದಂ ಮಲಕಲ್ಪಿತಮ್।
ನಿರಸ್ಯತೇ ಗುರೋರ್ಬೋಧಾತ್ ಜ್ಞಾನಶಕ್ತಿಃ ಪ್ರಕಾಶತೇ॥[೬೭]

ಈ ಶ್ಲೋಕಗಳಲ್ಲಿ ತಿಳಿಯಪಡಿಸಿದ ಶ್ರೀ ಶಿವಯೋಗಿ ಶಿವಾಚಾರ್ಯರು ಮುಕ್ತಾವಸ್ಥೆಯಲ್ಲಿ ಶಿವನೊಂದಿಗೆ ಅಭೇದವನ್ನು ಬೋಧಿಸಿದ್ದಾರೆ. ಇದರಿಂದ ಜೀವೇಶ್ವರರ ಭೇದ ಹಾಗೂ ಅಭೇದಗಳೆರಡೂ ಸತ್ಯಗಳಾದ್ದರಿಂದ ಅವರೀರ್ವರಲ್ಲಿ ಸದಾ ಭೇದವನ್ನಾಗಲಿ ಸದಾ ಅಭೇದವನ್ನಾಗಲಿ ಹೇಳದೇ ವೀರಶೈವಾಚಾರ್ಯರು ಭೇದಾಽಭೇದವನ್ನೇ ಒಪ್ಪಿದ್ದಾರೆ. ಭಾಷ್ಯಕಾರರಾದ ಶ್ರೀಪತಿ ಪಂಡಿತಾರಾಧ್ಯರು-

ಬದ್ಧಶುದ್ಧವಿಭೇದೇನ ಜೀವತ್ರಯಮಿದಂ ಸ್ಮೃತಮ್।
ಗುರುದೀಕ್ಷಾವಿಹೀನಶ್ಚ ಶಿವಭಕ್ತಿವಿವರ್ಜಿತಃ॥
ಸ್ವಕರ್ತೃತ್ವಾಭಿಮಾನೀ ತು ಬದ್ಧಃ ಸ ಪಶುರುಚ್ಯತೇ।

ಗುರುದೀಕ್ಷಾಂ ಪರಾಂ ಲಬ್ಧ್ವಾ ಕೈಂಕರ್ಯತ್ರಯ ಸಂಯುತಃ।
ಶಾಂತ್ಯಾದಿಸದ್ಗುಣೋಪೇತೋ ಮುಮುಕ್ಷು ರಾಗವರ್ಜಿತಃ।
ಶಿವಾಧೀನಃ ಸುಧೀ ಭಕ್ತಃ ಶುದ್ಧಜೀವ ಇತಿ ಸ್ಮೃತಃ॥

ಶಿವಯೋಗಶಿವಜ್ಞಾನವಿಭವಾನಂದಸಂಯುತಃ।
ಪ್ರಚಂಡಾತಪಮಧ್ಯಸ್ಥಶುದ್ಧಕರ್ಪೂರದೀಪವತ್॥
ಶಿವಾಕಾರೇ ಪರಾಕಾಶೇ ಕೋಟಿಸೂರ್ಯಪ್ರಕಾಶಕೇ
ವಿಲೀನಚಿತ್ತವೃತ್ತಿಸ್ಥೋ ಮುಕ್ತಜೀವ ಇತಿ ಸ್ಮೃತಃ॥
ಸ ಜೀವನ್ಮುಕ್ತ ಇತ್ಯುಕ್ತೋ ರಾಗದ್ವೇಷವಿವರ್ಜಿತಃ।[೬೮].

ಈ ಶಿವಾಗಮಗಳ ವಚನಗಳನ್ನು ಉದಾಹರಿಸಿ ಜೀವಾತ್ಮರನ್ನು ಬದ್ಧ, ಶುದ್ಧ ಮತ್ತು ಮುಕ್ತ ಎಂದು ಮೂರು ವಿಧವಾಗಿ ವಿಂಗಡಿಸಿದ್ದಾರೆ. ಅವರ ಅಭಿಪ್ರಾಯದಂತೆ ಗುರುದೀಕ್ಷಾರಹಿತನೂ, ಶಿವಭಕ್ತಿವರ್ಜಿತನೂ, ಕರ್ತೃತ್ವಾಭಿಮಾನಿಯೂ ಆದವನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬದ್ಧಜೀವನು. ಗುರುದೀಕ್ಷೆಯನ್ನು ಪಡೆದು ಗುರು-ಲಿಂಗ-ಜಂಗಮರಲ್ಲಿ ಕಿಂಕರ ಭಾವವನ್ನು ತಾಳಿ ಶಾಂತ್ಯಾದಿ ಸದ್ಗುಣಗಳಿಂದ ಕೂಡಿದವನು ಶುದ್ಧಜೀವನೆನಿಸಿಕೊಳ್ಳುವನು. ಉರಿತಾಗಿದ ಕರ್ಪೂರದಂತೆ ಶಿವಯೋಗದಿಂದ ಶಿವಸ್ವರೂಪನೇ ಆದ ಜೀವಾತ್ಮನು ಮುಕ್ತನೆಂದೆನಿಸಿಗೊಳ್ಳುವನು. ಭಾಷ್ಯಕಾರರ ಈ ವಿಶ್ಲೇಷಣೆಯಿಂದಾದರೂ ಶಿವ-ಜೀವರಲ್ಲಿ ಭೇದಾಽಭೇದಸಂಬಂಧವೇ ಸಿದ್ಧವಾಗುತ್ತದೆ. ಹೀಗೆ ಸಿದ್ಧಾಂತ ಶಿಖಾಮಣಿಯ ಆಧಾರದಿಂದ ಪರಶಿವನ ಅಂಶವೇ ಜೀವನು. ಅವನು ಅಣುಪರಿಮಾಣನು, ಆದ್ದರಿಂದಲೇ ಪ್ರತಿಶರೀರದಲ್ಲಿ ಭಿನ್ನನೂ ಆಗಿದ್ದಾನೆ.

ಇತರ ದರ್ಶನಗಳೊಂದಿಗೆ ಸಮೀಕ್ಷೆ:

ನ್ಯಾಯ,[೨೦] ವೈಶೇಷಿಕ,[೨೧] ಸಾಂಖ್ಯ,[೨೨] ಯೋಗ[೨೩] ಮತ್ತು ಪೂರ್ವ ಮೀಮಾಂಸಾ[೨೪] ದರ್ಶನಗಳಲ್ಲಿ ಜೀವಾತ್ಮರು ಪ್ರತಿ ಶರೀರ ಭಿನ್ನರೂ, ವಿಭುಪರಿಮಾಣರೂ ಎಂಬುದಾಗಿ ಸ್ವೀಕರಿಸಿದ್ದಾರೆ. ಜೀವನನ್ನು ಮಧ್ಯಮಪರಿಮಾಣದಲ್ಲಿ ಒಪ್ಪಿದರೆ ಶರೀರದಂತೆ ಆತ್ಮನು ಅನಿತ್ಯನಾಗಬೇಕಾದೀತು, ಅಣುವೆಂದು ಒಪ್ಪಿದರೆ ಆತನು ಶರೀರದ ಯಾವುದೇ ಒಂದು ಭಾಗದಲ್ಲಿ ನಿವಾಸಿಸುವ ಕಾರಣ ಶರೀರದ ಆಪಾದಮಸ್ತಕ- ಪರ್ಯಂತವಾಗಿ ಜ್ಞಾನವಾಗಲಾರದು ಎಂಬ ತರ್ಕವನ್ನು ಪ್ರಸ್ತುತಪಡಿಸಿ ಆತನನ್ನು ವಿಭುಪರಿಮಾಣವಾಗಿ ಒಪ್ಪಿದ್ದಾರೆ. ಆದರೆ ವಿಭುರೂಪರಾದ ಜೀವರು ಅನೇಕರಾಗಿರುವುದರಿಂದ ಪ್ರತಿಯೊಂದು ಶರೀರದಲ್ಲಿ ಸಕಲ ಜೀವಾತ್ಮರನ್ನು ಒಪ್ಪಬೇಕಾಗುವುದು. ಆಗ ಒಂದು ಶರೀರದಲ್ಲಿ ಉಂಟಾಗುವ ಸುಖ-ದುಃಖಗಳಲ್ಲಿ ಜಗತ್ತಿನ ಸಕಲ ಜೀವಿಗಳು ಭಾಗಿಗಳಾಗಬೇಕಾಗುವುದೆಂಬ ಭೋಗಸಾಂಕರ್ಯವು ಪ್ರಾಪ್ತವಾಗುವುದು.

ಒಂದು ಶರೀರದಲ್ಲಿ ಅನೇಕ ಆತ್ಮಗಳಿದ್ದರೂ ಆಯಾ ಜೀವಿಗಳ ಅಂತಃಕರಣಗಳು ಆಯಾಯ ಶರೀರೋಪಾಧಿಗಳಲ್ಲಿ ಆಯಾ ಜೀವಿಗಳಿಗೆ ಮಾತ್ರ ಸಂಬಂಧವಾಗುವುದರಿಂದ ಭೋಗಸಾಂಕರ್ಯವಾಗುವುದಿಲ್ಲವೆಂಬ ಯುಕ್ತಿಯನ್ನು ಪ್ರಸ್ತುತಪಡಿಸಿದರೂ ಶರೀರ ಪ್ರದೇಶವನ್ನು ಬಿಟ್ಟು ಹೊರಗಿರುವ ಆ ಜೀವಾತ್ಮನಿಗೆ ಸುಖ-ದುಃಖಗಳ ಜ್ಞಾನವಾಗದಿರುವ ಕಾರಣ ಅವನು ಇದ್ದೂ ಇಲ್ಲದಂತೆ ಅನ್ಯಥಾಸಿದ್ಧನಾಗುತ್ತಾನೆ. ಆದ್ದರಿಂದ ಅನೇಕಾತ್ಮರನ್ನು ವಿಭುಪರಿಮಾಣದಲ್ಲಿ ಒಪ್ಪುವ ಇತರ ದಾರ್ಶನಿಕರ ವಿಚಾರವು ಸಮಂಜಸವಾಗಿ ತೋರಲಾರದು.

ಇನ್ನು ಜೀವಾತ್ಮರನ್ನು ವಿಭುವನ್ನಾಗಿ ಒಪ್ಪಿದರೆ "ತೇನ ಪ್ರದ್ಯೋತೇನೈಷ ಆತ್ಮಾ ನಿಷ್ಕ್ರಾಮತಿ ಚಕ್ಷುಷ್ಟೋ ವಾ ಮೂರ್ಧ್ನೋ ವಾಽನ್ಯೇಭ್ಯೋ ವಾ ಶರೀರದೇಶೇಭ್ಯಃ"[೨೫] "ಯೇ ವೈಕೇ ಚಾಸ್ಮಾಲ್ಲೋಕಾತ್ ಪ್ರಯಂತಿ ಚಂದ್ರಮಸಮೇವ ತೇ ಸರ್ವೇ ಗಚ್ಛಂತಿ"[೨೬], "ತಸ್ಮಾಲ್ಲೋಕಾತ್ಪುನರೈತ್ಯಸ್ಮೈಲೋಕಾಯ ಕರ್ಮಣೇ"[೨೭] ಇತ್ಯಾದಿ ಶ್ರುತಿಗಳಲ್ಲಿ ಜೀವಾತ್ಮನ ಲೋಕಾಂತರಗಳಿಗೆ ಉತ್ಕ್ರಾಂತಿ, ಗಮನ ಹಾಗೂ ಆಗಮನಗಳು ಹೇಳಲ್ಪಟ್ಟಿರುವುದರಿಂದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಭುಪರಿಮಾಣದ ಆತ್ಮನಿಂದ ಈ ಉತ್ಕ್ರಾಂತ್ಯಾದಿಗಳು ಸಂಭವಿಸಲಾರವು. ಇದೂ ಅಲ್ಲದೇ-

> ದ್ವಾವಿಮೌ ಪುರುಷೌ ಲೋಕೇ ಸೂರ್ಯಮಂಡಲಭೇದಿನೌ।
> ಪರಿವ್ರಾಡ್ ಯೋಗಯುಕ್ತಶ್ಚ ರಣೇ ಚಾಭಿಮುಖೇ ಹತಃ॥[೭೮]

ಈ ಪರಾಶರ ಸ್ಮೃತಿಯು ಯೋಗಿ ಹಾಗೂ ಯೋದ್ಧಾ ಇವರಲ್ಲಿ ದೇಹತ್ಯಾಗದನಂತರ ಸೂರ್ಯಮಂಡಲವನ್ನು ಭೇದಿಸುವ ಸಾಮರ್ಥ್ಯವನ್ನು ಪ್ರತಿಪಾದಿಸಿರುವುದರಿಂದ ಇದು ಅಣು ಆತ್ಮನಿಂದ ಸಾಧ್ಯವೇ ವಿನಹ ವಿಭು ಆತ್ಮನಿಂದ ಸಾಧ್ಯವಾಗಲಾರದು. ಆದಕಾರಣ "ಏಷೋಽಣುರಾತ್ಮಾ ಚೇತಸಾ ವೇದಿತವ್ಯಃ"[೭೯] "ಅಂಗುಷ್ಠಮಾತ್ರಃ ಪುರುಷೋಽಂತರಾತ್ಮಾ"[೮೦] ಇತ್ಯಾದಿ ಶ್ರುತಿ ಸಮ್ಮತ ಆತ್ಮಾಣುತ್ವವಾದವೇ ನಿರ್ದೋಷವಾದದ್ದು.

ಅದ್ವೈತ ವೇದಾಂತದಲ್ಲಿ ಆತ್ಮನು ವಿಭುಪರಿಮಾಣನು ಹಾಗೂ ಒಬ್ಬನೇ ಎಂಬುದಾಗಿ ಸ್ವೀಕರಿಸುತ್ತಾರೆ. ಸುಖ-ದುಃಖಾದಿಗಳ ವ್ಯವಸ್ಥೆಯನ್ನು ಅಂತಃಕರಣದ ಭೇದಮೂಲಕವಾಗಿ ವ್ಯವಸ್ಥೆಗೊಳಿಸುತ್ತಾರೆ. ಇಲ್ಲಿ ವಿಭು ಆತ್ಮನನ್ನು ಒಬ್ಬನನ್ನೊಪ್ಪುವುದು ತರ್ಕಸಂಗತವಾಗಿ ತೋರಿದರೂ ಅವನ ಲೋಕಾಂತರ ಗಮನಾದಿಗಳು ಸಂಭವಿಸಲಾರವು. ಅಂತಃಕರಣದ ಗಮನಾಗಮಗಳೇ ಮುಖ್ಯವಾದವುಗಳು. ಆತ್ಮನ ಗಮನವು ಉಪಚಾರಮಾತ್ರವೆಂದು ಹೇಳಲು ಸಾಧ್ಯವಿಲ್ಲ. ಏಕಂದರೆ "ತಮುತ್ಕ್ರಾಮಂತಂ ಪ್ರಾಣೋಽನುತ್ಕ್ರಾಮತಿ-"[೮೧] ಎಂಬ ಶ್ರುತಿಯಲ್ಲಿ ಮುಖ್ಯವಾಗಿ ಆತ್ಮನ ಉತ್ಕ್ರಮಣವನ್ನು ಹೇಳಿ ನಂತರ ಸೂಕ್ಷ್ಮ ಶರೀರದ ಉತ್ಕ್ರಮಣವನ್ನು ಉಪದೇಶಿಸಲಾಗಿದೆ. ಆದ್ದರಿಂದ ಜೀವಿಗಳ ಭೋಗಸಾಂಕರ್ಯ ನಿವಾರಣೆಗಾಗಿ, ಜಗದ್ವೈಚಿತ್ರ್ಯ ವ್ಯವಸ್ಥೆಗಾಗಿ ಉತ್ಕ್ರಾಂತಿ-ಗಮನಾಗಮಗಳ ಸಾಮಂಜಸ್ಯಕ್ಕಾಗಿ ಆತ್ಮನ ಅಣುತ್ವ ಹಾಗೂ ಬಹುತ್ವವನ್ನು ಪ್ರತಿಪಾದಿಸುವ ಸಿದ್ಧಾಂತ ಶಿಖಾಮಣಿಯ ಸಿದ್ಧಾಂತವೇ ಶ್ರುತಿ-ಯುಕ್ತಿ ಯುಕ್ತವಾದದ್ದೆಂದು ತಿಳಿದುಬರುತ್ತದೆ.

ಇದೂ ಅಲ್ಲದೇ ದ್ವೈತಸಿದ್ಧಾಂತಗಳಾದ ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಪೂರ್ವಮೀಮಾಂಸಾದರ್ಶನಗಳಲ್ಲಿ ದ್ವೈತಮಂತ್ರಗಳಿಗೆ ಪ್ರಾಮುಖ್ಯತೆಯನ್ನು ಕೊಟ್ಟು ಅದ್ವೈತಮಂತ್ರಗಳಿಗೆ "ಅಭೇದಶ್ರುತಯಸ್ತು ಗೌಣಾರ್ಥಾ ಇತಿ ದಿಕ್"[೮೨] ಎಂಬ ಪ್ರಮಾಣದಂತೆ ಗೌಣಾರ್ಥವನ್ನು ಸ್ವೀಕರಿಸುತ್ತಾರೆ. ಅದೇ ಪ್ರಕಾರ ಅದ್ವೈತವೇದಾಂತದಲ್ಲಿ "ಜೀವೋ ಬ್ರಹ್ಮೈವನಾಪರಃ" ಎಂಬ ಶ್ರೀಶಂಕರಭಗವತ್ಪಾದರ ಉಕ್ತಿಯಂತೆ ಅದ್ವೈತಮಂತ್ರಗಳಿಗೆ ಮುಖ್ಯಾರ್ಥವನ್ನು ಸ್ವೀಕರಿಸಿ. ದ್ವೈತಮಂತ್ರಗಳಿಗೆ ಗೌಣಾರ್ಥವನ್ನು ಪ್ರತಿಪಾದಿಸುತ್ತಾರೆ. ಆದ್ದರಿಂದ ಈ ಕೇವಲದ್ವೈತ ಮತ್ತು ಕೇವಲಾಽದ್ವೈತ ಮತಗಳು ಶ್ರುತಿಯ ಒಂದು ಪಕ್ಷವನ್ನು ಮುಖ್ಯವಾಗಿ ಸ್ವೀಕರಿಸಿ ಮತ್ತೊಂದು ಪಕ್ಷವನ್ನು ಗೌಣವೆಂದು ಪ್ರತಿಪಾದಿಸುವ ಕಾರಣ ಇವುಗಳಿಗೆ ಶ್ರುತ್ಯೈಕದೇಶಿ ಸಿದ್ಧಾಂತಗಳೆಂದು ಕರೆಯುತ್ತಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೀರಶೈವ ಸಿದ್ಧಾಂತದಲ್ಲಿ ಜೀವ-ಪರಮಾತ್ಮರ ಭೇದ ಹಾಗೂ ಅಭೇದ ಇವೆರಡನ್ನೂ ವಾಸ್ತವಿಕವೆಂದು ಸ್ವೀಕರಿಸಿದ ಕಾರಣ ದ್ವೈತಾಽದ್ವೈತ ಶ್ರುತಿಗಳೆರಡೂ ಇಲ್ಲಿ ಮುಖ್ಯಾರ್ಥದಲ್ಲಿ ಸ್ವೀಕರಿಸಲ್ಪಡುತ್ತವೆ. ಆದ್ದರಿಂದ ವೀರಶೈವ ಸಿದ್ಧಾಂತವು ಸರ್ವಶ್ರುತಿ ಸಮನ್ವಯಾತ್ಮಕವಾದದ್ದು. ಅಂತೆಯೇ ಭಾಷ್ಯಕಾರರಾದ ಶ್ರೀಪತಿಪಂಡಿತಾರಾಧ್ಯ ಭಗವತ್ಪಾದರು-

ಶ್ರುತ್ಯೈಕದೇಶಪ್ರಾಮಾಣ್ಯಂ ದ್ವೈತಾಽದ್ವೈತಮತಾದಿಷು।
ದ್ವೈತಾಽದ್ವೈತಮತೇ ಶುದ್ಧೇ ವಿಶೇಷಾದ್ವೈತಸಂಜ್ಞಿತೇ।
ವೀರಶೈವೈಕಸಿದ್ಧಾಂತೇ ಸರ್ವಶ್ರುತಿಸಮನ್ವಯಃ॥[೮೩]

ಹೀಗೆ ಸಮನ್ವಯಾತ್ಮಕವಾದ ವೀರಶೈವ ಸಿದ್ಧಾಂತಕ್ಕೆ "ವಿಶೇಷಾಽದ್ವೈತ" ಎಂಬ ಅರ್ಥಗರ್ಭಿತನಾಮಕರಣವನ್ನು ಮಾಡಿದ್ದಾರೆ. ಇದರ ರಹಸ್ಯವೇನೆಂದರೆ- "ವಿಶ್ಚ ಶೇಷಶ್ಚ ವಿಶೇಷೌ=ಈಶಜೀವೌ; ತಯೋರದ್ವೈತಂ= ವಿಶೇಷಾಽದ್ವೈತಮ್" ಇದು ವಿಶೇಷಾದ್ವೈತ ಶಬ್ದದ ವ್ಯುತ್ಪತ್ತಿಯು "ವಿಶ್ಚಕ್ಷುಷಿ ವ್ಯೋಮ್ನಿ ವಾತೇ ಪರಮಾತ್ಮನಿ ಪಕ್ಷಿಣಿ"[೮೪] ಎಂಬೀ ಏಕಾಕ್ಷರ ಕೋಶದಲ್ಲಿ "ವಿಃ" ಎನ್ನುವ ಅಕ್ಷರಕ್ಕೆ ಕಣ್ಣು, ಆಕಾಶ, ವಾಯು, ಪಕ್ಷಿ ಮತ್ತು ಪರಮಾತ್ಮ ಎನ್ನುವ ಐದು ಅರ್ಥಗಳು ನಿರೂಪಿಸಲ್ಪಟ್ಟಿವೆ. ಆದ್ದರಿಂದ "ವಾತಿ ಉತ್ಪಾದಯತಿ ಜಗದಿತಿ ವಿಃ" ಎಂಬೀ ವ್ಯುತ್ಪತ್ತಿಯ ಮೇರೆಗೆ ಜಗತ್ತನ್ನು ಸೃಷ್ಟಿಸುವ ಪರಮಾತ್ಮನಿಗೆ "ವಿಃ" ಎಂದು ಕರೆಯಲಾಗುತ್ತದೆ.

ಅಮರಕೋಶದಲ್ಲಿ "ವಿ" ಎಂಬ ಶಬ್ದಕ್ಕೆ ಪಕ್ಷಿ ಎಂದೇ ಅರ್ಥವನ್ನು ಹೇಳಲಾಗಿದೆ. ಹಾಗಾದರೂ "ದ್ವಾ ಸುಪರ್ಣಾ ಸಯುಜಾ ಸಖಾಯಾ"[೮೫] ಈ ಉಪನಿಷದ್ವಚನದಲ್ಲಿ ಜೀವಾತ್ಮ-ಪರಮಾತ್ಮರಿಬ್ಬರನ್ನು ಪಕ್ಷಿ ಶಬ್ದದಿಂದ ಪ್ರತಿಪಾದಿಸಿರುವುದರಿಂದ ಪ್ರಕೃತವಾದ "ವಿ" ಶಬ್ದದ ಅರ್ಥವನ್ನು ಪರಮಾತ್ಮನೆಂತಲೇ ಗ್ರಹಿಸಬೇಕು. ಅದರಂತೆ "ಶೇಷ" ಎಂದರೆ ಆ ಪರಮಾತ್ಮನ ಅಂಶವಾದ ಜೀವಾತ್ಮನು ಎಂಬುದಾಗಿ ಗ್ರಹಿಸಬೇಕು. "ಯಥಾಽಗ್ನೇಃ ಕ್ಷುದ್ರಾ ವಿಸ್ಫುಲಿಂಗಾಃ"[೮೬] ಎಂಬ ಶ್ರುತಿ ವಚನದಲ್ಲಿ ಅಗ್ನಿಕಣದ ದೃಷ್ಟಾಂತದಿಂದ ಜೀವಾತ್ಮನು ಪರಮಾತ್ಮನ ಅಂಶ ಎಂಬುದಾಗಿ ಪ್ರತಿಪಾದಿಸಲ್ಪಟ್ಟಿದೆ.

ಹೀಗೇ ಅಂಶಾಂಶಿರೂಪರಾದ ಜೀವ-ಪರಮಾತ್ಮರಿಗೆ "ಯಥಾ ನದ್ಯಃ ಸ್ಯಂದಮಾನಾಃ ಸಮುದ್ರೇಽಸ್ತಂಗಚ್ಛಂತಿ"[೮೭] ಎನ್ನುವ ಶ್ರುತಿಯು ಅಭೇದವನ್ನು ಬೋಧಿಸುತ್ತದೆ. ತಾತ್ಪರ್ಯವೇನೆಂದರೆ- ಸಮುದ್ರವನ್ನು ಕೂಡುವ ಪೂರ್ವದಲ್ಲಿ ನದಿಯು ಸಮುದ್ರಕ್ಕಿಂತ ಬೇರೆಯಾಗಿ ಇದ್ದರೂ ಅದರಲ್ಲಿ ಕೂಡಿದಾಗ ಹೇಗೆ ತನ್ನ ನಾಮ-ರೂಪಗಳನ್ನು ಕಳೆದುಕೊಂಡು ಅಭಿನ್ನವಾಗುತ್ತದೆಯೋ ಅದರಂತೆ, ಸಂಸಾರ ದಶೆಯಲ್ಲಿ ಪರಮಾತ್ಮನಿಗಿಂತ ಭಿನ್ನನಾದ ಅವನ ಅಂಶನಾದ ಜೀವಾತ್ಮನು ಮುಕ್ತಿಯ ದಶೆಯಲ್ಲಿ ಅಭಿನ್ನನಾಗುತ್ತಾನೆ. ಈ ಪ್ರಕಾರವಾಗಿ 'ವಿ'ಶಬ್ದವಾಚ್ಯನಾದ ಪರಮಾತ್ಮನಿಗೂ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಶೇಷ'ಶಬ್ದವಾಚ್ಯನಾದ ಜೀವಾತ್ಮನಿಗೂ ಮುಕ್ತಿಯ ಸ್ಥಿತಿಯಲ್ಲಿ ಅದ್ವೈತವನ್ನು ಬೋಧಿಸುವ ಸಿದ್ಧಾಂತಕ್ಕೆ "ವಿಶೇಷಾದ್ವೈತ" ಎಂದು ಕರೆಯುತ್ತಾರೆ.

ಅಂತೆಯೇ-

ವಿಶಬ್ದೇನೋಚ್ಯತೇ ಶಂಭುರ್ಹಂಸಹಂಸೇತಿ ಮಂತ್ರತಃ।
ಶೇಷ ಶಬ್ದೇನ ಶಾರೀರೋ ಯಥಾಗ್ನೇರಿತಿ ಮಂತ್ರತಃ॥
ಅದ್ವೈತೇನ ಭವೇದ್ಯೋಗೋ ಯಥಾನದ್ಯ ಇತಿ ಶ್ರುತೇಃ।[೮೮]

ಎಂಬುದಾಗಿ ಭಾಷ್ಯಕಾರರು "ವಿಶೇಷಾದ್ವೈತ" ಶಬ್ದದ ರಹಸ್ಯಾರ್ಥವನ್ನು ಸಂಕ್ಷೇಪವಾಗಿ ಪ್ರತಿಪಾದಿಸಿದ್ದಾರೆ.

ನ್ಯಾಯ, ವೈಶೇಷಿಕ ಮತ್ತು ಯೋಗದರ್ಶನಗಳಲ್ಲಿ ಜೀವ-ಜೀವರ ಭೇದ ಮತ್ತು ಜೀವ-ಈಶ್ವರರ ಭೇದವು ಪಾರಮಾರ್ಥಿಕವಾದದ್ದು. ಸಾಂಖ್ಯ ಮತ್ತು ಪೂರ್ವಮೀಮಾಂಸಾ ದರ್ಶನಗಳಲ್ಲಿ ಈಶ್ವರನನ್ನು ಒಪ್ಪದಿದ್ದರೂ ಜೀವ-ಜೀವರಭೇದವನ್ನು ವಾಸ್ತವಿಕವೆಂದು ಸ್ವೀಕರಿಸುತ್ತಾರೆ. ಹೀಗೆ ಈ ದ್ವೈತ ದರ್ಶನಗಳಲ್ಲಿ ದ್ವೈತಮಂತ್ರಗಳಿಗೆ ಮಾತ್ರ ಪ್ರಾಮಾಣಿಕತೆ ಇದೆ.

ಅದ್ವೈತ ವೇದಾಂತದಲ್ಲಿ ಜೀವ-ಜೀವರಲ್ಲಿ ಮತ್ತು ಜೀವ-ಈಶ್ವರರಲ್ಲಿ ತೋರುವ ಭೇದವು ಔಪಾಧಿಕವಾದದ್ದು. ಅವರ ಅಭೇದವೇ ಪಾರಮಾರ್ಥಿಕವೆಂದು ಸ್ವೀಕರಿಸುವ ಕಾರಣ ಇಲ್ಲಿ ಅಭೇದ ಪ್ರತಿಪಾದಕ ಶ್ರುತಿಗಳಿಗೆ ಮುಖ್ಯಾರ್ಥವಿದೆ ದ್ವೈತ ಶ್ರುತಿಗಳಿಗೆ ಗೌಣಾರ್ಥವಿದೆ. ಆದ್ದರಿಂದ ಈ ಎಲ್ಲ ದರ್ಶನಗಳು ಶ್ರುತ್ಯೈಕದೇಶಿಗಳೆಂದು ಕರೆಯಲ್ಪಡುತ್ತವೆ.

ವೀರಶೈವ ದರ್ಶನದಲ್ಲಿ ಜೀವನ ಸಂಸಾರಾವಸ್ಥೆಯಲ್ಲಿ ತೋರುವ ದ್ವೈತ ಮತ್ತು ಮುಕ್ತಾವಸ್ಥೆಯಲ್ಲಿ ತೋರುವ ಅದ್ವೈತಾವಸ್ಥೆಗಳು ವಾಸ್ತವಿಕಗಳೆಂದು ಸ್ವೀಕರಿಸುವ ಕಾರಣ ಉಭಯ ಶ್ರುತಿಗಳಿಗೆ ಇಲ್ಲಿ ಸಮಾನವಾದ ಪ್ರಾಮಾಣ್ಯವನ್ನು ಒಪ್ಪುವುದರಿಂದ ಇದು ಸರ್ವಶ್ರುತಿ ಸಮನ್ವಯಾತ್ಮಕವಾದದ್ದು. ಅಂತೆಯೇ-

ವೇದೈಕದೇಶವರ್ತಿಭ್ಯಃ ಸಾಂಖ್ಯಾದಿಭ್ಯೋ ಮಹಾಮುನೇ।
ಸರ್ವವೇದಾನುಸಾರಿತ್ವಾಚ್ಛೈವತಂತ್ರಂ ವಿಶಿಷ್ಯತೇ॥
ಶೈವತಂತ್ರಮಿತಿಪ್ರೋಕ್ತಂ ಸಿದ್ಧಾಂತಾಖ್ಯಂ ಶಿವೋದಿತಮ್।
ಸರ್ವವೇದಾರ್ಥರೂಪತ್ವಾತ್ ಪ್ರಾಮಾಣ್ಯಂ ವೇದವತ್ಸದಾ॥[೮೯]

ಎಂಬುದಾಗಿ ಶಿವಯೋಗಿಶಿವಾಚಾರ್ಯರು ವೀರಶೈವದರ್ಶನದ ವೈಶಿಷ್ಟ್ಯವನ್ನು ನಿರೂಪಿಸಿದ್ದಾರೆ. ಹೀಗೆ ಜೀವಾತ್ಮನ ವಿಚಾರದಲ್ಲಿ ಆಸ್ತಿಕ ಷಡ್ ದರ್ಶನಗಳಿಗಿಂತಲೂ ಸಿದ್ಧಾಂತ ಸಿಖಾಮಣಿಯ ಸಿದ್ಧಾಂತವು ಸರ್ವಮಾನ್ಯವೆಂಬುದಾಗಿ ತಿಳಿದುಬರುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸೃಷ್ಟಿಸಮೀಕ್ಷೆ

ಚರಾಚರಾತ್ಮಕವಾಗಿ ತೋರುವ ಈ ಜಗತ್ತಿನ ವ್ಯವಸ್ಥೆಯನ್ನು ಭಾರತೀಯ ದಾರ್ಶನಿಕರು ಹಲವು ವಿಧವಾಗಿ ಮಂಡಿಸಿದ್ದಾರೆ. ಅವುಗಳಿಗೆ ಆರಂಭವಾದ, ಪರಿಣಾಮವಾದ, ವಿವರ್ತವಾದ ಮತ್ತು ಅವಿಕೃತಪರಿಣಾಮವಾದವೆಂಬುದಾಗಿ ಕರೆದಿದ್ದಾರೆ. ವೀರಶೈವರು ಅವಿಕೃತಪರಿಣಾಮವಾದಿಗಳು. ಈ ಸಿದ್ಧಾಂತದಲ್ಲಿ ಪರಶಿವನ ಶಕ್ತಿವಿಕಾಸದಿಂದ ಸೃಷ್ಟಿ ಮತ್ತು ಶಕ್ತಿಸಂಕೋಚದಿಂದ ಪ್ರಲಯವೆಂಬುದಾಗಿ ಪ್ರತಿಪಾದಿಸುತ್ತಾರೆ. ಆಮೆಯು ತನ್ನ ಅವಯವಗಳ ಸಂಕೋಚ-ವಿಕಾಸಮಾಡಿದರೂ ಅದರಲ್ಲಿ ಯಾವ ವಿಕಾರವೂ ಬಾರದಿರುವಂತೆ ಪರಶಿವನ ಶಕ್ತಿಯ ಸಂಕೋಚ-ವಿಕಾಸದಿಂದ ಜಗತ್ತಿನಪ್ರಲಯ ಹಾಗೂ ಸೃಷ್ಟಿಗಳು ಉಂಟಾದರೂ ಪರಶಿವನಿಗೆ ಯಾವವಿಕಾರವೂ ಬಾರದಿರುವುದರಿಂದ ಇದಕ್ಕೆ ಅವಿಕೃತಪರಿಣಾಮವಾದವೆಂದು ಕರೆದಿದ್ದಾರೆ. ಅದನ್ನೇ ಶ್ರೀ ಶಿವಯೋಗಿಶಿವಾಚಾರ್ಯರು-

ಆತ್ಮಶಕ್ತಿವಿಕಾಸೇನ ಶಿವೋ ವಿಶ್ವಾತ್ಮನಾ ಸ್ಥಿತಃ।
ಕುಟೀಭಾವಾದ್ಯಥಾ ಭಾತಿ ಪಟಃ ಸ್ವಸ್ಯ ಪ್ರಸಾರಣಾತ್॥[೯೦]

ಹೀಗೆ ಪಟದೃಷ್ಟಾಂತದಿಂದ ತಿಳಿಯಪಡಿಸಿದ್ದಾರೆ. ಸೈನಿಕರ ನಿವಾಸಗಳಲ್ಲಿ ಬಟ್ಟೆಗಳಿಂದ ನಿರ್ಮಿತಗಳಾದ ಗುಡಿಸಲುಗಳನ್ನು ಕಾಣುತ್ತೇವೆ. ಅಲ್ಲಿ ಬಟ್ಟೆಗಳು ವಿಲಕ್ಷಣ ಪ್ರಸಾರದಿಂದ ಗುಡಿಸಲುಗಳ ರೂಪವನ್ನು ತಾಳಿದರೂ ಹೇಗೆ ಬಟ್ಟೆಯಲ್ಲಿ ಯಾವ ವಿಕಾರವೂ ಬರುವುದಿಲ್ಲವೋ ಅದರಂತೆ ಪರಶಿವನು ತನ್ನಲ್ಲಿ ಅವಿನಾಭಾವ ಸಂಬಂಧಿನಿಯಾದ ಶಕ್ತಿಯ ವಿಕಾಸದಿಂದ ಪ್ರಪಂಚಾಕಾರನಾದರೂ ಅವನಿಗೆ ಯಾವ ವಿಕಾರವೂ ಪ್ರಾಪ್ತವಾಗದ ಕಾರಣ ಇದಕ್ಕೆ ಅವಿಕೃತಪರಿಣಾಮವಾದವೆನ್ನುವರು. ಸಿದ್ಧಾಂತಶಿಖಾಮಣಿಯ ಶಿವಜಗನ್ಮಯಸ್ಥಲದಲ್ಲಿ-

ಯಸ್ಮಾದೇತತ್ತಮುತ್ಪನ್ನಂ ಮಹಾದೇವಾಚ್ಚರಾಚರಮ್।
ತಸ್ಮಾದೇತನ್ನ ಭಿದ್ಯೇತ ಯಥಾ ಕುಂಭಾದಿಕಂ ಮೃದಃ॥
ಶಿವತತ್ತ್ವಾತ್ಸಮುತ್ಪನ್ನಂ ಜಗದಸ್ಮಾನ್ನ ಭಿದ್ಯತೇ।
ಫೇನೋರ್ಮಿಬುದ್ಬುದಾಕಾರೋ ಯಥಾ ಸಿಂಧೋರ್ನ ಭಿದ್ಯತೇ॥
ಯಥಾ ತಂತುಭಿರುತ್ಪನ್ನಃ ಪಟಸ್ತಂತುಮಯಃ ಸ್ಮೃತಃ।
ತಥಾ ಶಿವಾತ್ ಸಮುತ್ಪನ್ನಂ ಶಿವ ಏವ ಚರಾಚರಮ್॥
ಪತ್ರಶಾಖಾದಿರೂಪೇಣ ಯಥಾ ತಿಷ್ಠತಿ ಪಾದಪಃ।
ತಥಾ ಭೂಮ್ಯಾದಿರೂಪೇಣ ಶಿವ ಏಕೋ ವಿರಾಜತೇ॥[೯೧]

ಹೀಗೆ ಅನೇಕ ದೃಷ್ಟಾಂತಗಳ ಮೂಲಕ ಪ್ರಪಂಚವನ್ನು ಶಿವಮಯವನ್ನಾಗಿ ನಿರೂಪಿಸಿ ಶಕ್ತಿವಿಶಿಷ್ಟ ಶಿವನು ಜಗತ್ತಿಗೆ ಅಭಿನ್ನನಿಮಿತ್ತೋಪಾದಾನ ಕಾರಣನೆಂಬುದನ್ನು ಸ್ಪಷ್ಟಪಡಿಸಲಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೈಯಾಯಿಕರ ಆರಂಭವಾದದ ಪ್ರಕಾರ ಜಗದುತ್ಪತ್ತಿಯಲ್ಲಿ ಈಶ್ವರನು ನಿಮಿತ್ತಕಾರಣನು ಪರಮಾಣುಗಳು ಉಪಾದಾನಕಾರಣಗಳು. ಸಾಂಖ್ಯ ಹಾಗೂ ಯೋಗದರ್ಶನಗಳಲ್ಲಿ ಪ್ರಕೃತಿಯು ಉಪಾದಾನಕಾರವು ಈಶ್ವರನು ಪ್ರಕೃತಿ-ಪುರುಷರ ಸಂಯೋಗದಲ್ಲಿ ನಿಮಿತ್ತಕಾರಣನು. "ಕಾರ್ಯಗುಣಾಃ ಕಾರಣಗುಣಾನಪೇಕ್ಷಂತೇ" ಎಂಬ ನಿಯಮಾನುಸಾರವಾಗಿ ವಿಚಾರಮಾಡಲು ನ್ಯಾಯ-ವೈಶೇಷಿಕಾಭಿಮತ ಪರಮಾಣು ಆರಂಭವಾದಕ್ಕಿಂತ ಸಾಂಖ್ಯ-ಯೋಗ ದರ್ಶನಾಭಿಮತ ಪ್ರಕೃತಿ ಪರಿಣಾಮವಾದವು ಯೋಗ್ಯವೆಂದು ತೋರುತ್ತದೆ. ಸಾಂಖ್ಯರು ಹೇಳುವ ಪ್ರಕೃತಿಯೇ ಅದ್ವೈತ ವೇದಾಂತದಲ್ಲಿ ಮಾಯಾ-ಕಲ್ಪಿತಪ್ರಕೃತಿ ಎಂದು ಕರೆಯಲ್ಪಡುತ್ತದೆ. ಆದರೆ ವೈಶಿಷ್ಟ್ಯವೆಂದರೆ ಸಾಂಖ್ಯಾಭಿಮತ ಪ್ರಕೃತಿಯು ನಿತ್ಯವಾದದ್ದು, ಅದ್ವೈತಾಭಿಮತ ಪ್ರಕೃತಿಯು ಅನಿತ್ಯವಾದದ್ದು. ಇಲ್ಲಿ ನೈಯಾಯಿಕರ ಪರಮಾಣುವಾದವಾಗಲಿ, ಸಾಂಖ್ಯರ ಪ್ರಕೃತಿ ಪರಿಣಾಮವಾಗಲಿ ಉಪಾದಾನದ ಜಡತ್ವದಲ್ಲಿ ಸಾಮ್ಯತೆ ಕಂಡುಬರುತ್ತದೆ. ಅದ್ವೈತವೇದಾಂತದಲ್ಲಿ ಮಾಯಾವಿಶಿಷ್ಟನಾದ ಈಶ್ವರನು ಅಭಿನ್ನನಿಮಿತ್ತೋಪಾದಾನಕಾರಣನೆಂದು ಸ್ವೀಕರಿಸಿರುವುದರಿಂದ ಪೂರ್ವೋಕ್ತ ದರ್ಶನಗಳಿಗಿಂತ ಇದು ಉತ್ಕೃಷ್ಟವಾಗಿ ತೋರುತ್ತದೆ. ಆದರೆ ಅದ್ವೈತವೇದಾಂತದಲ್ಲಿ ಆ ಈಶ್ವರನಿಗೆ ಹಾಗೂ ಅವನಿಂದುತ್ಪನ್ನವಾದ ಜಗತ್ತಿಗೆ ಮಿಥ್ಯಾತ್ವವನ್ನು ಪ್ರತಿಪಾದಿಸುತ್ತಾರೆ. ವೀರಶೈವ ಸಿದ್ಧಾಂತದಲ್ಲಿ ಮಾಯೆಯಾಗಲಿ, ಮಾಯಾವಿಶಿಷ್ಟ ಮಹೇಶ್ವರನಾಗಲಿ ಮಿಥ್ಯಾಭೂತರಲ್ಲದ ಕಾರಣ ಅವರ ಅವಿಕೃತ ಪರಿಣಾಮವಾದ ಜಗತ್ತಾದರೂ ಮಿಥ್ಯಾಭೂತವಲ್ಲ.

> ಯಸ್ಯೋರ್ಮಿಬುದ್ಬುದಾಭಾಸಃ ಷಟ್‌ತ್ರಿಂಶತ್ತತ್ತ್ವಸಂಚಯಃ।
> ನಿರ್ಮಲಂ ಶಿವನಾಮಾನಂ ತಂ ವಂದೇ ಚಿನ್ಮಹೋದಧಿಮ್॥[೨]

ಎಂಬ ಸಿದ್ಧಾಂತ ಶಿಖಾಮಣಿಯ ವಚನಾನುಸಾರವಾಗಿ ಪ್ರಪಂಚವೆಂದರೆ ಮೂವತ್ತಾರು ತತ್ತ್ವಾತ್ಮಕವಾದದ್ದು. ಶಿವಾದಿಭೂಮ್ಯಂತಗಳಾದ ಮೂವತ್ತಾರು ತತ್ತ್ವಗಳು ಶಕ್ತಿವಿಶಿಷ್ಟ ಪರಶಿವನ ವಿಕಾಸ ಸ್ವರೂಪಗಳಾದ್ದರಿಂದ ಮಿಥ್ಯೆಗಳಾಗಲಾರವು. ಅಂತೆಯೇ ವೀರಶೈವ ಸಿದ್ಧಾಂತದಲ್ಲಿ ಸಕಲ ಪದಾರ್ಥಗಳಿಗೆ ತತ್ತ್ವಗಳೆಂದು ಕರೆದಿದ್ದಾರೆ. "ತತ್ತ್ವಂ ನಾಮ ಅನಾರೋಪಿತಂ ರೂಪಂ ಪ್ರಮಿತಿವಿಷಯತ್ವಂ ವಾ" ಎಂಬ ವ್ಯುತ್ಪತ್ತಿಯ ಮೇರೆಗೆ ಪ್ರಪಂಚದ ಸತ್ಯತ್ವವೇ ಸಿದ್ಧವಾಗುತ್ತದೆ. ಅಂತೆಯೇ ಭಾಷ್ಯಕಾರರು-

> ಜೀವಃ ಸತ್ಯಂ ಜಗತ್ಸತ್ಯಂ ಶಿವಃ ಸತ್ಯಂ ಸ್ವಭಾವತಃ।
> ತಯೋರಭೇದಃ ಸತ್ಯಂ ವಾ ಕ್ರಿಮಿಭ್ರಮರಯೋರಿವ॥[೩]

ಈ ಆಗಮೋಕ್ತಿಯನ್ನು ಉದಾಹರಿಸಿ ಪ್ರಪಂಚದ ಸತ್ಯತ್ವವನ್ನೇ ಸಮರ್ಥಿಸಿದ್ದಾರೆ.

ಸಿದ್ಧಾಂತ ಶಿಖಾಮಣಿಯ ಭಕ್ತಸ್ಥಲಾಂತರ್ಗತವಾದ ಸಂಸಾರಹೇಯಸ್ಥಲದಲ್ಲಿ ಸಂಸಾರಕ್ಕೆ ಹೇಯವೆಂದು ಬೋಧಿಸಿರುವುದರಿಂಧ ಪ್ರಪಂಚವು ಸತ್ಯವು ಹೇಗಾಗುವುದು? ಎಂಬ ಸಂದೇಹವು ಮೂಡುವುದು ಸಹಜ. ಇಲ್ಲಿರುವ ರಹಸ್ಯವೇನೆಂದರೆ ಜಗತ್ತು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮತ್ತು ಸಂಸಾರವೆಂಬ ಶಬ್ದಗಳು ಒಂದೇ ಅರ್ಥದ ಪರ್ಯಾಯ ಶಬ್ದಗಳಾಗಿ ವ್ಯವಹರಿಸಲ್ಪಡುತ್ತವೆ. ಸಾಮಾನ್ಯ ದೃಷ್ಟಿಯಲ್ಲಿ ಅವೆರಡೂ ಒಂದಾಗಿ ತೋರಿದರೂ ಪರ್ಯಾಲೋಚಿಸಿದಾಗ ಅವುಗಳ ಸೂಕ್ಷ್ಮಭೇದವು ದೃಷ್ಟಿಗೆ ಗೋಚರಿಸುವುದು.

ವಾಸ್ತವಿಕವಾಗಿ ಜಗತ್ತೇ ಬೇರೆ ಸಂಸಾರವೇ ಬೇರೆ. ಇವುಗಳಲ್ಲಿ ಪರಮಾತ್ಮನಿಂದ ನಿರ್ಮಿತವಾದದ್ದು "ಜಗತ್ತು", ಜೀವಾತ್ಮನಿಂದ ಕಲ್ಪಿತವಾದದ್ದು "ಸಂಸಾರ"ವು. ಶ್ರೀ ವಿದ್ಯಾರಣ್ಯಸ್ವಾಮಿಗಳು ಪಂಚದಶಿಯ ಚಿತ್ರದೀಪ ಪ್ರಕರಣದಲ್ಲಿ-

ಈಕ್ಷಣಾದಿಪ್ರವೇಶಾಂತಾ ಸೃಷ್ಟಿರೀಶೇನ ಕಲ್ಪಿತಾ।
ಜಾಗ್ರದಾದಿವಿಮೋಕ್ಷಾಂತಃ ಸಂಸಾರೋ ಜೀವಕಲ್ಪಿತಃ॥

ಈ ರೀತಿಯಾಗಿ ಜಗತ್ತು ಹಾಗೂ ಸಂಸಾರಗಳ ಭೇದವನ್ನು ಸ್ಪಷ್ಟಪಡಿಸಿದ್ದಾರೆ. ಮಾಯಾ ಶಕ್ತಿಯಿಂದ ಯುಕ್ತನಾದ ಪರಮಾತ್ಮನು ಸರ್ವಜ್ಞನೂ, ಸರ್ವಕರ್ತನೂ ಆದುದರಿಂದ, ಆತನು ಭೂತ-ಭೌತಿಕ ಜಗತ್ತನ್ನು ನಿರ್ಮಿಸಿದ್ದಾನೆ. ಅವಿದ್ಯಾಮೋಹಿತನಾದ ಜೀವಾತ್ಮನಿಗೆ ಜಗತ್ತನ್ನು ಸೃಷ್ಟಿಸುವ ಸಾಮರ್ಥ್ಯವಿಲ್ಲದ ಕಾರಣ ಈಶನಿರ್ಮಿತಗಳಾದ ಪದಾರ್ಥಗಳನ್ನೇ ತನ್ನ ಕರ್ಮ ಹಾಗೂ ಸಾಮರ್ಥ್ಯಕ್ಕನುಸಾರವಾಗಿ ಸಂಗ್ರಹಿಸಿ, ಆ ಪದಾರ್ಥಗಳಲ್ಲಿ ಇವು ನನ್ನವೆಂಬ ಮೋಹವನ್ನು ತಾಳುತ್ತಾನೆ; ಹೀಗೆ ಕೆಲವೇ ವಸ್ತುಗಳ ವಿಷಯಕವಾಗಿ ಜೀವಾತ್ಮನಲ್ಲಿರುವ ನಾನು, ನನ್ನದೆಂಬ ಈ ಅನಾದಿ ಮೋಹ-ಮಮಕಾರವೇ ಸಂಸಾರವು. "ಸಂಸರತೀತಿ ಸಂಸಾರಃ" ಎನ್ನುವ ವ್ಯುತ್ಪತ್ತಿಯ ಮೇರೆಗೆ ಜೀವಾತ್ಮನಿಗೆ ಆಶೆ ತೋರಿಸಿ ಸದಾಕಾಲದಲ್ಲಿ ಆತನನ್ನು ತಿರುಗುವಂತೆ ಮಾಡಿದೆ ಈ ಮೋಹರೂಪವಾದ ಸಂಸಾರವು.

ಈ ರೀತಿಯಾಗಿ "ತದೈಕ್ಷತ ಬಹುಸ್ಯಾಂ ಪ್ರಜಾಯೇಯ"[೪] ಎನ್ನುವಂತೆ ಈಶ್ವರನ ಸತ್ಯಸಂಕಲ್ಪದಿಂದ ರಚಿತವಾದದ್ದು ಜಗತ್ತು; ಮತ್ತು ಜಾಗ್ರದವಸ್ಥೆಯಿಂದ ಮುಕ್ತಿಹೊಂದುವವರೆಗೆ ಜೀವಾತ್ಮನ ಅವಿದ್ಯೆಯಿಂದ ಕಲ್ಪಿತವಾದ ನಾನು, ನನ್ನದೆಂಬ ಅಭಿಮಾನವೇ "ಸಂಸಾರ"ವು. ಜೀವಾತ್ಮನ ಈ ಸಂಸಾರವು ಅವಿದ್ಯಾ ಕಲ್ಪಿತವಾಗಿರುವುದರಿಂದ ಅದು ತತ್ತ್ವಜ್ಞಾನದಿಂದ ನಿವೃತ್ತನಾಗುವುದು; ಆದರೆ ಜಗತ್ತು ಶಿವಸ್ವರೂಪವಾದ್ದರಿಂದ ಅದು ಜ್ಞಾನದಿಂದ ನಿವೃತ್ತವಾಗಲಾರದು.

ಜಗತ್ತಿನ ಉತ್ಪತ್ತಿಗೆ ಪರಶಿವನು ನಿಮಿತ್ತಕಾರಣನು. ಹಾಗೂ ಅವನಲ್ಲಿ ಅವಿನಾಭಾವ ಸಂಬಂಧಿನಿಯಾದ ಶಕ್ತಿಯು ಉಪಾದಾನಕಾರಣವಾಗಿರುವುದು; ಆದರೆ ಜೀವಾತ್ಮನ ಸಂಸಾರವು ಕಲ್ಪಿತವಾಗಿರವುದರಿಂದ ಇದಕ್ಕೆ ಉಪಾದಾನಕಾರಣವಿಲ್ಲ. ಜೀವಾತ್ಮನಲ್ಲಿಯ ಅವಿದ್ಯಾಶಕ್ತಿಯು ಮಾತ್ರ ನಿಮಿತ್ತಕಾರಣವಾಗಿರುವುದು. ಹೀಗೆ ಉತ್ಪತ್ತಿಯ ಭೇದವನ್ನವಲೋಕಿಸಿದಾಗಲೂ, ಜಗತ್ತು ಹಾಗೂ ಸಂಸಾರಗಳಲ್ಲಿಯ ಭೇದವು ಸ್ಪಷ್ಟವಾಗಿ ತೋರುವುದು. ಜೀವಾತ್ಮನಿಗೆ ಜ್ಞಾನೋದಯವಾಗಲು ಆತನ ಸಂಸಾರವು ಬಾಧಿತಗೊಂಡರೂ, ಈಶನಿರ್ಮಿತವಾದ ಜಗತ್ತಿಗೆ ಅದಾವ ಬಾಧೆಯೂ ಆಗಲಾರದು. ಆದರೆ ಜಗತ್ತಿನ ಲಯವು ಈಶ್ವರನ ತಿರೋಧಾನಶಕ್ತಿಯಿಂದ ಮಾತ್ರ ಆಗಲು ಸಾಧ್ಯ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಸಾರವೇ ಸುಖ-ದುಃಖಗಳಿಂದ ಕೂಡಿಕೊಂಡಿರುವುದು. ಜಗತ್ತು ಸುಖ-ದುಃಖಗಳಿಂದ ಮಿಶ್ರಿತವಾದದ್ದಲ್ಲ; ಅಂತೆಯೇ ಜೀವನ್ಮುಕ್ತರು ಸಂಸಾರವನ್ನು ಕಳೆದುಕೊಂಡು ಜಗತ್ತಿನಲ್ಲಿ ವಾಸಿಸುತ್ತಿದ್ದರೂ, ಸುಖ-ದುಃಖಗಳ ಲೇಪವಿಲ್ಲದೇ ಜೀವಿಸುತ್ತಿರುತ್ತಾರೆ.

ಹೀಗೆ ಜಗತ್ತು ಮತ್ತು ಸಂಸಾರಗಳ ಬಗ್ಗೆ ಕೂಲಂಕಷವಾಗಿ ವಿಚಾರ ಮಾಡಿದ ವೀರಶೈವ ಆಚಾರ್ಯರು ಜಗತ್ತನ್ನು ಸತ್ಯವೆಂಬುದಾಗಿ ಸ್ವೀಕರಿಸಿ, ಸಂಸಾರವನ್ನು ತುಚ್ಛವಾದುದನ್ನಾಗಿಯೂ, ಹೇಯವಾದುದನ್ನಾಗಿಯೂ ಉಪದೇಶಿಸಿದ್ದಾರೆ. ಶ್ರೀ ಜಗದ್ಗುರು ರೇಣುಕ ಭಗವತ್ಪಾದರು- "ಶಿವತತ್ತ್ವಾತ್ ಸಮುತ್ಪನ್ನಂ ಜಗದಸ್ಮಾನ್ನ ಭಿದ್ಯತೇ" "ತಥಾ ಶಿವಾತ್ ಸಮುತ್ಪನ್ನಂ ಶಿವ ಏವ ಚರಾಚರಂ", "ತಸ್ಮಾಚ್ಛಿವಮಯಂ ಸರ್ವಂ ಜಗದೇತಚ್ಚರಾಚರಂ", "ತಥಾ ಭೂಮ್ಯಾದಿರೂಪೇಣ ಶಿವ ಏಕೋ ವಿರಾಜತೇ" ಇತ್ಯಾದಿಯಾಗಿ ಸಿದ್ಧಾಂತಶಿಖಾಮಣಿಯ ಶಿವಜಗನ್ಮಯಸ್ಥಲದಲ್ಲಿ ಶಿವ-ಶಕ್ತಿಯರ ವಿಲಾಸವಾದ ಈ ಜಗತ್ತು ಶಿವ-ಶಕ್ತಿಯರಂತೆ ಸತ್ಯವಾದದ್ದೆಂದು ಅಪ್ಪಣೆಕೊಡಿಸಿದ್ದಾರೆ. ತಂತುಗಳಿಂದ ನಿರ್ಮಿತವಾದ ವಸ್ತ್ರವು ಹೇಗೆ ತಂತುಮಯವೋ, ಮಣ್ಣಿನಿಂದ ನಿರ್ಮಿತವಾದ ಕೊಡವು ಹೇಗೆ ಮೃದ್ರೂಪವಾದುದೋ ಹಾಗೆಯೇ ಶಿವ ಶಕ್ತಿಯರಿಂದುತ್ಪನ್ನವಾದ ಜಗತ್ತಾದರೂ ಶಿವ-ಶಕ್ತಿಯರ ಸ್ವರೂಪವಾದದ್ದು. ಆದ್ದರಿಂದ ಅದೆಂದಿಗೂ ಸುಳ್ಳಾಗಲಾರದು. ಈ ಜಗತ್ತಿಗೆ ಸುಳ್ಳೆಂದು ಹೇಳಿದ ಅದೆಷ್ಟೋ ವ್ಯಕ್ತಿಗಳು ಹಾಗೂ ಅವರ ಸಾಹಿತ್ಯವೆಲ್ಲ ಕಾಲಗರ್ಭದಲ್ಲಿ ಸುಳ್ಳಾಗಿಹೋಗಿದೆಯೇ ವಿನಹ ಜಗತ್ತು ಮಾತ್ರ ಅಂದಿನಿಂದ ಇಂದಿನವರೆಗೆ ಯಥಾವತ್ತಾಗಿಯೇ ಕಂಗೊಳಿಸುತ್ತಿದೆ.

ಇನ್ನು ಜಗತ್ತನ್ನು ಸುಳ್ಳೆಂದು ಹೇಳುವ ಅದ್ವೈತವೇದಾಂತಿಗಳ ಅಭಿಪ್ರಾಯವಾದರೂ ಜೀವಾತ್ಮನ ಮನೋಮಯಸಂಸಾರವನ್ನು ಅಲ್ಲಗಳೆಯುವುದರಲ್ಲಿಯೇ ಪರ್ಯವಸಾನ ಹೊಂದುವುದಾಗಿ ತಿಳಿಯಬೇಕು. ಅದಕ್ಕೋಸ್ಕರವಾಗಿ, ಕಾಣುವ ಜಗತ್ತು ಸತ್ಯ-ಶಿವ-ಸುಂದರವಾದದ್ದು. ಮನೋಮಯವಾದ ಜೀವಾತ್ಮನ ಸಂಸಾರವು ಅಮಂಗಲವಾದದ್ದು, ಅಂತೆಯೇ ಅದು ಹೇಯವೆಂಬುದಾಗಿ ತಿಳಿಯಬೇಕು.

ಇದೂ ಅಲ್ಲದೇ ಜಗತ್ತಿನಲ್ಲಿ ಜ್ಞಾನಿಗಳಿಗಿಂತಲೂ ಅಜ್ಞಜೀವಿಗಳೇ ಹೇರಳವಾಗಿ ಇರುತ್ತಾರೆ. "ಪ್ರಪಂಚೋ ಮಿಥ್ಯಾ" ಎಂಬ ಉಪದೇಶವನ್ನು ಕೇಳಿದಾಗ ಜ್ಞಾನಿಗಳು ಅದರಲ್ಲಿಯ ಆಸ್ಥೆಯನ್ನು ತ್ಯಜಿಸಿ ಪರಬ್ರಹ್ಮದಲ್ಲಿ ನಿಷ್ಠೆಯುಳ್ಳವರಾದರೂ ಅಜ್ಞಜೀವಿಗಳು ಈಶ್ವರ ಹಾಗೂ ಜಗತ್ತುಗಳು ಮಿಥ್ಯೆ ಎಂಬ ಮಾತನ್ನು ಕೇಳಿದಾಗ ಈಶ್ವರ ಮತ್ತು ನಿತ್ಯ-ನೈಮಿತ್ತಿಕ ಕರ್ಮಗಳಲ್ಲಿ ಶ್ರದ್ಧಾರಹಿತರಾಗಿ ನಾಸ್ತಿಕರಾಗುವ ಪ್ರಸಂಗವಿರುತ್ತದೆ. ಆಗ ಲೌಕಿಕ ಜೀವನವೆಲ್ಲ ಆದರ್ಶಶೂನ್ಯವಾಗಿ ಬಿಡುತ್ತದೆ. ಆದರೆ ಪ್ರಪಂಚವೆಲ್ಲ ಶಿವಮಯವೆಂದಾಗ ಜ್ಞಾನಿಗಳಿಗೆ ಪ್ರಪಂಚದಲ್ಲಿ ಪರಶಿವ ಸ್ವರೂಪದ ಜ್ಞಾನವಾಗುವುದಲ್ಲದೇ ಅಜ್ಞಜೀವಿಗಳಿಗೂ ಸಹ ನಿತ್ಯಾದಿಕರ್ಮಗಳಲ್ಲಿ ಹಾಗೂ ಈಶ್ವರನಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರದ್ಧೆಯು ಪ್ರಾದುರ್ಭವಿಸುತ್ತದೆ. ಹೀಗಾದಾಗ ಲೌಕಿಕ ಜೀವನವಾದರೂ ಆದರ್ಶಪ್ರಾಯವಾಗಿ ತೋರುತ್ತದೆ.

ಅದರಂತೆ, ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ ಮತ್ತು ಪೂರ್ವಮೀಮಾಂಸಾ ದರ್ಶನಗಳಲ್ಲಿ ಜಗತ್ತಿಗೆ ಸತ್ಯವೆಂದು ಪ್ರತಿಪಾದಿಸಿದ್ದರೂ, ನ್ಯಾಯ-ವೈಶೇಷಿಕರು ಜಗದುತ್ಪತ್ತಿಯಲ್ಲಿ ಈಶ್ವರನು ಕೇವಲ ನಿಮಿತ್ತಕಾರಣನೆಂದು ಸ್ವೀಕರಿಸಿದ್ದರಿಂದ "ಯಥಾ ಸೌಮ್ಯೈಕೇನ ಮೃತ್ಪಿಂಡೇನ ಸರ್ವಂ ಮೃಣ್ಮಯಂ ವಿಜ್ಞಾತಂ ಸ್ಯಾತ್"[94] ಎಂಬ ಶ್ರುತಿ ಪ್ರತಿಪಾದಿತ ಏಕವಿಜ್ಞಾನದಿಂದ ಸರ್ವವಿಜ್ಞಾನವೆಂಬ ಸಿದ್ಧಾಂತವು ಇವರಲ್ಲಿ ಸಮನ್ವಯವಾಗುವುದಿಲ್ಲ.

ಆದ್ದರಿಂದ ಪ್ರಪಂಚವನ್ನು ನಿಷೇಧಿಸಿ ಪರಮಾತ್ಮಸ್ವರೂಪವನ್ನು ತಿಳಿಸುವುದಕ್ಕಿಂತ ಪ್ರಪಂಚವನ್ನೇ ಪರಮಾತ್ಮ ಸ್ವರೂಪವನ್ನಾಗಿ ತಿಳಿಸುವ ಪ್ರಕ್ರಿಯೆಯು ಹೆಚ್ಚು ಲಾಭಪ್ರದವೆಂಬುದು ತಿಳಿದುಬರುತ್ತದೆ. ಈ ವಿಷಯದಲ್ಲಿ ಭಾರತೀಯ ಷಡ್‌ದರ್ಶನಗಳಿಗಿಂತ ವೀರಶೈವ ದರ್ಶನವೇ ಹೆಚ್ಚು ಲೋಕೋಪಕಾರಿ ಎಂಬುದು ತಿಳಿದುಬರುತ್ತದೆ.

ಬಂಧ-ಮೋಕ್ಷ ಸಮೀಕ್ಷೆ

ವೀರಶೈವ ದರ್ಶನದಲ್ಲಿ ಜೀವಾತ್ಮನ ಶಕ್ತಿಸಂಕೋಚ ವಿಕಾಸಗಳಿಂದ ಬಂಧ-ಮೋಕ್ಷಗಳು ವ್ಯವಸ್ಥೆಗೊಳಿಸಲ್ಪಟ್ಟಿವೆ. ಅಂತೆಯೇ ಉಮಚಗಿ ಶ್ರೀ ಶಂಕರಶಾಸ್ತ್ರಿಗಳು "ಸಂಕುಚಿತಶಕ್ತಿತ್ರಯರೂಪಮಲತ್ರಯನಿವೃತ್ತಿಃ ಶಕ್ತಿವಿಕಾಸರೂಪಶಿವತ್ವಪ್ರಾಪ್ತಿರ್ಮೋಕ್ಷಃ"[95] ಎಂಬುದಾಗಿ ನಿರೂಪಿಸಿದ್ದಾರೆ.

"ಜೀವತ್ವಂ ದುಃಖಸರ್ವಸ್ವಂ ತದಿದಂ ಮಲಕಲ್ಪಿತಮ್।
ನಿರಸ್ಯತೇ ಗುರೋರ್ಬೋಧಾತ್ ಜ್ಞಾನಶಕ್ತಿಃ ಪ್ರಕಾಶತೇ॥"

ಹೀಗೆ ಸಿದ್ಧಾಂತ ಶಿಖಾಮಣಿಯಲ್ಲಿಯೂ ಈ ವಿಷಯವು ಸ್ಪಷ್ಟವಾಗಿದೆ.

ಮಲತ್ರಯಗಳು: ಪರಶಿವನ ನೈಸರ್ಗಿಕಗಳಾದ ಇಚ್ಛಾ-ಜ್ಞಾನ-ಕ್ರಿಯಾಶಕ್ತಿಗಳ ಸಂಕುಚಿತ ಸ್ವರೂಪಕ್ಕೆ "ಮಲ"ವೆಂದು ಕರೆಯುವರು. ಇದು ಆಣವ-ಮಾಯಾ ಮತ್ತು ಕಾರ್ಮಿಕವೆಂದು ಮೂರು ವಿಧವಾಗಿದೆ. ಇವುಗಳಲ್ಲಿ ಇಚ್ಛಾಶಕ್ತಿಯ ಸಂಕೋಚವೇ ಆಣವಮಲವು. ಇದರ ಆವರಣದಿಂದ ಜೀವನು ವಿಭುತ್ವವನ್ನು ಮರೆತು "ಅಪೂರ್ಣೋಽಸ್ಮಿ" ಎಂಬುದಾಗಿ ತನ್ನನ್ನು ಅಣುವಾಗಿ ವ್ಯವಹರಿಸುತ್ತಾನೆ. ಅಂತೆಯೇ "ಅಪೂರ್ಣಂಮನ್ಯತಾರೂಪಮಾಣವಂ ಮಲಮ್"[96] ಎಂಬುದು ಅದರ ಲಕ್ಷಣವು. ಅದರಂತೆ ಪರಶಿವನ ಜ್ಞಾನಶಕ್ತಿಯೇ ಸಂಕೋಚಗೊಂಡು ಮಾಯಾಮಲವಾಗುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಜ್ಞಾನಂ ಬಂಧಃ"[೯೭] ಎನ್ನುವ ಶಿವಸೂತ್ರದ ವ್ಯಾಖ್ಯಾನದಲ್ಲಿ ಸಂಕುಚಿತಜ್ಞಾನವೇ ಮಾಯಾಮಲವೆಂತಲೂ ಅದು ಜೀವನ ಬಂಧನಕ್ಕೆ ಕಾರಣವೆಂತಲೂ ಶ್ರೀ ಕ್ಷೇಮ ರಾಜನು ಪ್ರತಿಪಾದಿಸಿದ್ದಾನೆ. ಶ್ರೀ ವ್ಯಾಸ ಮಹರ್ಷಿಗಳಾದರೂ-

ಜ್ಞಾನಂ ಬಂಧ ಇತೀದಂತು ದ್ವಿತೀಯಂ ಸೂತ್ರಮೀಶಿತುಃ।
ಜ್ಞಾನಮಿತ್ಯಾತ್ಮನಸ್ತಸ್ಯ ಕಿಂಚಿಜ್ಞಾನಕ್ರಿಯಾತ್ಮಕಮ್॥[೯೮]

ಶಿವಪುರಾಣದಲ್ಲಿ ಸಂಕುಚಿತಜ್ಞಾನವೇ ಬಂಧನಕಾರಿ ಎಂಬುದಾಗಿ ತಿಳಿಯಪಡಿಸಿದ್ದಾರೆ. ಈ ಮಾಯಾಮಲದಿಂದ ಆವೃತನಾದ ಜೀವನು ಪರಶಿವನಿಗಿಂತಲೂ ತನ್ನನ್ನು ಭಿನ್ನನನ್ನಾಗಿ ತಿಳಿದು ಶರೀರಕ್ಕೆ ತಾನೆಂತಲೂ ಸತೀ-ಪುತ್ರಾದಿಗಳಲ್ಲಿ ನನ್ನವರೆಂತಲೂ ಮೋಹಿಯಾಗಿ ವ್ಯವಹರಿಸುವನು. ಅಂತೆಯೇ "ಭಿನ್ನವೇದ್ಯಪ್ರಥಾರೂಪಂ ಮಾಯೀಯಂ ಮಲಂ"[೯೯] ಎಂದು ಅದರ ಲಕ್ಷಣವು ನಿರೂಪಿಸಲ್ಪಟ್ಟಿದೆ.

ಇದರಂತೆ ಪರಶಿವನ ಸರ್ವಕರ್ತೃತ್ವಶಕ್ತಿಯೇ ಸಂಕೋಚಗೊಂಡು "ಕಾರ್ಮಿಕಮಲ"ವೆನಿಸಿಕೊಳ್ಳುತ್ತದೆ. ಇದು ಶುಭಾಽಶುಭ ವಾಸನಾರೂಪವಾದದ್ದು. ಈ ವಾಸನೆಯಿಂದಲೇ ಶುಭಾಽಶುಭಕರ್ಮಗಳನ್ನು ಮಾಡುತ್ತ ಸುಖ-ದುಃಖಫಲಗಳನ್ನು ಅನುಭವಿಸುತ್ತ ಸ್ವಕರ್ಮಾನುಸಾರವಾಗಿ ಜೀವನು ದೇವ, ತಿರ್ಯಕ್, ಮನುಷ್ಯಾದಿ ಯೋನಿಗಳಲ್ಲಿ ತಿರುಗುತ್ತಿರುತ್ತಾನೆ. ಅದನ್ನೇ ಶಿವಯೋಗಿಶಿವಾಚಾರ್ಯರು-

ಅವಿದ್ಯಾಮೋಹಿತಾ ಜೀವಾ ಬ್ರಹ್ಮೈಕ್ಯಜ್ಞಾನವರ್ಜಿತಾಃ।
ಪರಿಭ್ರಮಂತಿ ಸಂಸಾರೇ ನಿಜಕರ್ಮಾನುಸಾರತಃ।
ದೇವ-ತಿರ್ಯಙ್ಮನುಷ್ಯಾದಿನಾನಾಯೋನಿವಿಭೇದತಃ॥
ಚಕ್ರನೇಮಿಕ್ರಮೇಣೈವ ಭ್ರಮಂತಿ ಹಿ ಶರೀರಿಣಃ।
ಜಾತ್ಯಾಯುರ್ಭೋಗವೈಷಮ್ಯಕಾರಣಂ ಕರ್ಮ ಕೇವಲಮ್॥[೧೦೦]

ಈ ರೀತಿಯಾಗಿ ಸ್ಪಷ್ಟಪಡಿಸಿದ್ದಾರೆ. ಕ್ಷೇಮರಾಜಾಚಾರ್ಯರೂ ಸಹ -"ಶುಭಾಽಶುಭಾನುಷ್ಠಾನಮಯಂ ಕಾರ್ಮಮಲಂ"[೧೦೧] ಎಂದು ಕಾರ್ಮಿಕಮಲದ ಲಕ್ಷಣವನ್ನು ತಿಳಿಯಪಡಿಸಿದ್ದಾರೆ.

ಪ್ರಾಯಃ ಶೈವ-ಶಾಕ್ತದರ್ಶನಗಳಲ್ಲಿ ಈ ತ್ರಿವಿಧ ಮಲಗಳೇ ಜೀವನ ಬಂಧನಕಾರಕಗಳೆಂಬುದಾಗಿ ಪ್ರತಿಪಾದಿಸಲ್ಪಟ್ಟಿವೆ. "ಆತ್ಮಾಶ್ರಿತೋ ದುಷ್ಟಭಾವೋ ಮಲಃ" ಎಂದು "ಮಲ" ದ ಲಕ್ಷಣವನ್ನು ಹೇಳುವ ನಕುಲೀಶ ಪಾಶುಪತ ದಾರ್ಶನಿಕರು-

ಮಿಥ್ಯಾಜ್ಞಾನಮಧರ್ಮಶ್ಚ ಸಕ್ತಿಹೇತುಶ್ಚ್ಯುತಿಸ್ತಥಾ।
ಪಶುತ್ವಮೂಲಂ ಪಂಚೈತೇ ತಂತ್ರೇ ಹೇಯಾ ವಿವಿಕ್ತಿತಃ॥[೧೦೨]

ಅಂದರೆ ಮಿಥ್ಯಾಜ್ಞಾನ, ಅಧರ್ಮ, ಸಕ್ತಿಹೇತು, ಅರ್ಥಾತ್ ವಿಷಯಾಸಕ್ತಿಹೇತುವಾದ ವಿಷಯಗಳ ಸಾನ್ನಿಧ್ಯ, ಚ್ಯುತಿಃ ಅರ್ಥಾತ್ ಸದಾಚಾರದಿಂದ ಭ್ರಷ್ಟನಾಗುವಿಕೆ ಮತ್ತು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಶುತ್ವಮೂಲ, ಅರ್ಥಾತ್ ಜೀವತ್ವಪ್ರಾಪಕವಾದ ಅನಾದಿಸಂಸ್ಕಾರ ಎಂಬುದಾಗಿ ಪಂಚವಿಧ ಮಲಗಳನ್ನು ಪ್ರತಿಪಾದಿಸುತ್ತಾರೆ. ಇವುಗಳು ಪೂರ್ವೋಕ್ತಗಳಾದ ತ್ರಿವಿಧ ಮಲಗಳಲ್ಲಿಯೇ ಅಂತರ್ಗತಗಳಾಗುತ್ತದೆ. "ಮಲತ್ರಯಮಯಂ ಪಾಶಂ ಭೋಗಭೋಗ್ಯತ್ವ-ಲಕ್ಷಣಂ"[೧೦೩] ಎಂದು ವ್ಯಾಸಮಹರ್ಷಿಗಳು ಈ ತ್ರಿವಿಧ ಮಲಗಳಿಗೆ "ಪಾಶ" ಎಂದು ಕರೆದಿದ್ದಾರೆ. ಈ ಪಾಶಬದ್ಧನಾದ್ದರಿಂದ ಜೀವನು "ಪಶು"ವೆಂದು ಕರೆಯಿಸಿಕೊಳ್ಳುತ್ತಾನೆ. "ಸಮ್ಮಿಶ್ರೋಪಾಧಯಃ ಸರ್ವೇ ಭೋಕ್ತಾರಃ ಪಶವಃ ಸ್ಮತಾಃ"[೧೦೪] ಎಂಬುದಾಗಿ ಶಿವಯೋಗಿ ಶಿವಾಚಾರ್ಯರೂ ಜೀವಿಗಳಿಗೆ ಪಶುಗಳೆಂದೇ ಸಂಬೋಧಿಸಿದ್ದಾರೆ.

ನಾಲ್ಕು ಕಾಲಿನ ಪಶುಗಳಿಗೆ ಹಗ್ಗಗಳಿಂದ ಕಟ್ಟಿರುವುದನ್ನು ನಾವು ಕಾಣುತ್ತೇವೆ; ಆದರೆ ಮನುಷ್ಯರೆಂಬ ಎರಡು ಕಾಲಿನ ಪಶುಗಳಿಗೆ ಕಟ್ಟುವ ಹಗ್ಗ ಯಾವುದು? ಎಂದರೆ ಹೊಲ, ಮನೆ, ಮಠ, ಹೆಂಡರು, ಮಕ್ಕಳು, ಧನ ಮತ್ತು ಕನಕ ಮುಂತಾದ ಸಾಂಸಾರಿಕ ವಸ್ತುಗಳಲ್ಲಿರುವ ನನ್ನದೆಂಬ ಭಾವನೆಯಷ್ಟು ಬಿಗಿಯಾದ ಹಗ್ಗ ಮತ್ತೊಂದಿಲ್ಲ. ಈ ವಸ್ತುಗಳಿಂದುಂಟಾಗುವ ಮನುಷ್ಯರ ಬಂಧನಕ್ಕೆ "ಸಂಬಂಧ"ವೆನ್ನುವರು. "ಸಮ್ಯಕ್ ಬಂಧಃ ಸಂಬಂಧಃ" ಸುದೃಢವಾಗಿ ಕಟ್ಟಿದ್ದು ಎಂದರ್ಥ. ಅಪರಿಚಿತ ವ್ಯಕ್ತಿಗಳು ಮನೆಗೆ ಬಂದಾಗ ಇವರು ಯಾರು? ಎಂದು ಪ್ರಶ್ನಿಸಿದರೆ, ನಮ್ಮ ಸಂಬಂಧಿಕರು ಎನ್ನುವ ವಾಡಿಕೆ ಇದೆ. ಆದ್ದರಿಂದ ಗಂಡ-ಹೆಂಡತಿ, ತಂದೆ-ಮಕ್ಕಳು, ಅತ್ತೆ-ಸೊಸೆ, ಮಾವ-ಅಳಿಯ ಇವರಲ್ಲಿರುವ ಲೌಕಿಕ ಸಂಬಂಧಗಳು ಈ ಜನ್ಮದಲ್ಲಿ ಬಿಡಿಸಿಗೊಳ್ಳಲು ಬಾರದ ಬಂಧನಗಳು. ಇನ್ನು ಮಲತ್ರಯಗಳಾದರೋ ಜನ್ಮಜನ್ಮಾಂತರದ ಬಂಧನಗಳಾಗಿರುವುದರಿಂದ ಜೀವಿಗಳಿಗೆ "ಪಶು"ವೆಂಬ ಅನ್ವರ್ಥಕ ನಾಮವನ್ನು ಕೊಟ್ಟಿದ್ದಾರೆ ವೀರಶೈವಾಚಾರ್ಯರು.

ಪಾಶನಿವೃತ್ತಿಯ ಉಪಾಯ:

> **ದೀಯತೇ ಚ ಶಿವಜ್ಞಾನಂ ಕ್ಷೀಯತೇ ಪಾಶಬಂಧನಮ್।**
> **ಯಸ್ಮಾದತಃ ಸಮಾಖ್ಯಾತಾ ದೀಕ್ಷೇತೀಯಂ ವಿಚಕ್ಷಣೈಃ॥**

ಎನ್ನುವ ಪ್ರಮಾಣಾನುಸಾರವಾಗಿ ವೀರಶೈವಾಚಾರ್ಯರು ಜೀವಿಗಳ ಮಲತ್ರಯ ನಿವೃತ್ತಿಗಾಗಿ ತ್ರಿವಿಧ ದೀಕ್ಷಾಸಂಸ್ಕಾರವನ್ನು ವಡಂಬಟ್ಟಿದ್ದಾರೆ. "ಶಕ್ತಿಪಾತಂ ಸಮಾಲೋಕ್ಯ ದೀಕ್ಷಯಾ ಯೋಜಯೇದಮುಂ"[೧೦೫] ಎನ್ನುವ ಆಚಾರ್ಯರ ಆದೇಶದಂತೆ ಈಶ್ವರಾನುಗ್ರಹರೂಪವಾದ ಶಕ್ತಿಪಾತದ ಲಕ್ಷಣಗಳನ್ನು ತಿಳಿದು ಗುರುಗಳು ಶಿಷ್ಯನಿಗೆ ದೀಕ್ಷಾಸಂಸ್ಕಾರವನ್ನು ಮಾಡಿ ಅವನ ಸಂಕುಚಿತ ಶಕ್ತಿಗಳ ವಿಕಾಸಕ್ಕೆ ನಿಮಿತ್ತರಾಗುತ್ತಾರೆ. ಅನೇಕ ಜನ್ಮಗಳಲ್ಲಿ ಅನುಷ್ಠಾನಮಾಡಿದ ನಿತ್ಯ, ನೈಮಿತ್ತಿಕ, ಪ್ರಾಯಶ್ಚಿತ್ತ ಕರ್ಮಗಳಿಂದ ಪೂರ್ವಾರ್ಜಿತ ಪಾಪಕ್ಷಯವಾದ ಜೀವಾತ್ಮನ ಆಣವಾದಿಮಲತ್ರಯಗಳು ಪರಿಪಕ್ವಗಳಾಗುತ್ತವೆ. ಹೀಗೆ ಪಕ್ವಮಲಗಳಾದ ಜೀವಾತ್ಮನಿಗೆ 'ತತ್ವತನು'ವೆಂದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕರೆಯುವರು. ಇದಕ್ಕೆ ವಿಪರೀತರಾದ ಜೀವರಿಗೆ "ಅತತ್ವತನು" ಮತ್ತು "ಅಪಕ್ವಮಲ"ನೆನ್ನುವರು.

> ಅತಪ್ತತನುರಜ್ಞೋ ವೈ ಆಮಃ ಸಂಸ್ಕಾರವರ್ಜಿತಃ।
> ದೀಕ್ಷಯಾ ರಹಿತಃ ಸ್ಪ್ರಾಕ್ಷ್ಣಾಪ್ನುಯಾಲ್ಲಿಂಗಮುತ್ತಮಮ್॥[೧೦೪]

ಎಂಬ ಶ್ರೀ ರೇಣುಕಭಗವತ್ಪಾದರ ಆದೇಶದಂತೆ ತಪ್ತತನುವಲ್ಲದ ಸಂಸ್ಕಾರ ಹೀನನಾದ ಅಂತೆಯೇ ಶಿವಾನುಗ್ರಹಕ್ಕೆ ಪಾತ್ರನಲ್ಲದ ಜೀವನಿಗೆ ಗುರುದೀಕ್ಷೆಯಾಗಲಿ ಇಷ್ಟಲಿಂಗಧಾರಣೆಯಾಗಲಿ ಮಾಡಲಾಗುವುದಿಲ್ಲ. ಅನೇಕ ಜನ್ಮದಲ್ಲಿ ಶುಭಕರ್ಮಗಳನ್ನಾಚರಿಸಿ ಪರಿಶುದ್ಧಾಂತಃಕರಣೆಯಾದ, ಆತ್ಮಾನಾತ್ಮವಿವೇಕವುಳ್ಳ ಹಾಗೂ ಸಂಸಾರದಲ್ಲಿ ಹೇಯಬುದ್ಧಿಯುಂಟಾದ ಜೀವಾತ್ಮನು ದೀಕ್ಷಾರೂಪವಾದ ಗುರುಕಾರುಣ್ಯವನ್ನು ಪಡೆಯಲು ಅರ್ಹನಾಗುತ್ತಾನೆ. ಅಂತೆಯೇ ಶ್ರೀ ಶಿವಯೋಗಿ ಶಿವಾಚಾರ್ಯರು ಸಿದ್ಧಾಂತಶಿಖಾಮಣಿಯಲ್ಲಿ ಪಿಂಡಸ್ಥಲ, ಪಿಂಡಜ್ಞಾನಸ್ಥಲ ಮತ್ತು ಸಂಸಾರಹೇಯಸ್ಥಲದ ನಂತರ ಗುರುಕಾರುಣ್ಯಸ್ಥಲವನ್ನು ಪ್ರತಿಪಾದಿಸಿದ್ದಾರೆ.

ದೀಕ್ಷಾತ್ರಯಗಳು:

ಜೀವಾತ್ಮನ ಆಣವಾದಿ ಮಲತ್ರಯಗಳ ನಿವಾರಣೆಗಾಗಿ ವೀರಶೈವಾಚಾರ್ಯರು ತ್ರಿವಿಧ ದೀಕ್ಷಾಸಂಸ್ಕಾರಗಳನ್ನು ಉಪದೇಶಿಸಿದ್ದಾರೆ. ಶ್ರೀ ಶಿವಯೋಗಿ ಶಿವಾಚಾರ್ಯರು-

> "ಗುರೋರಾಲೋಕಮಾತ್ರೇಣ ಹಸ್ತಮಸ್ತಕ ಯೋಗತಃ
> ಯಃ ಶಿವತ್ವಸಮಾವೇಶೋ ವೇಧಾದೀಕ್ಷೇತಿ ಸಾ ಮತಾ॥"[೧೦೫]
>
> "ಮಂತ್ರದೀಕ್ಷೇತಿ ಸಾ ಪ್ರೋಕ್ತಾ ಮಂತ್ರಮಾತ್ರೋಪದೇಶಿನೀ।"
> "ಕುಂಡಮಂಡಲಿಕೋಪೇತಾ ಕ್ರಿಯಾದೀಕ್ಷಾ ಕ್ರಿಯೋತ್ತರಾ।"[೧೦೬]

ಹೀಗೆ ತ್ರಿವಿಧ ದೀಕ್ಷೆಗಳ ಸ್ವರೂಪವನ್ನು ತಿಳಿಯಪಡಿಸಿದ್ದಾರೆ. ತಾತ್ಪರ್ಯವೇನಂದರೆ- ಶ್ರೀಗುರುವಿನ ಹಸ್ತಸಂಯೋಗದಿಂದ ಶಿಷ್ಯನ ಅಜ್ಞಾನವೆಲ್ಲ (ಆಣದಮಲ) ತೊಲಗಿ "ಶಿವೋऽಹಂ" ಎಂಬ ಬೋಧವನ್ನುಂಟುಮಾಡುವ ಸಂಸ್ಕಾರವೇ ವೇಧಾದೀಕ್ಷೆಯು. ಪಂಚಾಕ್ಷರಿ ಮಹಾಮಂತ್ರೋಪದೇಶದಿಂದ ಮಾಯಾಮಲವನ್ನು ದೂರಮಾಡಿ ಸ್ವಕೀಯ ಚಿದ್ರೂಪ ಅಥವಾ ಪ್ರಾಣಲಿಂಗವನ್ನು ಬೋಧಿಸುವ ಸಂಸ್ಕಾರವೇ ಮಂತ್ರದೀಕ್ಷೆಯು ಶಿಷ್ಯನ ಕಾರ್ಮಿಕಮಲವನ್ನು ದೂರಿಕರಿಸಿ ಇಷ್ಟಲಿಂಗ ಪ್ರದಾಯಕವಾದ ಸಂಸ್ಕಾರ ವಿಶೇಷವೇ ಕ್ರಿಯಾದೀಕ್ಷೆಯು. ವೀರಶೈವ ಸಿದ್ಧಾಂತಾನುಸಾರವಾಗಿ ಶಿವಜ್ಞಾನವನ್ನು ಪ್ರಾಪ್ತಿಮಾಡಿಕೊಳ್ಳಲು ದೀಕ್ಷೆಯು ಒಂದು ಆವಶ್ಯಕವಾದ ಸಂಸ್ಕಾರವು. ಅಂತೆಯೇ ಶ್ರೀಪತಿಪಂಡಿತಾರಾಧ್ಯರು "ಅಥಾऽತೋ ಬ್ರಹ್ಮಜಿಜ್ಞಾಸಾ" ಎಂಬ ಸೂತ್ರಕ್ಕೆ ಭಾಷ್ಯವನ್ನು ಬರೆಯುವಾಗ ಅಥ ಎನ್ನುವ ಶಬ್ದಕ್ಕೆ ದೀಕ್ಷಾಸಂಸ್ಕಾರವಾದ ನಂತರ ಎಂದು ಅರ್ಥವನ್ನು ಮಾಡಿದ್ದಾರೆ.[೧೦೭] ಹೀಗೆ ದೀಕ್ಷಾ ಸಂಸ್ಕಾರವನ್ನು ಹೊಂದಿದ ಜೀವನು-

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಾಣವದ್ಧಾರಣೀಯಂ ತತ್ಪ್ರಾಣಲಿಂಗಮಿದಂ ತವ।
ಕದಾಚಿತ್ ಕುತ್ರಚಿದ್ವಾಪಿ ನ ವಿಯೋಜಯ ದೇಹತಃ॥[೧೦೮]

ಎಂಬ ಉಪದೇಶಾನುಸಾರವಾಗಿ ಕ್ರಿಯಾದೀಕ್ಷೆಯಲ್ಲಿ ಪ್ರಾಪ್ತವಾದ ಇಷ್ಟಲಿಂಗವನ್ನು ತನ್ನ ಜೀವನ ಪರ್ಯಂತವಾಗಿ ದೇಹದ ಮೇಲೆ ಧರಿಸಿಗೊಂಡು ಪೂಜಿಸಬೇಕಾಗುವದು. ತನಗೆ ಶಿವಜ್ಞಾನ ಪ್ರಾಪ್ತವಾದರೂ "ಜ್ಞಾನಾಮೃತೇನ ತೃಪ್ತೋಽಪಿ ಯೋಗೀ ಧರ್ಮಂ ನ ಸಂತ್ಯಜೇತ್"[೧೦೯] ಎಂಬ ಭಗವತ್ಪಾದರ ಆದೇಶದಂತೆ ಇಷ್ಟಲಿಂಗಪೂಜಾರೂಪವಾದ ನಿತ್ಯಕರ್ಮವನ್ನು ಎಂದೂ ತಪ್ಪಿಸಬಾರದು. ಆದ್ದರಿಂದ ವೀರಶೈವರು ಮೋಕ್ಷಕ್ಕೆ ಜ್ಞಾನ-ಕರ್ಮಗಳ ಸಮುಚ್ಚಯವನ್ನು ಪ್ರತಿಪಾದಿಸುತ್ತಾರೆ.

ಜ್ಞಾನ-ಕರ್ಮಗಳ ಸಮಸಮುಚ್ಚಯ:

ವೀರಶೈವ ಸಿದ್ಧಾಂತದಲ್ಲಿ ಪೂರ್ವಮೀಮಾಂಸಕರಂತೆ ಕೇವಲ ಕರ್ಮದಿಂದಾಗಲಿ, ಸಾಂಖ್ಯ, ನ್ಯಾಯ, ವೈಶೇಷಿಕ ಹಾಗೂ ಅದ್ವೈತವೇದಾಂತಿಗಳಂತೆ ಕೇವಲ ಜ್ಞಾನದಿಂದಾಗಲಿ ಮೋಕ್ಷವನ್ನು ಹೇಳದೇ-

ವಿದ್ಯಾಂ ಚಾಽವಿದ್ಯಾಂ ಚ ಯಸ್ತದ್ವೇದೋಭಯಂ ಸಹ।
ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಽಮೃತಮಶ್ನುತೇ॥[೧೧೦]

ಎಂಬ ಶ್ರುತಿ ಪ್ರಮಾಣಾನುಸಾರವಾಗಿ ಜ್ಞಾನ- ಕರ್ಮಸಮುಚ್ಚಯದಿಂದ ಮೋಕ್ಷವನ್ನು ಪ್ರತಿಪಾದಿಸಿದ್ದಾರೆ. ಅಂತೆಯೇ ಸಿದ್ಧಾಂತಶಿಖಾಮಣಿಯಲ್ಲಿ "ಭಾವಕರ್ಮಸಮಾಯುಕ್ತಂ ಜ್ಞಾನಮೇವ ವಿಮುಕ್ತಿದಂ"[೧೧೧] ಎಂಬುದಾಗಿ ಸ್ಪಷ್ಟಪಡಿಸಿದ್ದಾರೆ. ಇಲ್ಲಿ ಹೇಳಿದ ಭಾವನೆಯು ಉಭಯಾನ್ವಯೀಯಾಗಿದೆ. ಅಂದರೆ ಕರ್ಮಾಚರಣೆಯಲ್ಲಾಗಲಿ, ಜ್ಞಾನದಲ್ಲಾಗಲಿ ಭಾವನೆಯ ಪ್ರಾಮುಖ್ಯತೆ ಇದೆ. ಕರ್ಮಾನ್ವಿತವಾದ ಭಾವನೆಯು ಭಕ್ತಿ ಎಂದೂ, ಜ್ಞಾನಾನ್ವಿತವಾದ ಭಾವನೆಯು ನಿದಿಧ್ಯಾಸವೆಂದೂ ಕರೆಯಲ್ಪಡುತ್ತದೆ.

ಅಂತೆಯೇ ಶ್ರೀ ಜಗದ್ಗುರು ರೇಣುಕ-ಭಗವತ್ಪಾದರು-

ಅರ್ಥಹೀನಾ ಯಥಾ ವಾಣೀ ಪತಿಹೀನಾ ಯಥಾ ಸತೀ।
ಶ್ರುತಿಹೀನಾ ಯಥಾ ಬುದ್ಧಿರ್ಭಾವಹೀನಾ ತಥಾ ಕ್ರಿಯಾ॥[೧೧೨]

ಹೀಗೆ ಭಾವಹೀನವಾದ ಕರ್ಮದ ನಿಷ್ಪ್ರಯೋಜನತೆಯನ್ನು ಅನೇಕ ದೃಷ್ಟಾಂತಗಳಿಂದ ತಿಳಿಯಪಡಿಸಿ,

ಭಾವನಾವಿಹಿತಂ ಕರ್ಮ ಪಾವನಾದಪಿ ಪಾವನಮ್।
ತಸ್ಮಾದ್ ಭಾವನಯಾ ಯುಕ್ತಂ ಪರಧರ್ಮಂ ಸಮಾಚರೇತ್॥
ಭಾವೇನ ಹಿ ಮನಃಶುದ್ಧಿರ್ಭಾವಶುದ್ಧಿಶ್ಚ ಕರ್ಮಣಾ।
ಇತಿ ಸುಚಿಂತ್ಯ ಮನಸಾ ಯೋಗೀ ಭಾವಂ ನ ಸಂತ್ಯಜೇತ್॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಭಾವನಯಾ ಸರ್ವಂ ನಿತ್ಯ-ನೈಮಿತ್ತಿಕಾದಿಕಮ್।
ಕುರ್ವನ್ನಪಿ ಮಹಾಯೋಗೀ ಗುಣದೋಷೈರ್ನ ಬಾಧ್ಯತೇ॥[೧೧೩]

ಈ ರೀತಿಯಾಗಿ ಭಾವನಾಯುಕ್ತವಾದ ಕರ್ಮದ ಪ್ರಾಶಸ್ತ್ಯವನ್ನು ಹೇಳಿ;

ಚಕ್ಷುರ್ಹೀನೋ ಯಥಾರೂಪಂ ನ ಕಿಂಚಿದ್ವೀಕ್ಷಿತುಂ ಕ್ಷಮಃ।
ಭಾವಹೀನಸ್ತಥಾ ಯೋಗೀ ನ ಶಿವಂ ದ್ರಷ್ಟುಮೀಶ್ವರಃ॥[೧೧೪]

ಹೀಗೆ ನಿಷೇಧಮುಖದಿಂದ ಭಾವನಾ ವಿಶಿಷ್ಟವಾದ ಜ್ಞಾನದ ಶ್ರೇಷ್ಠತೆಯನ್ನು ತಿಳಿಯಪಡಿಸಿದ್ದಾರೆ. ಆದ್ದರಿಂದ ಭಾವಕರ್ಮಸಮನ್ವಿತವಾದ ಜ್ಞಾನವೇ ಮೋಕ್ಷಕ್ಕೆ ಕಾರಣವೆಂದು ನಿಶ್ಚಯಿಸಲಾಗಿದೆ.

"ತಮೇವ ವಿದಿತ್ವಾತಿಮೃತ್ಯುಮೇತಿ ನಾನ್ಯಃ ಪಂಥಾ ವಿದ್ಯತೇಽಯನಾಯ"[೧೧೫] ಎಂಬ ಶ್ರುತಿಯಲ್ಲಿ ಕೇವಲ ಜ್ಞಾನವೇ ಮುಕ್ತಿಗೆ ಕಾರಣವೆಂದು ಹೇಳಿರುವುದರಿಂದ ಜ್ಞಾನಕರ್ಮಗಳ ಸಮುಚ್ಚಯ ಹೇಗೆ? ಎಂಬ ಜಿಜ್ಞಾಸೆಯುಂಟಾದಾಗ-

ಅಂಧಪಂಗುವದನ್ಯೋನ್ಯಸಾಪೇಕ್ಷೇ ಜ್ಞಾನಕರ್ಮಣೀ।
ಫಲೋತ್ಪತ್ತೌ ವಿರಕ್ತಸ್ತು ತಸ್ಮಾತ್ತದ್ವಯಮಾಚರೇತ್॥
ಜ್ಞಾನೇ ಸಿದ್ಧೇಽಪಿ ವಿದುಷಾಂ ಕರ್ಮಾಪಿ ವಿನಿಯುಜ್ಯತೇ।
ಫಲಾಭಿಸಂಧಿರಹಿತಂ ತಸ್ಮಾತ್ಕರ್ಮ ನ ಸಂತ್ಯಜೇತ್॥
ಜ್ಞಾನಹೀನಂ ಸದಾ ಕರ್ಮ ಪುಂಸಾಂ ಸಂಸಾರಕಾರಣಮ್।
ತದೇವ ಜ್ಞಾನಯೋಗೇನ ಸಂಸಾರವಿನಿವರ್ತಕಂ॥[೧೧೬]

ಇತ್ಯಾದಿ ಅನೇಕ ಸ್ಥಾನಗಳಲ್ಲಿ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಅಗಸ್ತ್ಯ ಮಹರ್ಷಿಯನ್ನು ಕುರಿತು ಜ್ಞಾನ-ಕರ್ಮಗಳ ಸಮುಚ್ಚಯವನ್ನು ಸ್ಪಷ್ಟವಾಗಿ ಪ್ರತಿಪಾದಿಸಿದ್ದಾರೆ. ಇಲ್ಲಿರುವ ರಹಸ್ಯವೇನೆಂದರೆ -ಕರ್ಮಗಳಲ್ಲಿ "ಪಶುಕರ್ಮ" ಮತ್ತು "ಪತಿಕರ್ಮ" ಎಂದು ಎರಡುವಿಧ. ಸ್ವರ್ಗಾದಿಗಳ ಪ್ರಾಪ್ತಿಯ ಉದ್ದೇಶದಿಂದ ಮಾಡುವ ಯಜ್ಞ-ಯಾಗಾದಿಗಳು ಪಾಶೋತ್ಪಾದಕಗಳಾದ ಕಾರಣ ಪಶುಕರ್ಮಗಳು. ಇಷ್ಟಲಿಂಗಧಾರಣ, ಲಿಂಗಾರ್ಚನ, ಲಿಂಗಾರ್ಪಿತ, ಪ್ರಸಾದ ಗ್ರಹಣಾದಿ ವೀರಶೈವರ ಅಷ್ಟಾವರಣ ಪಂಚಾಚಾರಗಳು ಪಾಶವಿಮೋಚಕಗಳಾದ ಕಾರಣ ಪತಿಕರ್ಮಗಳು. ಅದನ್ನೇ ಶ್ರೀ ಭಗವತ್ಪಾದ ನೀಲಕಂಠಶಿವಾಚಾರ್ಯರು-

ಭಸ್ಮಧಾರಣಮುಖ್ಯಂ ಹಿ ಕಾಲಾಗ್ನ್ಯುಪನಿಷನ್ಮುಖೈಃ।
ಬೃಜ್ಜಾಬಾಲಮುಖೈಶ್ಚ ವಿಹಿತಂ ತತ್ ಪದೇಪದೇ॥
ರುದ್ರಾಕ್ಷಧಾರಣಂ ಚೈವ ದಹರೋಪಾಸನಾದಿಕಮ್।
ಕಾಲಯೋಃ ಶಿವಪೂಜಾ ಚ ತ್ರಿಷುಕಾಲೇಷು ವಾ ಸದಾ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿದ್ಯಾಸು ಶ್ರುತಿರುತ್ಕೃಷ್ಟಾ ರುದ್ರೈಕಾದಶಿನೀ ಶ್ರುತೌ।
ತತ್ರ ಪಂಚಾಕ್ಷರೋ ಮಂತ್ರಃ ಶಿವ ಇತ್ಯಕ್ಷರದ್ವಯಂ।
ಇತಿ ಶ್ರುತಿಶಿರೋರತ್ನಶಿರೋರತ್ನಮನೋರ್ಜಪಃ॥
ಆಚಾರ್ಯದೇವ ಇತ್ಯುಕ್ತಮಂತ್ರದೇಶಿಕ ಪೂಜನಮ್।
ಪ್ರಸಾದಗ್ರಹಣಂ ತಸ್ಯೇತ್ಯಾದ್ಯಾಃ ಪಾಶವಿಮೋಚಕಾಃ।
ಪತಿಧರ್ಮಾ ಇಮೇ ಜ್ಞೆಯಾಸ್ತದಾನಂತರ್ಯಮತ್ರ ಚ॥[೧೧೭]

ಈ ರೀತಿಯಾಗಿ ಪತಿಧರ್ಮದ ವಿವರಣೆಯನ್ನು ಮಾಡಿದ್ದಾರೆ. ಆದ್ದರಿಂದ ಫಲೇಚ್ಛೆಯಿಂದ ಮಾಡಿದ ಕರ್ಮಗಳು ಸಂಸಾರಕ್ಕೆ ಕಾರಣಗಳಾದ್ದರಿಂದ ಅವುಗಳ ಜೊತೆಗೆ ಜ್ಞಾನದ ಸಮುಚ್ಚಯವಾಗದಿದ್ದರೂ ಫಲಾಭಿಸಂಧಿರಹಿತಗಳಾದ ಪೂರ್ವೋಕ್ತ ವೀರಶೈವೀಯ ಪತಿಕರ್ಮಗಳು ಮೋಕ್ಷಹೇತುಗಳಾಗಿರುವುದರಿಂದ ಜ್ಞಾನದೊಂದಿಗೆ ಸಮುಚ್ಚಯವು ಸಂಭವಿಸುವುದು. "ತತ್ಪ್ರಾಪ್ತಿಹೇತುಜ್ಞಾನಂ ಚ ಕರ್ಮ ಚೋಕ್ತಂ ಮಹಾಮುನೇ" "ವಿದ್ಯಾಂಚಾಽವಿದ್ಯಾಂಚ"[೧೧೮] ಇತ್ಯಾದಿ ಉಪನಿಷತ್ತಿನಲ್ಲಿ ಪಾಶಮೋಚಕಗಳಾದ ನಿಷ್ಕಾಮ ಕರ್ಮಗಳೊಂದಿಗೆ ಜ್ಞಾನದ ಸಮುಚ್ಚಯವನ್ನು ಪ್ರತಿಪಾದಿಸಿದ್ದಾರೆ.

ಜ್ಞಾನಕರ್ಮಗಳ ಸಮುಚ್ಚಯವನ್ನು ಪ್ರತಿಪಾದಿಸುವ ಇನ್ನೊಂದು ರಹಸ್ಯಾರ್ಥವೇನೆಂದರೆ-

ಶಂಭೋಃ ಶಿವಪ್ರಸಾದೇನ ಸಂಸಾರಚ್ಛೇದಕಾರಿಣಾ।
ಮೋಹಗ್ರಂಥಿಂ ವಿನಿರ್ಭಿದ್ಯ ಮುಕ್ತಿಂ ಯಾಂತಿ ವಿವೇಕಿನಃ॥
ವಿನಾ ಪ್ರಸಾದಮೀಶಸ್ಯ ಸಂಸಾರೋ ನ ನಿವರ್ತತೇ।
ವಿನಾ ಸೂರ್ಯೋದಯಂ ಲೋಕೇ ಕುತಃ ಸ್ಯಾತ್ತಮಸೋ ಲಯಃ॥
ಸರ್ವಾನುಗ್ರಾಹಕಃ ಶಂಭುಃ ಕೇವಲಂ ಕೃಪಯಾ ಪ್ರಭುಃ।
ಮೋಚಯೇತ್ ಸಕಲಾನ್ ಜಂತೂನ್ ನ ಕಿಂಚಿದಿಹ
ಕಾರಣಮ್॥[೧೧೯]

ಈ ಆಚಾರ್ಯೋಕ್ತಿಗನುಸಾರವಾಗಿ ಶಿವಾನುಗ್ರಹದಿಂದಲೇ ಮೋಕ್ಷಪ್ರಾಪ್ತಿ ಎಂಬುದಾಗಿ ಸ್ವೀಕರಿಸಲ್ಪಟ್ಟಿದೆ. ಈ ಶಿವಾನುಗ್ರಹವು ಪರಶಿವಜ್ಞಾನಮಾತ್ರದಿಂದ ಆಗುವುದಿಲ್ಲ. ಅದಕ್ಕಾಗಿ ಶಿವಾರ್ಚನರೂಪವಾದ ಕರ್ಮದ ಅಪೇಕ್ಷೆ ಇದೆ. ಲೋಕದಲ್ಲಿಯೂ ಸಹ ಯಜಮಾನನ ಜ್ಞಾನವಿದ್ದ ಮಾತ್ರಕ್ಕೆ ಸೇವಕನಿಗೆ ಯಜಮಾನನ ಅನುಗ್ರಹವಾಗುವುದಿಲ್ಲ. ಸೇವಕನು ಸೇವೆಯನ್ನು ಮಾಡಿದಾಗ ಮಾತ್ರ ಅನುಗ್ರಹವನ್ನು ಪಡೆಯುವನು. ಆದ್ದರಿಂದಲೇ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು-

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಶಿವಾರ್ಚಾ ಕರ್ಮ ವಿಜ್ಞೇಯಂ ಬಾಹ್ಯಂ ಯಾಗಾದಿ ನೋಚ್ಯತೇ।[೧೦]
ಶಿವಾತ್ಮಕಮಿದಂ ಸರ್ವಂ ಶಿವಾದನ್ಯನ್ನ ವಿದ್ಯತೇ।
ಶಿವೋಽಹಮಿತಿ ಯಾ ಬುದ್ಧಿಸ್ತದೇವ ಜ್ಞಾನಮುತ್ತಮಮ್॥[೧೧]

ಈ ರೀತಿಯಾಗಿ ಕರ್ಮವೆಂದರೆ ಶಿವಾರ್ಚನೆ ಎಂತಲೂ, ಜ್ಞಾನವೆಂದರೆ ಪ್ರಪಂಚವೆಲ್ಲವೂ ಶಿವಮಯವಾಗಿದೆ ನಾನೂ ಶಿವಸ್ವರೂಪನಾಗಿದ್ದೇನೆ ಎಂಬ ತಿಳುವಳಿಕೆ ಎಂಬುದಾಗಿ ಅವುಗಳ ಲಕ್ಷಣಗಳನ್ನು ಹೇಳಿದ್ದಾರೆ. ಆದ್ದರಿಂದ ಶಿವಜ್ಞಾನ ಸಂಪನ್ನನಾದವನು ಜೀವನಪರ್ಯಂತವಾಗಿ ಶಿವಾರ್ಚನೆಯನ್ನು ಮಾಡುತ್ತ ಶಿವಾನುಗ್ರಹವನ್ನು ಪಡೆದು ಮುಕ್ತನಾಗಬೇಕಾದ್ದರಿಂದ ಈ ಜ್ಞಾನ-ಕರ್ಮಗಳ ಸಮುಚ್ಚಯವನ್ನು ಸ್ವೀಕರಿಸಲೇಬೇಕೆಂದು ವೀರಶೈವಾಚಾರ್ಯರ ಅಭಿಪ್ರಾಯವಾಗಿದೆ.

ಇದೂ ಅಲ್ಲದೇ ಶಿವಜ್ಞಾನ ಸಂಪನ್ನನಾದವನು ಒಂದು ವೇಳೆ ಸ್ವೈರಾಚಾರಿಯಾದರೆ ಸಾಮಾನ್ಯ ಜನರು ಅವನನ್ನು ನೋಡಿ ಮತ್ತಷ್ಟು ಸ್ವೈರಾಚಾರಿಗಳಾಗಿ ಸಾಮಾಜಿಕ-ಸೌಂದರ್ಯವನ್ನೇ ಹಾಳುಮಾಡುವರು. ಸಾಮಾಜಿಕ ವ್ಯವಸ್ಥೆಯನ್ನು ಸುಂದರಗೊಳಿಸುವುದು ಜ್ಞಾನಿಗಳ ಕರ್ತವ್ಯವಾದ್ದರಿಂದ ಜಗತ್ತಿನ ಜನರನ್ನು ಸನ್ಮಾರ್ಗದಲ್ಲಿ ನಡೆಸಲು ಜ್ಞಾನಿಗಳು ಸ್ವತಃ ನಡೆದು ತೋರಿಸಬೇಕಾಗುವುದು. ಅಂತೆಯೇ ಜಗದ್ಗುರು ರೇಣುಕ ಭಗವತ್ಪಾದರು-

ಅಧರ್ಮಂ ನ ಸ್ಪೃಶೇತ್‌ಕಿಂಚಿತ್ ವಿಹಿತಂ ಧರ್ಮಮಾಚರೇತ್।
ತಂ ಚ ಕಾಮವಿನಿರ್ಮುಕ್ತಂ ತಮಪಿ ಜ್ಞಾನಪೂರ್ವಕಮ್ ॥
ಧರ್ಮ ಏವ ಸಮಸ್ತಾನಾಂ ಯತಃ ಸಂಸಿದ್ಧಿಕಾರಣಂ।
ನಿಃಸ್ಪೃಹೋಽಪಿ ಮಹಾಯೋಗೀ ಧರ್ಮಮಾರ್ಗಂ ನ ಸಂತ್ಯಜೇತ್।
ಜ್ಞಾನಾಮೃತೇನ ತೃಪ್ತೋಽಪಿ ಯೋಗೀ ಧರ್ಮಂ ನ ಸಂತ್ಯಜೇತ್।
ಆಚಾರಂ ಮಹತಾಂ ದೃಷ್ಟ್ವಾ ಪ್ರವರ್ತಂತೇ ಹಿ ಲೌಕಿಕಾಃ॥
ಸದಾಚಾರಪ್ರಿಯಃ ಶಂಭುಃ ಸದಾಚಾರೇಣ ಪೂಜ್ಯತೇ।
ಸದಾಚಾರಂ ವಿನಾ ತಸ್ಯ ಪ್ರಸಾದೋ ನೈವ ಜಾಯತೇ॥[೧೨]

ಹೀಗೆ ಶಿವಾನುಗ್ರಹ ಪ್ರಾಪ್ತಿಗಾಗಿ, ಲೋಕಸಂಗ್ರಹಕ್ಕಾಗಿ ಜ್ಞಾನಿಗಳೂ ಸಹ ವಿಹಿತಕರ್ಮಗಳನ್ನು ಅವಶ್ಯವಾಗಿ ಆಚರಿಸಬೇಕೆಂಬುದಾಗಿ ಆದೇಶವಿತ್ತಿದ್ದಾರೆ. ಲೋಕಸಂಗ್ರಹಕ್ಕಾಗಿ ಜ್ಞಾನಿಗಳು ಕರ್ಮಗಳನ್ನು ಆಚರಿಸಿದರೆ ಅದರ ಫಲಭೋಗವು ಅವಶ್ಯಂಭಾವಿ ಎಂದು ಶಂಕಿಸಿದರೆ-

ಜ್ಞಾನಿನೋ ಯಾನಿ ಕರ್ಮಾಣಿ ತಾನಿ ನೋ ಜನ್ಮಹೇತವಃ।
ಅಗ್ನಿದಗ್ಧಾನಿ ಬೀಜಾನಿ ಯಥಾ ನಾಂಕುರಕಾರಣಮ್॥
ಕರ್ಮಣಾ ಕಿಂ ಕೃತೇನಾಪಿ ಜ್ಞಾನಿನೋ ನಿರಹಂಕೃತೇಃ।
ವಿಕ್ರಿಯಾ ಪ್ರತಿಬಿಂಬಸ್ಥಾ ಕಿಂ ಕರೋತಿ ಹಿಮದ್ಯುತೇಃ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜ್ಞಾನೀ ಕರ್ಮನಿರೂಢೋಽಪಿ ಲಿಪ್ಯತೇ ನ ಕ್ರಿಯಾಫಲೈಃ।
ಘೃತಾದಿನಾ ಯಥಾ ಜಿಹ್ವಾ ಭೋಕ್ತ್ರೀ ಚಾಪಿ ನ ಲಿಪ್ಯತೇ॥[೧೩]

ಅಂದರೆ ಜ್ಞಾನಿಗಳಲ್ಲಿ ಕರ್ತೃತ್ವ ಅಭಿಮಾನವಿಲ್ಲದ ಕಾರಣ ಅವರಿಗೆ ಕರ್ಮಫಲದ ಲೇಪವು ಆಗುವುದಿಲ್ಲವೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ವೀರಶೈವ ಸಾಧಕನು ಹೀಗೆ ಜ್ಞಾನ-ಕರ್ಮ ಸಮಾಯುಕ್ತನಾಗಿ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯಗಳೆಂಬ ಷಟ್‌ಸ್ಥಲಗಳಲ್ಲಿ ನಿರೂಪಿಸಿದ ಶ್ರದ್ಧೆ, ನಿಷ್ಠೆ, ಅವಧಾನ, ಅನುಭಾವ, ಆನಂದ ಹಾಗೂ ಸಮರಸಗಳೆಂಬ ಭಕ್ತಿಗಳನ್ನು ಕ್ರಮವಾಗಿ ಮೈಗೂಡಿಸಿಗೊಂಡು ಶಿವನೊಡನೆ ಸಮರಸನಾಗಿ ಮುಕ್ತನಾಗುತ್ತಾನೆ.

ಇತರ ದರ್ಶನಗಳೊಂದಿಗೆ ಸಮೀಕ್ಷೆ :

ಭಾರತೀಯ ದಾರ್ಶನಿಕರಲ್ಲಿ ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ ಮತ್ತು ಅದ್ವೈತವೇದಾಂತಿಗಳು ಜ್ಞಾನದಿಂದಲೇ ಮೋಕ್ಷವೆಂಬುದಾಗಿಯೂ, ಮೀಮಾಂಸಕರು ಮತ್ತು ವೀರಶೈವರು ಜ್ಞಾನ-ಕರ್ಮಗಳ ಸಮುಚ್ಚಯದಿಂದ ಮೋಕ್ಷ ಎಂಬುದಾಗಿ ಪ್ರತಿಪಾದಿಸುತ್ತಾರೆ. ಇಲ್ಲಿ ಕರ್ಮವು ಮೋಕ್ಷಕ್ಕೆ ಕಾರಣವೆಂಬ ವಿಷಯದಲ್ಲಿ ಐಕ್ಯಮತ್ಯ ಇರದಿದ್ದರೂ ಜ್ಞಾನದಿಂದ ಮೋಕ್ಷವೆನ್ನುವಲ್ಲಿ ಭಿನ್ನಾಭಿಪ್ರಾಯಗಳಿಲ್ಲ. ಮಿಥ್ಯಾಜ್ಞಾನವೇ ಬಂಧನಕ್ಕೆ ಕಾರಣ. ತತ್ತ್ವಜ್ಞಾನವೇ ಮೋಕ್ಷಸಾಧನವೆನ್ನುವ ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ ಮತ್ತು ಅದ್ವೈತ ವೇದಾಂತಿಗಳ ತತ್ತ್ವಜ್ಞಾನದ ವಿಷಯದಲ್ಲಿ ಸಾಮ್ಯತೆ ಇರುವುದಿಲ್ಲ. ನ್ಯಾಯದರ್ಶನದಲ್ಲಿ ದ್ವಾದಶ ಪ್ರಮೇಯಗಳ[೧೪] ಯಥಾರ್ಥಜ್ಞಾನವೇ ತತ್ತ್ವಜ್ಞಾನವು. ವೈಶೇಷಿಕ ದರ್ಶನದಲ್ಲಿ ದ್ರವ್ಯಾದಿ ಷಟ್‌ಪದಾರ್ಥಗಳ ಸಾಧರ್ಮ್ಯ-ವೈಧರ್ಮ್ಯ[೧೫] ಸಾಕ್ಷಾತ್ಕಾರವೇ ತತ್ತ್ವಜ್ಞಾನವು. ಸಾಂಖ್ಯ-ಯೋಗದರ್ಶನದಲ್ಲಿ ಬುದ್ಧಿ-ಪುರುಷರ ವಿವೇಕಖ್ಯಾತಿಯೇ[೧೬] ತತ್ತ್ವಜ್ಞಾನವು. ಅದ್ವೈತವೇದಾಂತದಲ್ಲಿ "ತತ್ತ್ವಮಸಿ" ಎಂಬ ಮಹಾವಾಕ್ಯದಿಂದ ಆತ್ಮ-ಬ್ರಹ್ಮರ ಅಭೇದ ಜ್ಞಾನವೇ ತತ್ತ್ವಜ್ಞಾನವು. ನ್ಯಾಯಾದಿಯೋಗಾಂತಗಳಾದ ದರ್ಶನಗಳಲ್ಲಿ ಆತ್ಮೇತರ ಪದಾರ್ಥಕ್ಕಿಂತ ಆತ್ಮನು ಭಿನ್ನನಾಗಿದ್ದಾನೆ ಎಂದು ಪ್ರತಿಪಾದಿಸಿರುವುದರಿಂದ ಇದರ ತತ್ತ್ವಜ್ಞಾನವು ಭೇದ ಪ್ರಧಾನವಾದದ್ದು. ಅದ್ವೈತ ವೇದಾಂತಿಗಳ ತತ್ತ್ವಜ್ಞಾನವು ಅಭೇದ ಪ್ರಧಾನವಾದದ್ದು. ಮೀಮಾಂಸಕರು ನೈಯಾಯಿಕರಂತೆ ಅನಾತ್ಮಪದಾರ್ಥಗಳಿಗಿಂತ ಆತ್ಮನ ಪಾರ್ಥಕ್ಯಜ್ಞಾನವೇ ತತ್ತ್ವಜ್ಞಾನವೆಂದು ಸ್ವೀಕರಿಸುತ್ತಾರೆ.

"ಸರ್ವಂ ಖಲ್ವಿದಂ ಬ್ರಹ್ಮ"[೧೭] ಎನ್ನುವ ಶ್ರುತಿಗನುಸಾರವಾಗಿ ಪ್ರಪಂಚಕ್ಕೆ ಬ್ರಹ್ಮರೂಪತ್ವವನ್ನು ಪ್ರತಿಪಾದಿಸಿ "ಅಯಮಾತ್ಮಾ ಬ್ರಹ್ಮ"[೧೮] "ತತ್ತ್ವಮಸಿ"[೧೯] ಇತ್ಯಾದಿ ಮಹಾವಾಕ್ಯಗಳಿಂದ ಜೀವನನ್ನೂ ಬ್ರಹ್ಮರೂಪನನ್ನಾಗಿ ಅದ್ವೈತಿಗಳು ನಿರೂಪಿಸಿರುವುದರಿಂದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಾತ್ಮಕಮಿದಂ ಸರ್ವಂ ಶಿವಾದನ್ಯಂ ನ ವಿದ್ಯತೇ।
ಶಿವೋಽಹಮಿತಿ ಯಾ ಬುದ್ಧಿಸ್ತದೇವ ಜ್ಞಾನಮುತ್ತಮಮ್॥೧೭೦

ಎನ್ನುವ ವೀರಶೈವಾಭಿಮತ ತತ್ತ್ವಜ್ಞಾನಕ್ಕೂ ಅದ್ವೈತಿಗಳ ತತ್ತ್ವಜ್ಞಾನಕ್ಕೂ ಆಪಾತತಃ ಸಾಮ್ಯತೆ ಕಂಡುಬರುತ್ತದೆ. ಆದರೆ ಬಾಧಸಾಮಾನಾಧಿಕರಣ್ಯದಿಂದ ಪ್ರಪಂಚಕ್ಕೆ ಬ್ರಹ್ಮರೂಪವನ್ನು ಅದ್ವೈತಿಗಳು ಹೇಳಿದರೆ ವೀರಶೈವರು-

ಪತ್ರಶಾಖಾದಿರೂಪೇಣ ಯಥಾ ತಿಷ್ಠತಿ ಪಾದಪಃ।
ತಥಾ ಭೂಮ್ಯಾದಿರೂಪೇಣ ಶಿವ ಏಕೋ ವಿರಾಜತೇ॥೧೭೧

ಆಚಾರ್ಯರ ಈ ವಚನದಂತೆ ಬಾಧವಿಲ್ಲದೇ ಪ್ರಪಂಚವನ್ನೇ ಪರಮಾತ್ಮನನ್ನಾಗಿ ಸ್ವೀಕರಿಸುತ್ತಾರೆ.

ಈ ರೀತಿಯಾಗಿ ಪರ್ಯಾಲೋಚಿಸಲು ನ್ಯಾಯವೇ ಮೊದಲುಗೊಂಡು ಮೀಮಾಂಸಾದರ್ಶನ ಪರ್ಯಂತವಾಗಿ ಸ್ವೀಕರಿಸಿದ ತತ್ತ್ವಜ್ಞಾನವು ಅನಾತ್ಮಪದಾರ್ಥದಿಂದ ಆತ್ಮನ ಪಾರ್ಥಕ್ಯವನ್ನು ಬೋಧಿಸುವುದೇ ವಿನಹ ಯಾವುದೇ ಪರಮ ತತ್ತ್ವದ ಜೊತೆಗೆ ಆತ್ಮನ ಅಭೇದವನ್ನು ಬೋಧಿಸುವುದಿಲ್ಲ. ಅದ್ವೈತ ವೇದಾಂತದಲ್ಲಿ ಬ್ರಹ್ಮನೊಂದಿಗೆ ಆತ್ಮನ ಅಭೇದವನ್ನು ಬೋಧಿಸಿದರೂ ಪ್ರಪಂಚಕ್ಕೆ ಮಿಥ್ಯಾತ್ವವನ್ನು ಬೋಧಿಸುತ್ತಾರೆ. ಆದರೆ ವೀರಶೈವ ದರ್ಶನದಲ್ಲಿ ಪ್ರಪಂಚದ ಬಾಧೆಯನ್ನು ಮಾಡದೆ ಸರ್ವವೆಲ್ಲವನ್ನು ಶಿವಸ್ವರೂಪವನ್ನಾಗಿ ಬೋಧಿಸಿ ಆ ಶಿವನೊಂದಿಗೆ ಜೀವನ ಅಭೇದವನ್ನು ಬೋಧಿಸುವುದರಿಂದ ಎಲ್ಲರಿಗಿಂತಲೂ ಇದರ ವೈಶಿಷ್ಟ್ಯವು ತಿಳಿದುಬರುತ್ತದೆ.

ಮುಕ್ತ ಜೀವನ ಬಗ್ಗೆ ವಿಚಾರ ಮಾಡಲಾಗಿ ನ್ಯಾಯ, ವೈಶೇಷಿಕ ಮತ್ತು ಪ್ರಾಭಾಕರ ಮೀಮಾಂಸಕರು ಕೇವಲ ಸದ್ರೂಪವನ್ನು, ಸಾಂಖ್ಯ-ಯೋಗ ದಾರ್ಶನಿಕರು ಸದ್ರೂಪದ ಜೊತೆಗೆ ಚಿದ್ರೂಪವನ್ನು, ಭಾಟ್ಟಮೀಮಾಂಸಕರು ಹಾಗೂ ಅದ್ವೈತ ವೇದಾಂತಿಗಳು ಸಚ್ಚಿದಾನಂದ ಸ್ವರೂಪವನ್ನು ಸ್ವೀಕರಿಸುತ್ತಾರೆ. ಶ್ರೀ ಶಿವಯೋಗಿ ಶಿವಾಚಾರ್ಯರಾದರೂ-

ಮುಕ್ತಿರೇವ ಪರಾತೃಪ್ತಿಃ ಸಚ್ಚಿದಾನಂದಲಕ್ಷಣಾ।
ನಿತ್ಯತೃಪ್ತಸ್ಯ ಮುಕ್ತಸ್ಯ ಕಿಮನ್ಯೈರ್ಭೋಗಸಾಧನೈಃ॥೧೭೨

ಹೀಗೆ ಮುಕ್ತಾತ್ಮನು ಪರಶಿವನೊಂದಿಗೆ ಅಭಿನ್ನನಾಗಿ ಸಚ್ಚಿದಾನಂದ ಸ್ವರೂಪದಲ್ಲಿ ಇರುತ್ತಾನೆ ಎಂಬುದನ್ನು ಪ್ರತಿಪಾದಿಸಿರುವುದರಿಂದ ಅದ್ವೈತ ವೇದಾಂತಿಗಳ ಮುಕ್ತಾತ್ಮನಿಗೂ ವೀರಶೈವರ ಮುಕ್ತಾತ್ಮನಿಗೂ ಸಾಮ್ಯತೆ ಇದೆ. ಆದರೂ ಅದ್ವೈತ ವೇದಾಂತಿಗಳು ಸಂಸಾರಾವಸ್ಥೆಯು ಕಲ್ಪಿತವಾದದ್ದು. ಆಗ ತೋರುವ ಜೀವ-ಪರಮರ ಭೇದವು ಪಾರಮಾರ್ಥಿಕವಾದದ್ದಲ್ಲ, ಮುಕ್ತಿಯಲ್ಲಿಯ ಅಭೇದಸ್ಥಿತಿಯೇ ವಾಸ್ತವಿಕವಾದದ್ದೆಂದು ಸ್ವೀಕರಿಸಿ ಜೀವ-ಪರಮರ ಭೇದಬೋಧಕ ಶ್ರುತಿಗಳಿಗೆ ಗೌಣತೆಯನ್ನೂ, ಅಭೇದ ಬೋಧಕ ಶ್ರುತಿಗಳಿಗೆ ಮಾತ್ರ ಪ್ರಾಧಾನ್ಯತೆಯನ್ನು ಕೊಟ್ಟಿರುತ್ತಾರೆ. ಇದೇ ಪ್ರಕಾರ ನ್ಯಾಯ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೈಶೇಷಿಕ, ಸಾಂಖ್ಯ, ಯೋಗ ಮತ್ತು ಪೂರ್ವಮೀಮಾಂಸಾ ದಾರ್ಶನಿಕರು ಮುಕ್ತಾತ್ಮರು ಪರಸ್ಪರವಾಗಿ ಇಲ್ಲವೇ ಯಾವುದೇ ಒಂದು ಪರಮ ತತ್ತ್ವದ ಜೊತೆಗೆ ಅಭಿನ್ನರಾಗುತ್ತಾರೆ ಎಂಬುದಾಗಿ ಸ್ವೀಕರಿಸುವುದಿಲ್ಲ. ಆದಕಾರಣ ಇವರು ದ್ವೈತ ಶ್ರುತಿಗಳಿಗೆ ಪ್ರಾಮುಖ್ಯತೆಯನ್ನು ಅದ್ವೈತ ಶ್ರುತಿಗಳಿಗೆ ಗೌಣತೆಯನ್ನು ಬೋಧಿಸುತ್ತಾರೆ. ಕಾರಣ ಈ ಎಲ್ಲ ದರ್ಶನಗಳು ವೇದೈಕದೇಶಿಗಳೆಂದು ಕರೆಯಲ್ಪಡುತ್ತವೆ. ಆದರೆ ವೀರಶೈವ ದರ್ಶನದಲ್ಲಿ ಸಂಸಾರಾವಸ್ಥೆಯಲ್ಲಿ ಜೀವ-ಪರಮರ ಭೇದವು ಸತ್ಯವೆಂದು ಸ್ವೀಕರಿಸುವುದರ ಜೊತೆಗೆ-

ಕೀಟೋ ಭ್ರಮರಯೋಗೇನ ಭ್ರಮರೋ ಭವತಿ ಧ್ರುವಂ।
ಮಾನವಃ ಶಿವಯೋಗೇನ ಶಿವೋ ಭವತಿ ಸರ್ವದಾ॥[೧೩೩]

ಎಂಬ ಆಗಮ ಪ್ರಮಾಣಾನುಸಾರವಾಗಿ ಮುಕ್ತಾವಸ್ಥೆಯಲ್ಲಿ ಅವರ ಅಭೇದವನ್ನೂ ವಾಸ್ತವಿಕವಾದದ್ದೆಂದು ಪ್ರತಿಪಾದಿಸುವುದರಿಂದ ಇಲ್ಲಿ ಉಭಯವಿಧ ಶ್ರುತಿಗಳಿಗೆ ಸಮಾನವಾದ ಸ್ಥಾನವಿದೆಯಾದ್ದರಿಂದ ಸರ್ವಶ್ರುತಿಗಳ ಸಮನ್ವಯವನ್ನು ಮಾಡುವ ವೀರಶೈವ ಸಿದ್ಧಾಂತವು "ಸರ್ವವೇದಾನುಸಾರಿತ್ವಾಚ್ಛೈವತಂತ್ರಂ ವಿಶಿಷ್ಯತೇ"[೧೩೪] ಎಂಬ ಶಿವಯೋಗಿ ಶಿವಾಚಾರ್ಯರ ಉಕ್ತಿಯಂತೆ ವೇದ ಮಯವೆಂಬುದು ಸಿದ್ಧವಾಗುತ್ತದೆ.

ಉಪಸಂಹಾರ:

ಈ ಲಘು ನಿಬಂಧದಲ್ಲಿ ದಾರ್ಶನಿಕ ತತ್ತ್ವಗಳಾದ ಶಿವ, ಜೀವ, ಜಗತ್ತು, ಬಂಧ ಮತ್ತು ಮೋಕ್ಷಗಳೆಂಬ ಪ್ರಮುಖವಾದ ವಿಷಯಗಳ ಮೇಲೆ ಸಿದ್ಧಾಂತ ಶಿಖಾಮಣಿ ಹಾಗೂ ಷಡ್‌ದರ್ಶನಗಳ ವಿಚಾರಗಳನ್ನು ಪ್ರಸ್ತುತಪಡಿಸಿ ಪ್ರತಿಯೊಂದು ಸಿದ್ಧಾಂತದಲ್ಲಿ ಷಡ್‌ದರ್ಶನಗಳು ವೇದೈಕದೇಶಿಗಳು, ವೀರಶೈವವು ಸರ್ವವೇದಾನುಸಾರಿ ಎಂಬ ಶಿವಯೋಗಿ ಶಿವಾಚಾರ್ಯರ ಉಕ್ತಿಯನ್ನು[೧೩೫] ತರ್ಕದ ವರೆಗಲ್ಲಿನ ಮೇಲೆ ಪರೀಕ್ಷಿಸಿ ಸಂಕ್ಷಿಪ್ತವಾಗಿ ವಿಷಯ ವಸ್ತುವನ್ನು ಪ್ರಸ್ತುತಪಡಿಸಿರುತ್ತೇವೆ. ಈ ವಿಷಯದಲ್ಲಿ ಹೆಚ್ಚಿನ ಜಿಜ್ಞಾಸೆಯುಳ್ಳವರು "ಸಿದ್ಧಾಂತ ಶಿಖಾಮಣೇರ್ದರ್ಶನಾಂತರೀಯಸಿದ್ಧಾಂತೈಃ ಸಹ ಸಮೀಕ್ಷಾ" ಎಂಬ ನಮ್ಮ ಸಂಸ್ಕೃತ ಶೋಧ ಪ್ರಬಂಧವನ್ನು ಅವಲೋಕಿಸಬಹುದು.

ಇತಿ ಶಿವಮ್

ಗ್ರಂಥಋಣ

೧. ಸಿ.ಶಿ. - ಸಿದ್ಧಾಂತ ಶಿಖಾಮಣಿ -ವೀರಶೈವ ಲಿಂಗಿಬ್ರಾಹ್ಮಣ ಗ್ರಂಥಮಾಲಾ ಸೊಲ್ಲಾಪುರ, ೧೯೦೫ ಇಸ್ವಿ.

ಸಿದ್ಧಾಂತ ಶಿಖಾಮಣಿ -ಕಾಶೀನಾಥ ಗ್ರಂಥಮಾಲಾ ಮೈಸೂರ- ೧೯೩೬ ಸ್ವಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರತ್ನತ್ರಯ -ವಾಣೀ ವಿಲಾಸ ಮುದ್ರಣಾಲಯ, ಶ್ರೀರಂಗಂ, ೧೯೨೩ ಶಿವಮಹಿಮ್ನಸ್ತೋತ್ರ.

ಮನುಸ್ಮೃತಿ- ಖೇಮರಾಜ ಶ್ರೀಕೃಷ್ಣದಾಸ ಮುಂಬಯಿ. ೧೯೪೫ ವಿಕ್ರಮ. ಸಂ.

ಕಠ.ಉ - ಕಠೋಪನಿಷತ್ (ಈಶಾದ್ಯಷ್ಟೋಟ್ಟೇತ್ತರಶತೋಪನಿಷದಃ -ನಿರ್ಣಯ ಸಾಗರ ಪ್ರೆಸ್ ಮುಂಬಯಿ, ೧೯೨೫.

ಬ್ರ.ಸೂ.ಶ್ರೀಕರ- ಬ್ರಹ್ಮಸೂತ್ರ ಶ್ರೀಕರ ಭಾಷ್ಯಂ- ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು, ೧೯೭೭.

ಬೃ.ಉ. - ಬೃಹದಾರಣ್ಯಕೋಪನಿಷತ್- ನಿರ್ಣಯ ಸಾಗರ ಪ್ರೆಸ್, ಮುಂಬಯಿ, ೧೯೨೫.

ಪ್ರಶ್ನ. ಉ. - ಪ್ರಶ್ನೋಪನಿಷತ್- ನಿರ್ಣಯ ಸಾಗರ ಪ್ರೆಸ್, ಮುಂಬಯಿ, ೧೯೨೫.

ಛಾ.ಉ - ಛಾಂದೋಗ್ಯೋಪನಿಷತ್- ನಿರ್ಣಯ ಸಾಗರ ಪ್ರೆಸ್, ಮುಂಬಯಿ, ೧೯೨೫.

- ವೀರಶೈವಾನಂದ ಚಂದ್ರಿಕಾ, ಮೂರು ಸಾವಿರ ಮಠ, ಹುಬ್ಬಳ್ಳಿ, ೧೯೩೬.

- ತರ್ಕಸಂಗ್ರಹಃ- ಚೌಖಾಂಬಾ ಸಂಸ್ಕೃತ ಸಂಸ್ಥಾನ, ವಾರಾಣಸಿ, ೧೯೭೬.

ಯೋ.ಸೂ. - ಯೋಗಸೂತ್ರ-ಜೀವಾನಂದ ವಿದ್ಯಾಸಾಗರ, ಕಲಕತ್ತಾ, ೧೯೪೦.

ಯೋ.ಸೂ - ತರ್ಕಭಾಷಾ -ಚೌಖಾಂಬಾ ಸಂಸ್ಕೃತ ಸಂಸ್ಥಾನ, ವಾರಾಣಸಿ, ೧೯೭೭.

ಯೋ.ಸೂ.ಭಾ- ಯೋಗಸೂತ್ರ ವ್ಯಾಸಭಾಷ್ಯ, -ಜೀವಾನಂದ ವಿದ್ಯಾಸಾಗರ, ಕಲಕತ್ತಾ ೧೯೪೦.

ಸಾಂ.ಸೂ. - ಸಾಂಖ್ಯಸೂತ್ರ ಜೀವಾನಂದ, ವಿದ್ಯಾಸಾಗರ, ಕಲಕತ್ತಾ, ೧೯೩೬.

ಮುಂಡ. ಉ - ಮುಂಡಕೋಪನಿಷತ್- ನಿರ್ಣಯ ಸಾಗರ ಪ್ರೆಸ್, ಮುಂಬಯಿ, ೧೯೨೫.

- ಬ್ರಹ್ಮಸೂತ್ರಶಾಂಕರ ಭಾಷ್ಯ -ನಿರ್ಣಯ ಸಾಗರ ಪ್ರೆಸ್, ಮುಂಬಯಿ, ೧೯೦೯.

- ಯೋಗಸೂತ್ರ ತತ್ತ್ವವೈಶಾರದೀ, ಜೀವಾನಂದ ವಿದ್ಯಾಸಾಗರ, ಕಲಕತ್ತಾ, ೧೯೪೦.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೈ.ಸೂ. - ವೈಶೇಷಿಕ ಸೂತ್ರ- ಚೌಖಾಂಬಾ ಸಂಸ್ಕೃತ ಸಂಸ್ಥಾನ, ವಾರಾಣಾಸಿ, ೧೯೬೯.

ನ್ಯಾ.ಸೂ. - ನ್ಯಾಯಸೂತ್ರ- ಮೆಡಿಕಲ್ ಹಾಲ್ ಪ್ರೆಸ್, ಬನಾರಸ, ೧೯೬೯.

ಮೀ.ಸೂ - ಮೀಮಾಂಸಾಸೂತ್ರ- ಆನಂದಾಶ್ರಮ, ಪೂನಾ, ೧೯೭೬.

ಶ್ವೇ.ಉ. - ಶ್ವೇತಾಶ್ವತರೋಪನಿಷತ್ -ನಿರ್ಣಯ ಸಾಗರ ಪ್ರೆಸ್, ಮುಂಬಯಿ ೧೯೨೫.

- ನ್ಯಾಯಸಾರ -ನಿರ್ಣಯ ಸಾಗರ ಪ್ರೆಸ್, ಮುಂಬಯಿ, ೧೯೧೦.
- ಪ್ರಶಸ್ತಪಾದಭಾಷ್ಯ ಸಂಪೂರ್ಣಾನಂದ ಸಂಸ್ಕೃತ ವಿ.ವಿ. ವಾರಾಣಸಿ, ೧೯೭೭.
- ನ್ಯಾಯಕಂದಲಿ -ಸಂಪೂರ್ಣಾನಂದ ಸಂಸ್ಕೃತ ವಿ.ವಿ. ವಾರಾಣಸಿ, ೧೯೭೭.
- ಮೀಮಾಂಸಾ ನ್ಯಾಯಪ್ರಕಾಶ -ಭಂಡಾರಕರ ಪ್ರಾಚ್ಯವಿದ್ಯಾ ಸಂಶೋಧನಾಲಯ, ಪೂನಾ. ೧೯೭೨.
- ಅರ್ಥಸಂಗ್ರಹ- ಚೌಖಾಂಬಾ ಸಂಸ್ಕೃತ ಸೀರೀಜ, ವಾರಾಣಸಿ, ೧೯೭೬.
- ನ್ಯಾಯಪ್ರಕಾಶ -ಲಕ್ಷ್ಮೀ ವೆಂಕಟೇಶ್ವರ ಸ್ಟೀಮ ಪ್ರೆಸ್, ಮುಂಬಯಿ, ೧೯೩೪.
- ಸಾಂಖ್ಯಕಾರಿಕಾ- ನಿರ್ಣಯ ಸಾಗರ ಪ್ರೆಸ್, ಮುಂಬಯಿ, ೧೯೪೦.
- ಪ್ರಕರಣಪಂಚಿಕಾ -ಕಾಶೀ ಹಿಂದೂ ವಿಶ್ವವಿದ್ಯಾಲಯ, ವಾರಾಣಸಿ, ೧೯೬೧.

ಕೌಷೀ.ಉ. - ಕೌಷೀತಕೀ ಉಪನಿಷತ್- ನಿರ್ಣಯ ಸಾಗರ ಪ್ರೆಸ್, ಮುಂಬಯಿ, ೧೯೨೫.

ಪಾರಾ. ಸ್ಮೃ - ಪಾರಾಶರ ಸ್ಮೃತಿ -ಶ್ರೀ ವೆಂಕಟೇಶ್ವರ ಸ್ಟೀಮ ಪ್ರೆಸ್, ಮುಂಬಯಿ, ೧೯೮೧. ವಿಕ್ರಮ ಸ.

ಏಕಾಕ್ಷರ ನಾಮಕೋಷ ಸಂಗ್ರಹ- ರಾಜಸ್ಥಾನ ಪ್ರಾಚ್ಯವಿದ್ಯಾ ಪ್ರತಿಷ್ಠಾನ ಜೋಧಪುರ ೧೯೬೪.

ಈ.ಉ.

ಈಶಾವಾಸ್ಯ ಉ. - ಈಶಾವಾಸ್ಯೋಪನಿಷತ್ -ಶಂರರ ವಿಲಾಸ ಸಂಸ್ಕೃತ ಪಾಠಶಾಲಾ ಮೈಸೂರು, ೧೯೭೬.

- ಪ್ರತ್ಯಭಿಜ್ಞಾಹೃದಯ -ಮೋತೀಲಾಲ ಬನಾರಸಿದಾಸ, ವಾರಾಣಸಿ, ೧೯೭೩.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

- ಶಿವಸೂತ್ರ -ಕಾಶ್ಮೀರ ಸಂಸ್ಕೃತ ಗ್ರಂಥಾವಲಿ, ಶ್ರೀನಗರ, ೧೯೧೧ ಇಸವಿ.

ಶಿವ.ಪು. - ಶಿವಮಹಾಪುರಾಣ- ಪಂಡಿತ ಪುಸ್ತಕಾಲಯ, ಕಾಶಿ, ೨೦೨೦ ವಿಕ್ರಮ ಸಂವತ್.

- ಸರ್ವದರ್ಶನ ಸಂಗ್ರಹ- ಚೌಖಾಂಬಾ ವಿದ್ಯಾಭವನ- ವಾರಾಣಸಿ ೧೯೬೪ ಇಸವಿ.

ಈ. - ಕ್ರಿಯಾಸಾರ -ಪ್ರಾಚ್ಯವಿದ್ಯಾಸಂಶೋಧನಾಲಯ, ಮೈಸೂರು ೧೯೫೪, ೫೭,೫೮.

ಭ.ಸಂ - ಭವಸಂತರಣೋಪನಿಷತ್ -ನಿರ್ಣಯ ಸಾಗರ ಪ್ರೆಸ್, ಮುಂಬಯಿ, ೧೯೨೫.

ಸಾಂ.ಕಾ. - ಸಾಂಖ್ಯಕಾರಿಕಾ- ನಿರ್ಣಯ ಸಾಗರ ಪ್ರೆಸ್, ಮುಂಬಯಿ, ೧೯೪೦.

ಅಡಿಟಿಪ್ಪಣಿ

೧. ಸಿ. ಶಿ. ಅವತರಣಿಕಾ ಶ್ಲೋಕ ೩.

೨. ರತ್ನತ್ರಯ, ಪುಟ. ೫.

೩. ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ।
ನಿರ್ದಿಷ್ಟಮುತ್ತರೇ ಭಾಗೇ ವೀರಶೈವಮತಂ ಪರಮ್॥ (ಸಿ.ಶಿ. ೫-೧೪)

೪. ಸಿ.ಶಿ. ೧.೩೧.

೫. ಸಿ.ಶಿ. ೫.೪.

೬. ಶಿವಮಹಿಮ್ನಸ್ತೋತ್ರ. ೭ ಶ್ಲೋಕ.

೭. ಮನುಸ್ಮೃತಿ ೨-೧೧.

೮. ಸಿ.ಶಿ. ೫-೧೩.

೯. ಯೇನ ರಕ್ಷಾವತೀಜಾತಾ ಶಿವಭಕ್ತಿಃ ಸನಾತನೀ।
ಬೌದ್ಧಾದಿಪ್ರತಿಸಿದ್ಧಾಂತಮಹಾಧ್ವಾಂತಾಂಶುಮಾಲಿನಾ॥ (ಸಿ.ಶಿ. ೧-೨೩)
ಶರೀರಮೇವ ಚಾರ್ವಾಕೈರಾತ್ಮೇತಿ ಪರಿಕೀರ್ತ್ಯತೇ।
....
ಬುದ್ಧಿತತ್ತ್ವಗತೈರ್ಬೌದ್ಧೈರ್ಬುದ್ಧಿರಾತ್ಮೇತಿ ಗೀಯತೇ ।
ನೇಂದ್ರಿಯಾಣಾಂ ನ ದೇಹಸ್ಯ ನ ಬುದ್ಧೇರಾತ್ಮತಾ ಭವೇತ್
ಅಹಂಪ್ರತ್ಯಯವೇದ್ಯತ್ವಾದನುಭೂತಸ್ಯ ತೈರಪಿ (ಸಿ.ಶಿ. ೫..೫೧-೫೩).

೧೦. ಸಿ.ಶಿ. ೫. ೪-೧೪.

೧೧. ಸಿ.ಶಿ. ೧. ೧-೨.

೧೨. ಸಿ.ಶಿ. ೬.೩೬.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧೩. ಸೃಷ್ಟೇಃ ಪೂರ್ವಂ ಮಹಾದೇವಃ ಶಕ್ತಿಸಂಕೋಚಹೇತುನಾ।
ನಿರ್ಗುಣತ್ವೇನ ಶಾಸ್ತ್ರೇಷು ಗೀಯತೇ ತತ್ತ್ವವೇದಿಭಿಃ॥
ಸೃಷ್ಟ್ಯಾದೌ ಪರಮೇಶಸ್ಯ ಶಕ್ತೇಃ ಪ್ರಾಚುರ್ಯವೈಭವಾತ್।
ಸರ್ವಜ್ಞತ್ವಾದಿಕಲ್ಯಾಣಗುಣವಾನಿತಿ ಕೀರ್ತ್ಯತೇ॥ (ಬ್ರ. ಸೂ. ಶ್ರೀಕರ. ೧-೩-೭)

೧೪. ಕಠ.ಉ. ೧-೩.

೧೫. ಬೃ.ಉ.೩-೮-೮.

೧೬. ಪ್ರಶ್ನ.ಉ. ೬-೩.

೧೭. ಛಾ.ಉ. ೬-೨-೩.

೧೮. ಸಿ.ಶಿ. ೨.೪-೫.

೧೯. ಸಿ.ಶಿ. ೨;೧೨.

೨೦. ಸಿ.ಶಿ. ೫-೩೬.

೨೧. ಸಿ.ಶಿ. ೧-೧೧.

೨೨. ಸಿ.ಶಿ. ೨೦-೩೨.

೨೩. ವೀರಶೈವಾನಂದ ಚಂದ್ರಿಕಾ, ಪು. ೭.

೨೪. ಸಿ.ಶಿ. ೫-೪೧, ೪೩.

೨೫. ಸಿ.ಶಿ. ೨-೮, ೧೧.

೨೬. ಸಿ.ಶಿ. ೫-೪೭, ೪೮.

೨೭. ಸಿ.ಶಿ. ೧-೬.

೨೮. ಸಿ.ಶಿ. ೧೮-೧೪.

೨೯. "ತತ್ರ ದ್ರವ್ಯಾಣಿ ಪೃಥಿವ್ಯಪ್ತೇಜೋವಾಯ್ವಾಕಾಶಕಾಲದಿಗಾತ್ಮಮನಾಂಸಿ ನವೈವ."
"ಜ್ಞಾನಾಧಿಕರಣಮಾತ್ಮಾ- ಸ ದ್ವಿವಿಧಃ ಜೀವಾತ್ಮಾ ಪರಮಾತ್ಮಾ ಚೇತಿ"
(ತರ್ಕಸಂಗ್ರಹ).

೩೦. ಯೋ. ಸೂ. ೧-೧೪.

೩೧. ಛಾ.ಉ. ೬-೨-೩.

೩೨. ಪ್ರಶ್ನ. ಉ. ೬-೩.

೩೩. ಸಿ.ಶಿ. ೨-೧೦.

೩೪. ಏಕವಿಂಶತಿಭೇದಾಸ್ತು ಶರೀರಂ, ಷಡಿಂದ್ರಿಯಾಣಿ, ಷಡ್ ವಿಷಯಾಃ, ಷಡ್ ಬುದ್ಧಯಃ, ಸುಖಂ, ದುಃಖಂ ಚೇತಿ ಗೌಣಮುಖ್ಯಭೇದಾತ್" (ತರ್ಕಭಾಷಾ, ಪುಟ. ೨೩೨).

೩೫. ನೋಡಿರಿ- ಯೋ. ಸೂ. ಭಾ. ೧-೨೪.

೩೬. ಸಿ.ಶಿ. ೫-೪೧, ೪೩.

೩೭. ನೋಡಿರಿ- ಸಾಂ. ಸೂ. ಪ್ರವಚನಭಾಷ್ಯ ೧-೯೬.

೩೮. ಮುಂಡ. ಉ. ೧-೧-೭.

೩೯. ಸಿ.ಶಿ. ೧೦-೬೬.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೪೦. ನೋಡಿರಿ- ಸರ್ವದರ್ಶನ ಸಂಗ್ರಹ: ಪು. ೫೧೦; ಯೊ. ಸೂ. ತತ್ತ್ವವೈಶಾರದಿ ೧-೨೫, ಬ್ರ. ಸೂ. ಶಾಂಕರಭಾಷ್ಯ ೨-೧-೩೪; ಬ್ರ.ಸೂ. ಭಾಮತೀ ೨-೧-೩೪.

೪೧. ಸಿ.ಶಿ. ೫-೪೬, ೪೭.

೪೨. ನೋಡಿರಿ ವೈ.ಸೂ. ೧೦-೨-೯; ನ್ಯಾ. ಸೂ. ೨-೧-೬೯; ಯೋ.ಸೂ. ಭಾ. ೧-೨೪.

೪೩. ಬ್ರ.ಸೂ. ಶ್ರೀಕರ ೧-೧-೩

೪೪. ಸಾಂ.ಸೂ.೫-೪೬.

೪೫. ಮೀ.ಸೂ. ೧-೧-೬.

೪೬. ನೋಡಿರಿ - ನ್ಯಾ.ಸೂ. ೪-೨-೩೮, ೪೨, ೪೬.

೪೭. ಶ್ವೇ.ಉ. ೬-೨೦.

೪೮. ನೋಡಿರಿ - ನ್ಯಾಯಸಾರ, ಪು. ೩೦.

೪೯. ವೈ.ಸೂ. ೧-೧-೨.

೫೦. ವೈ.ಸೂ. ೧-೧-೪.

೫೧. ಪ್ರಶಸ್ತಪಾದಭಾಷ್ಯ, ಪು. ೧೮.

೫೨. ನ್ಯಾಯಕಂದಲೀ, ಪು. ೧೯.

೫೩. ಯೋ. ಸೂ. ೨-೪೫.

೫೪. ನೋಡಿರಿ - ಮೀಮಾಂಸಾಪ್ರಕಾಶ, ಪು. ೨೭೭-೨೭೮; ಅರ್ಥಸಂಗ್ರಹ, ಪು. ೧೬೨.

೫೫. ಸಿ.ಶಿ. ೧೮-೫೯, ೬೦, ೬೧.

೫೬. ಸಿ.ಶಿ. ೫-೫೩,೫೪.

೫೭. ಸಿ.ಶಿ. ೫-೩೩,೩೪.

೫೮. ಸಿ.ಶಿ. ೫-೪೪,೪೫.

೫೯. ಸಿ.ಶಿ. ೧೮-೧೭.

೬೦. ಶ್ವೇ.ಉ. ೫-೯.

೬೧. ಸಿ.ಶಿ. ೧೮-೬,೭.

೬೨. ಸಿ.ಶಿ. ೫-೪೨.

೬೩. ಬೃ.ಉ. ೧-೪-೩.

೬೪. ಸಿ.ಶಿ. ೧೮-೧೪, ೧೧.

೬೫. ಸಿ.ಶಿ. ೧೮-೬.

೬೬. ಸಿ.ಶಿ. ೧೦-೩೭,೩೯,೪೦.

೬೭. ಸಿ.ಶಿ. ೧೦-೪೧.

೬೮. ಸಿ.ಶಿ. ೧೮-೧೭.

೬೯. ಬ್ರ.ಸೂ. ಶ್ರೀಕರ. ೨-೩-೪೬.

೭೦. ನ್ಯಾಯಪ್ರಕಾಶ, ಪುಟ, ೨೧೧-೨೧೩.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೭೧. ವೈಸೂ. ೩-೨-೨೦; ೭-೧-೨೨.
೭೨. ಸಾಂಖ್ಯಕಾರಿಕಾ-೧೮.
೭೩. ಯೋ.ಸೂ. ೨-೨೨.
೭೪. ಪ್ರಕರಣ ಪಂಚಿಕಾ. ಪು. ೧೪೧.
೭೫. ಬೃ.ಉ. ೪-೪-೨.
೭೬. ಕೌಷೀ. ಉ. ೧-೨.
೭೭. ಬೃ.ಉ. ೪-೪-೬.
೭೮. ಪರಾ.ಸ್ಮೃ. ೨-೩೨.
೭೯. ಮುಂಡ. ಉ. ೩-೧-೯.
೮೦. ಕಠ. ಉ. ೨-೬-೧೭.
೮೧. ಬೃ.ಉ. ೪-೪-೨.
೮೨. ನ್ಯಾಯಮಂಡಲಿ ಪುಟ. ೨೧೩.
೮೩. ಬ್ರ.ಸೂ. ಶ್ರೀಕರ, ಮಂಗಲಶ್ಲೋಕ ೧೫.
೮೪. ಏಕಾಕ್ಷರನಾಮಕೋಷಸಂಗ್ರಹ, ಪು. ೧೮.
೮೫. ಶ್ವೇ. ಉ. ೪-೬.
೮೬. ಬೃ.ಉ. ೨-೧-೨೦.
೮೭. ಮುಂಡಕ ೩-೨-೮.
೮೮. ಬ್ರ.ಸೂ. ಶ್ರೀಕರ, ಮಂಗಲಶ್ಲೋಕ ೧೬.
೮೯. ಸಿ.ಶಿ. ೫-೭,೮.
೯೦. ಸಿ.ಶಿ. ೧೦-೬೫.
೯೧. ಸಿ.ಶಿ. ೧೦-೬೨, ೬೩, ೬೪, ೬೬.
೯೨. ಸಿ.ಶಿ. ೧-೩.
೯೩. ಬ್ರ.ಸೂ. ಶ್ರೀಕರ. ೨-೨-೧.
೯೪. ಛಾ.ಉ. ೬-೨-೩.
೯೫. ಈಶಾವಾಸ್ಯ. ಉ. ಶಾಂಕರೀವ್ಯಾಖ್ಯಾ. ಪು. ೨೪.
೯೬. ಪ್ರತ್ಯಭಿಜ್ಞಾಹೃದಯ. ೯ನೇ ಸೂ. ವ್ಯಾಖ್ಯಾ.
೯೭. ಶಿವಸೂತ್ರ, ೧-೨.
೯೮. ಶಿವ. ಪು. ೬-೧೬-೪೬,೪೭.
೯೯. ಪ್ರತ್ಯಭಿಜ್ಞಾಹೃದಯ. ೯ನೇ ಸೂ. ವ್ಯಾಖ್ಯಾ.
೧೦೦. ಸಿ.ಶಿ. ೫-೪೪,೪೫,೪೬.
೧೦೧. ಪ್ರತ್ಯಭಿಜ್ಞಾಹೃದಯ. ೯ನೇ ಸೂ. ವ್ಯಾಖ್ಯಾ.
೧೦೨. ಸರ್ವ ದರ್ಶನ ಸಂಗ್ರಹ. ಪು. ೨೦೦.
೧೦೩. ಸಿ.ಶಿ. ೬-೧೦.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧೦೪. ಸಿ.ಶಿ. ೬-೬೦.
೧೦೫. ಸಿ.ಶಿ. ೬-೧೩.
೧೦೬. ಸಿ.ಶಿ. ೬-೧೪.
೧೦೭. ಬ್ರ.ಸೂ. ಶ್ರೀಕರ. ೧-೧-೧.
೧೦೮. ಸಿ.ಶಿ. ೬-೨೫.
೧೦೯. ಸಿ.ಶಿ. ೧೬-೬೫.
೧೧೦. ಈ.ಉ. ೧೧.
೧೧೧. ಸಿ.ಶಿ. ೧೬-೨೫.
೧೧೨. ಸಿ.ಶಿ. ೧೬-೧೯.
೧೧೩. ಸಿ.ಶಿ. ೧೬-೬೮,೬೯,೭೦.
೧೧೪. ಸಿ.ಶಿ. ೧೬-೨೦.
೧೧೫. ಶ್ವೇ. ಉ. ೩-೮.
೧೧೬. ಸಿ.ಶಿ. ೧೬-೧೧,೧೨,೨೭.
೧೧೭. ಕ್ರಿಯಾಸಾರ ಭಾಗ. ೧. ಪು. ೧೭.
೧೧೮. ಭ.ಸಂ.ಉ. ೧-೩೨.
೧೧೯. ಸಿ.ಶಿ. ೧೮,೫೯,೬೦,೬೧.
೧೨೦. ಸಿ.ಶಿ. ೯-೨೨.
೧೨೧. ಸಿ.ಶಿ. ೧೬-೩೧.
೧೨೨. ಸಿ.ಶಿ. ೧೬-೬೧,೬೪-೬೬.
೧೨೩. ಸಿ.ಶಿ. ೧೯-೨೯,೩೦,೩೧.
೧೨೪. ನೋಡಿರಿ- ನ್ಯಾ.ಸೂ. ೧-೧-೧೯.
೧೨೫. ನೋಡಿರಿ- ವೈ.ಸೂ. ೧-೧-೪.
೧೨೬. ನೋಡಿರಿ- ಸಾಂ.ಕಾ. ೬೪.
೧೨೭. ಛಾ.ಉ. ೩-೧೪-೧.
೧೨೮. ಬೃ.ಉ. ೨-೫-೧೯.
೧೨೯. ಛಾ.ಉ. ೬-೮-೭.
೧೩೦. ಸಿ.ಶಿ. ೧೬-೩೧.
೧೩೧. ಸಿ.ಶಿ. ೧೦-೬೬.
೧೩೨. ಸಿ.ಶಿ. ೧೮-೭೪.
೧೩೩. ಬ್ರ.ಸೂ. ಶ್ರೀಕರ. ೧-೨೬.
೧೩೪. ಸಿ.ಶಿ. ೫-೭.
೧೩೫. ನೋಡಿರಿ. ಶಿ.ಶಿ ೫.೪-೧೪.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧೧. ಸಿದ್ಧಾಂತ ಶಿಖಾಮಣಿಯಲ್ಲಿ ಸಾಮಾಜಿಕ ಮೌಲ್ಯಗಳು

- ಶ್ರೀ ಷಣ್ಮುಖಯ್ಯ ಅಕ್ಕೂರ ಮಠ, ಎಂ.ಎ

ಸಿದ್ಧಾಂತ ಶಿಖಾಮಣಿ ವೀರಶೈವ ದರ್ಶನವನ್ನು ಸಮಗ್ರವಾಗಿ ಪರಿಚಯಿಸುವ ಒಂದು ಪ್ರಕರಣ ಗ್ರಂಥ. ವೇದಾಂತ ಮತ್ತು ಸಿದ್ಧಾಂತ ಗ್ರಂಥ. ಆಗಮಗಳ ಸಾರಸರ್ವಸ್ವ. ಭಗವತ್ಪಾದ ರೇಣುಕಾಚಾರ್ಯರ ಉಪದೇಶರೂಪ ವೀರಶೈವ ಸಿದ್ಧಾಂತ. ಕ್ರಾಂತ ದರ್ಶಿಗಳು, ಧರ್ಮಮಾರ್ಗ ಪ್ರವರ್ತಕರೆಂದು ಖ್ಯಾತನಾಮರಾದ ಶಿವಯೋಗಿ ಶಿವಾಚಾರ್ಯರ ಮೂಲಕ ಈ ಕೃತಿಯು ಕಾವ್ಯರೂಪದಲ್ಲಿ ಮೂಡಿಬಂದಿದೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಅಗಸ್ತ್ಯ ಮಹರ್ಷಿಗಳಿಗೆ ಷಟ್‌ಸ್ಥಲ ಸಿದ್ಧಾಂತವನ್ನು ಉಪದೇಶಿಸಿದ ವಿಷಯವೇ ಈ ಗ್ರಂಥದ ಮುಖ್ಯ ವಿಷಯ.

ವೇದಾಗಮವೀರಶೈವಸರಣಿಂಶ್ರೀಷಟ್‌ಸ್ಥಲೋದ್ಯನ್ಮಣಿಂ
ಶ್ರೀಜೀವೇಶ್ವರಯೋಗಪದ್ಮತರಣಿಂ ಶ್ರೀಗೋಪ್ಯಚಿಂತಾಮಣಿಮ್॥

ಎಂದು ಗ್ರಂಥದ ಕೊನೆಯಲ್ಲಿ ಶಿವಯೋಗಿ ಶಿವಾಚಾರ್ಯರೇ ಗ್ರಂಥದ ಮಹಿಮೆಯನ್ನು ತಿಳಿಸುತ್ತಾರೆ. ನರನು ಹರನಾಗುವ ಅಂಗನು ಲಿಂಗವಾಗುವ ಮಾನಸಿಕ (ಯೋಗ) ವಿಕಾಸದ ಚಿತ್ರ ಇಲ್ಲಿದೆ. ಸಾಧಕನು ಆಧ್ಯಾತ್ಮ ಸಾಧನೆಯಿಂದ ಲಿಂಗಾಂಗ ಸಾಮರಸ್ಯದ ನಿಲುವೆಂಬ ಮಾನಸಿಕ ಗೌರೀಶಂಕರ ಶಿಖರವನ್ನೇರಲು ೧೦೧ ಸ್ಥಲಗಳೆಂಬ ಸೋಪಾನಗಳನ್ನೇರುತ್ತಾ ಗುರಿ ಮುಟ್ಟುವ ತಾತ್ವಿಕ ಹಾಗೂ ಪ್ರಾಯೋಗಿಕ ಸಮ್ಯಕ್ ವಿವೇಚನೆಯನ್ನು ನಾವು ಈ ಗ್ರಂಥದಲ್ಲಿ ಕಾಣುತ್ತೇವೆ.

ಏಕ ಕೋಶ ಜೀವಿ ಅಮೀಬಾದಿಂದ ಮಾನವನವರೆಗೆ ಭೌತಿಕ ವಿಕಾಸವು ಹೇಗೆ ಸಾಗಿತೆಂದು ಡಾರ್ವಿನ್ನನ ವಿಕಾಸವಾದ ವಿವರಿಸಿದರೆ ಮಾನವನು ಮಹಾದೇವನಾಗಲು ಆಧ್ಯಾತ್ಮ ವಿಕಾಸ ಹೇಗೆ ಮುಂದುವರಿಯುತ್ತದೆ ಎಂಬುದನ್ನು ಸಿದ್ಧಾಂತ ಶಿಖಾಮಣಿ ವಿವರಿಸುತ್ತದೆ. ಪ್ರಾಕೃತ ಗುಣಗಳನ್ನು ಮೆಟ್ಟಿ ಮೇಲೇರಿ ಆದರ್ಶದ ಗುಣಗಳನ್ನು ಅಳವಡಿಸಿಕೊಳ್ಳಲು ಶಿಕ್ಷಣ ನೀಡುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾವು ಯಾವುದೇ ವೃತ್ತಿಯನ್ನು ಅವಲಂಬಿಸಿದ್ದರೂ ಆಯಾ ಕ್ಷೇತ್ರದಲ್ಲಿ ಆಧ್ಯಾತ್ಮ ಬೆರೆಯಬೇಕು. ಸಾಧಕನು ಸಿದ್ಧಪುರುಷನಾಗಲು ಷಟ್‌ಸ್ಥಲ ಸಾಧನೆ ಬೇಕೆಂದು ಆರಾಧನೆಯ ವಿವರವನ್ನು ನೀಡುತ್ತದೆ ಸಿದ್ಧಾಂತ ಶಿಖಾಮಣಿ.

ಶಿವಯೋಗಿ ಶಿವಾಚಾರ್ಯರು ಸಿದ್ಧಾಂತ ಶಿಖಾಮಣಿಯಂತಹ ಸಿದ್ಧಾಂತ ಗ್ರಂಥವನ್ನು ರಚಿಸಬೇಕಾದರೆ, ಅವರಿಗಿಂತ ಪೂರ್ವದಲ್ಲಿಯೇ ವೀರಶೈವ ಸಿದ್ಧಾಂತ ಒಂದು ವ್ಯವಸ್ಥಿತ ರೂಪದಲ್ಲಿ ಬೆಳೆದಿರಬೇಕು. ಬುದ್ಧವಾಣಿಯ ಸಂಗ್ರಹ ಧಮ್ಮ ಪದವಾದಂತೆ, ಕೃಷ್ಣವಾಣಿಯ ಸಂಗ್ರಹ ಭಗವದ್ಗೀತೆಯಾದಂತೆ, ರೇಣುಕವಾಣಿಯ ಸಂಗ್ರಹವೇ ಸಿದ್ಧಾಂತ ಶಿಖಾಮಣಿಯಾಗಿದೆ. ಮೂಲತತ್ವ ರೇಣುಕರದು (ಶಿವಾಗಮಗಳಸಾರ) ಆದರ ಕಾವ್ಯಶೈಲಿಯ ನಿರೂಪಣೆ ತಂತ್ರ ಶಿವಯೋಗಿ ಶಿವಾಚಾರ್ಯರದು.

ಸಿದ್ಧಾಂತ ಶಿಖಾಮಣಿಯಲ್ಲಿ ವೀರಶೈವ ಧರ್ಮದ ಸಂಪೂರ್ಣಲಕ್ಷಣಗಳನ್ನು ಕಾಣಬಹುದಾಗಿದೆ. ಶಕ್ತಿ ವಿಶಿಷ್ಟಾದ್ವೈತವೆಂಬ ಸಿದ್ಧಾಂತ, ಷಟ್‌ಸ್ಥಲಗಳೆಂಬ ದರ್ಶನ, ಲಿಂಗದೀಕ್ಷೆ ಎಂಬ ಧಾರ್ಮಿಕ ಸಂಸ್ಕಾರ, ಶಿವಯೋಗವೆಂಬ ಸಾಧನೆ, ಸದಾಚಾರದ ಸರ್ವಾಚಾರಗಳೆಂಬ ನೀತಿಶಾಸ್ತ್ರ, ಅತಿವರ್ಣಾಶ್ರಮ (ಅಪ್ರಾಕೃತ)ವೆಂಬ ಸಮಾಜರಚನೆ, ಶಿವಾಗಮಗಳ ಸಂಸ್ಕೃತಿ ಹೀಗೆ ಎಲ್ಲ ಲಕ್ಷಣಗಳೂ ಸಿದ್ಧಾಂತ ಶಿಖಾಮಣಿಯಲ್ಲಿ ಸಮಾವೇಶಗೊಂಡಿವೆ, ಮತ್ತು ಷಟ್‌ಸ್ಥಲ ಸಾಧನೆಯ ಮನಶ್ಶಾಸ್ತ್ರವೂ ಇಲ್ಲಿದೆ.

ಸಾಧಕನು ತನ್ನ ಸಮಾಜ ಹಾಗೂ ಬೇರೆ ಸಮಾಜದೊಂದಿಗೆ ಯಾವ ತತ್ವದ ಆಧಾರದ ಮೇಲೆ ಹೊಂದಿಕೊಂಡು ಬಾಳಬೇಕು, ಯಾವ ಯಾವ ಕ್ರಿಯೆಗಳಿಂದ ಪರರಿಗೆ ಉಪಕಾರ ಮಾಡಬಹುದು, ಲೋಕವ್ಯವಹಾರ ಆಚರಣೆ ಹೇಗಿರಬೇಕೆಂದು ತಿಳಿಸುವ ನೀತಿಶಾಸ್ತ್ರವೆಂಬ ಅಥವಾ ಸಮಾಜ ಶಾಸ್ತ್ರದ ಸೂತ್ರಗಳು ಈ ಕೃತಿಯಲ್ಲಿ ಹಾಸುಹೊಕ್ಕಾಗಿರುತ್ತವೆ. ಅವುಗಳನ್ನು ಶಾಸ್ತ್ರ ಪರಿಭಾಷೆಯಲ್ಲಿ ಆಚಾರಗಳೆಂದೂ ಕರೆಯುತ್ತಾರೆ. ಅವು ಸಾಮಾಜಿಕ ಮೌಲ್ಯಗಳೂ ಹೌದು (social values). ಕವಿ, ದಾರ್ಶನಿಕ, ವಿಜ್ಞಾನಿ ಯಾರೇ ಆಗಲಿ, ಅವರೆಲ್ಲ ಕಾಲದ ಪರಿಸರದಿಂದ ಬದ್ಧರಾಗುತ್ತಾರೆ. ವಿಜ್ಞಾನಿಯ ಶೋಧನೆ ತನಗಿಂತ ಹಿಂದೆ ನಡೆದ ಶೋಧನೆಯ ಫಲವಾಗಿರುತ್ತದೆ. ಗೆಲಿಲಿಯೋನ ಸಿದ್ಧಾಂತ ತನಗಿಂತ ಪೂರ್ವದ ಕೋಪರ್ನಿಕಸ್ಸನ ಸಿದ್ಧಾಂತಕ್ಕೆ ಋಣಿ ಎನ್ನುವ ಸಂಗತಿ ಎಲ್ಲರಿಗೂ ಗೊತ್ತು. ಅಂತೆಯೇ ಒಬ್ಬ ದಾರ್ಶನಿಕನ, ತತ್ವಜ್ಞಾನಿಯ ಸಿದ್ಧಾಂತವೂ ಸಹ ಹಿಂದಿನ ಪರಂಪರೆಯ ಒಟ್ಟು ಆಲೋಚನೆಯ ಗಟ್ಟಿಫಲ ಎನ್ನುವ ವಿಚಾರವನ್ನು ಅಲ್ಲಗಳೆಯುವ ಹಾಗಿಲ್ಲ. ಮತ್ತು ಸಮಕಾಲೀನ ಜೀವನದ ಆಲೋಚನೆ ಅನುಭವಗಳೂ ಕೃತಿಕಾರನ ವಿಚಾರವನ್ನೂ ರೂಪಿಸುತ್ತವೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಯೋಗಿ ಶಿವಾಚಾರ್ಯರು ಕವಿ-ದಾರ್ಶನಿಕ- ಸಮಾಜ ಶಾಸ್ತ್ರಜ್ಞ. ಅವರೂ ಈ ನಿಯಮಕ್ಕೆ ಹೊರತಲ್ಲ.

ಸಾಮಾಜಿಕ ಮೌಲ್ಯವೆಂಬುದು ತೀರಾ ಆಧುನಿಕ ಪದ. ಇತ್ತೀಚೆಗೆ ಹೆಚ್ಚು ಹೆಚ್ಚಾಗಿ ಬಳಸುತ್ತಿರುವ ಪದ. ಸಮಾಜವಾದ ರಾಷ್ಟ್ರಗಳ, ಸಮಾಜವಾದ ತತ್ವಗಳ ಹಿನ್ನೆಲೆಯಲ್ಲಿ ಮೂಡಿಬಂದ ಪದ. ಯಾವುದೇ ಒಂದು ಸಮಾಜ ಯಾವ ರೀತಿಯ ಬದುಕನ್ನು ಬದುಕಿನ ಧ್ಯೇಯ, ದೋರಣೆ, ಆಚರಣೆ, ನಡವಳಿಕೆಗಳ ಬೆಲೆಗಳನ್ನು ಮುಖ್ಯವೆಂದು ಭಾವಿಸಿರುವುದೋ ಅವುಗಳನ್ನೇ ನಾವು ಸಾಮಾಜಿಕ ಮೌಲ್ಯಗಳೆಂದು ಗುರುತಿಸುತ್ತೇವೆ.

ಸಿದ್ಧಾಂತ ಗ್ರಂಥಗಳಲ್ಲಿ- ಕೈವಲ್ಯ ಸಾಹಿತ್ಯದಲ್ಲಿ, ಭಾವಗೀತೆಯ ಸೌಂದರ್ಯದಲ್ಲಿ ಸಾಮಾಜಿಕ ಮೌಲ್ಯಗಳನ್ನು ಹುಡುಕುವುದು ಕಷ್ಟ. ಕಾರಣ ಸ್ಪಷ್ಟವಾಗಿದೆ. ಅಲ್ಲಿಯ ವ್ಯವಹಾರ ಅಲೌಕಿಕ ಸಾಧನೆಯ ಕಡೆಗೆ ಇರುತ್ತದೆ. ಭಾವ ಸೌಂದರ್ಯ ಮತ್ತೆ ಪಾರಮಾರ್ಥಿಕ ದೆಡೆಗೆ ಕೇಂದ್ರೀಕೃತವಾಗಿರುತ್ತದೆ. ಒಬ್ಬ ದಾರ್ಶನಿಕ ಅಂದಿನ ಸಮಾಜ, ಅದಕ್ಕೆ ಹಿನ್ನೆಲೆಯಾದ ಯುಗಧರ್ಮದ ಮೌಲ್ಯಗಳನ್ನು ಸಂಸ್ಕೃತಿಯ ಪರಂಪರೆಯ ಪ್ರತಿನಿಧಿಯಾಗಿ ಪ್ರತಿಪಾದಿಸುತ್ತಾನೆ.

ದಾರ್ಶನಿಕ ಶಿವಯೋಗಿ ಶಿವಾಚಾರ್ಯರು ಸಿದ್ಧಾಂತ ಶಿಖಾಮಣಿಯಲ್ಲಿ ಆಚಾರ್ಯರು ಉಪದೇಶಿಸಿದ ಅತಿವರ್ಣಾಶ್ರಮ ಅಥವಾ ಅಪ್ರಾಕೃತ ಸಮಾಜ ರಚನೆಯನ್ನು ತಿಳಿಸುತ್ತಾ ಆ ಸಮಾಜದಲ್ಲಿ ವೀರಶೈವ ತತ್ವಗಳ ಆಚರಣೆ ಹೇಗೆ? ಎಂದು ವಿವೇಚನೆ ಮಾಡುತ್ತಾರೆ ಮತ್ತು ಅವುಗಳನ್ನು ಆಚಾರಗಳೆಂಬ ಪಾರಿಭಾಷಿಕದಲ್ಲಿ ಕರೆಯುತ್ತಾರೆ. ಅವುಗಳನ್ನು ನಾನು ಆಧುನಿಕ ಪದ ಪ್ರಯೋಗದಿಂದ ಸಾಮಾಜಿಕ ಮೌಲ್ಯಗಳೆಂದು ಕರೆಯುತ್ತಿದ್ದೇನೆ.

೧. ವರ್ಣಾಶ್ರಮಃ ಅತಿವರ್ಣಾಶ್ರಮಧರ್ಮ ಪೂರ್ವಾಶ್ರಯನಿರಸನ:

> ವರ್ಣಾಶ್ರಮಾದಿ ಧರ್ಮಾಣಾಂ ವ್ಯವಸ್ಥಾ ಹಿ ದ್ವಿಧಾ ಮತಾ।
> ಏಕಾ ಶಿವೇನ ನಿರ್ದಿಷ್ಟಾ ಬ್ರಹ್ಮಣಾ ಕಥಿತಾ ಪರಾ॥

ವರ್ಣಾಶ್ರಮ ಧರ್ಮಗಳಲ್ಲಿ ಎರಡು ವಿಧ. ಒಂದು ಶಿವನಿಂದ ನಿರ್ಮಿತವಾದದ್ದು ಮತ್ತೊಂದು ಬ್ರಹ್ಮನಿಂದ ನಿರ್ಮಿತವಾದದ್ದು. ಶಿವೋಕ್ತವಾದದ್ದೇ ವೀರಶೈವ. ಇವುಗಳಿಗೆ ಬೇರೆ ನಾಮಗಳೂ ಉಂಟು: ಪ್ರಾಕೃತ ವರ್ಣ ಮತ್ತು ಅಪ್ರಾಕೃತ ವರ್ಣವೆಂದು. ಪ್ರಾಕೃತ ವರ್ಣಪದ್ಧತಿ ವೈದಿಕ ಧರ್ಮದ್ದು. ಅಪ್ರಾಕೃತ ವರ್ಣಾಶ್ರಮ ವೀರಶೈವರದ್ದಾಗಿದೆ. ವೀರಶೈವರು ಅತಿವರ್ಣಾಶ್ರಮಿಗಳು.

ಈ ಎರಡು ಆಶ್ರಮಗಳಲ್ಲೂ ತಾತ್ವಿಕ ಆಚರಣೆಯಲ್ಲಿ ಸಾಕಷ್ಟು ಭಿನ್ನತೆ ಕೂಂಡುಬರುತ್ತದೆ. ಪ್ರಾಕೃತ ವರ್ಣಾಶ್ರಮದ ಉಗಮ, ಋಗ್ವೇದದ ಪುರುಷ ಸೂಕ್ತದಲ್ಲಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಲ್ಲಿ ವಿರಾಟ್ ಪುರುಷನನ್ನು ಕಾವ್ಯಮಯವಾಗಿ ಚಿತ್ರಿಸಲಾಗಿದೆ. ಪಂಡಿತರು ಅದನ್ನು ತಪ್ಪಾಗಿ ವ್ಯಾಖ್ಯಾನಿಸಿದ್ದರಿಂದ ಸಮಾಜದಲ್ಲಿ ಗೊಂದಲವೇಳಲು ಕಾರಣವಾಯಿತು. ವೇದದಲ್ಲಿ ಎಲ್ಲ ವೃತ್ತಿಗಳೂ ಸಮಾನವಾಗಿದ್ದು ಮೇಲು ಕೀಳು ಎಂಬ ಭಾವನೆಗೆ ಎಡೆ ಇರಲಿಲ್ಲವೆಂದು ಈ ಮಂತ್ರ ಸಾರುತ್ತದೆ.

"ಕಾರುರಹಂ ತಾತೋ ಭಿಷಕ್ ಉಪಲ ಪ್ರಕ್ಷಿಣೀನನಾ।
ನಾನಾಧಿಯೋ ವಸುಯವೋಽನುಗಾ ಇವ ತಸ್ಥಾಂವೇದ್ರಾಯೇಂದೋ
ಪರಿ ಸ್ರವ॥

(ಋಗ್ವೇದ)

ನಾನು ಕವಿ, ನನ್ನ ತಂದೆ ವೈದ್ಯ, ತನ್ನ ತಾಯಿ ಕಾಳುಗಳನ್ನು ಕಲ್ಲಿನಲ್ಲಿ ಬೀಸುತ್ತಾಳೆ. ಹೀಗೆ ಒಂದೇ ಕುಟುಂಬಕ್ಕೆ ಸೇರಿದ ನಾವು ಹಲವಾರು ಕಸಬುಗಳನ್ನು ಮಾಡುತ್ತಾ ಹಸುಗಳು ಹುಲ್ಲುಗಾವಲಿನಿಂದ ಆಹಾರವನ್ನು ಪಡೆಯುವಂತೆ, ಐಶ್ವರ್ಯ ಮತ್ತು ಸೌಖ್ಯಗಳನ್ನು ಹೊಂದುತ್ತೇವೆ. ಈ ಮಾತುಗಳಿಂದ ವರ್ಗಗಳು ವೇದ ಕಾಲದಲ್ಲಿ ಗುಣಕರ್ಮಗಳನ್ನು ಅವಲಂಬಿಸಿದ್ದವು ಎಂದು ತಿಳಿದು ಬರುತ್ತಿದೆ. ಉಪನಿಷತ್ಕಾಲದಲ್ಲೂ ಹಾಗೆಯೇ ಇದ್ದವು. ಮುಂದೆ ಗೀತೆಯಲ್ಲಿ ಕೃಷ್ಣನು "ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ" ಎಂದು ತಿಳಿಸಿ, ವರ್ಣಗಳು ಗುಣಕರ್ಮಗಳನ್ನೇ ಅವಲಂಬಿಸಿವೆ ಎಂದು ಸ್ಪಷ್ಟಪಡಿಸಿದರೂ, ಸ್ತ್ರೀಯರನ್ನು ಹಾಗೂ ವೈಶ್ಯರನ್ನು ಪಾಪಯೋನಿಗಳೆಂದು ಕರೆದು ಆ ವರ್ಗವನ್ನು ನಿಕೃಷ್ಟವಾಗಿ ಕಂಡಿದ್ದಾನೆ. ಕಾಲಕಳೆದಂತೆ ವೈದಿಕ ಧರ್ಮದ ಸ್ಮೃತಿಕಾರರಾದ (ಅವರೇ ಸಮಾಜಶಾಸ್ತ್ರಜ್ಞರು) ಮನು, ಗೌತಮ, ಆಂಗೀರಸ, ಅಪಸ್ತಂಬರ ಕಾಲದಲ್ಲಿ ವೇದ ಉಪನಿಷತ್ಕಾಲದ ವರ್ಣಧರ್ಮದ ಉದಾರ ನೀತಿ ತಲೆ ಕೆಳಗಾಗಿ, ಹುಟ್ಟಿನಿಂದಲೇ ವರ್ಣಗಳು- ನಿರ್ಣಯಿಸಲ್ಪಟ್ಟವು. ಭಾರತದಲ್ಲಿ ವರ್ಣಾಶ್ರಮ ಧರ್ಮದಲ್ಲಿ ತಾತ್ವಿಕ ಮೌಲ್ಯಗಳನ್ನು ಸ್ಮೃತಿಕಾರರು ನಿರ್ಧರಿಸಿದರೇ, ಹೊರತು, ತತ್ವಜ್ಞಾನಿಗಳಲ್ಲವೆನ್ನುವ ಸಂಗತಿ ಜ್ಞಾಪಕದಲ್ಲಿಡಬೇಕಾಗಿದೆ. ತತ್ತ್ವಜ್ಞಾನಿಗಳು ಸಾಮಾಜಿಕ ಮೌಲ್ಯಗಳಿಗೆ ತಾತ್ವಿಕ ನೆಲೆಯನ್ನು ರಚಿಸುತ್ತಿದ್ದರು. ಅವುಗಳನ್ನು ಪ್ರಯೋಗದಲ್ಲಿ ತರುವ ವಿಚಾರವಾಗಿ ಶಾಸ್ತ್ರರಚಿಸುವ ಕೆಲಸ ಸ್ಮೃತಿಕಾರರ ಮೇಲೆ ಬಿತ್ತು. ಹೀಗಾಗಿ ತತ್ತ್ವಕೂ ಪ್ರಯೋಗಕ್ಕೂ ಬಹಳ ಅಂತರವೇರ್ಪಟ್ಟಿತು. ಎಲ್ಲರ 'ಆತ್ಮ ಒಂದೇ' ಎಂದೂ, 'ಪರಬ್ರಹ್ಮ ಸ್ವರೂಪ'ವೆಂದೂ ತತ್ತ್ವಜ್ಞಾನಿಗಳು ಸಾರಿದರೆ, ಬ್ರಾಹ್ಮಣ-ಕ್ಷತ್ರಿಯ- ವೈಶ್ಯ - ಶೂದ್ರರು ಹುಟ್ಟಿನಿಂದಲೇ ಶ್ರೇಷ್ಠ ಕನಿಷ್ಠರಾಗುತ್ತಾರೆಂದು ಸ್ಮೃತಿಕಾರರು ಹೇಳುತ್ತಾರೆ. ಹೀಗಾಗಿ ಬ್ರಾಹ್ಮಣ-ಕ್ಷತ್ರಿಯ-ಶೂದ್ರ- ವೈಶ್ಯರ ಆತ್ಮಗಳು ಬೇರೆ ಬೇರೆಂದು ತಿಳಿದು ವ್ಯವಹರಿಸುತ್ತಾ ಮಹಾದಾಲೋಚನೆ ಮಹದ್ಭಾವನೆ ಉದಾತ್ತ ತತ್ತ್ವಗಳನ್ನೇ ತಲೆ ಕೆಳಗೆ ಮಾಡುತ್ತಾರೆ. ಇದನ್ನ ಕಂಡು ಸ್ವಾಮಿ ವಿವೇಕಾನಂದರು ಭಾರತೀಯ ತತ್ತ್ವಜ್ಞಾನದ ದುರವಸ್ಥೆಯನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಂಡು ಮರುಗುತ್ತಾರೆ. ಅವರು ಒಂದೆಡೆ ಹೇಳುತ್ತಾರೆ- ಶ್ರುತಿಗಳು (ವೇದಗಳು) ಸ್ವಾಮಿ ಇದ್ದಂತೆ; ಸ್ಮೃತಿಗಳು ಸೇವಕರು ಇದ್ದಂತೆ, ಸ್ವಾಮಿ ಸೇವಕನಿಗೆ ಅಪ್ಪಣೆ ಮಾಡುವುದು ಧರ್ಮ; ಆದರೆ, ಸೇವಕನೇ ಸ್ವಾಮಿಗೆ ಆಜ್ಞೆ ಮಾಡುವ ಅವಿವೇಕ ನಮ್ಮ ಧರ್ಮದಲ್ಲಿ ನಡೆದಿದೆ ಎಂದು ಹೇಳುತ್ತಾರೆ. ಹೀಗೆ ಸ್ಮೃತಿಗಳ ಕಾಲದಿಂದ ವರ್ಣಾಶ್ರಮ ಧರ್ಮ ತನ್ನ ಮೂಲರೂಪದಿಂದ ವಿಮುಖವಾಗಿ ಮನುಷ್ಯರನ್ನು ಹುಟ್ಟಿನಿಂದಲೇ ಶ್ರೇಷ್ಠ-ಕನಿಷ್ಠರೆಂದು ನಿರ್ಣಯಿಸಿತು. ಯಾವ ಉದ್ಯೋಗದ ಮನೆತನದಲ್ಲಿ ವ್ಯಕ್ತಿ ಜನಿಸಿದನೋ ಅದೇ ಅವನ 'ಜಾತಿ'ಯಾಯಿತು. ಇದನ್ನು ಕಂಡು ಆಧುನಿಕ ತತ್ತ್ವಜ್ಞಾನಿಗಳಾದ ಡಾ|| ರಾಧಾಕೃಷ್ಣನ್ನರು ಹೇಳುತ್ತಾರೆ- "ವರ್ಣಾಶ್ರಮಧರ್ಮಗಳು ಹೆಪ್ಪುಗಟ್ಟಿ ಕಲ್ಲಾಗಿ ಜಾತಿಗಳಾದವು" ಎಂದು ಪ್ರಾಕೃತ ವರ್ಣಾಶ್ರಮದ ಪದ್ಧತಿಯಿಂದಾಗಿ ಮನುಷ್ಯರಲ್ಲಿ ನೀಚೋಚ್ಚ ಭಾವನೆಗಳು ಬೆಳೆದು ಸಮಾಜ ಹಾಳುಹೋಳಾಯಿತು. ಈ ದುರವಸ್ಥೆ ಪ್ರಾಕೃತ ವೀರಶೈವ ಧರ್ಮಕ್ಕೆ ಬರಲಿಲ್ಲ. ಕಾರಣ ತತ್ತ್ವಜ್ಞಾನಿ ಸಮಾಜ ವಿಜ್ಞಾನಿ ಒಬ್ಬರೇ ಆಗಿದ್ದಾರೆ. ಶಿವಾಗಮಗಳ ಕಾಲದಿಂದ ಪ್ರಚಾರದಲ್ಲಿರುವ ಹಾಗೂ ಆಚರಣೆಯಲ್ಲಿರುವ ಅತಿ ವರ್ಣಾಶ್ರಮದ ತತ್ತ್ವ, ತುಂಬಾ ಉದಾರ, ಹಾಗೂ ಉದಾತ್ತವಾಗಿದೆ. ಈ ಸಮಾಜದ ಮೂಲಭೂತ ತತ್ತ್ವಗಳನ್ನೇ ಸಿದ್ಧಾಂತ ಶಿಖಾಮಣಿಯಲ್ಲಿ ಆಚಾರ್ಯರು ಬೋಧಿಸುತ್ತಾರೆ-

ಭಕ್ತಿಃ ಸ್ಥಿರೀಕೃತಾಯಸ್ಮಿನ್ ಮ್ಲೇಚ್ಛೇ ವಾ ದ್ವಿಜಸತ್ತಮೇ।
ಶಂಭೋಃ ಪ್ರಿಯಃ ಸವಿಪ್ರಶ್ಚ ನ ಪ್ರಿಯೋ ಭಕ್ತಿವರ್ಜಿತಃ||

ಅಂದರೆ ಹಾರುವ ಮೊದಲಾಗಿ ಅಂತ್ಯಜ ಕಡೆಯಾಗಿ ಶಿವಭಕ್ತರೆಲ್ಲ ಒಂದೇ; ಅವರೇ ಶಿವನಿಗೆ ಪ್ರಿಯರು ಶಿವಭಕ್ತಿಹೀನರಲ್ಲ ಎನ್ನುವ ವಿಚಾರವನ್ನು ತಿಳಿಸುತ್ತಾರೆ: ಮುಂದುವರಿದು ಆಚಾರ್ಯರು ಅಪ್ಪಣೆ ಕೊಡಿಸುತ್ತಾರೆ-

ಶಿವಸಂಸ್ಕಾರಯುಕ್ತೇಷು ಜಾತಿಬೇಧೋ ನ ವಿದ್ಯತೇ।
ಕಾಷ್ಠೇಷು ವಹ್ನಿದಗ್ಧೇಷು ಯಥಾ ರೂಪಂ ನ ವಿದ್ಯತೇ||
ತಸ್ಮಾತ್ ಸರ್ವಪ್ರಯತ್ನೇನ ಶಿವಸಂಸ್ಕಾರಸಂಯುತಃ।
ಜಾತಿಭೇದಂ ನ ಕುರ್ವೀತ ಶಿವಭಕ್ತೇ ಕದಾಚನ||
ಸ್ವಜಾತಿಕುಲಜಾನ್ ಧರ್ಮಾನ್ ಲಿಂಗನಿಷ್ಠಾವಿರೋಧಿನಃ।
ತ್ಯಜನ್ ಮಾಹೇಶ್ವರೋ ಜ್ಞೇಯಃ ಪೂರ್ವಾಶ್ರಯನಿರಾಸಕಃ||
ಬ್ರಾಹ್ಮಣಃ ಕ್ಷತ್ರಿಯೋ ವಾಪಿ ವೈಶ್ಯೋ ವಾ ಶೂದ್ರ ಏವ ವಾ।
ಅಂತ್ಯಜೋವಾ ಶಿವೇ ಭಕ್ತಃ ಶಿವವನ್ಮಾನ್ಯ ಏವ ಸಃ||
ಶಿವಭಕ್ತಿ ಸಮಾವೇಶೇ ಕ್ವಜಾತಿ ಪರಿಕಲ್ಪನಾ।
ಇಂಧನೇಷ್ವಗ್ನಿಧಗ್ಧೇಷು ಕೋ ವಾ ಭೇದಃ ಪ್ರಕೀರ್ತ್ಯತೇ||

ಶಿವಸಂಸ್ಕಾರ ಅಥವಾ ಲಿಂಗದೀಕ್ಷೆ ಹೊಂದಿದವರಲ್ಲಿ ಜಾತಿಭೇದವನ್ನು ಮಾಡಬಾರದು. ಅಗ್ನಿಯಲ್ಲಿ ಬಿದ್ದ ನಾನಾ ವಿದಧ ಕಟ್ಟಿಗೆಗಳು ಭಸ್ಮವಾಗಿ ಸಮಾವೇಶವಾಗುವಂತೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರತಿಯೊಬ್ಬ ವ್ಯಕ್ತಿಗಳೂ ಲಿಂಗದೀಕ್ಷೆಯನ್ನು ಹೊಂದಿದ ಮೇಲೆ ತಮ್ಮ ಹಿಂದಿನ ಕುಲಜಾತಿಗಳಿಂದ ಮುಕ್ತರಾಗಿ ಒಂದೇ ಆಗುತ್ತಾರೆ. ಆದ್ದರಿಂದ ವೀರಶೈವರಲ್ಲಿ ಜಾತಿ ಭೇದವನ್ನು ಮಾಡಬಾರದು. ಬ್ರಾಹ್ಮಣನೇ ಆಗಲಿ, ಕ್ಷತ್ರಿಯನೇ ಆಗಲಿ, ವೈಶ್ಯ- ಶೂದ್ರರೇ ಆಗಲಿ ಲಿಂಗದೀಕ್ಷೆ ಹೊಂದಿದ ಮೇಲೆ ಅವರೆಲ್ಲರೂ ವೀರಶೈವರು, ಶಿವಸ್ವರೂಪಿಗಳು. ಲಿಂಗಧಾರಿಗಳು ತಮ್ಮ ಹಿಂದಿನ ವರ್ಣ- ಸಂಪ್ರದಾಯಗಳನ್ನು ಸಂಪೂರ್ಣವಾಗಿ ಬಿಡಬೇಕೆಂದು ಈ ಎಲ್ಲ ಶ್ಲೋಕಗಳ ಸಾರಾಂಶ.

ಹೀಗೆ ಎಲ್ಲ ವರ್ಣದವರನ್ನು ಒಳಗೊಂಡು ವರ್ಣಾಶ್ರಮ ಭೇದದಿಂದ ಮುಕ್ತವಾದ ಈ ಸಮಾಜವನ್ನು, ಆಚಾರ್ಯರು ಅತಿವರ್ಣಾಶ್ರಮ ಸಮಾಜವೆಂದು ಕರೆಯುತ್ತಾರೆ. ಜಾತಿ ಮನುಷ್ಯ-ಮನುಷ್ಯರ ನಡುವೆ ಭೇದ ಕಲ್ಪಿಸುತ್ತದೆ. ಧರ್ಮ ಎಲ್ಲರನ್ನು ಕರೆದು ಒಂದುಗೂಡಿಸುತ್ತದೆ. ವೀರಶೈವ ಧರ್ಮದಲ್ಲಿ ಹಿಂದೆ- ಇಂದು 'ಶಿವದೀಕ್ಷೆ' ಸಂಸ್ಕಾರ ಹೊಂದಲು ಎಲ್ಲರಿಗೂ ಅವಕಾಶವಿದೆ. ರೇಣುಕರು ಹಾರುವನಿಂದ ಅಂತ್ಯಜನವರೆಗೂ ಧಾರ್ಮಿಕ ಸಂಸ್ಕಾರ ಹೊಂದುವ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಿದ್ದಾರೆ. ವ್ಯಕ್ತಿಗಳನ್ನು ಹುಟ್ಟಿನಿಂದ ಮೇಲು-ಕೀಳು ಎಂದು ಹೇಳದೆ ಸಂಸ್ಕಾರಗಳಿಂದ ಗುಣಗಳಿಂದಲೇ ಹೇಳಬೇಕೆಂದು ತಿಳಿಸುತ್ತಾರೆ. ಸಂಸ್ಕಾರಿಗಳಲ್ಲದವರನ್ನು ಅವರು ಭವಿಗಳೆಂದೇ ಕರೆಯುತ್ತಾರೆ. ಅವರ ದೃಷ್ಟಿಯಲ್ಲಿ ಮಾನವರೆಲ್ಲ ಎರಡು ವಿಧ: ಭವಿ ಮತ್ತು ಭಕ್ತ ಎಂದು. ಇವುಗಳನ್ನು ಗುಣಾತ್ಮಕ ಅರ್ಥಗಳಲ್ಲಿಯೇ ನಾವು ಪರಿಭಾವಿಸಬೇಕು. ಸಿದ್ಧಾಂತ ಶಿಖಾಮಣಿಯಲ್ಲಿ ಪೂರ್ವಾಶ್ರಯನಿರಸನಸ್ಥಲ ಅತ್ಯಂತ ಮಹತ್ವದ ಸಾಮಾಜಿಕ ಮೌಲ್ಯವಾಗಿದೆ.

ಹುಟ್ಟಿನಿಂದ ಎಲ್ಲರೂ ಸಮಾನರು. ಸ್ತ್ರೀ ಪುರುಷರೆಂಬ ಭೇದವಾಗಲಿ- ವರ್ಣ-ವರ್ಗಗಳ ಭೇದವಾಗಲೀ- ಇಲ್ಲಿ ಕಂಡು ಬರುವುದಿಲ್ಲ. ಆಸಕ್ತರು ದೀಕ್ಷಾ ಸಂಪನ್ನರಾಗಲು ಈ ಧರ್ಮದಲ್ಲಿ ಅವಕಾಶವಿದೆ.

ನಮ್ಮ ಲೌಕಿಕ ದುಡಿಮೆಯೊಂದಿಗೆ, ಆರಾಧನೆ ಜೊತೆಯಲ್ಲಿಯೇ ಸಾಗಲು ಪೂಜಾ ಸ್ವಾತಂತ್ರ್ಯವನ್ನು ಮತಾಚಾರ್ಯರು ಎಲ್ಲರಿಗೂ ನೀಡಿದರು. ಸಾಮಾಜಿಕ ಸಮತಾ ತತ್ತ್ವವನ್ನು ನಾವು ಇಲ್ಲಿ ಕಾಣಬಹುದಾಗಿದೆ.

ಸ್ವಮಾರ್ಗಾಚಾರವರ್ತಿಭ್ಯಃ ಸ್ವಜಾತಿಭ್ಯಃ ಸದಾ ವ್ರತೀ।
ದದ್ಯಾತ್ತೇಭ್ಯಃ ಸಮಾದದ್ಯಾತ್ ಕ ನ್ಯಾಂ ಕುಲಸಮುದ್ಭವಾಃ।।

ದೀಕ್ಷೆ ಹೊಂದಿದವರನ್ನು ಶಿವಸ್ವರೂಪಿಗಳೆಂದು ಕಾಣುತ್ತಾ ಸಮರಸಮಾಡಿಕೊಳ್ಳಬೇಕು. ಅವರೊಡನೆ ಉಂಬುವ- ಉಡುವ ಕ್ರಿಯಾಚಾರ, ಕನ್ಯೆಯನ್ನು ಕೊಡುವ- ತರುವ ಕುಲಾಚಾರ ಮಾಡಬೇಕೆಂದು ಆಚಾರ್ಯರು ಅಪ್ಪಣೆ ಮಾಡುತ್ತಾರೆ. ಹೀಗೆ ವೀರಶೈವ ಉದಾತ್ತತತ್ತ್ವಗಳು ಸಾಮಾಜಿಕವಾಗಿ ಹೇಗೆ ಬಳಕೆಯಲ್ಲಿ ಬರಬೇಕೆಂದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಿಳಿಸುತ್ತಾರೆ. ಅವು ಪ್ರಯೋಗದಲ್ಲಿ ಬಂದಾಗ ಸಮಾಜ ಆ ದಿಸೆಯಲ್ಲಿ ಸಾಗಿದಾಗ ಅವೇ ಸಾಮಾಜಿಕ ಮೌಲ್ಯವಾಗುತ್ತವೆ.

೨. ಧಾರ್ಮಿಕ ಸ್ವಾತಂತ್ರ್ಯ ಮತ್ತು ಮಹಿಳೆ

ಸರ್ವೇಷಾಂ ವೀರಶೈವಾನಾಂ ಮುಮುಕ್ಷೂಣಾಂ ನಿರಂತರಮ್ ಎಂದು ಸಿದ್ಧಾಂತ ಶಿಖಾಮಣಿಯಲ್ಲಿ ಉಕ್ತವಾದಂತೆ, ಸ್ತ್ರೀ ಪುರುಷರು ಲಿಂಗಧಾರಣೆ ಹೊಂದಲು ಈ ಧರ್ಮದಲ್ಲಿ ಸಂಪೂರ್ಣ ಸ್ವಾತಂತ್ರ್ಯವಿದೆ. ಭಕ್ತನಿಗೆ (ಸಾಧಕನಿಗೆ) ಸಂಬಂಧಿಸಿದ ಸಂಗತಿಗಳು ಭಕ್ತಳಿಗೂ (ಸಾಧಕಳಿಗೂ) ಸಂಬಂಧಿಸಿವೆ ಎಂದು ಅವಶ್ಯ ತಿಳಿಯಬೇಕು. ಸ್ತ್ರೀ ಪುರುಷರಿಬ್ಬರಿಗೂ ಧಾರ್ಮಿಕ ಸಂಸ್ಕಾರವಿರುವುದು ಈ ಧರ್ಮದ ವೈಶಿಷ್ಟ್ಯ. ವೀರಶೈವ ಧರ್ಮದಲ್ಲಿ 'ಸ್ತ್ರೀ' ಸಾಕ್ಷಾತ್ 'ಶಕ್ತಿ' ಸ್ವರೂಪಳಾಗಿದ್ದಾಳೆ. ಜಗತ್ತಿನ ಬಹುಪಾಲು ಧರ್ಮಗಳಲ್ಲಿ ಸ್ತ್ರೀಯರನ್ನು ಕಡೆಗಣಿಸಿರುವುದನ್ನು ಕಾಣುತ್ತೇವೆ. ಉದಾಹರಣೆಗೆ ಕ್ರೈಸ್ತ ಧರ್ಮದಲ್ಲಿ 'ಈವ್'ಳ ಮಾತನ್ನು ಕೇಳಿಯೇ ಆ್ಯಡಮನು ದೇವರ ಆಜ್ಞೆಯ ವಿರುದ್ಧವಾಗಿ, ಜ್ಞಾನವೃಕ್ಷದ ಫಲವನ್ನು ತಿಂದನೆಂದು ಪ್ರತೀತಿ. ಆದುದರಿಂದ ಮೂಲಪಾಪಕ್ಕೆ ಹೆಣ್ಣೇ ಕಾರಣೀಭೂತಳು ಎನ್ನುವ ಕಲ್ಪನೆ ಅಲ್ಲಿದೆ.

ಇನ್ನು ಇಸ್ಲಾಂಧರ್ಮದಲ್ಲಿ ಮಹಿಳೆಯರು ಪುರುಷನೊಡನೆ ಪ್ರಾರ್ಥನಾ ಸಭೆಗಳಲ್ಲಿ ಭಾಗವಹಿಸುವ ಅವಕಾಶವಿಲ್ಲ. ಘೋಷಾಪದ್ಧತಿಯೂ ಇದೆ. ವೈದಿಕ ಧರ್ಮ ಹೆಣ್ಣನ್ನು ಶೂದ್ರವರ್ಗಕ್ಕೆ ಸೇರಿಸಿ ಮುಕ್ತಿಗೆ ಅನರ್ಹಳೆಂದು ಭಾವಿಸಿತು. ಮುಕ್ತಿಯಲ್ಲಿ ಭಾಗವಹಿಸುವುದು ಆತ್ಮವೇ ವಿನಃ ಅಂಗವಲ್ಲ, ಆತ್ಮ ಹೆಣ್ಣೂ ಅಲ್ಲ ಗಂಡೂ ಅಲ್ಲ.

ಬುದ್ಧ ಸ್ತ್ರೀಯರಿಗೆ ಮೊದಲು ಸ್ವಲ್ಪ ಅನುಮಾನದಿಂದಲೇ ಧಾರ್ಮಿಕ ಸ್ವಾತಂತ್ರ್ಯನೀಡಿದ. ಅವರನ್ನು ಧರ್ಮಕ್ಕೆ ಸೇರಿಸಿಕೊಂಡರೆ ತನ್ನ ಧರ್ಮಕ್ಕೆ ಅರ್ಧ ಆಯುಷ್ಯವೆಂದೂ ಶಿಷ್ಯನಿಗೆ ಮೊದಲೇ ಹೇಳಿದ, ಕೊನೆಗೆ ಅವಕಾಶ ನೀಡಿದ. ಅಲ್ಲೂ ಬಿಕ್ಷುಕಿಯರನ್ನು ಭಿಕ್ಷುಗಳೊಂದಿಗೆ ಸಮಾನರೆಂದು ಭಾವಿಸುವ ಪರಿಪಾಠ ಬೆಳೆಯಲಿಲ್ಲ.

ಜಾಗತಿಕ ಇತಿಹಾಸದಲ್ಲಿ ಧರ್ಮದ ಹೆಸರಿನಲ್ಲಿ ಅಧರ್ಮವು ತಲೆಎತ್ತಿ ಸ್ತ್ರೀಯರನ್ನು ಅಧೋಗತಿಗೆ ನೂಕಿದ ಚಿತ್ರವನ್ನು ನಾವು ಇತಿಹಾಸದಲ್ಲಿ ಕಾಣುತ್ತೇವೆ. ಈ ದೃಷ್ಟಿಯಿಂದ ಸ್ತ್ರೀಯರಿಗೆ ಆಚಾರ್ಯರು ಸಮಾನ ಧರ್ಮಾವಕಾಶವನ್ನು ನೀಡಿರುವುದು ಅವರ ಉದಾರ ದೃಷ್ಟಿಗೆ ಸಾಕ್ಷಿಯಾಗಿದೆ.

೩. ಪಂಚಸೂತಕಗಳು

ಪ್ರತಿ ಮಾಸಕ್ಕೊಮ್ಮೆ ಸ್ತ್ರೀಗೆ ರಜೋದರ್ಶನ ಕ್ರಿಯೆ ಆಗುವುದು ನಿಸರ್ಗ, ಪ್ರಕೃತಿ ನಿಯಮ. ಕೆಲವು ಧರ್ಮಗಳಲ್ಲಿ ಇದರಿಂದಾಗಿ ಸ್ತ್ರೀಯಳನ್ನು ಶೂದ್ರವರ್ಗಕ್ಕೆ ಸೇರಿಸಲಾಗಿದೆ. ಸ್ತ್ರೀಯಳು ಮುಟ್ಟಾದಾಗ ಕತ್ತಲಲ್ಲಿ ಹೊರಗೆ ಕೂರಿಸಿ, ಎತ್ತಿ ತಟ್ಟೆಗೆ ಅನ್ನ ಹಾಕುವುದು,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುಟ್ಟದೆ ದೂರ ಓಡಾಡುವುದು, ಅವರ ನೆರಳು ಬಿದ್ದರೆ ಮಾಲಿನ್ಯವೆನ್ನುವ ಕಲ್ಪನೆ ಇದೆ. ಸ್ವಚ್ಛತೆಯ ದೃಷ್ಟಿಯಿಂದ, ಆರೋಗ್ಯದ ದೃಷ್ಟಿಯಿಂದ, ಅವುಗಳನ್ನು ಗಮನಿಸಬೇಕಲ್ಲದೆ ನಿಕೃಷ್ಟ ಭಾವನೆಗಳಿಂದಲ್ಲ. ವೀರಶೈವರು ಇಷ್ಟಲಿಂಗಧಾರಿಗಳಾದುದರಿಂದ ಸ್ನಾನ ಮಾಡಿ ಇಷ್ಟಲಿಂಗ ಪೂಜಾಕಾರ್ಯವನ್ನು ನೆರವೇರಿಸಬೇಕು. ಇಷ್ಟಲಿಂಗ ಪೂಜೆಗೆ ಸೂತಕ ಅಡ್ಡಬರಬಾರದೆಂದು ತಿಳಿಸುತ್ತಾರೆ.

ನ ತಸ್ಯ ಸೂತಕಂ ಕಿಂಚಿತ್ ಪ್ರಾಣಲಿಂಗಾಂಗಸಂಗಿನಃ।
ಜನ್ಮನೋತ್ಥಂ ಮೃತೋತ್ಥಂ ಚ ವಿದ್ಯತೇ ಪರಮಾರ್ಥತಃ॥
ಲಿಂಗಾರ್ಚನರತಾಯಾಶ್ಚ ಋತೌ ನಾರ್ಯಾ ನಸೂತಕಮ್॥

ಇತ್ಯಾದಿ ವಾಕ್ಯ ಪ್ರಮಾಣಗಳಿಂದ ಜನನ ಸೂತಕ, ಮರಣ ಸೂತಕ, ರಜಸ್ಸೂತಕ ದಿನಗಳನ್ನು ಸಮಾಜದಲ್ಲಿ ಆಚರಿಸಬಾರದೆಂದು ಆಚಾರ್ಯರು ತಿಳಿಸುತ್ತಾರೆ.*

ವ್ಯಕ್ತಿಯು ದೇವರನ್ನು ನೇರವಾಗಿ ಯಾರ ಮಧ್ಯಸ್ಥಿಕೆ ಇಲ್ಲದೆ ಪೂಜಿಸುವ ಸ್ವಾತಂತ್ರ್ಯವನ್ನು ಇಷ್ಟಲಿಂಗದ ಮೂಲಕ ಮಾತಾಚಾರ್ಯರು ಕೊಟ್ಟಿದ್ದಾರೆ. ಇಂಥ ಪೂಜಾ ಸ್ವಾತಂತ್ರ್ಯವನ್ನು ಹೊಂದಿ ಚಲಿಸುವ ಲಿಂಗವಾದ ವೀರಶೈವನು ಸೂತಕಗಳನ್ನು ಆಚರಿಸಬಾರದು ಎಂದು ತಿಳಿಸುತ್ತಾರೆ.

ಭಕ್ತಮಾರ್ಗಕ್ರಿಯಾಸ್ಥಲದಲ್ಲಿ ಪಂಚಾಕ್ಷರಿ ಮಂತ್ರೋಪದೇಶವನ್ನು ಹೊಂದಿದ ವೀರಶೈವನು 'ನರಸ್ತುತಿ' ಮಾಡಬಾರದು, ಹಾಗೆ ಮಾಡಿದವನು, ದುರಾಚಾರಿ, ಹಾಗೂ ಕುಕವಿ ಎಂದು ವಿಡಂಬಿಸಿದ್ದಾರೆ. ಅಧಿಕಾರಿ, ಶ್ರೀಮಂತ, ರಾಜರನ್ನು ಅವರಲ್ಲಿ ಗುಣವಿಲ್ಲದಿದ್ದರೂ ಹೊಗಳುವ, ಅವರನ್ನು ಕುರಿತು ಕಾವ್ಯ ಬರೆಯುವ ಪದ್ಧತಿ ಹಿಂದಿನಿಂದಲೂ ಬಂದ ಪದ್ಧತಿ ಈ ನಡವಳಿಕೆ ವೀರಶೈವರಿಗೆ ಸಲ್ಲದು ಎಂದು ಆಚಾರ್ಯರು ಅಪ್ಪಣೆಕೊಡಿಸುತ್ತಾರೆ.

ವೀರಶೈವ ಧರ್ಮ ಆಚಾರ್ಯರ ಕಾಲದಿಂದಲೂ ಪ್ರಜಾಪ್ರಭುತ್ವದ ಮಾರ್ಗದಲ್ಲಿ ಸಾಗಿಬಂದ ಧರ್ಮ. ರಾಜಾಶ್ರಯ ಪಡೆಯದೆ ರಾಜರನ್ನು ಪ್ರತಿಭಟಿಸುತ್ತಾ ತಾತ್ವಿಕ ಹಿನ್ನೆಲೆಯಲ್ಲಿ ಸ್ವಾಭಿಮಾನದಿಂದ ಕಾಲದ ಅಗ್ನಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಉಳಿದಿದೆ. ಈ ದೃಷ್ಟಿಯಿಂದ 'ನರಸ್ತುತಿ ಬೇಡ ಹರಸ್ತುತಿ ಸಾಕು' ಎನ್ನುವ ಸಾಮಾಜಿಕ ಮೌಲ್ಯವನ್ನು ಕಾಣುತ್ತೇವೆ. ವೀರಶೈವ ಧರ್ಮದ ಬಹುಪಾಲು ಕವಿಗಳು ಶಿವಸ್ತುತಿ ಶಿವಸಾಹಿತ್ಯವನ್ನು ರಚಿಸಿರುವುದು ಎಲ್ಲರಿಗೂ ತಿಳಿದ ಸಂಗತಿ.

---

* ಶ್ರೀಪತಿ ಪಂಡಿತರು ಈ ವಿಷಯದಲ್ಲಿ ದೀರ್ಘ ಚರ್ಚೆ ಮಾಡಿ, ಲಿಂಗಪೂಜೆಗೆ ಮಾತ್ರ ಸೂತಕಗಳನ್ನು ನೋಡಬಾರದು. ಉಳಿದ ವಿಷಯಗಳಲ್ಲಿ (ಸ್ಪರ್ಶಾದಿಗಳಿಗೆ) ಸೂತಕಗಳಿವೆ ಎಂದು ಹೇಳಿದ್ದಾರೆ (ಸಂಪಾದಕ).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೪. ಗುರು-ಲಿಂಗ-ಜಂಗಮ

ವೀರಶೈವಧರ್ಮದಲ್ಲಿ ಗುರು-ಲಿಂಗ-ಜಂಗಮರು ಆರಾಧ್ಯವಸ್ತುಗಳು. ರಾಜ್ಯಶಾಸ್ತ್ರದಲ್ಲಿ ಶಾಸಕಾಂಗ -ಕಾರ್ಯಾಂಗ-ನ್ಯಾಯಾಂಗವಿದ್ದಂತೆ; ಬೌದ್ಧ ಧರ್ಮದ ಬುದ್ಧ- ಧರ್ಮ- ಸಂಘಗಳಿದ್ದಂತೆ. ಅತ್ಯಂತ ಮಹತ್ವದವುಗಳು. ಗುರುವಿನದು ಉಪದೇಶ-ಲಿಂಗದ್ದು ಪೂಜಿಸಿಕೊಳ್ಳುವ ಕ್ರಿಯೆ. ಜಂಗಮನು ಸಾಧಕನ ನಡೆನುಡಿಗಳನ್ನು ತಿದ್ದುವ ಕಾರ್ಯ ಕೈಗೊಳ್ಳುತ್ತಾನೆ. ಈ ಮೂರು ವಸ್ತುಗಳು ಅತ್ಯಂತ ಪವಿತ್ರವೆಂದು ಕರೆಯುತ್ತಾರೆ.

ಏಕ ಏವ ಶಿವಃ ಸಾಕ್ಷಾತ್ ಸರ್ವಾನುಗ್ರಹಕಾರಕಃ।
ಗುರು-ಜಂಗಮ- ಲಿಂಗಾತ್ಮಾ ವರ್ತತೇ ಭುಕ್ತಿ ಮುಕ್ತಿದಃ॥

ಎಂದು ರೇಣುಕಾಚಾರ್ಯರು ಹೇಳುತ್ತಾ ಈ ಮೂರು ವಸ್ತುಗಳು ಒಂದೇ ಶಿವಶಕ್ತಿಯ ಆವಿರ್ಭಾವಗಳು. ಅವುಗಳನ್ನು ಪೂಜ್ಯ ದೃಷ್ಟಿಯಿಂದ ಕಾಣಬೇಕು. ಅವು ಸಮಾಜದ ತ್ರಿವಿಧ ಸಂಪತ್ತುಗಳೆಂದು ತಿಳಿಸುತ್ತಾರೆ.

೫. ದಾನ (ದಾಸೋಹ) ಕಲ್ಪನೆ

ಸಿದ್ಧಾಂತ ಶಿಖಾಮಣಿಯಲ್ಲಿ 'ದಾನಂತು ತ್ರಿವಿಧಂ ಪ್ರೋಕ್ತಂ ಸೋಪಾಧಿ-ನಿರುಪಾಧಿಕಂ ಸಹಜಂ ಚ ಇತಿ' ಎಂದು ದಾನದಲ್ಲಿ ಮೂರು ವಿಧ ತಿಳಿಸುತ್ತಾರೆ. ಶಿವಭಕ್ತರು ಲೋಕ ವ್ಯವಹಾರದ ಕಾಯಕ (ದುಡಿಮೆ) ಮಾಡುತ್ತಾ ಅಂತರಂಗದಲ್ಲಿ ಆಧ್ಯಾತ್ಮಸಾಧನೆ ಮಾಡುತ್ತಿರಬೇಕು. ಗುರು-ಲಿಂಗ- ಜಂಗಮಕ್ಕೆ ತನು-ಮನ -ಧನಗಳನ್ನು ಅರ್ಪಿಸಬೇಕು. ಗುರು-ಲಿಂಗ-ಜಂಗಮರಿಗೆ ದಾನಮಾಡುವಾಗ ಮೈತುಂಬಾ ಎಚ್ಚರವಾಗಿರಬೇಕು. ಫಲಾಪೇಕ್ಷೆಯಿಂದ ಮಾಡುವ ದಾನ ಸೋಪಾಧಿಕ, ಫಲಾಪೇಕ್ಷೆ ಇಲ್ಲದೆ ಮಾಡುವ ದಾನ ನಿರುಪಾಧಿಕ, ದಾನಪಡೆಯುವವ, ಕೊಡುವವ, ಹಾಗೂ ದೇಯ ವಸ್ತುವಿನಲ್ಲಿ ಶಿವಭಾವವನ್ನು ಕಂಡು, ತಾನು ದಾನಮಾಡುವವನಲ್ಲ ಎನ್ನುವ, ವಿನಮ್ರ ಹಾಗೂ ನಿರಹಂಕಾರ ಭಾವದಿಂದ ಮಾಡುವ ದಾನವನ್ನು ಸಹಜ ದಾನವೆಂದೂ, ದಾಸೋಹಂ ಭಾವದ ಈ ದಾನವು 'ಉತ್ಕೃಷ್ಟಂ ಸರ್ವದಾನೋತ್ತಮೋತ್ತಮಂ' ಎಂದು ಧರ್ಮಾಚಾರ್ಯರು ತಿಳಿಸುತ್ತಾರೆ. ದಾನಂ ಸಮವಿಭಾಗಯೋಃ ಎಂದು ಪಾಣಿನಿಯ ನಿರ್ವಚನ. ದಾಸೋಹಂ ಭಾವನೆಯಿಂದ ಭಕ್ತನು ಗುರು-ಲಿಂಗ- ಜಂಗಮಕ್ಕೆ ದಾನವನ್ನು ಮಾಡುತ್ತಾ ಸಮಾಜದ ಒಳಿತಿಗೆ ಕಾರಣನಾಗಬೇಕೆಂದು ಇದನ್ನು ಸಮಾಜದ ಎಲ್ಲರೂ ಆಚರಿಸಬೇಕೆಂದು ಆಚಾರ್ಯರು ತಿಳಿಸುತ್ತಾರೆ. ಈ ಅರ್ಥದಲ್ಲಿ ಇದು ಸಾಮಾಜಿಕ ಮೌಲ್ಯವೆಂದು ಪರಿಗಣಿಸಬಹುದಾಗಿದೆ.

೬. ಶಿವಾಗಾರಮಿದಂ ಶರೀರಂ

ದೇಹೋ ದೇವಾಲಯಃ ಪ್ರೋಕ್ತೋ ಜೀವೋ ದೇವಃ ಸನಾತನಃ।
'ನಮಃ ಶರೀರಾಯ ಶಿವಾಲಯಾಯ'

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎನ್ನುವ ಆಗಮತತ್ವಗಳನ್ನು ಸಿದ್ಧಾಂತ ಶಿಖಾಮಣಿ ಎತ್ತಿಹಿಡಿಯುತ್ತದೆ.

ಶಿವಾಗಾರಮಿದಂ ಪ್ರೋಕ್ತಂ ಶರೀರಂ ಬೋಧದೀಪಿತಮ್।
ಷಟ್ತ್ರಿಂಶತ್ತತ್ತ್ವ-ಘಟಿತಂ ಸುಮನಃ ಪದ್ಮಪೀಠಕಮ್॥

ಎಂದು ಹೇಳುತ್ತಾ ಪೃಥ್ವಿ ಮೊದಲಾದ ೩೬ ತತ್ವಗಳೆಂಬ ಗೋಡೆ ಕಂಬಗಳಿಂದ ಸಿದ್ಧವಾದ ಈ ದೇಹವೆಂಬ ಕಟ್ಟಡದಲ್ಲಿ, ಹೃದಯ ಕಮಲವೆಂಬ ಗದ್ದುಗೆಯ ಮೇಲೆ, ಜೀವಾತ್ಮನೆಂಬ ಲಿಂಗಮೂರ್ತಿ ಇದೆ. ಜ್ಞಾನದ ಬೆಳಕು ಎಲ್ಲ ಕಡೆಗೂ ಪ್ರಕಾಶಿಸುತ್ತದೆ. ಆದ್ದರಿಂದ ಈ ದೇಹವೇ ದೇವಾಲಯವೆಂದು ತಿಳಿಸುತ್ತಾರೆ. ಏಕದೇವೋಪಾಸನೆಯ ಮಹತ್ವವನ್ನು ಆಚಾರ್ಯರು ಒತ್ತಿಹೇಳುತ್ತಾರೆ.

ನಾರ್ಚಯೇತ್ ಅನ್ಯ ದೇವಾಂಶ್ಚ ನ ಸ್ಮರೇತ್ ನ ಚ ಕೀರ್ತಯೇತ್।

ಎಂದು ಅನ್ಯದೈವವನ್ನು ನೆನೆಯಬಾರದೆಂದು ತಿಳಿಸುತ್ತಾರೆ. ಸ್ಥಾವರಲಿಂಗ ಪೂಜೆಯ ನೈವೇದ್ಯವನ್ನು ಸ್ವೀಕರಿಸಬಾರದು ಎಂದು ಅವರ ಅಭಿಮತ. ಗುಡಿಲಿಂಗ ಸಂಸ್ಕೃತಿಯ ವಿಕಾಸದ ಹಂತವಾಗಿ ಇಷ್ಟಲಿಂಗ ಸಂಸ್ಕೃತಿ ಬೆಳೆದುಬಂದಿರುವುದು ಎಲ್ಲರಿಗೂ ತಿಳಿದ ಸಂಗತಿ. ಎರಡು ಸಂಸ್ಕೃತಿಗಳೂ ಭಾರತದಲ್ಲಿವೆ. ಸ್ಥಾವರಲಿಂಗಗಳಿಗೆ, ಸದ್ಭಕ್ತರಿಗೆ, ಅಪಾಯ ಅವಮಾನ ಸಂಭವಿಸಿದಲ್ಲಿ ಪ್ರಾಣವನ್ನಾದರೂ ಅರ್ಪಿಸಿ ಪರಿಹಾರ ಮಾಡಬೇಕೆನ್ನುವ, ಗಣಾಚಾರ ನಿಯಮವನ್ನು ಆಚಾರ್ಯರು ತಿಳಿಸುತ್ತಾರೆ. ಮತ್ತು ಶಿವಕ್ಷೇತ್ರಗಳ ಬಗ್ಗೆ ಗೌರವ ಭಾವವನ್ನು ತಳೆಯಬೇಕು, ಶಿವಕ್ಷೇತ್ರಗಳಿಗೆ ಯಾತ್ರೆ ಮಾಡಬೇಕು, ಮತ್ತು ಯಾತ್ರಿಕರಿಗೆ ಆದ ಮಟ್ಟಿಗೆ ಅನ್ನದಾಸೋಹ ಮಾಡಬೇಕು, ಇದು ವ್ಯಕ್ತಿಗೂ, ಸಮಾಜಕ್ಕೂ, ಕಲ್ಯಾಣಮಾರ್ಗವೆಂದು ಅವರು ತಿಳಿಸುತ್ತಾರೆ. ಅಂದರೆ ಸ್ಥಾವರ ಲಿಂಗಗಳನ್ನು ಶಿವಕ್ಷೇತ್ರಗಳನ್ನು ತಿರಸ್ಕರಿಸುವುದಲ್ಲ. ಅವುಗಳನ್ನು ಗೌರವಿಸಬೇಕೆನ್ನುವ ಸಹೃದಯ ಸಮಾನತೆಯ ದೃಷ್ಟಿಯನ್ನು ಭಗವತ್ಪಾದ ರೇಣುಕಾಚಾರ್ಯರ ಉಪದೇಶದಲ್ಲಿ ನಾವು ಕಾಣುತ್ತೇವೆ. ವೀರಶೈವರಲ್ಲದವರ ಮನೆಗಳಲ್ಲಿ ಅನ್ನಪಾನಾದಿ ವ್ಯವಹಾರಗಳನ್ನು ಮಾಡಬಾರದೆಂದು ತಿಳಿಸುತ್ತಾರೆ.

ಕ್ರಿಯಾಪ್ರಕಾಶನ ಸ್ಥಲದಲ್ಲಿ ಕ್ರಿಯೆಯ (ವೃತ್ತಿ) ಮಹತ್ವವನ್ನು ತಿಳಿಸುತ್ತಾ ಸಾಧಕನ ಕ್ರಿಯೆಯಲ್ಲಿ ಜ್ಞಾನ-ಕ್ರಿಯಾ ಎಂದು ಎರಡು ವಿಧ. ಯಾವ ಕಾರ್ಯದಲ್ಲೂ ಅವುಗಳ ಅನುಸಂಧಾನದ ಅವಶ್ಯಕತೆ ಇದೆ. ದೈಹಿಕ ಮತ್ತು ಮಾನಸಿಕ (ಬೌದ್ಧಿಕ)ವಾಗಿ-

ನಿಷ್ಕಲಂಕಚಿದಾನಂದಗಗನೋಪಮರೂಪಿಣಃ।
ಶಿವಸ್ಯ ಪರಿಪೂರ್ಣಸ್ಯ ವೃತ್ತಿಶ್ಚೈತನ್ಯರೂಪಿಣೀ॥

ಶಿವನಲ್ಲಿ ಚಿತ್ತವೃತ್ತಿಯನ್ನು ಲಯಗೊಳಿಸಿ ಜ್ಞಾನೇಂದ್ರಿಯ ಕರ್ಮೇಂದ್ರಿಗಳು ಕೇಂದ್ರಿಕೃತವಾದ ಜ್ಞಾನಕ್ರಿಯಾ ವಿಶಿಷ್ಟವಾದ ಶಕ್ತಿಗೆ 'ವೃತ್ತಿ ಚೈತನ್ಯ'ವೆಂದು ಕರೆದು 'ವೃತ್ತಿ'

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಹತ್ವವನ್ನು ತಿಳಿಸುತ್ತಾರೆ. ಯಾವುದೇ ಒಂದು ಕ್ರಿಯೆಯಲ್ಲಿ ಚಿತ್ತ ವೃತ್ತಿಯನ್ನು ಲಯಗೊಳಿಸಿದಾಗ ಅದು ಚೈತನ್ಯ ಸ್ವರೂಪದ್ದಾಗುತ್ತದೆ ಎಂದು ವೃತ್ತಿ ಗೌರವವನ್ನು ಎತ್ತಿಹಿಡಿದಿದ್ದಾರೆ.

೭. ನೀತಿಸಂಹಿತೆ (ಶೀಲಗಳು)

ಯಾವುದೇ ಧರ್ಮದ ವಿವೇಚನೆ ಪರಿಪೂರ್ಣವಾಗಲು ಮೂರು ವಿಷಯಗಳು ಮಹತ್ವದವಾಗುತ್ತವೆ. ೧. ತಾತ್ವಿಕ ವಿವೇಚನೆ, ೨. ಧಾರ್ಮಿಕ ಆಚರಣೆ, ೩. ನೈತಿಕ ನಿಯಮಗಳು. ಇವು ಪರಸ್ಪರ ಪೂರಕವಾಗಿವೆ. ಆಚಾರವೆಂಬ ಪಾರಿಭಾಷಿಕವಾಗಿ ಕರೆಯುವ ಆಚಾರಗಳಲ್ಲಿ ಪಂಚಾಚಾರ- ಸಪ್ತಾಚಾರ- ಅರವತ್ತೂರು ಶೀಲಗಳು ಹೀಗೆ ನೂರಾರು ಆಚಾರಗಳ ಸಂಖ್ಯೆ ಬೆಳೆದುಬಂದಿದೆ, ಉಳಿದುಬಂದಿದೆ. ಆಚಾರಗಳಲ್ಲಿ ನೈತಿಕ ನಿರೂಪಣೆಯ ವ್ಯಾಪಕವಾದ ಸ್ವರೂಪವನ್ನು ಆಚಾರ್ಯರು ಪ್ರತಿಪಾದಿಸುತ್ತಾರೆ.

ಸಿದ್ಧಾಂತ ಶಿಖಾಮಣಿಯಲ್ಲಿ ಧರ್ಮಾಚಾರ-ಸದಾಚಾರ -ಭಾವಾಚಾರ ಮತ್ತು ಜ್ಞಾನಾಚಾರಗಳೆಂಬ ಪ್ರಭೇದಗಳಿಂದ ಎಲ್ಲ ಆಚಾರಗಳ ಸೂಕ್ಷ್ಮಗಳನ್ನು ತಿಳಿಸುತ್ತಾರೆ. ಧಾರ್ಮಿಕ ಆಚರಣೆಗೆ ನೀತಿ ಮುಖ್ಯವಾದುದು. ನೈತಿಕ ನಿಷ್ಠೆ ಇಲ್ಲದ ಧರ್ಮ ವ್ಯಕ್ತಿ ಹಾಗೂ ಸಮಾಜಕ್ಕೆ ಹಿತಕಾರಿ ಅಲ್ಲ.

Religion that did not concrern itself with right and wrong world be no religion at all ಎಂದರೆ ಒಳಿತು ಕೆಡಕುಗಳ ತಾರತಮ್ಯವನ್ನು ತಿಳಿಸುವ ನೀತಿಸಂಹಿತೆ ಧರ್ಮದ ಅಂಗವೆಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಬಹಿರಂಗದ ಸಾಮಾಜಿಕ ಸಂಪ್ರದಾಯಗಳು ಆಗಾಗ್ಗೆ ಬದಲಾಗಬಹುದು. ಆದರೆ ಸಾರ್ವಕಾಲಿಕ ನೈತಿಕ ನಿಯಮಗಳು ಶಾಶ್ವತವಾಗಿರುತ್ತವೆ. ಅವು ವ್ಯಕ್ತಿ ಮೌಲ್ಯಗಳೂ ಹೌದು; ಸಾಮೂಹಿಕವಾಗಿ ಎಲ್ಲರ ಕ್ರಿಯೆಯಲ್ಲಿ ಅಳವಟ್ಟಾಗ ಸಾಮಾಜಿಕ ಮೌಲ್ಯಗಳೂ ಆಗುತ್ತವೆ. ಭಗವತ್ಪಾದ ರೇಣುಕಾಚಾರ್ಯರು ಧರ್ಮಾಚಾರ ಸ್ಥಲದಲ್ಲಿ-

ಅಹಿಂಸಾ ಸತ್ಯಮಸ್ತೇಯಂ ಬ್ರಹ್ಮಚರ್ಯಂ ದಯಾ ಕ್ಷಮಾ।
ದಾನಂ ಪೂಜಾ ಜಪೋ ಧ್ಯಾನಮಿತಿ ಧರ್ಮಸ್ಯ ಸಂಗ್ರಹಃ॥

ಒಂದು ಧರ್ಮ ಪರಿಪೂರ್ಣವಾಗಿ ವಿಶ್ವಧರ್ಮವಾಗಲು ಈ ಎಲ್ಲ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ದಯಾ, ಕ್ಷಮಾ, ದಾನ, ಪೂಜೆ, ಜಪ, ಧ್ಯಾನ ಈ ನೈತಿಕ ಗುಣಗಳಿರಬೇಕೆಂದು ತಿಳಿಸುತ್ತಾರೆ. ಭಾವಾಚಾರ ಸ್ಥಲದಲ್ಲಿ-

ಆತ್ಮಾನಮಖಿಲಂ ವಸ್ತು ಶಿವಮಾನಂದಚಿನ್ಮಯಮ್।
ಏಕ ಭಾವೇನ ಸತತಂ ಸಂಪಶ್ಯನ್ನೇವ ಪಶ್ಯತಿ॥ ಎಂದೂ
ಆತ್ಮವತ್ಸರ್ವಭೂತಾನಿ ಸಂಪಶ್ಯೇದ್ಯೋಗವಿತ್ತಮಃ।
ಜಗದೇಕಾತ್ಮತಾಭಾವಾತ್ ನಿಗ್ರಹಾದಿವಿರೋಧತಃ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾಧಕನು (ಶಿವಯೋಗಿ) ಜಗತ್ತಿನ ಎಲ್ಲ ವಸ್ತುಗಳನ್ನು ಶಿವಭಾವದಿಂದ ಕಾಣಬೇಕು. ಎಲ್ಲ ಜೀವರಾಶಿಗಳನ್ನು ತನ್ನಂತೆ ಭಾವಿಸಬೇಕು ಎನ್ನುವ ಉದಾತ್ತ ತತ್ವಗಳನ್ನು ಆಚಾರ್ಯರು ತಿಳಿಸುತ್ತಾರೆ. ಇಂಥ ನೀತಿ ತತ್ವಗಳ ಮೌಲ್ಯಗಳಿಂದಲೇ ಧರ್ಮಕ್ಕೊಂದು ವಿಶಾಲದೃಷ್ಟಿ ಬರುತ್ತದೆ. ಅದು ವಿಶ್ವಮಾನ್ಯ ತತ್ವಗಳನ್ನು ಒಳಗೊಳ್ಳುತ್ತದೆ. ನೀತಿ (ಆಚಾರ)ಗಳು ಬೀಜವಿದ್ದಂತೆ, ಧರ್ಮ ಆ ಬೀಜದ ಫಲವೆಂದು ಬಲ್ಲವರು ಹೇಳುತ್ತಾರೆ.

ಸಿದ್ಧಾಂತ ಶಿಖಾಮಣಿಯಲ್ಲಿ ಆಚಾರ್ಯರು ಉಪದೇಶಿಸಿರುವ ಧರ್ಮಾಚಾರಗಳು ಇಲ್ಲಿ ಶುಷ್ಕವಾಗಿ ಉಳಿಯದೆ ಸಾಧಕನ (ಶಿವಯೋಗಿ) ಅಂತರಂಗದ ಅನುಭವದೊಡನೆ ಅವು ಬೆಳೆಯುತ್ತಾ ಹೋಗುತ್ತವೆ. ಸಾಮಾಜಿಕ ಮೌಲ್ಯಗಳೆಂದು ಕರೆಯುವ 'ಆಚಾರ' ಪದ್ಧತಿ ಅದು ಕೇವಲ ನೀತಿ ನಿಯಮ ಪಾಲನೆ, ಸಂಪ್ರದಾಯದ ಅನುಸರಣೆ ಅಲ್ಲ; ಇವುಗಳಿಗೆ ವ್ಯಾಪಕವಾದ ಅರ್ಥವಿದೆ. ಧಾರ್ಮಿಕ ಸಾಧನೆಗಳನ್ನು ಒಳಗೊಳ್ಳುವ ಪರಿಪೂರ್ಣ ದೃಷ್ಟಿ ಇದೆ. ಸಿದ್ಧಾಂತ ಅದು ಥೀಯರಿ; ಆಚಾರಗಳು- ಪ್ರಾಕ್ಟಿಕಲ್ಸ್ ಇದ್ದಹಾಗೆ. ಸಿದ್ಧಾಂತ ನಮ್ಮ ನಡೆನುಡಿಯಲ್ಲಿ ಅಳವಟ್ಟಾಗ ಸಾರ್ಥಕ. ಈ ಅರ್ಥದಲ್ಲಿ ಷಟ್‌ಸ್ಥಲ-ಅಷ್ಟಾವರಣ ಎಲ್ಲ ಆಚಾರಗಳೂ ಸರ್ವಾಚಾರ ಸಂಪತ್ತಿನಲ್ಲಿ ಸಮಾವೇಶಗೊಳ್ಳುತ್ತವೆ.

ಧರ್ಮಸಾಧನೆಯ ಒಂದೊಂದು ಹೆಜ್ಜೆ ಆಚಾರವಾಗಿದೆ. ನುಡಿಗೊಂದು ನಡೆಯಂತೆ ಸಿದ್ಧಾಂತ ಶಿಖಾಮಣಿಯಲ್ಲಿ ಷಟ್‌ಸ್ಥಲಾಂತರ್ಗತವಾಗಿ ಬರುವ ಸದಾಚಾರ-ಲಿಂಗಾಚಾರ- ಶಿವಾಚಾರ- ಗಣಾಚಾರ ಮತ್ತು ಭೃತ್ಯಾಚಾರಗಳು ಸಮಾಜಶಾಸ್ತ್ರದ ಮೂಲಸೂತ್ರಗಳಾಗಿವೆ. ಅವುಗಳಲ್ಲಿ ಪ್ರಜಾಪ್ರಭುತ್ವದ -ಸರ್ವೋದಯ ಸಮಾಜದ, ವಿಶ್ವಧರ್ಮದ ಸಮಾನ ತತ್ವಗಳನ್ನು ಗುರುತಿಸಬಹುದಾಗಿದೆ. ಸಿದ್ಧಾಂತ ಶಿಖಾಮಣಿಯಲ್ಲಿ ಪಾರಿಭಾಷಿಕ ಹಿನ್ನೆಲೆಯಲ್ಲಿ ಆಚಾರಗಳು ಪರಿಮಿತವಾಗಿ (ಸೂತ್ರರೂಪ) ಕಂಡರೂ, ಅವುಗಳ ಹಿಂದಿನ ಮನೋಧರ್ಮ ವಿಶಾಲವಾದುದು. ಸಕಲ ಮಾನವ ಕುಲದ ಕಲ್ಯಾಣಕ್ಕೆ ಕಾರಣವಾದುದು. ವ್ಯಕ್ತಿ ಸಮಾಜಗಳ ಶುದ್ಧೀಕರಣಕ್ಕೆ ಅವು ಮುಖ್ಯವಾದವು. ಇವುಗಳಲ್ಲಿ ಆಚಾರ ವಿಚಾರಗಳ ಸಮನ್ವಯ; ವ್ಯಷ್ಟಿ ಸಮಷ್ಟಿಗಳ ಸಮನ್ವಯ; ವ್ಯಕ್ತಿ ಸಮಾಜಗಳ ಸಮನ್ವಯ ಕಂಡುಬರುತ್ತದೆ.

ಕೊನೆಯದಾಗಿ ತತ್ವಗಳು- ಸಿದ್ಧಾಂತ- ಭಾವನಾತ್ಮಕ (obstract) ಭಾವನೆಗಳು ತಮಗೆ ತಾವೇ ಹಾರಾಡುವುದಿಲ್ಲ. ತತ್ವಗಳನ್ನು ನೇತುಹಾಕಲು (ಕ್ರಿಯೆಗೆ ತಂದ) ಒಂದು ಆಚಾರದ 'ಗೂಟ'ಬೇಕು. ಯಾವ ಧರ್ಮದಲ್ಲಿ ಹೆಚ್ಚು ಆಚಾರಗಳಿವೆಯೋ ಅಲ್ಲಿ ಹೆಚ್ಚು ಭಾವನೆಗಳೂ ಇರುತ್ತವೆ. ಅಲ್ಲಿ ಶಕ್ತಿ ಇದೆ. ಅವುಗಳನ್ನು ಅಲ್ಲಗಳೆಯಬೇಡಿ ಎಂದು ರಾಮಕೃಷ್ಣ ಪರಮಹಂಸರು ಸುಂದರವಾದ ದೃಷ್ಟಾಂತದೊಂದಿಗೆ ತಿಳಿಸುತ್ತಾರೆ- "ಆಚಾರ ಅಕ್ಕಿಯ ಮೇಲಿರುವ ಹೊಟ್ಟಿನಂತೆ, ನಾವು ಊಟ ಮಾಡುವಾಗ ಹೊಟ್ಟನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತೆಗೆದು ಅಕ್ಕಿಯನ್ನು ಬೇಯಿಸಿ ತಿಂದರೂ, ನಾವು ಬಿತ್ತ ಬೇಕಾದರೆ ಬರೀ ಅಕ್ಕಿಯನ್ನು ಬಿತ್ತಿದರೆ ಬೆಳೆಯದು -ಬೆಳೆ ದೊರೆಯದು. ಮುಂದೆ ಅದನ್ನು ಬೆಳೆಯಬೇಕಾದರೆ, ಮುಂದಿನವರಿಗೆ ಅದನ್ನು ಕೂಡಿಡಬೇಕಾದರೆ, ಅಕ್ಕಿಗಿಂತ ಭತ್ತ ಶ್ರೇಷ್ಠವೆನ್ನುತ್ತಾರೆ. ನೈತಿಕ ಆಚಾರಗಳ ಬಲದಿಂದಲೇ ಧರ್ಮಕ್ಕೆ ರಕ್ಷಣೆ. ಕಾಳು-ಸಿಪ್ಪೆ ಹೇಗೆ ಪರಸ್ಪರ ಸಂಬಂಧವೋ ಹಾಗೆಯೇ ಧಾರ್ಮಿಕ ತತ್ವಗಳಿಗೆ ಆಚಾರಗಳು ಸಂಬಂಧವಾಗಿರುತ್ತವೆ."

ಹೀಗೆ ವೀರಶೈವ ಸಮಾಜದವರು ಅನುಸರಿಸಬೇಕಾದ ಹಾಗೂ ಅನುಸರಿಸುತ್ತಿರುವ ಅನುಸರಿಸದಿದ್ದರೂ ಕೆಲವು ಆಚಾರಗಳಲ್ಲಿ (ಭಾವನೆ) ನಂಬಿಕೆ ಇರುವ, ಈ ಆಚಾರಗಳನ್ನು ನಾನು ಸಾಮಾಜಿಕ ಮೌಲ್ಯಗಳೆಂದು ಕರೆದಿದ್ದೇನೆ. ಈ ಆಚಾರಗಳು ವ್ಯಕ್ತಿ ಮೌಲ್ಯ ಹಾಗೂ ಸಮಾಜ ಮೌಲ್ಯಗಳೂ ಹೌದು.

ಸಹೃದಯ ದೃಷ್ಟಿಯಿಂದ ಸಿದ್ಧಾಂತ ಶಿಖಾಮಣಿಯನ್ನು ಅವಲೋಕಿಸಿದಾಗ ಪ್ರಗತಿಶೀಲ ವಿಚಾರಧಾರೆ ಕಂಡುಬರುತ್ತದೆ.

ಹೆಣ್ಣು-ಹೊನ್ನು-ಮಣ್ಣುಗಳ ತ್ಯಾಗ-ಭೋಗದ ಸಮನ್ವಯದ ಯೋಗತತ್ವ, ಜೀವನಕ್ಕೆ ಮೂಲಾಧಾರಗಳಾದ, ಜಲಾನ್ನಗಳ ಬಗ್ಗೆ ಪ್ರಸಾದಿಕ ಭಾವನೆ; ಜಾತಿ ನಿರಸನ ಪದ್ಧತಿ, ಅತಿವರ್ಣಾಶ್ರಮದ (ಪ್ರಗತಿ ಪರ ಸಮಾಜದ) ದೃಷ್ಟಿಕೋನ ಸಂಗ್ರಹ ಶೀಲತೆ; ಸ್ತ್ರೀಯರಿಗೆ ಧಾರ್ಮಿಕ ಸ್ವಾತಂತ್ರ್ಯ; ಗುರು- ಜಂಗಮರಿಗೆ ದಾಸೋಹಂಭಾವದ ಸಹಜದಾನ; ಅನ್ನದಾನಂದ ಜಲದಾನದ ಅರವಟ್ಟಿಗೆ ಮಹತ್ವ, ದೇಹವನ್ನೇ ಶಿವಾಗಾರವೆನ್ನುವ, ಆದರೂ (ಅರಮಟ್ಟಿಗೆ) ದೇವಾಲಯಗಳನ್ನು ಅಲ್ಲಗಳೆದ ಸಮನ್ವಯ ದೃಷ್ಟಿ, ಇತ್ಯಾದಿ ಹಲವಾರು ವಿಚಾರಗಳು ಸಾಮಾಜಿಕ ಮೌಲ್ಯಗಳಾಗಿ ಆಧುನಿಕರೂ ತಲೆದೂಗುವಂತೆ ಪ್ರತಿಪಾದಿಸಲ್ಪಟ್ಟಿವೆ. ಅಂಥ ವಿಚಾರಗಳನ್ನು ಗುರುತಿಸಲು ಈ ಲೇಖನ ತೋರ್‌ಬೆರಳು ಮಾತ್ರವಾಗಿದೆ.

ಅನುಗತಸಕಲಾರ್ಥೇ ಶೈವತಂತ್ರೈಃ ಸಮಸ್ತೈಃ
ಪ್ರಕಟಿತಶಿವಬೋಧಾದ್ವೈತಭಾವಪ್ರಸಾದೇ।
ವಿದಧತು ಮತಿಮಸ್ಮಿನ್ ವೀರಶೈವಾ ವಿಶಿಷ್ಟಾಃ
ಪಶುಪತಿಮತಸಾರೇ ಪಂಡಿತಶ್ಲಾಘನೀಯೇ॥

❑

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧೨. ಸಿದ್ಧಾಂತ ಶಿಖಾಮಣಿಯ ಸಾಹಿತ್ಯಿಕ ಮೌಲ್ಯಗಳು

- ಡಾ|| ಮಲ್ಲಿಕಾರ್ಜುನ ಪರಡ್ಡಿ

ತ್ರೈಲೋಕ್ಯಸಂಪದಾಲೇಖ್ಯಸಮುಲ್ಲೇಖನಭಿತ್ತಯೇ।
ಸಚ್ಚಿದಾನಂದರೂಪಾಯ ಶಿವಾಯ ಬ್ರಹ್ಮಣೇ ನಮಃ||

ಸಾಹಿತ್ಯ (Literature) ಎಂಬ ಪದಪ್ರಯೋಗ ವಿಶಾಲಾರ್ಥದಲ್ಲಿ ಯಾವುದೇ ರಚನೆಯ ನಿರ್ದೇಶ ಮಾಡಬಹುದು. ಆದರೆ ಅಲಂಕಾರಶಾಸ್ತ್ರದಲ್ಲಿ ಕಾವ್ಯಪರ್ಯಾಯವಾಗಿ ಈ ಪದವನ್ನು ಬಳಸಲಾಗಿದೆಯೆನ್ನಬಹುದು. (ಶಬ್ದಾರ್ಥ) ಸಾಹಿತ್ಯ ಸ್ವರೂಪವನ್ನು ದೀರ್ಘವಾಗಿ ವಿವೇಚಿಸಿದ ಕುಂತಕ ಕಾವ್ಯ ಮತ್ತು ಶಾಸ್ತ್ರಗಳ ವ್ಯತ್ಯಾಸವನ್ನು ಬಹು ಸುಂದರವಾಗಿ ವಿವರಿಸಿದ್ದಾನೆ.

ಕಟುಕೌಷಧವತ್ ಶಾಸ್ತ್ರಮವಿದ್ಯಾವ್ಯಾಧಿನಾಶನಮ್।
ಆಹ್ಲಾದಾಮೃತವತ್ ಕಾವ್ಯಮವಿವೇಕಗದಾಪಹಮ್||[1]

ಇದರಿಂದ ಸ್ಪಷ್ಟವಾಗುವುದಿಷ್ಟು : ಕಾವ್ಯ ಹಾಗೂ ಶಾಸ್ತ್ರಗಳ ಅಂತಿಮ ಗುರಿ ಅವಿವೇಕ ನಾಶ (ಉಪದೇಶ)ವಾಗಿದೆ[2]. ಆದರೆ ಮಾಧ್ಯಮ ಭಿನ್ನ ಭಿನ್ನವಾಗಿದೆ. ಆದರೆ ಈ ಮತವನ್ನೊಪ್ಪದ ಕೆಲ ಪಂಡಿತರು ಕಾವ್ಯಾಭ್ಯಾಸಕ್ಕೆ ಬಹಿಷ್ಕಾರ ಹಾಕಿರುವುದನ್ನು ಕಾಣುತ್ತೇವೆ[3]. ಈ ಆಕ್ಷೇಪಕ್ಕೆ ರಾಜಶೇಖರನು ತನ್ನ ಕಾವ್ಯ ಮೀಮಾಂಸೆಯ ಆರನೆಯ ಅಧ್ಯಾಯದಲ್ಲಿ ಸಮರ್ಪಕವಾದ ಉತ್ತರ ಕೊಟ್ಟಿದ್ದಾನೆ. 'ಅಸತ್ಯಾರ್ಥಾಭಿಧಾನಾನ್ನೋ-ಪದೇಷ್ಟವ್ಯಂ ಕಾವ್ಯಂ' ಎಂಬ ಮಾತನ್ನು ಖಂಡಿಸುತ್ತ ಅವೇ ದೋಷಗಳ ಇರುವಿಕೆಯನ್ನು ಶಾಸ್ತ್ರಗ್ರಂಥಗಳಲ್ಲಿ ತೋರಿಸುತ್ತಾನೆ[4]. ಅಸಾಧು, ಅಶ್ಲೀಲ ವರ್ಣನೆಗಳಿಂದಾಗಿ ಕಾವ್ಯಾಭ್ಯಾಸ ತ್ಯಾಜ್ಯವೆನ್ನುವವರು ಕಾವ್ಯಪ್ರಯೋಜನಗಳನ್ನು ಸರಿಯಾಗಿ ಅರಿತಿಲ್ಲವೆಂದೇ ಹೇಳಬಹುದು. 'ಸದ್ಯಃ ಪರನಿರ್ವೃತಿ' (ಕಾಲವಿಲಂಬವಿಲ್ಲದೆ ಆಗುವ ಆನಂದ) ಸಕಲ ಕಾವ್ಯ ಪ್ರಯೋಜನ ಮೂಲಭೂತವಾಗಿದ್ದರೂ, ಪ್ರಾಸಂಗಿಕವಾಗಿ ಕಾಂತಾಸಮ್ಮಿತಿಯಂತೆ ಉಪದೇಶ ಮಾಡುವುದು ಕಾವ್ಯದ ಗುರಿಯೆಂಬುದನ್ನು ಅಲ್ಲಗಳೆಯುವಂತಿಲ್ಲ. ಪ್ರಭುಸಮ್ಮಿತವಾದ ವೇದಾದಿಗಳೂ, ಮಿತ್ರಸಮ್ಮಿತವಾದ ಪುರಾಣಾದಿಗಳೂ- ಇವೆಲ್ಲಕ್ಕಿಂತ ಕಾಂತಾ-ಸಮ್ಮಿತವಾದ ಕಾವ್ಯ ಹೆಚ್ಚು ಪ್ರಯೋಜಿತವಾಗಿದೆ[5] ಅದರಲ್ಲೂ ಸುಕುಮಾರ ಮತಿಗಳ ಉಪದೇಶಕ್ಕಂತೂ ಕಾವ್ಯವೇ ಸರಿಯಾದ ಮಾಧ್ಯಮವಾಗಬಲ್ಲುದೆಂಬುದನ್ನು ಕುಂತಕನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತನ್ನ - ಧರ್ಮಾದಿಸಾಧನೋಪಾಯಃ ಸುಕುಮಾರ" ಕ್ರಮೋದಿತಃ[೬] ಎಂಬ ಕಾರಿಕೆಯಲ್ಲಿ ಸ್ಪಷ್ಟಗೊಳಿಸಿದ್ದಾನೆ. ಪಂಚತಂತ್ರಾದ್ರಿ ಹಿತೋಪದೇಶಪರವಾದ ಗ್ರಂಥಗಳ ರಚನೆಯ ಉದ್ದೇಶವೂ ಇದೇ ಆಗಿರುವುದನ್ನು ಅವಲೋಕಿಸಬಹುದು. ಇಡೀ ರಾಮಾಯಣದಲ್ಲಿ ಎಲ್ಲಿಯೂ 'ರಾಮವತ್ ವರ್ತಿತವ್ಯಂ ನ ರಾವಣಾದಿವತ್' ಎಂದು ಪ್ರತ್ಯಕ್ಷವಾಗಿ ಹೇಳದಿದ್ದರೂ ರಾಮನಂತೆ ವರ್ತಿಸಬೇಕೆಂಬ ತೀರ್ಮಾನ ಮಾಡದೇ ಇರನು. ಒಟ್ಟಾರೆ ಕಾವ್ಯದ ಗುರಿಯೂ ಶಾಸ್ತ್ರದಂತೆ ನೀತಿಬೋಧನೆಯಾಗಿದ್ದು, ಮಾಧ್ಯಮವಿಲ್ಲ ಹೆಚ್ಚು ಸುಕುಮಾರವಾಗಿರುವುದರಿಂದ ಉಪದೇಶವು ಭಾರವಾಗುವುದಿಲ್ಲ. ಕವಿಸಮಯ ಪ್ರಯೋಗದಲ್ಲಂತೂ ನೀತ್ಯುಪದೇಶ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ.

ಕಾವ್ಯಂ ಗ್ರಾಹ್ಯಂ ಅಲಂಕಾರಾತ್[೭] ಎಂಬ ಸೂತ್ರದಲ್ಲಿ ವಾಮನನು ಅಲಂಕಾರ ಪದವನ್ನು ಸೌಂದರ್ಯ ಪರ್ಯಾಯವಾಗಿ ಬಳಸಿರುವುದನ್ನು ಕಾಣುತ್ತೇವೆ. ಅದನ್ನವನು ಮುಂದಿನ ಸೂತ್ರದಲ್ಲಿ ವಿವರಿಸುತ್ತಾನೆ. ವಿಶಾಲಾರ್ಥದಲ್ಲಿ ಪ್ರಯುಕ್ತವಾದ (ಸೌಂದರ್ಯಲಂಕಾರ) ಅಲಂಕಾರ ದೋಷಹಾನಿ ಹಾಗೂ ಗುಣಾಲಂಕಾರ ಪ್ರಯೋಗದಿಂದ ಸಾಧ್ಯವೆಂಬುವನ್ನು ಯುಕ್ತಿಯುಕ್ತವಾಗಿ ವಿವರಿಸಿದ್ದಾನೆ. ತಾತ್ಪರ್ಯವಿಷ್ಟೇ, ಕಾವ್ಯವನ್ನು ಆಸ್ವಾದಿಸುವಾಗ ಗುಣ, ಅಲಂಕಾರ, ರೀತಿ, ರಸ, ಭಾವ ಮುಂತಾದ ಕಾವ್ಯಾಂಗಗಳ ಪರಿಚಯವಿರುವುದು ಅಗತ್ಯ. ಏಕೆಂದರೆ ಅವುಗಳಿಂದಾಗಿಯೇ ನೀತ್ಯುಪದೇಶವು ಸುಲಭವೂ ಸರಸವೂ ಆಗುತ್ತದೆಂಬ ವಿಷಯವು ಸಕಲವಿದಿತವಾಗಿದೆ.

ಇನ್ನು ಶಾಸ್ತ್ರಗ್ರಂಥಗಳ ರಚನೆಗೆ ಕೈ ಹಾಕಿದ ಅನೇಕ ಪಂಡಿತರು, ಪ್ರಸಂಗವಶಾತ್ ತಮ್ಮ ಕಾವ್ಯ ಪ್ರೌಢಿಮೆಯನ್ನು ಮೆರೆದಿರುವ ವಿಷಯಕ್ಕೆ ಅನೇಕ ನಿದರ್ಶನಗಳುಂಟು. ಇದಕ್ಕೊಂದೇ ಉದಾಹರಣೆ ಸಾಕು. ರಾಜಯೋಗ ಮತ್ತು ಹಠಯೋಗಗಳಲ್ಲಿಯ ಸುಂದರ ಸಮನ್ವಯವನ್ನು ಸ್ವಾತ್ಮಾರಾಮನು ಆಲಂಕಾರಿಕವಾಗಿ ಕೆಳಗಿನ ಪದ್ಯದಲ್ಲಿ ವಿವರಿಸಿದ್ದಾನೆ-

"ಶ್ರೀ ಆದಿನಾಥಾಯ ನಮೋಸ್ತು ತಸ್ಮೈ
ಯೋಗೋಪದಿಷ್ಟಾ ಹಠಯೋಗವಿದ್ಯಾ।
ವಿಭ್ರಾಜತೇ ಪ್ರೋನ್ನತರಾಜಯೋಗ-
ಮಾರೋಢುಮಿಚ್ಛೋದಧಿರೋಹಿಣೀವ॥"[೮]

ಕೆಲಸೂರಿಗಳಂತೂ ತಾವು ಶಾಸ್ತ್ರ ರಚನೆಯಲ್ಲಿ ಕಠೋರ ಮತಿಗಳಾಗಿರುವಂತೆ (ತರ್ಕೇಷು ಕರ್ಕಶಧಿಯೋ ವಯಮೇವ ನಾನ್ಯೇ) ಕಾವ್ಯ ರಚನೆಯಲ್ಲಿ ಕೋಮಲಮತಿಗಳಾಗಿರುವುದನ್ನು (ಕಾವ್ಯೇಷು ಕೋಮಲಧಿಯೋ ವಯಮೇವ ನಾನ್ಯೇ) ಅಭಿಮಾನದಿಂದ ಹೇಳಿಕೊಂಡಿರುವುದನ್ನು ನೋಡುತ್ತೇವೆ. ಆದರೆ ಸಿದ್ಧಾಂತ ಶಿಖಾಮಣಿಯ ಕರ್ತೃಗಳಾದ ಶಿವಯೋಗಿ ಶಿವಾಚಾರ್ಯರು ಈ ರೀತಿಯ ಪ್ರತಿಜ್ಞೆಯನ್ನು ಮಾಡದಿದ್ದರೂ ಮತ್ತು ಅದಕ್ಕನುಗುಣವಾಗಿ ಶಾಸ್ತ್ರ ಹಾಗೂ ಕಾವ್ಯಗ್ರಂಥಗಳೆರಡರ ರಚನೆಗೆ ಕೈ ಹಾಕದಿದ್ದರೂ, ತಮ್ಮ ಶಾಸ್ತ್ರಗ್ರಂಥದಲ್ಲಿ ಪ್ರಸಂಗವಶಾತ್ ತಮ್ಮ ಕವಿ ಪ್ರತಿಭೆಯನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವ್ಯಕ್ತ ಮಾಡುವಲ್ಲಿ ಹಿಂದೆ ಬಿದ್ದಿಲ್ಲ. ಶ್ರೀ ರೇಣುಕ ಹಾಗೂ ಅಗಸ್ತ್ಯರ ನಡುವೆ ನಡೆದ ಸಂವಾದ ರೂಪದಲ್ಲಿ ವೀರಶೈವ ಸಿದ್ಧಾಂತವನ್ನು ಶಿವಯೋಗಿಯು ಗೂಢಾರ್ಥ ವಿವರಣಾ ಸಹಿತವಾಗಿ ಸಂಗ್ರಹಿಸಿದ ಪ್ರಸಂಗ ಕೃಷ್ಣಾರ್ಜುನ ಸಂವಾದ ರೂಪದಲ್ಲಿಯ ಭಗವದ್ಗೀತೆಯನ್ನು ವಿಸ್ತರಿಸಿ ಮಹಾಭಾರತದ ಒಂದು ಅಧ್ಯಾಯ ರಚಿಸಿ ಲೋಕೋಪಕಾರ ಮಾಡಿದ ವ್ಯಾಸರನ್ನು ಸ್ಮರಣೆಗೆ ತರುತ್ತದೆ. ಗ್ರಂಥದ ಪ್ರಾರಂಭದಲ್ಲಿ ಬಂದಿರುವ ಈ ಶ್ಲೋಕವು ಬಹು ಸಮಂಜಸವಾಗಿದೆ.

> ರೇಣುಕಾಗಸ್ತ್ಯಸಂವಾದಂ ನಿಗಮಾಗಮವಿಶ್ರುತಮ್।
> ಪ್ರದೀಪಯತಿ ಗುಪ್ತಾರ್ಥಮುದ್ಧೃತ್ಯ ಶಿವಯೋಗಿರಾಟ್॥[೯]

ರೇಣುಕರೆಂಬ ಶಿವನ ಪ್ರಮಥರಲ್ಲಿ ಶ್ರೇಷ್ಠರಾದ ಒಬ್ಬರು ಸೋಮನಾಥ ಲಿಂಗದಿಂದ ಉದಯಿಸಿ ಪ್ರಥಮ ಶಿಷ್ಯರಾದ ಅಗಸ್ತ್ಯರಿಗೆ ವೀರಶೈವ ಧರ್ಮರಹಸ್ಯವನ್ನು ಅರುಹಿ ಹಾಗೂ ವಿಭೀಷಣನೆಂಬ ದ್ವಿತೀಯ ಶಿಷ್ಯನಿಗೆ ಅನುಗ್ರಹಿಸಿದರು.

ಪ್ರಸ್ತುತವಿರುವ ವಿಷಯವು ಸಿದ್ಧಾಂತ ಶಿವಾಮಣಿಯಲ್ಲಿ ಕಂಡು ಬರುವ ಕಾವ್ಯಗುಣಗಳ ವಿವೇಚನೆ. ಈ ವಿಷಯವಾಗಿ ಚರ್ಚಿಸುವಾಗ ನಾವು ಸಾಮಾನ್ಯವಾಗಿ ಗಮನಿಸ ಬೇಕಾದ ಅಂಶಗಳಿವು - ೧) ಅಲಂಕಾರ ಯೋಜನೆ, ೨) ಗುಣರೀತಿ ಪ್ರಯೋಗ, ೩) ವರ್ಣನಾಚಾತುರೀ, ೪) ಕವಿಸಮಯ ಸಮೀಕ್ಷೆ ಹಾಗೂ ೫) ರಸಾದಿಗಳ ಅಭಿವ್ಯಕ್ತಿ.

೧. **ಅಲಂಕಾರ ಯೋಜನೆ:** ಸೌಂದರ್ಯ ಪರ್ಯಾಯವಾದ ಅಲಂಕಾರಕ್ಕೆ ಕಾರಣೀಭೂತವಾದ ಉಪಮಾದಿ ಅಲಂಕಾರಗಳ ವಿವೇಚನೆಯನ್ನು ಅಲಂಕಾರ ಶಾಸ್ತ್ರಗ್ರಂಥಗಳಲ್ಲಿ ನಿರ್ದಿಷ್ಟವಾಗಿಯೂ, ನಿರ್ದುಷ್ಟವಾಗಿಯೂ ಮಾಡಿರುವುದನ್ನು ಕಾಣುತ್ತೇವೆ. ಅಲಂಕಾರಗಳಲಲ್ಲಾ ಉಪಮೆಯು ಅತ್ಯಂತ ಜನಪ್ರಿಯವೂ ಶ್ರೇಷ್ಠವೂ ಆಗಿದೆಯೆಂಬುದು ಸರ್ವಸಾಮಾನ್ಯವಾದ ಅಭಿಪ್ರಾಯ. ನಾನಾ ವೇಷಭೂಷಣಗಳಿಂದ ವಿವಿಧ ಪಾತ್ರಧಾರಿಣಿಯಾದ ನಟಿಗೆ ಉಪಮೆಯನ್ನು ಅಪ್ಪಯ್ಯ ದೀಕ್ಷಿತರು ಹೋಲಿಸಿದ್ದುಂಟು.

> "ಉಪಮೈಕಾ ಶೈಲೂಷೀ ಸಂಪ್ರಾಪ್ತಾ ಚಿತ್ರಭೂಮಿಕಾಭೇದಾನ್।
> ರಂಜಯತಿ ಕಾವ್ಯರಂಗೇ ನೃತ್ಯಂತೀ ತದ್ವಿದಾಂ ಚೇತಃ॥"[೧೦]

'ಸಾಧರ್ಮ್ಯಮುಪಮಾಭೇದೇ'[೧೧] ಎಂಬ ವ್ಯಾಖ್ಯೆಯನ್ನು ನಾವು ಸಮುಚಿತವೆಂದು ಒಪ್ಪಿದ್ದಾದರೆ, ಎರಡು ವಸ್ತುಗಳ ನಡುವಿನ ಸುಂದರವಾದ ಹೋಲಿಕೆಯೇ 'ಉಪಮೆ' ಎನ್ನಬಹುದು. ಯಾವುದೇ ಜಟಿಲವಾದ ವಿಷಯವನ್ನು ಸುಂದರವಾಗಿಯೂ ಮತ್ತು ಸುಲಭವಾಗಿಯೂ ತಿಳಿಸಲು ಉಪಮಾ ಪ್ರಯೋಗ ಪ್ರಯೋಜನಕಾರಿಯೆಂಬುದು ಸಾಮಾನ್ಯ ಅನಿಸಿಕೆ. ಇಂಥ ಉಪಮಾಲಂಕಾರ ಪ್ರಯೋಗವನ್ನು ಸಿದ್ಧಾಂತ ಶಿಖಾಮಣಿಯಲ್ಲಿ ಯಾವ ರೀತಿ ಮಾಡಲಾಗಿದೆಯೆಂದೀಗ ನೋಡೋಣ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಶಿವಯೋಗಿ ಎಂದು ಪ್ರಸಿದ್ಧಿ ಪಡೆದ ಪುತ್ರರತ್ನವು, ಸಿದ್ಧನಾಥಾಚಾರ್ಯನಿಗೆ ಜನಿಸಿದ್ದನ್ನು (ಕ್ಷೀರ) ಸಾಗರದಿಂದ ಉದಯಿಸಿದ ಚಂದ್ರನಿಗೆ ಹೋಲಿಸಿದ್ದು ಔಚಿತ್ಯಪೂರ್ಣವಾಗಿದೆ".

ತಸ್ಯ ವೀರಶಿವಾಚಾರ್ಯಶಿಖಾರತ್ನಸ್ಯ ನಂದನಃ।
ಅಭವತ್ ಶಿವಯೋಗೀತಿ ಸಿಂಧೋರಿವ ಸುಧಾಕರಃ॥[೧೨]

ವೈವಸ್ವತ ಮನು ಜನಿಸಿದ ಸೂರ್ಯವಂಶದಲ್ಲಿ ದಿಲೀಪ ಮಹಾರಾಜನು ಜನಿಸಿದ್ದನ್ನು ಸಮುದ್ರದಿಂದ ಚಂದ್ರ ಹುಟ್ಟಿದ್ದಕ್ಕೆ ಕವಿ ಕುಲಗುರು ಕಾಳಿದಾಸ ಹೋಲಿಸಿದ್ದನ್ನು ನಾವಿಲ್ಲಿ ಸ್ಮರಿಸಬಹುದು.

ತದನ್ವಯೇ ಶುದ್ಧಮತಿಪ್ರಸೂತಃ ಶುದ್ಧಮತ್ಸರಃ।
ದಿಲೀಪ ಇತಿ ರಾಜೇಂದುರಿಂದುಃ ಕ್ಷೀರನಿಧಾವಿವಃ॥[೧೩]

ನಾಭಿ ಪ್ರದೇಶದವರೆಗೆ ಇಳಿಬಿದ್ದಿರುವ ಹೊಸ ಮುತ್ತಿನಮಾಲೆಯಿಂದ ಅಲಂಕೃತನಾದ ಶಿವನು ಜಟೆಯಿಂದ ನಾಭಿಯ ಕಡೆಗೆ ಹರಿಯುತ್ತಿರುವ ಗಂಗೆಯಿಂದ ವಿಭೂಷಿತನಾಗಿರುವಂತೆ ತೋರಿರುವುದನ್ನು ಬಹು ಸುಂದರವಾಗಿ ವರ್ಣಿಸಲಾಗಿದೆ.

ನಾಭಿಸ್ಥಾನಾವಲಂಬಿನ್ಯಾ ನವಮೌಕ್ತಿಕಮಾಲಯಾ।
ಗಂಗಯೈವ ಕೃತಾಶ್ಲೇಷಂ ಮೌಲಭಾಗಾವತೀರ್ಣಯಾ॥[೧೪]

ಈ ಎರಡು ಉದಾಹರಣೆಗಳಲ್ಲಿ ಉಪಮಾ ದೋಷಗಳು[೧೫] ಇಲ್ಲದಿರುವುದನ್ನು ಗಮನಿಸಬೇಕು. ಲಿಂಗಭೇದ, ವಚನಭೇದವೆಂದೆರಡು ಸಾಮಾನ್ಯ ದೋಷಗಳ ಅಭಾವವನ್ನು ಅವಲೋಕಿಸಿದಾಗ ಗ್ರಂಥಕರ್ತೃವಿನ ಉಪಮಾ ಪ್ರಯೋಗ ನೈಪುಣ್ಯ ಹಾಗೂ ಔಚಿತ್ಯವ್ಯಕ್ತವಾಗುತ್ತವೆ. ಅಲಂಕಾರ ಪ್ರಯೋಗ ಬಹು ಆಹ್ಲಾದಕರವಾಗಿದೆ ಎಂಬುದು ಸ್ವಯಂವೇದ್ಯ. ಮೊದಲನೆಯ ಉದಾಹರಣೆಯಲ್ಲಿ ಉಪಮೇಯವಾದ ವೀರಶಿವಾಚಾರ ಶಿಖಾರತ್ನವಾದ ಸಿದ್ಧನಾಥಾಚಾರ್ಯ ಹಾಗೂ ಆತನ ಕುಮಾರನಾದ ಶಿವಯೋಗಿ ಇಬ್ಬರೂ ಪುಲ್ಲಿಂಗ ಏಕವಚನದಲ್ಲಿದ್ದು ಅವರ ಉಪಮಾನಗಳಾದ (ಅನುಕ್ರಮವಾಗಿ) ಸಿಂಧು ಹಾಗೂ ಸುಧಾಕರರು ಸಹ ಪುಲ್ಲಿಂಗ ಏಕವಚನದಲ್ಲಿರುವುದು ಔಚಿತ್ಯಪೂರ್ಣವಾಗಿದೆ. ಅದೇ ರೀತಿ ದ್ವಿತೀಯ ಉದಾಹರಣೆಯಲ್ಲಿ ಉಪಮೇಯವಾದ ಮುತ್ತಿನ ಮಾಲೆ ಹಾಗೂ ಉಪಮಾನವಾದ ಗಂಗೆ ಎರಡೂ ಸ್ತ್ರೀಲಿಂಗ ಏಕವಚನದಲ್ಲಿರುವುದು ಸಮಂಜಸವಾಗಿದೆ.

ವಲ್ಕಲಧಾರಿಗಳೂ, ನಾನಾನಿಯಮಪಾಲಕರೂ ಆದ ಮುನಿಗಳಿಂದ ಸುತ್ತುವರಿಯಲ್ಪಟ್ಟ ಅಗಸ್ತ್ಯ ಮಹರ್ಷಿಯನ್ನು ಪ್ರಮಥರಿಂದ ಕೂಡಿದ ಶಂಕರನಿಗೆ ಸಮುಚಿತವಾಗಿ ಹೋಲಿಸಲಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನವವಲ್ಕಲವಾಸೋಭಿಃ ನಾನಾನಿಯಮಧಾರಿಭಿಃ।
ಪರಿವೀತಂ ಮುನಿಗಣ್ಯೈಃ ಪ್ರಮಥೈರಿವ ಶಂಕರಮ್॥[೧೬]

ಶಿವಜ್ಞಾನದಿಂದ ದೊರೆತ ಸ್ಥಿರವೈರಾಗ್ಯದಿಂದ ಕೂಡಿದ ಶಿವಭಕ್ತನು ತನ್ನ ಕರ್ಮದ ಲೇಪನ ಹೊಂದದೆ ಇರುವ ಸ್ಥಿತಿಯನ್ನು ಪದ್ಮಪತ್ರವು ನೀರಿನಿಂದ ತೋಯದಿರುವುದಕ್ಕೆ ಹೋಲಿಸಿದ್ದು ಅತ್ಯಂತ ಸಮಂಜಸವೆನಿಸುತ್ತದೆ-

ಶಿವಜ್ಞಾನಸಮಾಪನ್ನಸ್ಥಿರವೈರಾಗ್ಯಲಕ್ಷಣಃ।
ಸ್ವಕರ್ಮಣಾ ನ ಲಿಪ್ಯೇತ ಪದ್ಮಪತ್ರಭವಾಂಭಸಾ॥[೧೭]

ಕಮಲದೆಲೆಯು ನೀರಿಗೆ ಅಂಟುವುದಿಲ್ಲವೆನ್ನುವಂತೆ ಬೇರೆಡೆ ನೀರೇ ಕಮಲಪತ್ರಕ್ಕೆ ಅಂಟುವುದಿಲ್ಲವೆಂದು ಹೇಳಲಾಗುತ್ತದೆ. 'ಪದ್ಮಪತ್ರಸ್ಥಿತಂ ಜಲಮ್॥'

(ಭಕ್ತಿ) ಭಾವಹೀನವಾದ ಕ್ರಿಯೆಯು ಅರ್ಥಹೀನವಾದ ವಾಣಿಯಂತೆಯೂ ಪತಿಹೀನಳಾದ ಸತಿಯಂತೆಯೂ, ಶ್ರುತಿ (ವೇದ ವಿದ್ಯಾ) ಹೀನವಾದ ಬುದ್ಧಿಯಂತೆಯೂ ನಿಷ್ಫಲವೆಂಬುದನ್ನು ಮಾಲೋಪಮೆಯ ಸಹಾಯದಿಂದ ಬಹು ಸುಂದರವಾಗಿ ವಿವರಿಸಲಾಗಿದೆ -

ಅರ್ಥಹೀನಾ ಯಥಾ ವಾಣೀ ಪತಿಹೀನಾ ಯಥಾ ಸತೀ।
ಶ್ರುತಿಹೀನಾ ಯಥಾ ಬುದ್ಧಿಃ ಭಾವಹೀನಾ ತಥಾ ಕ್ರಿಯಾ॥[೧೮]

ರೂಪಕ : "ಉಪಮೈವ ತಿರೋಭೂತಭೇದಾ ರೂಪಕಮುಚ್ಯತೇ।" ಎಂಬಂತೆ ಸಾಧರ್ಮ್ಯದ ಅತಿಶಯದಿಂದಾಗಿ ಭೇದವಳಿದ (condensed simile) ಉಪಮೆಯೇ ರೂಪಕವೆನ್ನಬಹುದು. ಈ ಅಲಂಕಾರದ ಭೇದೋಪಭೇದಗಳ ವಿವೇಚನೆಗೆ ಕೈ ಹಾಕದೆ ರೂಪಕದ ಕೆಲ ಉದಾಹರಣೆಗಳ ಔಚಿತ್ಯವನ್ನೀಗ ಪರೀಕ್ಷಿಸೋಣ:

ತ್ರೈಲೋಕ್ಯದ ಸಂಪತ್ತೆಂಬ ಸುಂದರವಾದ ಚಿತ್ರವನ್ನು ಬಿಡಿಸಲು ಅನುಕೂಲವಾದ ಭಿತ್ತಿ (ಗೋಡೆ =canvas) ಎಂದು ಶಿವನನ್ನು ಸೂಚಿಸಿದ್ದು, ಗ್ರಂಥ ಪ್ರಾರಂಭದಲ್ಲಿಯೇ ರೂಪಕಾಲಂಕಾರದ ಸುಂದರ ಉದಾಹರಣೆಯನ್ನು ಕೊಟ್ಟಿದ್ದಾನೆ. ಆ ಪರಮಾದ್ಭುತವಾದ ದೃಶ್ಯವನ್ನು ನಮ್ಮ ಮನಃಚಕ್ಷುವಿನ ಎದುರು ನಿಲ್ಲಿಸಲು ಇದರಿಂದ ಸಾಧ್ಯವಾಗಿದೆ.

ತ್ರೈಲೋಕ್ಯಸಂಪದಾಲೇಖ್ಯಸಮುಲ್ಲೇಖನಭಿತ್ತಯೇ।
ಸಚ್ಚಿದಾನಂದರೂಪಾಯ ಶಿವಾಯ ಬ್ರಹ್ಮಣೇ ನಮಃ॥[೧೯]

ಇದೇ ಅಭಿಪ್ರಾಯದ ಬಾಣನ ಶ್ಲೋಕವೊಂದು ಸಾಹಿತ್ಯ ಜಗತ್ತಿನಲ್ಲೆಲ್ಲಾ ಪ್ರಸಿದ್ಧವಾಗಿರುವುದನ್ನು ಇಲ್ಲಿ ಸ್ಮರಿಸಬಹುದು:

ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ।
ತ್ರೈಲೋಕ್ಯನಗರಾರಂಭಮೂಲಸ್ತಂಭಾಯ ಶಂಭವೇ॥[೨೦]

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಾಣನು ತ್ರೈಲೋಕ್ಯದಲ್ಲಿ ನಗರಾರೋಪವನ್ನು (ಅಭೇದವನ್ನೂ) ಶಂಭುವಿನಲ್ಲಿ ಮೂಲಸ್ತಂಭದ ಅಭೇದವನ್ನು ಮಾಡಿರುವಂತೆ ಶಿವಯೋಗಿ ಶಿವಾಚಾರ್ಯರು ತ್ರೈಲೋಕ್ಯ ಸಂಪದದಲ್ಲಿ ಸಮುಲ್ಲೇಖನ ಚಿತ್ರದ ಅಭೇದವನ್ನು, ಶಿವನಲ್ಲಿ ಭಿತ್ತಿಯ ಅಭೇದವನ್ನು ಮಾಡಿರುವ ಔಚಿತ್ಯವನ್ನು ನಾವು ಪ್ರಶಂಸಿಸಲೇಬೇಕು. ಪ್ರಣವ ಸಹಿತವಾದ ಪಂಚಾಕ್ಷರೀ ಮಂತ್ರದ ಜಪದಿಂದ ಮೋಕ್ಷಲಕ್ಷ್ಮಿಯ ಪ್ರಾಪ್ತಿ ಸುಲಭಸಾಧ್ಯವೆಂಬುದನ್ನು ರೂಪಕಾಲಂಕಾರದ ಸಹಾಯದಿಂದ ಬಹು ಸುಂದರವಾಗಿ ವಿವರಿಸಲಾಗಿದೆ:

ಕಿಮಿಹ ಬಹುಭಿರುಕ್ತೈಃ ಮಂತ್ರಮೇವಂ ಮಹಾತ್ಮಾ
ಪ್ರಣವಸಹಿತಮಾದೌ ಯಸ್ತು ಪಂಚಾಕ್ಷರಾಖ್ಯಮ್।
ಜಪತಿ ಪರಮಭಕ್ತ್ಯಾ ಪೂಜಯನ್ ದೇವದೇವಂ
ಸ ಗತದುರಿತಬಂಧೋ ಮೋಕ್ಷಲಕ್ಷ್ಮೀಂ ಪ್ರಯಾತಿ॥[೨೧]

ಶಿವೈಕ್ಯವೆಂಬ ವಡವಾನಲದಲ್ಲಿ ಮಾಯಾಸಿಂಧುಲಯವಾಗುವುದನ್ನು ಬಹು ಮಾರ್ಮಿಕವಾಗಿ ವರ್ಣಿಸಿದ ಪದ್ಯ ಈ ರೀತಿ ಇದೆ-

ಬ್ರಹ್ಮಾಂಡಬುದ್ಬುದೋದ್ಭೇದವಿಜೃಂಭೀ ತತ್ತ್ವವೀಚಿಮಾನ್।
ಮಾಯಾಸಿಂಧುರ್ಲಯಂ ಯಾತಿ ಶಿವೈಕ್ಯವಡವಾನಲೇ॥[೨೨]

ಮುಕ್ತಿಯೆಂಬ ರಾತ್ರಿಯಲ್ಲಿ ಚಿದ್ರೂಪಾಕಾಶದಲ್ಲಿ ಜ್ಞಾನಚಂದ್ರನಿಂದ ಹೊರಬೀಳುವ ಪರಮಾನಂದ ಚಂದ್ರಿಕೆಯನ್ನು ಮಹಾಜ್ಞಾನಿಗಳು ಕಾಣುತ್ತಾರೆಂಬ ವಿಷಯವನ್ನು ಬಹು ಮನೋಹರವಾಗಿ ಉಲ್ಲೇಖಿಸಲಾಗಿದೆ-

ಜ್ಞಾನಚಂದ್ರಸಮುದ್ಭೂತಾಂ ಪರಮಾನಂದಚಂದ್ರಿಕಾಮ್।
ಪಶ್ಯಂತಿ ಪರಮಾಕಾಶೇ ಮುಕ್ತಿರಾತ್ರೌ ಮಹಾಧಿಯಃ॥[೨೩]

ಶಿವಭಕ್ತಿಯೆಂಬ ಸುಧಾಸಾಗರದಲ್ಲಿ ಭರತಿಯನ್ನುಂಟು ಮಾಡುವ ಚಂದ್ರಿಕೆಯಾದ (ಶಿವಯೋಗಿಯ) ಕುವಲಯ (ಭೂಮಿ-ನೀಲ ಕಮಲ) ಕ್ಕೆ ಉತ್ಸವವನ್ನುಂಟು ಮಾಡುತ್ತಿದ್ದಿತೆಂಬಲ್ಲಿಯ ಶ್ಲೇಷ ಸಹಿತವಾದ ರೂಪಕ ಅತ್ಯಂತ ರಮ್ಯವಾಗಿದೆ.

ಶಿವಭಕ್ತಿಸುಧಾಸಿಂಧುಜೃಂಭಣಾಮಲಚಂದ್ರಿಕಾ।
ಭಾರತೀ ಯಸ್ಯ ವಿದಧೇ ಪ್ರಾಯಃ ಕುವಲಯೋತ್ಸವಮ್॥[೨೪]

ಪರಿಕರಾಲಂಕಾರ : "ಸಾಭಿಪ್ರಾಯೇ ವಿಶೇಷಣೇ" (ಕುವಲಯಾನಂದ, ೬೩) ಎಂಬಂತೆ ಅರ್ಥಗರ್ಭಿತವಾದ ವಿಶೇಷಣಗಳಿಂದ ಕೂಡಿಕೊಂಡಿದ್ದರೆ ಅದು ಪರಿಕರಾಲಂಕಾರವಾಗುತ್ತದೆ. ಪಂಡಿತನು ರಮಿಸದೇ ಇರುವ ಶರೀರದ ಕ್ಷಣಭಂಗುರತ್ವ ಮತ್ತು ಮಲಾಧಿಕ್ಯವನ್ನು ಕೆಳಗಿನ ಶ್ಲೋಕದಲ್ಲಿ ಬಹು ಪರಿಣಾಮಕಾರಿಯಾಗಿ ವಿವರಿಸಲಾಗಿದೆ-

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಲಕೋಶೇ ಶರೀರೇಽಸ್ಮಿನ್ ಮಹಾದುಃಖವಿವರ್ಧನೇ।
ತಡಿದಂಕುರಸಂಕಾಶೇ ಕೋ ವಾ ಮೋದೇತ ಪಂಡಿತಃ॥[೨೫]

ಇದೇ ಅಭಿಪ್ರಾಯದ ಒಂದು ಪದ್ಯ ಶ್ರೀಹರ್ಷನ 'ನಾಗಾನಂದ' ನಾಟಕದಲ್ಲಿ ಕಂಡುಬರುತ್ತದೆ-

ಸರ್ವಾಶುಚಿನಿಧಾನಸ್ಯ ಕೃತಘ್ನಸ್ಯ ವಿನಾಶಿನಃ।
ಶರೀರಕಸ್ಯಾಪಿ ಕೃತೇ ಮೂಢಾಃ ಪಾಪಾನಿ ಕುರ್ವತೇ॥[೨೬]

ಪ್ರತಿವಸ್ತೂಪಮಾ : 'ವಾಕ್ಯಯೋರೇಕ ಸಾಮಾನ್ಯೇ' (ಕುವಲಯಾನಂದ, ಪುಟ ೬೩) ಎಂಬ ವ್ಯಾಖ್ಯೆಯಂತೆ ಉಪಮಾನೋಪಮೇಯ ವಾಕ್ಯಗಳಲ್ಲಿಯ ಸಾಮಾನ್ಯ ಧರ್ಮ ಭಿನ್ನ ಪದಗಳಿಂದ ಎರಡು ಬೇರೆ ಬೇರೆ ವಾಕ್ಯಗಳಲ್ಲಿ ನಿರ್ದೇಶಿಸಲ್ಪಡುತ್ತದೆ.

ಶ್ರುತ್ಯಾದಿ ಪ್ರಮಾಣಗಳಿಂದ ಸಾಕ್ಷಾತ್ ಶಿವನೇ ನಮ್ಮ ಅನುಭವಕ್ಕೆ ಬರುತ್ತಿರುವಾಗ ಅನ್ಯ ದೇವತೆಯನ್ನು ಯಾರು ತಾನೇ ಬಯಸುತ್ತಾರೆ? ಮಹತ್ತರವಾದ ಸಂಪತ್ತು ಹಸ್ತಗತವಾಗಿರಲು ಕಾಚನ್ನು ಯಾರು ಯಾಚಿಸುತ್ತಾರೆ? ಎಂಬಲ್ಲಿ ಈ ಅಲಂಕಾರದ ಸುಂದರವಾದ ಉದಾಹರಣೆಯನ್ನು ಕಾಣಬಹುದು.

ಪರಿಜ್ಞಾತೇ ಶಿವೇ ಸಾಕ್ಷಾತ್ ಕೋ ವಾನ್ಯಮಭಿಕಾಂಕ್ಷತಿ।
ನಿಧಾನೇ ಮಹತಿ ಪ್ರಾಪ್ತೇ ಕಃ ಕಾಚಂ ಯಾಚತೇಽನ್ಯತಃ॥[೨೭]

ಶಿವಯೋಗಿ ಶಿವಾಚಾರ್ಯರು ಮುಂದುವರೆದು ಹೀಗೆ ಹೇಳುತ್ತಾರೆ. ಶಿವಾನಂದವನ್ನು ಹೊಂದಿರುವ ವ್ಯಕ್ತಿಯು ಬೇರೊಂದನ್ನು ಬಯಸುತ್ತಾನೆಯೇ? ಗಂಗಾಮೃತವು ಲಭ್ಯವಾಗಿರಲು ಮೃಗಜಲವನ್ನು ಬಯಸುವ ವ್ಯಕ್ತಿ ಇದ್ದಾನೆಯೇ? ಎಂದು ಪ್ರಶ್ನಿಸುವಲ್ಲಿಯ ಈ ಅಲಂಕಾರದ ಔಚಿತ್ಯಪೂರ್ಣವಾದ ಪ್ರಯೋಗವನ್ನು ಕಾಣುತ್ತೇವೆ-

ಶಿವಾನಂದಂ ಸಮಾಸಾದ್ಯ ಕೋ ವಾಽನ್ಯಮುಪತಿಷ್ಠತೇ।
ಗಂಗಾಮೃತಂ ಪರಿತ್ಯಜ್ಯ ಕಃ ಕಾಂಕ್ಷೇತ್ ಮೃಗತೃಷ್ಣಿಕಾಮ್॥[೨೮]

ವೈಧರ್ಮ್ಯದಿಂದಲೂ ಪ್ರತಿವಸ್ತೂಪಮೆ ಸಾಧ್ಯವಾಗುತ್ತಿದ್ದು ಕೆಳಗಿನ ಶ್ಲೋಕ ಇದರ ಒಂದು ಸುಂದರ ಉದಾಹರಣೆಯಾಗಿದೆ-

ಗುರುದೇವಃ ಪರಂ ತತ್ತ್ವಂ ಪ್ರಕಾಶಯತಿ ದೇಹಿನಾಮ್।
ಕೋ ವಾ ಸೂರ್ಯಂ ವಿನಾ ಲೋಕೇ ತಮಸೋ ವಿನಿವರ್ತತೇ॥[೨೯]

ಗುರುದೇವನೊಬ್ಬನೇ ಪರಮತತ್ತ್ವವನ್ನು ಜನರಿಗೆ ತಿಳಿಸಲು ಸಮರ್ಥನಾಗುತ್ತಾನೆ. ಸೂರ್ಯನನ್ನುಳಿದು ಬೇರೆ ಯಾರು ತಾನೆ ಕತ್ತಲನ್ನು ಹೋಗಲಾಡಿಸಲು ಸಮರ್ಥರಾದರು?

ಶಬ್ದಾಲಂಕಾರಗಳ ಉಪಯೋಗವನ್ನು ಸಿದ್ಧಾಂತ ಶಿಖಾಮಣಿಯಲ್ಲಿ ಅನಾಯಾಸವಾಗಿ, ಔಚಿತ್ಯಪೂರ್ಣವಾಗಿ ಅಲ್ಲಲ್ಲಿ ಕಾಣುತ್ತೇವೆ. ಧ್ವನಿ ಕಾವ್ಯದಲ್ಲಿ ಅಲಂಕಾರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಯೋಗಕ್ಕಾಗಿ ಆನಂದವರ್ಧನನು ಹೇಳಿರುವ ನಿಯಮಗಳನ್ನು ಅನುಸರಿಸಿಯೇ ಅಲಂಕಾರಗಳ ಪ್ರಯೋಗವು ನಡೆದಿರುವಂತೆ ತೋರುತ್ತದೆ. ಉದಾಹರಣೆಗೆ ಆನಂದವರ್ಧನ ಹೇಳುವಂತೆ-

"ಅಪೃಥಗ್ ಯತ್ನ ನಿರ್ವೃತ್ಯಃ"[೩೦] ಹೆಚ್ಚಿನ ಪರಿಶ್ರಮವಿಲ್ಲದೆ ಉಪಯುಕ್ತವಾಗುವ ಅಲಂಕಾರವೇ ನಿಜವಾದ ಅಲಂಕಾರವೆನ್ನುತ್ತಾನೆ.

ಸಿದ್ಧಾಂತ ಶಿಖಾಮಣಿಯಲ್ಲಿಯೂ ಅರ್ಥಾಲಂಕಾರಗಳಂತೆಯೇ ಶಬ್ದಾಲಂಕಾರಗಳು ಸಹ ಸಹಜ ಸುಂದರವಾಗಿ ಬಳಸಲ್ಪಟ್ಟಿರುವುದನ್ನು ಕಾಣುತ್ತೇವೆ -

'ಕಾಲಿಮ್ನಾ ಕಾಲಕೂಟಸ್ಯ ಕಂಠನಾಲೇ ಕಲಂಕಿತಮ್'[೩೧] ಎಂಬ ಶ್ಲೋಕಾರ್ಧದಲ್ಲಿ 'ಕ' ವರ್ಣದ (ಸ್ವಲ್ಪಾಂತರದಿಂದ ಕೂಡಿದ) ಆವೃತ್ತಿಯು ಶ್ರುತಿಪೇಶಲವಾಗಿದೆ. ಅಷ್ಟೇ ಅಲ್ಲ ಮನೋಹರವೂ ಆಗಿದೆ ಎಂಬುದನ್ನು ನಾವು ಕಾಣದೇ ಇರೆವು.

"ಜ್ಯೋತಿರ್ಲಿಂಗಾನುಸಂಧಾನಮಾಂತರಂ ಲಿಂಗಧಾರಣಮ್"[೩೨] ಎಂಬಲ್ಲಿ ಪ್ರಯುಕ್ತವಾದ ಅನುಸ್ವಾರದ ಆವೃತ್ತಿ ಹೃದಯಾಹ್ಲಾದಕರವಾಗಿದೆ ಎಂಬುದು ಸಹೃದಯ ಹೃದಯ ಸವೇದ್ಯವಾಗಿದೆ. ಈ ರೀತಿ-ಅರ್ಥಾಲಂಕಾರಗಳಂತೆಯೇ ಶಬ್ದಾಲಂಕಾರಗಳೂ ಸಹ ಸಿದ್ಧಾಂತ ಶಿಖಾಮಣಿಯಲ್ಲಿ ಹೆಚ್ಚಿನ ಪ್ರಯಾಸವಿಲ್ಲದೆ ಸಹಜ ಸುಂದರವಾಗಿ ಉಪಯೋಗಿಸಲ್ಪಟ್ಟಿರುವುದನ್ನು ಕಾಣುತ್ತೇವೆ.

ಗುಣಗಳು ಮತ್ತು ರೀತಿ :- "ವಿಶಿಷ್ಟ ಪದರಚನಾ ರೀತಿಃ, ವಿಶೇಷೋ ಗುಣಾತ್ಮಾ"[೩೩] ಎಂಬಂತೆ ಶಬ್ದಗಳ ವಿಶಿಷ್ಟವಾದ ರಚನೆಯನ್ನು ರೀತಿಯೆಂದು ಕರೆಯಲಾಗಿದ್ದು, ರೀತಿ ನಿರ್ಣಯಕ್ಕೆ ಗುಣಗಳೇ ಕಾರಣೀಭೂತವಾಗಿವೆ. ವಾಮನನ ಈ ಉಕ್ತಿಯನ್ನು ಒಪ್ಪಿದ್ದಾದರೆ ಸಿದ್ಧಾಂತ ಶಿಖಾಮಣಿಯಲ್ಲಿ ಅತಿ ಸರಳವೂ ಮತ್ತು ಸುಂದರವೂ ಆದ ವೈದರ್ಭೀ ಅಥವಾ ಸುಕುಮಾರ ಮಾರ್ಗವನ್ನು ಕಾಣಬಹುದು. ಶಾಸ್ತ್ರ ಗ್ರಂಥದ ವಿಷಯ ನಿರ್ದಿಷ್ಟ ಹಾಗೂ ನಿರ್ದುಷ್ಟವಾಗಿರುವುದರ ಜೊತೆಗೆ ನಿಃಸಂದಿಗ್ಧತೆ, ಸ್ಫುಟತೆ ಇರಬೇಕಾದುದು ಅನಿವಾರ್ಯ. ವರ್ಣನಾದಿಗಳನ್ನು ಪ್ರಸಂಗಗಳಲ್ಲಿ ಮಾತ್ರ ಸಬ್ದಾಡಂಬರ ಅಲಂಕಾರಗಳ ವೈಭವವನ್ನು ಕಾಣಬಹುದೇ ಹೊರತು ಶಾಸ್ತ್ರ ಚರ್ಚೆಯ ಸಂದರ್ಭದಲ್ಲಿ ನೇರ ನುಡಿ ಗ್ರಂಥಕಾರನು ಅನುಸರಿಸಬೇಕಾದ ಮಾರ್ಗವಾಗಿದೆ. ವಸ್ತು ಸ್ಥಿತಿ ಹೀಗಿರುವಾಗ ಗುಣವಿವೇಚನೆಯು ಗೌಣವೆನಿಸುತ್ತದೆಯಲ್ಲವೇ?

ಸಂಸಾರ ವಿಷವೃಕ್ಷಸ್ಯ ಪಂಚಕ್ಲೇಶಪಲಾಶಿನಃ।
ಛೇದನೇ ಕರ್ಮಮೂಲಸ್ಯ ಪರಶುಃ ಶಿವಭಾವನಾ॥[೩೪]

ಸುಲಭವಾಗಿ ಅರ್ಥವಾಗುವ ಮತ್ತು ಅಷ್ಟೇ ಸುಂದರವಾದ ಈ ಶ್ಲೋಕದಲ್ಲಿಯ ಸುಲಭ ಶೈಲಿ (ನೇರ ನುಡಿಯಿಂದಾಗಿ) ಬಹು ಔಚಿತ್ಯಪೂರ್ಣವಾಗಿದೆ. ರಚನೆಯಲ್ಲಿಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿಥಿಲತಾಭಾವ ಅಥವಾ ಗಾಢ ಬಂಧುತ್ವ ಓಜೋ ಗುಣ, ಕ್ವಚಿತ್ ಶಿಥಿಲತೆ (ಪ್ರಸಾದ ಗುಣ), ಮಾರ್ಗಾಭೇದ (ಸಮತೆ) ಮತ್ತು ಪೃಥಕ್ ಪದಗಳ ಜೋಡಣೆ (ಮಾಧುರ್ಯ) ಇವೇ ಮೊದಲಾದ ಗುಣಗಳ ಇರುವಿಕೆಯನ್ನು ಕಾಣಬಹುದಾಗಿದ್ದು ಅವುಗಳ ಉದಾಹರಣೆಗಳು ಭೂಯಿಷ್ಠವಾಗಿವೆ. ಅವುಗಳ ಉಲ್ಲೇಖ ಅವಶ್ಯವಿಲ್ಲ.

ಭಾವ ಧ್ವನಿ :- ಶಾಸ್ತ್ರ ಗ್ರಂಥವಾದ್ದರಿಂದ ಗ್ರಂಥದಲ್ಲಿ ರಸಾದಿ ಪರಿಪೋಷಣೆಗೆ ಅವಕಾಶವಿಲ್ಲದಿದ್ದರೂ ಅಲ್ಲಲ್ಲಿ ಭಕ್ತಿ ಮುಂತಾದ ಭಾವಗಳ ದ್ಯೋತನ ಸಮಂಜಸವಾಗಿ ಬಂದಿದೆ. ಕೆಲ ಉದಾಹರಣೆಗಳು ಈ ಮಾತನ್ನು ಪುಷ್ಟೀಕರಿಸಬಲ್ಲವು.

ಸ್ವೇಚ್ಛಾ ವಿಗ್ರಹಧಾರಿಯೂ, ಸ್ವೇಚ್ಛೆಯಿಂದ ತ್ರಿಲೋಕ ನಿರ್ಮಾತೃವೂ ಆದ ಸಾಂಬನಿಗೆ ಸಲ್ಲಿಸುವ ನಮಸ್ಕಾರದಲ್ಲಿ ಲೇಖಕನ ಮನಸ್ಸಿನಲ್ಲಿನ ಶಿವಭಕ್ತಿಯು ಧ್ವನಿತವಾಗುತ್ತಿದ್ದು, ಭಾವ ಧ್ವನಿಯ ಒಂದು ಸುಂದರ ಉದಾಹರಣೆಯನ್ನು ಕಾಣಬಹುದು.

ಸ್ವೇಚ್ಛಾವಿಗ್ರಹಯುಕ್ತಾಯ ಸ್ವೇಚ್ಛಾವರ್ತನವರ್ತಿನೇ।
ಸ್ವೇಚ್ಛಾಕೃತತ್ರಿಲೋಕಾಯ ನಮಃ ಸಾಂಬಾಯ ಶಂಭವೇ॥[೩೫]

ಮುಕ್ತಿಗಾಗಿ ಶರಣಾಗತರಾದ ಭಕ್ತರಿಗೆ ತತ್ತ್ವಜ್ಞಾನ (ಸಂಬಂಧಿಯಾದ) ವಿದ್ಯೆಯನ್ನು ದಯಪಾಲಿಸುವ ಹಾಗೂ ಶಿವವಲ್ಲಭೆಯಾದ ಶಕ್ತಿಗೆ ನಮಸ್ಕರಿಸುವಲ್ಲಿಯೂ ಇದೇ ರೀತಿಯ ಭಕ್ತಿ ಭಾವವು ವ್ಯಕ್ತವಾಗುತ್ತದೆ.

ಅಮೃತಾರ್ಥಂ ಪ್ರಪನ್ನಾನಾಂ ಯಾ ಸುವಿದ್ಯಾಪ್ರದಾಯಿನೀ।
ಅಹರ್ನಿಶಮಹಂ ವಂದೇ ತಾಮೀಶಾನಮನೋರಮಾಮ್॥[೩೬]

ಶಿವನ ಜೊತೆ ಸುಖಾಸೀನಳಾದ ಅವನ ಅರ್ಧಾಂಗಿ ಪಾರ್ವತಿದೇವಿಯ ವರ್ಣನೆಯಲ್ಲಿ ಶೃಂಗಾರ ರಸದ ಛಾಯೆಯು ಅಸ್ಫುಟವಾಗಿಯಾದರೂ ಕಂಡು ಬರುತ್ತಿದ್ದು, ಕ್ಷಣಕಾಲ ಕಾಳಿದಾಸನ ಕುಮಾರಸಂಭವದಲ್ಲಿ ಪಾರ್ವತಿಯ ವರ್ಣನೆಯ ಸ್ಮರಣೆಯನ್ನುಂಟು ಮಾಡದೇ ಇರದು.

ಸ್ಥಿರಯೌವನಲಾವಣ್ಯಶೃಂಗಾರಿತಶರೀರಯಾ।
ಅತ್ಯಂತಕಠಿಣೋತ್ತುಂಗಪೀವರಸ್ತನಭಾರಯಾ॥[೩೭]

ಇದೇ ಅಭಿಪ್ರಾಯದ ನುಡಿಯನ್ನು ಕುಮಾರಸಂಭವದ ಇನ್ನೊಂದೆಡೆಯಲ್ಲಿ ಕಾಣಬಹುದು-

ಅನ್ಯೋನ್ಯಮುತ್ಪೀಡಯದುತ್ಪಲಾಕ್ಷ್ಯಾಃ।
ಸ್ತನದ್ವಯಂ ಪಾಂಡು ತಥಾ ಪ್ರಬುದ್ಧಮ್।
ಮಧ್ಯೇ ಯಥಾ ಶ್ಯಾಮಮುಖಸ್ಯ ತಸ್ಯ
ಮೃಣಾಲಪತ್ರಾಂತರಮಪ್ಯಲಭ್ಯಮ್॥[೩೮]

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವರ್ಣನಾ ವೈಖರೀ : 'ವರ್ಣನಾ ನಿಪುಣಃ ಕವಿಃ' ಎಂಬಂತೆ ಸುಂದರ ವರ್ಣನಾ ಕೌಶಲವಿಲ್ಲದವನು ಕವಿಯಲ್ಲವೆಂಬುದು ಸಾಮಾನ್ಯ ನಿಯಮ. ಸುದೈವದಿಂದ ವರ್ಣನಾ ಪ್ರಸಂಗಗಳನ್ನು ಶಿವಯೋಗಿ ಶಿವಾಚಾರ್ಯರು ವ್ಯರ್ಥಗೊಳಿಸಿಲ್ಲ. ತಮ್ಮ ವರ್ಣನಾ ಪ್ರೌಢಿಮೆಯನ್ನು ಮೆರೆಯುವಲ್ಲಿ ಹಿಂದೆ ಬಿದ್ದಿಲ್ಲವೆಂಬುದು ಅವರ ಗ್ರಂಥದ ಅವಲೋಕನದಿಂದ ಸ್ಫುಟವಾಗುತ್ತದೆ. ಒಂದೆರಡು ಉದಾಹರಣೆಗಳು ಈ ಮಾತಿಗೆ ಸಾಕ್ಷಿಯಾಗಿವೆ. ತೃತೀಯ ಪರಿಚ್ಛೇದದಲ್ಲಿ ಬರುವ ಕೈಲಾಸ ಪರ್ವತ ವರ್ಣನೆ, ಶಿವವರ್ಣನೆ ಹಾಗೂ ಪಾರ್ವತಿ ದೇವಿ ಮುಂತಾದ ಶಿವನ ಕುಟುಂಬದ ಸದಸ್ಯರ ವರ್ಣನೆ ವಿವಿಧ ದೇವಾತಾಕೃತ ಶಿವಸೇವಾ ವರ್ಣನೆ, ಹೀಗೆ ಹತ್ತಾರು ಪ್ರಸಂಗಗಳಲ್ಲಿ ವರ್ಣನಾ ವೈಭವವನ್ನು ಕಾಣಬಹುದಾಗಿದೆ. ಪ್ರಮಥರ ಕಾಲುಗಳಲ್ಲಿದ್ದ ನೂಪುರಗಳಲ್ಲಿಯ ಮಧುರ ಧ್ವನಿಯಿಂದ ತುಂಬಿ ಹೋದ ಕೈಲಾಸವು ನಯನ ಮನೋಹರವಾಗಿತ್ತು.

ಸಂಚರತ್ಪ್ರಮಥಶ್ರೇಣೀಪದವಾಚಾಲನೂಪುರೇ।
ಪ್ರವಾಲವಲಭೀಶೃಂಗಶೃಂಗಾರಮಣಿಮಂಟಪೇ॥[೩೯]

ಸಂಸಾರವೆಂಬ ವಿಷದಿಂದ ಮೂರ್ಛಿತರಾದವರನ್ನು ಬದುಕಿಸುವ ಸಂಜೀವಿನಿಯಂತೆಯೂ, ನಿತ್ಯ ಪ್ರಕಾಶದಿಂದ ನಿರ್ಮಲವೂ ಮತ್ತು ಮುಕ್ತಿಕಲ್ಪದ್ರುಮವೂ ಆದ ಶಿವನ ವರ್ಣನೆಯಂತೂ ಅತಿ ಮನೋಹರವಾಗಿದೆ.

ಸಂಸಾರವಿಷಮೂರ್ಛಾಲುಜೀವಸಂಜೀವನೌಷಧಮ್।
ನಿತ್ಯಪ್ರಕಾಶನೈರ್ಮಲ್ಯಂ ಕೈವಲ್ಯಸುರಪಾದಪಮ್॥[೪೦]

ವಾಮಭಾಗಸ್ಥೆಯೂ (ಅಕ್ಷರಶಃ ಅರ್ಧಾಂಗಿಯೂ) ಮಂಗಲ ಪ್ರಿಯ ವೇಷಧಾರಿಣಿಯೂ ಮತ್ತು ಸಮಲೋಕ ನಿರ್ಮಾಣಕ್ಕೆ ಸಮವಾಯಕಾರಣಳೂ ಆದ ಶಿವೆಯ ಸೌಂದರ್ಯ ವರ್ಣನೆಯು ಕವಿಕಲ್ಪನೆಗೆ ಹಿಡಿದ ಒಂದು ಉಜ್ವಲದರ್ಪಣವೆನ್ನಬಹುದು.

ವಾಮಪಾರ್ಶ್ವನಿವಾಸಿನ್ಯಾ ಮಂಗಲಪ್ರಿಯವೇಷಯಾ।
ಸಮಸ್ತಲೋಕನಿರ್ಮಾಣಸಮವಾಯಸ್ವರೂಪಯಾ॥[೪೧]

ಉಪನಿಷದ್‍ವಧು ತನ್ನ ಕೈ ಬಳೆ ನಾದದಿಂದ ಮನೋಹರವಾದ ಕೈಗಳಿಂದ ಓಂಕಾರ (ಪ್ರಣವ) ವೆಂಬ ಬೀಸಣಿಕೆಯಿಂದ ಶಂಕರನಿಗೆ ಗಾಳಿ ಹಾಕುವ ದೃಶ್ಯ ಅನ್ಯಾದೃಶ ಅನುಪಮ.

ಝಣತ್ಕಂಕಣಜಾಲೇನ ಹಸ್ತೇನೋಪನಿಷದ್ವಧೂಃ।
ಓಂಕಾರತಾಲವೃಂತೇನ ವೀಜಯಾಮಾಸ ಶಂಕರಮ್॥[೪೨]

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅತ್ತಿತ್ತ ಸಂಚರಿಸುತ್ತಿರುವ ಶುಭ್ರವಾದ ಚಾಮರಗಳ ಮಧ್ಯದಲ್ಲಿ ದಿವ್ಯ ಕನ್ಯೆಯರ ಮುಖ ಮಂಡಲವು ರಾಜಹಂಸಗಳ ಮಧ್ಯದಲ್ಲಿರುವ ಕಮಲದಂತೆ ಕಂಗೊಳಿಸುವ ದೃಶ್ಯದ ವರ್ಣನೆ, ಕಲ್ಪನಾ ಶಕ್ತಿ-ಗಂಗೆ ಹರಿಮದಕ್ಕೆ ಸಾಕ್ಷಿಯಾಗಿದೆ.

ಚಾಮರಾಣಾಂ ವಿಲೋಲಾನಾಂ ಮಧ್ಯೇ ತನ್ಮುಖಮಂಡಲಮ್।
ರರಾಜ ರಾಜಹಂಸಾನಾಂ ಭ್ರಮತಾಮಿವ ಪಂಕಜಮ್॥[೪೩]

ಇಲ್ಲಿ ಉಪಯುಕ್ತವಾದ ಅನುಪ್ರಾಸಾದಿ ಶಬ್ದಾಲಂಕಾರಗಳು ಸಹ ಔಚಿತ್ಯ ಪೂರ್ಣವೂ ಸಹಜಸುಂದರವೂ ಆಗಿವೆಯೆನ್ನಬಹುದು.

ವಿಭೀಷಣಾನುಗ್ರಹ (ಅಭೀಷ್ಟಾದಾನ) ನಿರೂಪಣೆಯಲ್ಲಿ ವರ್ಣನಾವೈಖರಿ ಸ್ಫುಟವಾಗಿ ಕಂಗೊಳಿಸುತ್ತದೆ. ತಾನಾಗಿಯೇ ಅನುಗ್ರಹಿಸಲು ಬಂದ ರೇಣುಕ ಭಗವತ್ಪಾದರನ್ನು ಕಂಡು ವಿಭೀಷಣನ ಹರ್ಷದ ಮೇರೆ ಮೀರುತ್ತದೆಯೆಂಬ ವಿಷಯವನ್ನು ವಿಶದವಾಗಿ ವರ್ಣಿಸುತ್ತಿದ್ದು, ಅವನ ಈ ಮಾತು ಅದೆಲ್ಲವನ್ನು ಸೂತ್ರರೂಪದಲ್ಲಿ ಹೇಳುತ್ತದೆ.

ಮತ್ಸಮೋ ನಾಸ್ತಿ ಲೋಕೇಷು ಭಾಗ್ಯಾತಿಶಯವತ್ತಯಾ।
ಯಸ್ಯ ಗೇಹಂ ಸ್ವಯಂ ಪ್ರಾಪ್ತೋ ಭವಾನ್ ಸಾಕ್ಷಾನ್ ಮಹೇಶ್ವರಃ॥[೪೪]

ಶ್ರೀ ಸೋಮಲಿಂಗದಿಂದ ಉದ್ಭವಿಸಿದ ರೇಣುಕ ಗಣೇಶ್ವರರ ವರ್ಣನೆ ಅದ್ಭುತ ರಮ್ಯವಾಗಿದೆ, ಹೃದಯಂಗಮವಾಗಿದೆ.

ಭಸ್ಮೋದ್ಧೂಳಿತಸರ್ವಾಂಗಂ ಸಾರರುದ್ರಾಕ್ಷಭೂಷಣಮ್।
ಜಟಾಮಕುಟಸಂಯುಕ್ತಂ ತ್ರಿಪುಂಡ್ರಾಂಕಿತಮಸ್ತಕಮ್॥[೪೫]

ಆ ಅದ್ಭುತ ದೃಶ್ಯವನ್ನು ಕಣ್ಣಾರೆ ಕಂಡ ತೆಲಂಗದ ಜನರು ಧನ್ಯರೂ ಮತ್ತು ಮೂಕವಿಸ್ಮಿತರೂ ಆದಂತೆ, ಆ ವರ್ಣನೆಯನ್ನೋದಿ ನಾವೂ ಸಹ ಮೂಕವಿಸ್ಮಿತರಾಗುತ್ತೇವೆ.

ಪ್ರಾದುರ್ಭೂತಂ ತಮಾಲೋಕ್ಯ ಶಿವಲಿಂಗಾತ್ ತ್ರಿಲಿಂಗಜಾಃ।
ವಿಸ್ಮಿತಾಃ ಪ್ರಾಣಿನಃ ಸರ್ವೇ ಬಭೂವುರತಿತೇಜಸಮ್॥[೪೬]

ಅಗಸ್ತ್ಯ ಮುನಿಯ ಆಶ್ರಮದ ವರ್ಣನೆಯಂತೂ ಅಸಾಮಾನ್ಯವಾಗಿದ್ದು ಕುಮಾರಸಂಭವದ ಪಾರ್ವತೀ ಆಶ್ರಮದ ವರ್ಣನೆಯನ್ನೋ, ಬಾಣನ ಜಾಬಾಲ್ಯಾಶ್ರಮವರ್ಣನೆಯನ್ನೋ ಸ್ಮರಣೆಗೆ ತಾರದಿರದು.

ತ್ರಿಪುಂಡ್ರ ರೇಖಾಂಕಿತನಾದ ಅಗಸ್ತ್ಯ ಮುನಿಯು ಮೂರು ಪ್ರವಾಹವಾಗಿ ಹರಿಯುತ್ತಿರುವ ಗಂಗೆಯಿಂದ ಕೂಡಿದ ಹಿಮಾಲಯದಂತೆ ಕಂಗೊಳಿಸುವ ವರ್ಣನೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉತ್ಪ್ರೇಕ್ಷೆಯಿಂದ ಕೂಡಿದ್ದರೂ ಸತ್ಯದೂರವಲ್ಲವೆಂಬುದನ್ನು ಹೃದಯಂಗಮ ರೀತ್ಯಾ ವಿವರಿಸಲಾಗಿದೆ -

ವಿಶುದ್ಧಭಸ್ಮಕೃತಯಾ ತ್ರಿಪುಂಡ್ರಾಂಕಿತರೇಖಯಾ।
ತ್ರಿಸ್ರೋತಸೇವ ಸಂಬದ್ಧಶಿಲಾಭಾಗಂ ಹಿಮಾಲಯಮ್॥[೪೭]

ಇದು ಬಾಣನ ಕೆಳಗಿನ ವಾಕ್ಯಾಂಶದ ಸ್ಮರಣೆಯನ್ನುಂಟು ಮಾಡದೇ ಇರದು:

'ಉಪರಚಿತ ಭಸ್ಮ ತ್ರಿಪುಂಡ್ರೇಣ ತಿರ್ಯಕ್ ಪ್ರವೃತ್ತ ತ್ರಿಪಥಗಾ
ಸ್ರೋತಸ್ತ್ರಯೇಣೇವ ಹಿಮಗಿರಿಶಿಲಾತಲೇನ ಲಲಾಟ-
ಫಲಕೇನೋಪೇತಮ್।[೪೮]

ಸರ್ವಋತುಗಳಲ್ಲಿಯೂ ಫಲಪುಷ್ಪ ಕೊಡುವ ವೃಕ್ಷಗಳಿಂದ ಕೂಡಿದ ಆ ಆಶ್ರಮದ ದಿವ್ಯತೆ, ಪಾವಿತ್ರ್ಯವನ್ನು ಬಹು ಸೂಕ್ಷ್ಮವಾಗಿ ವರ್ಣಿಸಲಾಗಿದೆ:

ತತ್ರ ಕುತ್ರ ಚಿದಾಭೋಗೇ ಸರ್ವರ್ತುಕುಸುಮದ್ರುಮೇ।
ಅಪಶ್ಯದಾಶ್ರಮಂ ದಿವ್ಯಮಗಸ್ತ್ಯಸ್ಯ ಮಹಾಮುನೇಃ॥[೪೯]

ಈ ಶ್ಲೋಕಕ್ಕೆ ಸಂವಾದಿಯಾಗಿ ಗದ್ಯಭಾಗದಲ್ಲಿ ಬಾಣನಲ್ಲಿ ಈ ವಾಕ್ಯವನ್ನು ಕಾಣುತ್ತೇವೆ:

"ಅನತಿದೂರಮಿವ ಗತ್ವಾ ದಿಶಿದಿಶಿ ಸದಾ ಸಂನಿಹಿತ ಕುಸುಮ-
ಫಲೈಸ್ತಾತಿಲಕಹಿಂತಾಲ ..... ಸಂಸಕ್ತಪಾದಪೈಃ
ಕಾನನೈರುಪಗೂಢಮ್।"[೫೦]

ಸ್ವಚ್ಛ ತಿಳಿ ನೀರಿನಿಂದ ತುಂಬಿಕೊಂಡು ಮಣಿಸೋಪಾನಗಳಿಂದ ಶೋಭಿಸುವ ಸರೋವರಗಳಿಂದ ಕೂಡಿದ್ದ, ತಮ್ಮ ನಿಸರ್ಗ ಸಹಜವಾದ ವೈರವನ್ನು ಬಿಟ್ಟು ಒಂದೆಡೆ ವಾಸ (ಸಹ ವಸತಿ) ಮಾಡುವ ಪ್ರಾಣಿಗಳಿಂದ ಕೂಡಿದ್ದ ಆ ಆಶ್ರಮವು ದ್ವಿತೀಯ ಬ್ರಹ್ಮಲೋಕದಂತೆ ಕಂಗೊಳಿಸತ್ತಿತ್ತೆಂದು ಹೇಳಿದ್ದು ಬಹು ಮನೋಹರವಾಗಿದೆ.

ಪ್ರಕೃಷ್ಟಮಣಿಸೋಪಾನೈಃ ಪರಿವೀತಂ ಸರೋವರೈಃ।
ವಿಮುಕ್ತಸತ್ತ್ವವೈರಸ್ಯಂ ಬ್ರಹ್ಮಲೋಕಮಿವಾಪರಮ್॥[೫೧]

ಈ ಸಂದರ್ಭದಲ್ಲಿ ಪಾರ್ವತ್ಯಾಶ್ರಮದ ವರ್ಣನೆಯ ಕೆಳಗಿನ ಶ್ಲೋಕವನ್ನು ಸ್ಮರಿಸಬಹುದು.

ವಿರೋಧಿಸತ್ತ್ವೋಜ್ಝಿತಪೂರ್ವಮತ್ಸರಂ,
ದ್ರುಮೈರಭೀಷ್ಟಪ್ರಸವಾರ್ಚಿತಾಥಿಮ್।
ನವೋಟಜಾಭ್ಯಂತರಸಂಭೃತಾನಲಂ
ತಪೋವನಂ ತಚ್ಚ ಬಭೂವ ಪಾವನಮ್॥[೫೨]

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕವಿಸಮಯಗಳು: ಕವಿಸಮಯಗಳ ಸ್ವರೂಪವೇನೇ ಇರಲಿ ಅವುಗಳ ಪ್ರಯೋಜನ ಆದರ್ಶ ಪ್ರತಿಪಾದನೆ ಮತ್ತು ನೀತ್ಯುಪದೇಶವೇ ಆಗಿದೆ ಎಂಬ ವಿಷಯದಲ್ಲಿ ಮತಭೇದವಿಲ್ಲ. ಅಲೌಕಿಕವೂ, ಅಶಾಸ್ತ್ರೀಯವೂ ಆಗಿದ್ದರೂ ಕವಿಗಳು ಅವುಗಳ ಔಚಿತ್ಯ ಪೂರ್ಣ ಪ್ರಯೋಜನವನ್ನರಿತು ಅವುಗಳ ಪ್ರಯೋಗದಲ್ಲಿ ತಮ್ಮ ಕವಿಪ್ರತಿಭೆಯನ್ನು ಧಾರಾಳವಾಗಿ ವ್ಯಕ್ತಮಾಡಿದ್ದಾರೆ. ಅವುಗಳ ಮಿಥ್ಯಾತ್ವ ಕಲ್ಪನೆಯೇ ಭಾರತೀಯರ ಮನಸ್ಸಿನಲ್ಲಿ ಸುಳಿಯುವುದಿಲ್ಲವೆನ್ನುವ ಮಟ್ಟಿಗೆ ಅವು ನಮ್ಮ ಜೀವನದಲ್ಲಿ ಹಾಸು ಹೊಕ್ಕಾಗಿ ಬೆರೆತಿವೆ. ಕೇವಲ ಮೋಡದ ನೀರು ಕುಡಿದು ಬದುಕುವ ಚಾತಕ ಕಲ್ಪನಾಲೋಕದ ಪಕ್ಷಿಯಾಗಿರದೆ ನಿಜ ಜೀವನದಲ್ಲಿ ಇರುವ ಪಕ್ಷಿಯೆಂಬ ಭಾವನೆ ನಮ್ಮಲ್ಲಿದೆಯೆನ್ನಬಹುದು. ಕವಿಗಳಂತೆಯೇ ದಾರ್ಶನಿಕರೂ ಸಹ ತಮ್ಮ ಶಾಸ್ತ್ರ ಗ್ರಂಥದಲ್ಲಿ ಅಲ್ಲಲ್ಲಿ ಕವಿಸಮಯಗಳ ಯಥಾರ್ಥ ಉಪಯೋಗವನ್ನು ಮಾಡಿಕೊಂಡಿರುವುದನ್ನು ಕಾಣುತ್ತೇವೆ. 'ಕವಿಸಮಯ ಸಮೀಕ್ಷೆ' ಎಂಬ ನನ್ನದೊಂದು ಲೇಖನದಲ್ಲಿ (ಸಂಸ್ಕೃತ) ಕವಿಸಮಯ ಪ್ರಯೋಜನದ ಸಾರವನ್ನು ಈ ರೀತಿ ಹೇಳಲಾಗಿದೆ.

ಬಹುವಿಧೋಪಕಾರಿತ್ವಾತ್ ಸಮಯಾಃ ಕವಿಕರ್ಮಣೇ।
ಹೇಯಾಸ್ತೇ ನ ಭವಂತ್ಯೇವ ತದುದ್ದೇಶವಿಚಾರಣಾತ್॥[೫೩]

'ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ' ಎಂಬಲ್ಲಿ ಚಕೋರ ಚಂದ್ರಪಾನದ ಕವಿಸಮಯವನ್ನು ಬಸವಣ್ಣನವರು ಸಮರ್ಥ ರೀತಿಯಿಂದ ಮಾಡಿಕೊಂಡಿದ್ದು ಚಕೋರ ಪಕ್ಷಿ ಚಂದ್ರಿಕೆಯನ್ನುಳಿದು ಬೇರೊಂದನ್ನು ನೆನೆಯದಂತೆ ತಾವು ಭಗವಂತನನ್ನುಳಿದು ಬೇರೊಂದನ್ನು ನೆನೆಯದಿರುವ ದೃಢ ಮತ, ವೀರ ಸಂಕಲ್ಪವನ್ನು ಮಾಡಿದ್ದಾರೆ. ಇದೇ ರೀತಿ ಕವಿ ಸಮಯಗಳ ಸದುಪಯೋಗವನ್ನು ಸಿದ್ಧಾಂತ ಶಿಖಾಮಣಿಯಲ್ಲಿ ಯಾವ ರೀತಿ ಮಾಡಲಾಗಿದೆಯೆಂಬುದನ್ನು ಪರೀಕ್ಷಿಸೋಣ.

ಚಂದ್ರೋದಯ, ಸಮುದ್ರದ ಭರಾತಿಗೆ ಕಾರಣೀಭೂತವಾಗುವುದು ಭೌಗೋಳಿಕ ಸತ್ಯವಾಗಿದ್ದರೂ ಚಂದ್ರನು ಕ್ಷೀರ ಸಾಗರದಿಂದ ಜನಿಸಿರುವುದೇ ಈ ತತ್ವಕ್ಕೆ ಕಾರಣವೆಂದು ಕವಿಗಳು ನಂಬುತ್ತಾರೆ. ಆದುದರಿಂದಲೇ ಚಂದ್ರೋದಯವಾಗುತ್ತಲೇ ಸಮುದ್ರ ಅಪತ್ಯ (ಪುತ್ರ) ಪ್ರೇಮದಿಂದಾಗಿ ಹರ್ಷಾತಿರೇಕದಿಂದ ಉಬ್ಬುವುದೇ, ಉಕ್ಕೇರುವುದೇ ಭರತಿಯೆಂದು ತಿಳಿಯಬಹುದು. ಚಂದ್ರೇದಯಕ್ಕೆ ಅಂಬುಧಿ ಹೆಚ್ಚುವದು ಎಂಬ ಬಸವಣ್ಣನವರ ವಚನವನ್ನಿಲ್ಲಿ ಸ್ಮರಿಸಬಹುದು. ಆ ಚಂದ್ರನೇ ಕುಮುದಿನಿ ಪ್ರಿಯನೆಂದು ಕವಿಸಮಯದಲ್ಲಿ ಪ್ರಸಿದ್ಧವಾಗಿದೆ.

ನಲಿನೀಸೂರ್ಯಯೋಃ ಪ್ರೀತಿಃ ಕುಮುದಿನೀಂದುಯುಗಸ್ಯ ಚ।
ಸಮಾನರಾಗದಾಂಪತ್ಯಂ ಸೂಚಯೇತ್ ಕವಿಕಲ್ಪಿತಾ॥[೫೪]

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಕವಿಸಮಯವನ್ನು ಉಪಯೋಗಿಸಿ ಶಿವಯೋಗಿ ಶಿವಾಚಾರ್ಯರು ಶಿವಯೋಗಿಯೆಂದು ಪ್ರಸಿದ್ಧನಾದ ಸಿದ್ಧರಾಮೇಶ್ವರನ ಸರಸ, ಸರಳವಾಣಿಯು ಶಿವಭಕ್ತಿಯೆಂಬ ಸುಧಾಸಾಗರವನ್ನು ಉಕ್ಕೇರಿಸುವ ಚಂದ್ರಿಕೆಯಾಗಿದ್ದು ಕುವಲಯ (ನೀಲಕಮಲ, ಭೂಮಂಡಲ)ಕ್ಕೆ ಉತ್ಸವ (ಸಂತೋಷ) ವನ್ನುಂಟು ಮಾಡುತ್ತದೆ ಎಂಬುದನ್ನು ಬಹು ಸುಂದರವಾಗಿ ವರ್ಣಿಸಲಾಗಿದೆ.

ಶಿವಭಕ್ತಸುಧಾಸಿಂಧುಜೃಂಭಣಾಮಲಚಂದ್ರಿಕಾ।
ಭಾರತೀ ಯಸ್ಯ ವಿದಧೇ ಪ್ರಾಯಃ ಕುವಲಯೋತ್ಸವಮ್॥[೯೫]

ಕುವಲಯ ಪದ ಪ್ರಯೋಗದಲ್ಲಿಯ ಶ್ಲೇಷಾಲಂಕಾರದ ಸರಳ ಸುಂದರ ರೂಪವನ್ನು ಮೆಚ್ಚಬೇಕು. ಇದೇ ರೀತಿ ಸೋಮನಾಥಲಿಂಗದಿಂದ ಉದ್ಭವಿಸಿದ ರೇಣುಕಾಚಾರ್ಯರನ್ನು ಕರ್ತೃ ಹೀಗೆ ಸ್ತುತಿಸಿದ್ದಾನೆ.

ಶಿವಾಗಮಸುಧಾಸಿಂಧುಸಮುನ್ಮೇಷಸುಧಾಕರಮ್।[೯೬]

ವೀರ ಶಿವಾಚಾರಶಿಖಾರತ್ನರಾದ ಸಿದ್ಧನಾಥ ಶಿವಾಚಾರ್ಯನಿಗೆ ಶಿವಯೋಗಿ ಎಂಬ ಪುತ್ರರತ್ನ ಜನಿಸಿದ್ದನ್ನು ಸುಧಾಸಾಗರದಿಂದ ಸುಧಾಕರ (ಚಂದ್ರ) ಜನಿಸುವುದಕ್ಕೆ ಹೋಲಿಸುವಲ್ಲಿಯ ಉಪಮಾಲಂಕಾರ ಮತ್ತು ಕವಿಸಮಯದ ಸುಂದರ ಪ್ರಯೋಗವನ್ನು ಕಾಣುತ್ತೇವೆ.

ಅಭವತ್ ಶಿವಯೋಗೀತಿ ಸಿಂಧೋರಿವ ಸುಧಾಕರಃ।[೯೭]

ಕಟಾಕ್ಷವೆಂಬ ಚಂದ್ರನು ಜ್ಞಾನ ಸಾಗರವರ್ಧನವಾಗಿದ್ದಿತೆಂಬಲ್ಲಿ

ಕಟಾಕ್ಷ ಚಂದ್ರಮಾ ಯಸ್ಯ ಜ್ಞಾನ ಸಾಗರವರ್ಧನಃ।[೯೮]

ಜ್ಞಾನ ಚಂದ್ರನಿಂದ ಉದಯಿಸಿದ 'ಪರಮಾನಂದ ಚಂದ್ರಿಕೆ'

'ಜ್ಞಾನಚಂದ್ರ ಸಮುದ್ಭೂತಾಂ ಪರಮಾನಂದ ಚಂದ್ರಿಕಾಮ್।'[೯೯]

ಎಂಬಲ್ಲಿ ಅತ್ಯಂತ ಜನಪ್ರಿಯವಾದ ಕವಿಸಮಯದ ಪ್ರಯೋಗವನ್ನು ಕಾಣುತ್ತೇವೆ.

ಸಂಸಾರ ತಾಪತ್ರಯದಿಂದ ಬೆಂದ ಭಕ್ತ ಶಿವನಿಗೆ ಶರಣಾಗುವನಲ್ಲದೇ ಇತರ ದೇವತೆಗಳಿಗೆ ಶರಣಾಗತನಾಗಬಾರನೆಂಬ ವಿಷಯವನ್ನು ತಿಳಿಸಲು ಚಕೋರ ಚಂದ್ರಿಕೆಯನ್ನು ಕುರಿತ ಕವಿಸಮಯವನ್ನು ಬಹು ಸುಂದರವಾಗಿ ಬಳಸಿಕೊಳ್ಳಲಾಗಿದೆ. ಏಕೆಂದರೆ ತನ್ನ ತೃಷೆಯನ್ನು ನೀಗಿಸಲು ಚಂದ್ರ ಸಮರ್ಥನಾಗಿರುವಂತೆ, ಇತರ ತಾರೆಗಳು ಸಮರ್ಥವಾಗಲಾರವು. ಅಂತೆಯೇ ಚಕೋರ ಪಕ್ಷಿ ಇತರ ತಾರೆಗಳನ್ನು ಕಣ್ಣೆತ್ತಿಯೂ ನೋಡಲಾರದು. ಹೀಗೆ ಶಿವಭಕ್ತಿ ಪಾರಮ್ಯದ ಪರಿಚಯವನ್ನು ಕಾವ್ಯಮಯವಾಗಿ ಮಾಡಿಕೊಡುವಲ್ಲಿ ಗ್ರಂಥಕರ್ತೃಸಮರ್ಥನಾಗಿದ್ದಾನೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಸಾರಾರ್ತಃ ಶಿವಂ ಯಾಯಾತ್ ಬ್ರಹ್ಮಾದ್ಯೈಃ ಕಿಂ ಫಲಂ ಸುರೈಃ।
ಚಕೋರಃ ತೃಷಿತಃ ಪಶ್ಯೇತ್ ಚಂದ್ರಂ ಕಿಂ ತಾರಕಾ ಅಪಿ॥[೬೦]

ಚಂದ್ರಕಾಂತ ಮಣಿ ಹಾಗೂ ಸೂರ್ಯಕಾಂತ ಮಣಿಗಳು ಕ್ರಮವಾಗಿ ಚಂದ್ರ ಹಾಗೂ ಸೂರ್ಯರ ಕಿರಣಗಳಿಂದ ದ್ರವಿಸುವ ಕವಿ ಸಮಯವನ್ನು ಚೆನ್ನಾಗಿ ಬಳಸಿಕೊಳ್ಳಲಾಗಿದೆ. ಆತ್ಮನಲ್ಲಿ ಶಿವನಿರುವ ಆಧ್ಯಾತ್ಮಿಕ ವಿಷಯವನ್ನು ಈ ಕವಿಸಮಯದ ಸಹಾಯದಿಂದ ಬಹು ಸುಂದರವಾಗಿ ವಿವರಿಸುತ್ತಾನೆ-

ಚಂದ್ರಕಾಂತೇ ಯಥಾ ತೋಯಂ ಸೂರ್ಯಕಾಂತೇ ಯಥಾಽನಲಃ॥
ಬೀಜೇ ಯಥಾಂಕುರಃ ಸಿದ್ಧಸ್ತಥಾಽಽತ್ಮನಿ ಶಿವಃಸ್ಥಿತಃ।[೬೧]

ಗುರುವಿನ ಆಲೋಕನ ಮಾತ್ರದಿಂದಲೇ ಶಿಷ್ಯನಲ್ಲಿ ಬೋಧ ಉತ್ಪನ್ನವಾಗುತ್ತದೆ ಎಂಬ ದಾರ್ಶನಿಕ ಸತ್ಯವನ್ನು ಸೂರ್ಯೋದಯದಿಂದ ಸೂರ್ಯಕಾಂತಿ ಪ್ರಕಾಶಮಾನವಾಗುವ ಕವಿಸಮಯದಿಂದ ಸುಂದರವಾಗಿ ವರ್ಣಿಸಲಾಗಿದೆ.

ಸೂರ್ಯಸ್ಯೋದಯಮಾತ್ರೇಣ ಸೂರ್ಯಕಾಂತಃ ಪ್ರಕಾಶತೇ।
ಗುರೋರಾಲೋಕಮಾತ್ರೇಣ ಶಿಷ್ಯೋ ಬೋಧೇನ ಭಾಸತೇ॥[೬೨]

ಸೂರ್ಯಕಾಂತ ಮಣಿಯಲ್ಲಿ ಗುಪ್ತ (Latent) ವಾಗಿರುವ ತೇಜಸ್ಸು ಸೂರ್ಯಕಿರಣಗಳಿಂದ ಹೊರಬೀಳುವಂತೆ ತಪಸ್ವಿಗಳಲ್ಲಿ ಗುಪ್ತವಾಗಿರುವ ತಪೋಬಲ ಬೇರೆಯವರ ಆಕ್ರಮಣದಿಂದ ಅಭಿವ್ಯಕ್ತವಾಗುವ ವಿಷಯವನ್ನು ಕಾಲಿದಾಸ ಬಹುಸುಂದರವಾಗಿ ವರ್ಣಿಸುವುದನ್ನಿಲ್ಲಿ ಸ್ಮರಿಸಬಹುದು-

"ಶಮಪ್ರಧಾನೇಷು ತಪೋಧನೇಷು
ಗೂಢಂ ಹಿ ದಾಹಾತ್ಮಕಮಸ್ತಿ ತೇಜಃ।
ಸ್ಪರ್ಶಾನುಕೂಲಾ ಅಪಿ ಸೂರ್ಯಕಾಂತಾ
ತದನ್ಯತೇಜೋಭಿಭವಾದ್ ವಮಂತಿ॥[೬೩]

ದ್ರೌಪದಿಯ ಮಾತನ್ನು ಭೀಮಸೇನನು ಕಹಿಯಾದ ಔಷಧಿಯ ಚಿಕ್ಕ ಮಾತ್ರೆಗೆ ಹೋಲಿಸುತ್ತಿದ್ದು ಶಾಸ್ತ್ರದಂತೆಯೇ ಅವಳ ನುಡಿಯೂ ಸಹ ಪರಿಣಾಮ ಸುಖಕರವಾಗಿದ್ದು ಪ್ರಾರಂಭದಲ್ಲಿ ಕಹಿಯಾಗಿರುವುದೆಂಬ ವಿಷಯವನ್ನು ಸೂಚಿಸುತ್ತಾನೆ-

ಪರಿಣಾಮಸುಖೇ ಗರೀಯಸಿ
ವ್ಯಥಕೇಸ್ಮಿನ್ ವಚಸಿ ಕ್ಷತೌಜಸಾಮ್।
ಅತಿವೀರ್ಯವತೀವ ಭೆಷಜೇ
ಬಹುರಲ್ಪೀಯಸಿ ದೃಶ್ಯತೇ ಗುಣಃ॥[೬೪]

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದರಿಂದ ವ್ಯಕ್ತವಾಗುವುದೇನೆಂದರೆ ಬಲಹೀನರಾದವರಿಗೆ ಕಹಿಯಾದ ಔಷಧಿಯ ಬಲಿಷ್ಠವಾದ ಮಾತ್ರೆಯನ್ನು ಸಹಿಸುವ ಶಕ್ತಿಯಿಲ್ಲದೇ ಇದ್ದಾಗ ಅದಕ್ಕೆ ಸಿಹಿ ಲೇಪನ (sugarcoat) ಮಾಡಿಕೊಟ್ಟು ಕಾಯಿಲೆಯನ್ನು ದೂರ ಮಾಡುವಂತೆ ಕ್ಲಿಷ್ಟವಾದ ಶಾಸ್ತ್ರಾರ್ಥವನ್ನು ಸುಕುಮಾರ ಮತಿಗಳಿಗೆ ಸರಿಯಾಗಿ ಸುಲಭವಾಗಿ ತಿಳಿಸಲು ಕಾವ್ಯಲೇಪನ ಮಾಡುವುದನ್ನು ಅದರ ಒಳ್ಳೆಯ ಪರಿಣಾಮವನ್ನು ಸಿದ್ಧಾಂತ ಶಿಖಾಮಣಿ ಮುಂತಾದ ಶಾಸ್ತ್ರಗ್ರಂಥಗಳಲ್ಲಿ ಕಾಣಬಹುದಾಗಿದೆ.

ಅಡಿಟಿಪ್ಪಣಿ

೧. ವಕ್ರೋಕ್ತಿ ಜೀವಿತ ಪ್ರಥಮೋಪದೇಶದ ಪ್ರಾರಂಭದಲ್ಲಿ.
೨. ಅದೇ. ೧. ೭.
೩. ಕಾವ್ಯಾಲಾಪಾಂಶ್ಚ ವರ್ಜಯೇತ್।
೪. ಕಾವ್ಯಮೀಮಾಂಸೆ ಆರನೆಯ ಅಧ್ಯಾಯ
೫. ಮಮ್ಮಟ, ಕಾವ್ಯ ಪ್ರಕಾಶ ೧,೨.
೬. ವಕ್ರೋಕ್ತಿಜೀವಿತ. ೧.೩.
೭. ವಾಮನ, ಕಾವ್ಯಲಂಕಾರಸೂತ್ರವೃತ್ತಿ, I. ೧.
೮. ಹಠಪ್ರದೀಪಿಕಾ, ೧.೧.
೯. ಸಿದ್ಧಾಂತ ಶಿಖಾಮಣಿ ೧. ೩೧.
೧೦. ಚಿತ್ರಮೀಮಾಂಸಾ, ಪುಟ. ೬.
೧೧. ಕಾವ್ಯ ಪ್ರಕಾಶ, ೧೦.೧
೧೨. ಸಿದ್ಧಾಂತ ಶಿಖಾಮಣಿ ೧, ೨೦.
೧೩. ರಘುವಂಶ, ೧. ೧೨.
೧೪. ಸಿದ್ಧಾಂತ ಶಿಖಾಮಣಿ ೩, ೨೨.
೧೫. ಹೀನತ್ವಾಧಿಕತ್ವ- ಲಿಂಗ- ವಚನ- ಭೇದಾಸಾದೃಶ್ಯಾ ಸಂಭವಾಸ್ತದ್‌ದೋಷಾಃ॥
ಕಾವ್ಯಾಲಂಕಾರ ಸೂತ್ರವೃತ್ತಿ IV IX.II. ೮.
೧೬. ಸಿದ್ಧಾಂತ ಶಿಖಾಮಣಿ I. ೬.
೧೭. ಅದೇ. XIV. ೨೨.
೧೮. ಅದೇ. XXI, ೧೯.
೧೯. ಅದೇ. I. ೧.
೨೦. ಹರ್ಷಚರಿತ I. ೧.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೨೧. ಸಿದ್ಧಾಂತ ಶಿಖಾಮಣಿ, VIII. ೪೯.

೨೨. ಅದೇ. XIV. ౭.

೨೩. ಅದೇ. XIX. ೧೪.

೨೪. ಸಿದ್ಧಾಂತ I. ೪.೧ ಶಿಖಾಮಣಿ.

೨೫. ಅದೇ. V. ೬೮.

೨೬. ನಾಗಾನಂದ, V. ೭.

೨೭. ಸಿದ್ಧಾಂತ ಶಿಖಾಮಣಿ, XIII. ೬.

೨೮. ಸಿದ್ಧಾಂತ ಶಿಖಾಮಣಿ, XIII. ೭.

೨೯. ಅದೇ. XIII. ೨೩.

೩೦. ಧ್ವನ್ಯಾಲೋಕ, II. ೧೬.

೩೧. ಸಿದ್ಧಾಂತ ಶಿಖಾಮಣಿ, III. ೧೯.

೩೨. ಅದೇ. VI. ೩೮.

೩೩. ಕಾವ್ಯಾಲಂಕಾರ ಸೂತ್ರವೃತ್ತಿ I.ii. ೭ ಮತ್ತು ೮.

೩೪. ಸಿದ್ಧಾಂತ ಶಿವಯೋಗಿ XII. ೨೫.

೩೫. ಅದೇ. I. ೬.

೩೬. ಸಿದ್ಧಾಂತ ಶಿಖಾಮಣಿ I. ೧೨.

೩೭. ಅದೇ. III. ೩೧.

೩೮. ಕುಮಾರಸಂಭವ I. ೪೦.

೩೯. ಸಿದ್ಧಾಂತ ಶಿಖಾಮಣಿ III. ೮.

೪೦. ಸಿದ್ಧಾಂತ ಶಿಖಾಮಣಿ III. ೧೨.

೪೧. ಅದೇ. III. ೨೪.

೪೨. ಅದೇ. III. ೩೯.

೪೩. ಅದೇ. III. ೪೧.

೪೪. ಸಿದ್ಧಾಂತ ಶಿಖಾಮಣಿ. XXI. ೮.

೪೫. ಸಿದ್ಧಾಂತ ಶಿಖಾಮಣಿ IV. ೩.

೪೬. ಅದೇ. IV. ೨.

೪೭. ಅದೇ. IV. ೨೮.

೪೮. ಕಾದಂಬರಿ ಪುಟ. ೪೨.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೪೯. ಸಿದ್ಧಾಂತ ಶಿಖಾಮಣಿ IV. ೧೭.

೫೦. ಕಾದಂಬರಿ ಪುಟ. ೩೮.

೫೧. ಸಿದ್ಧಾಂತ ಶಿಖಾಮಣಿ IV. ೧೭.

೫೨. ಕುಮಾರ ಸಂಭವ V. ೧೭.

೫೩. ಕವಿಸಮಯ ಸಮೀಕ್ಷಾ, ಸ್ವರಮಂಗಲಾ, ಜೈಪುರ, ಡಿಸೆಂಬರ್, ೧೯೮೩.

೫೪. ಅದೇ.

೫೫. ಸಿದ್ಧಾಂತ ಶಿಖಾಮಣಿ I. ೧೪.

೫೬. ಅದೇ. IV. ೬.

೫೭. ಸಿದ್ಧಾಂತ ಶಿಖಾಮಣಿ I. ೨೦.

೫೮. ಅದೇ. XV. ೬.

೫೯. ಅದೇ. XIX. ೧೪.

೬೦. ಅದೇ. XIII. ೯.

೬೧. ಅದೇ. V. ೩೬-೩೭.

೬೨. ಅದೇ. XVII ೭೨.

೬೩. ಅಭಿಜ್ಞಾನ ಶಾಕುಂತಲ, II. ೭.

೬೪. ಭಾರವಿ, ಕಿರತಾರ್ಜುನೀಯ, II. ೪.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಮ್ಮ ಲೇಖಕರು

೧. ಡಾ|| ಎಂ. ಶಿವಕುಮಾರಸ್ವಾಮಿ
ಸಂಸ್ಕೃತ ಪ್ರಾಧ್ಯಾಪಕರು, ಬೆಂಗಳೂರು ವಿಶ್ವವಿದ್ಯಾಲಯ (ನಿವೃತ್ತ)
ನಂ. ೮೮, ೩ನೇ ಕ್ರಾಸ್, ೯ನೇ ಮುಖ್ಯರಸ್ತೆ
ಆರ್.ಪಿ.ಸಿ. ಬಡಾವಣೆ, ಬೆಂಗಳೂರು-೫೬೦ ೦೪೦

೨. ವಿದ್ವಾನ್ ಬಿ. ರಾಜಶೇಖರಯ್ಯ
ಅಲಂಕಾರಶಾಸ್ತ್ರ ಪ್ರಾಧ್ಯಾಪಕರು
ಮಹಾರಾಜಾ ಸಂಸ್ಕೃತ ಕಾಲೇಜು
ಮೈಸೂರು-೫೭೦ ೦೦೪

೩. ವಿದ್ವಾನ್ ಪಿ.ಎಸ್. ರಾಜಶೇಖರಯ್ಯ ಎಂ.ಪಿ.
ಸಂಸ್ಕೃತ ವಿಷಯ ಪರಿವೀಕ್ಷಕರು (ನಿವೃತ್ತರು)
ಸಾರ್ವಜನಿಕ ಶಿಕ್ಷಣ ಇಲಾಖೆ
ನೃಪತುಂಗ ರಸ್ತೆ, ಬೆಂಗಳೂರು-೫೬೦೦ ೦೦೧

೪. ಡಾ|| ಕೆ. ಪ್ರತಾಪ್
ಸಂಸ್ಕೃತ ಪ್ರಾಧ್ಯಾಪಕರು, ಶ್ರೀ ವೆಂಕಟೇಶ್ವರ ವಿಶ್ವವಿದ್ಯಾಲಯ
ತಿರುಪತಿ-

೫. ವಿದ್ವಾನ್ ಎನ್.ಕೆ. ಮೃತ್ಯುಂಜಯ ಸ್ವಾಮಿ
ವೀರಶೈವಾಗಮ ಸಹ ಪ್ರಾಧ್ಯಾಪಕರು
ಶ್ರೀಮನ್ಮಹಾರಾಜಾ ಸಂಸ್ಕೃತ ಕಾಲೇಜ್
ಮೈಸೂರು-೫೭೦ ೦೦೪

೬. ವಿದ್ವಾನ್ ಜಿ.ವಿ. ಶಿವಸ್ವಾಮಿ, ಎಂ.ಎ
ಜ್ಞಾನ ಸದನ, ೨೩೦೬, ೨ನೇ 'ಬಿ' ಮುಖ್ಯರಸ್ತೆ
ವಿಜಯನಗರ ೨ನೇ ಹಂತ, ಬೆಂಗಳೂರು-೫೬೦ ೦೪೦

೭. ಡಾ|| ಸಿ. ಶಿವಕುಮಾರಸ್ವಾಮಿ
ಸಂಸ್ಕೃತ ಅಧ್ಯಾಪಕ, ಬಸವೇಶ್ವರ ಕಾಲೇಜ್
ರಾಜಾಜಿನಗರ, ಬೆಂಗಳೂರು-೫೬೦ ೦೧೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೮. ಡಾ|| ಆರ್.ಎಂ. ವೀರಭದ್ರಸ್ವಾಮಿ
ಸಂಸ್ಕೃತ ಪ್ರಾಧ್ಯಾಪಕರು
ಮೈಸೂರು ವಿಶ್ವವಿದ್ಯಾಲಯ, ಮಾನಸಗಂಗೋತ್ರಿ
ಮೈಸೂರು-೫೭೦ ೦೦೬

೯. ಲಿಂ|| ಶ್ರೀ ಡಿ. ರೇಣುಕಾಚಾರ್ಯ
ಭಾಷಾಂತರ ಇಲಾಖೆ, ವಿಧಾನಸೌಧ (ನಿವೃತ್ತ)
ರಾಜಾಜಿನಗರ, ಬೆಂಗಳೂರು-೫೬೦ ೦೧೦

೧೦. ಶ್ರೀ ಮತ್‌ಕಾಶೀ ಜ್ಞಾನಸಿಂಹಾಸನಾಧೀಶ್ವರ
ಶ್ರೀಶ್ರೀಶ್ರೀ ೧೦೦೮ ಜಗದ್ಗುರು ಡಾ|| ಚಂದ್ರಶೇಖರ ಶಿವಾಚಾರ್ಯ
ಮಹಾಸ್ವಾಮಿಗಳು ಶ್ರೀ ಜಂಗಮವಾಡಿ ಮಠ
ವಾರಾಣಶೀ-೨೨೧ ೦೦೧

೧೧. ಶ್ರೀಷಣ್ಮುಖಯ್ಯ ಅಕ್ಕೂರ ಮಠ, ಎಂ.ಎ
೬೭, ದೇವಗಂಗೋತ್ರಿ, ಶಂಕರ ಮಠದ ರಸ್ತೆ
ಬೆಂಗಳೂರು-೫೬೦ ೦೦೪

೧೨. ಡಾ|| ಮಲಿಕಾರ್ಜುನ ಪರಡ್ಡಿ
ಸಂಸ್ಕೃತ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ-೫೮೦ ೦೦೩

❑

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC-0. In Public Domain. Jangamwadi Math Collection, Varanasi